ಸಂವಾದ

ಜನವರಿ ೨೦೦೯ ರೂ.೨೦

ವಿ.ಪಿ. ಸಿಂಗ್
ನಮನ

ಭಯೋತ್ಪಾದನೆಯ ಹಿಂದಿರುವವರಾರು?

ಸಂವಾದ

ಮಾಸ ಪತ್ರಿಕೆ

ಸಂಪುಟ ೭ ಸಂಚಿಕೆ ೩

ಜನವರಿ ೨೦೦೯

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಡಾ॥ ಕೆ. ಪುಟ್ಟಸ್ವಾಮಿ

ಡಾ॥ ಡಿ. ಡೊಮಿನಿಕ್

ಡಾ॥ ಬಿ.ಯು. ಸುಮಾ

ಡಾ॥ ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ

ಅಂಜನಾನಗರ, ಮಾಗಡಿ ರಸ್ತೆ.

ವಿಶ್ವನೀಡಂ ಅಂಚೆ

ಬೆಂಗಳೂರು-೫೬೦ ೦೯೧

© ೨೩೪೮೦೨೭೮/೯೪೪೮೦ ೪೮೩೦೬

ಇ-ಮೇಲ್ : samvaada@hotmail.com

honnapura@yahoo.co.in

PRINTED AND PUBLISHED BY

S.R. GOVINDU

ON BEHALF OF SPOORTHIDHAMA

ANJANA NAGAR, MAGADI ROAD

VISHWANEEDAM POST

BANGALORE - 560 091

© 080-23480278, 94480 48306

e- mail : samvaada@hotmail.com

honnapura@yahoo.co.in

EDITOR :

INDUDHARA HONNAPURA

ಒಳಪುಟಗಳಲ್ಲಿ



- ❑ ಪತ್ರಗಳು ೦೩
- ❑ ಅಂತರಂಗ ೦೫
- ❑ ಜಾಗತೀಕರಣ ದಲಿತರ ಸ್ನೇಹಿಯೇ? ೦೬
  - ○ ಮ ಶ್ರೀ ಮುರಳಿಕೃಷ್ಣ
- ❑ ಜಾತಿ, ಧರ್ಮ, ತಾರತಮ್ಯ ಚರ್ಚೆ: ತಪ್ಪು ಪ್ರಶ್ನೆ ಮತ್ತು ತಪ್ಪು ಉತ್ತರ ತಪ್ಪು ಸಂಶೋಧನೆ ೦೮
  - ○ ಡಿ ಎಸ್ ನಾಗಭೂಷಣ
- ❑ ವಿ ಪಿ ಸಿಂಗ್ ನಮನ
  - ○ ಡಾ. ಡೊಮಿನಿಕ್ ಡಿ ೧೨
- ❑ ಜಾಗತೀಕರಣದ ಜಾಲ
  - ○ ಡಾ. ಸಣ್ಣರಾಮ ೧೬
- ❑ ಖೈರ್ಲಂಜಿ ಹೇಳುತ್ತಿದೆ; ನ್ಯಾಯ ಇನ್ನೂ ಬದುಕಿದೆ ೧೮
  - ○ ನಾ ದಿವಾಕರ

- ❑ ದಶಮಾನದ ಖಾನೇಷುಮಾರಿ...
  - ○ ಸಿ ಹೆಚ್ ಜಾಕೋಬ್ ಲೋಬೋ ೨೦
- ❑ ಭಯೋತ್ಪಾದನೆಯ ಹಿಂದಿರುವರಾರು?
  - ○ ಎಂ ಪಿ ಉಮೇಶಚಂದ್ರ ೨೨
- ❑ ಆರೆಸ್ಸೆಸ್ ನಿಜ ಬಣ್ಣ ಏನು?
  - ○ ಮೂಲ: ಮಧು ಲಿಮಯೆ
    ಅನು: ಗಂಗಾಧರ ಮೂರ್ತಿ ೨೬
- ❑ ಕಥೆ: ಬಿ ಡಿ ಎ ಲೇಔಟ್ ಮತ್ತು ಚಿಕ್ಕತಾಯಮ್ಮನ ಜಮೀನು
  - ○ ಡಾ ಜೆ ಬಾಲಕೃಷ್ಣ ೩೨
- ❑ ರಾಷ್ಟ್ರನಾಯಕಿ ಮಾಯಾವತಿ ರಾಜಕೀಯ ಒಳನೋಟ
  - ○ ಡಾ ಸುಲೋಚನ ನಾರಾಯಣ್ ೩೬
- ❑ ಬೌದ್ಧ ಸೌಂದರ್ಯ ಮೀಮಾಂಸೆ – ೫ ಪ್ರಮಾಣ ನಿರಾಕರಣೆ
  - ○ ಡಾ. ಎಸ್. ನಟರಾಜ್ ಬೂದಾಳು ೩೮
- ❑ ಧರೆ ಹತ್ತಿ ಉರಿದರೆ... ೬ ಮೇಲೆ ಕೆಳಗಾಗುವ ಲಿಂಗ ಸಂಬಂಧಗಳು
  - ○ ಡಾ. ಟಿ. ಆರ್ ಚಂದ್ರಶೇಖರ್ ೪೨
- ❑ ದಲಿತ್ ಡೈರಿ ೪೬
  - ○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್
- ❑ ಬುದ್ಧಾಯಣ ೫೦
  - ○ ಸಿ.ಎಚ್ ರಾಜಶೇಖರ್

ಕವನಗಳು : ❑ ಪ್ರಭುತ್ವಕಷ್ಟು ಪ್ರಶ್ನೆಗಳು ೪ ❑ ಸೆಡೆ ೧೫
❑ ಕುಲವ ಬಿಟ್ಟೋರು ನಾವು ೨೫ ❑ ಅವ್ವ ಗಾರ್ಕಿಯ ಮಾನಸ ತಾಯಿ ೩೭

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಮನುವಾದಿಗಳೇ ಮಾನವ ಕುಲದ ವ್ಯಾಧಿಗಳು

ಮಾನ್ಯ ಸಂಪಾದಕರಿಗೆ,

ಧರ್ಮದ ಹೆಸರಿನಲ್ಲಿ ರಾಜ್ಯದಲ್ಲಿ ನಡೆಯುತ್ತಿರುವ ಇಂದಿನ ಹಿಂಸೆ ಮತ್ತು ಅನರ್ಥಗಳಿಗೆ, ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಪಟ್ಟಭದ್ರ ಹಿತಾಸಕ್ತಿಗಳು ಕೆಲಸ ಮಾಡುತ್ತಿರುವುದೇ ಕಾರಣವಾಗಿದೆ. ವಸ್ತುನಿಷ್ಠ ಮತ್ತು ವೈಚಾರಿಕ ನೆಲೆಯಲ್ಲಿ ನಾಡಿನ ಸಮಸ್ಯೆಗಳಿಗೆ ಸ್ಪಂದಿಸಬೇಕಾದ ಭೈರಪ್ಪರಂತ ಸಾಹಿತಿಗಳು, ಸ್ವಾಮೀಜಿಗಳು ಸಾಮಾಜಿಕ ಐಕ್ಯತೆ ಮತ್ತು ಭ್ರಾತೃತ್ವಕ್ಕೆ ಕೊಡಲಿಪೆಟ್ಟು ನೀಡುವಲ್ಲಿ ಮುಂದಾಗಿದ್ದರೆ.

ಹಿಂಸೆಯನ್ನ ಪ್ರಚೋದಿಸುವುದು ಪ್ರಜಾಪ್ರಭುತ್ವ ವಿರೋಧಿ ಪ್ರಭುತ್ವವನ್ನ ಆರಾಧಿಸುವುದು ಫ್ಯಾಸಿಸಂನ ಪರಾಕಾಯ ಗುಣಲಕ್ಷಣಗಳು. ಧಾರ್ಮಿಕ ಸ್ವಾತಂತ್ರ್ಯ ಪ್ರತಿಯೊಬ್ಬ ಪ್ರಜೆಯ ಮೂಲಭೂತ ಹಕ್ಕು. ಭೈರಪ್ಪನವರು ತಮ್ಮ ವಿತಂಡವಾದವನ್ನ ಮಂಡಿಸುತ್ತಾ ಹಳೆಯ ಪುರಾಣಗಳನ್ನು ಸ್ಮೃತಿಗಳನ್ನ ನೆನೆಪಿಸಿಕೊಂಡು ಹಳಹಳಿಸಿದ್ದಾರೆ. ಜೊತೆಗೆ ವೈಭವೀಕರಿಸಿದ್ದಾರೆ. ತರ್ಕ ಬದ್ಧ ಚಿಂತನೆಗಳಿಗಿಂತ ಮೇಲ್ಪದರದ ಭಾವನಾತ್ಮಕ ವಿಚಾರಗಳಿಗೆ ಅನಗತ್ಯ ಪ್ರಾಮುಖ್ಯತೆ ನೀಡಿರುವುದು ಲೇಖಕರ ಪೂರ್ವಾಗ್ರಹ ಪೀಡಿತ ರೋಗಗ್ರಸ್ತ ಮನಸ್ಸಿನ ವಿಕೃತ ಕಲ್ಪನೆಯಾಗಿದೆ. ಪ್ರತಿ ಧರ್ಮದ ಉದಯದೊಂದಿಗೆ ಮತಾಂತರ ಮಾನವನ ಇತಿಹಾಸದುದ್ದಕ್ಕೂ ನಡೆದುಕೊಂಡು ಬಂದಿರುವ ಕ್ರಿಯೆಯಾಗಿದೆ.

ಯಾವುದೇ ವ್ಯಕ್ತಿಗೆ ಸ್ವಧರ್ಮದಲ್ಲಿ ಅಭದ್ರತೆಯ ಭಾವ ಉಂಟಾದಾಗ ಶಾಂತಿಯನ್ನ ಕಾಣದೆ ಬೇರೊಂದು ಧರ್ಮವನ್ನು ಸ್ವೀಕರಿಸುವುದು ನಿಜವಾದ ಮತಾಂತರ. ಇದಕ್ಕೆ ವಿರುದ್ಧವಾಗಿ ಕೇವಲ ಕ್ಷಣಿಕ ಪ್ರಲೋಭನೆಗೊಳಗಾಗಿ ಧರ್ಮಾಂತರಗೊಂಡರೆ ಅದು ಸ್ಥಳಾಂತರವಷ್ಟೆ. ವಾಸ್ತವವಾಗಿ ಈ ದೇಶ ಹಾಗೂ ರಾಜ್ಯದಲ್ಲಿ ಮತಾಂತರ ಮಾಡುತ್ತಿರುವವರು ಸಂಘಪರಿವಾರದವರು. ಚಾರಿತ್ರಿಕವಾಗಿ ವೈದಿಕ ಸಂಸ್ಕೃತಿಗೆ ಸೇರದ ದಲಿತ, ಹಿಂದುಳಿದ ಹಾಗೂ ಇನ್ನಿತರ ಶೂದ್ರ ಜನಾಂಗಳನ್ನು ಅನ್ಯ ಧರ್ಮಿಯರ ವಿರುದ್ಧ ಎತ್ತಿಕಟ್ಟುವುದರ ಮೂಲಕ ಹಿಂದುತ್ವದ ವೈರಸ್ ಅನ್ನು ಈ ಜನಾಂಗಗಳಲ್ಲಿ ತುಂಬಿ ಹಿಂದುಗಳನ್ನಾಗಿ ಮತಾಂತರ ಮಾಡುತ್ತಿದ್ದಾರೆ.

ಕ್ರೈಸ್ತರ ಮೇಲೆ ಮತಾಂತರದ ಗೂಬೆ ಕೂರಿಸುತ್ತಾ ಅಸಲಿಗೆ ಮತಾಂತರವನ್ನೇ ಕಸುಬಾಗಿಸಿಕೊಂಡಿರುವ ಸಂಘಪರಿವಾರ ಶಿಕ್ಷಣ, ವೈದ್ಯಕೀಯ, ಸಮಾಜ ಸೇವೆ, ಮುಂತಾದ ಕಾರ್ಯಗಳಿಂದ ದಲಿತ ಆದಿವಾಸಿ ಇನ್ನಿತರ ಶೋಷಿತ ಸಮುದಾಯಗಳ ಸಬಲೀಕರಣದಲ್ಲಿ ತೊಡಗಿರುವ ಕ್ರೈಸ್ತರ ವಿರುದ್ಧ ಕತ್ತಿ ಮಸೆಯುತ್ತಿರುವುದು ಚಾರಿತ್ರಿಕ ವ್ಯಂಗ್ಯವಾಗಿದೆ. ಸಂಘಪರಿವಾರದ ಹಿಂದುತ್ವ ರಾಷ್ಟ್ರದ ಪರಿಕಲ್ಪನೆಗೆ ವಿರುದ್ಧವಾಗಿ ಈ ದೇಶದ ದಲಿತ, ಆದಿವಾಸಿ, ಶೂದ್ರ ಇನ್ನಿತರ ಸಮುದಾಯಗಳು ಬೌದ್ಧ, ಸಿಖ್, ಕ್ರೈಸ್ತ ಹಾಗೂ ಇಸ್ಲಾಂ, ಧರ್ಮಗಳನ್ನು ಸ್ವೀಕರಿಸುತ್ತಿರುವುದು ಸಂಘಪರಿವಾರಕ್ಕೆ ಸಹಿಸಲು ಸಾಧ್ಯವಾಗುತ್ತಿಲ್ಲ.

ಈ ಕಾರಣದಿಂದ ಧರ್ಮರಕ್ಷಣೆಯ ಹೆಸರಿನಲ್ಲಿ ತಮ್ಮ ಪ್ರತಿಕಾರವನ್ನ ಬೇರೆ ಬೇರೆ ರೂಪಗಳಲ್ಲಿ ಮತಾಂತರಗೊಂಡ ಸಮುದಾಯಗಳ ವಿರುದ್ಧ ವ್ಯಾಪಕ ದೌರ್ಜನ್ಯವೆಸಗುತ್ತಿದ್ದಾರೆ. ಇಂದು ಕ್ರೈಸ್ತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು ಮನುವಾದದ ಫ್ಯಾಸಿಸ್ಟ್ ಧೋರಣೆಯ ವಿಸ್ತೃತ ರೂಪವಾಗಿದೆ. ಬೌದ್ಧಧರ್ಮವನ್ನು ಭಾರತದಿಂದ ಪಲಾಯನಗೈಯುವಂತೆ ಮಾಡಿದ ಶಂಕರಾಚಾರ್ಯರ ಪ್ರತಿಗಾಮಿತನ, ಸಿಖ್ಬರ ಮಾರಣಹೋಮ, ಬಾಬರಿ ಮಸೀದಿ ಧ್ವಂಸ, ಬಾಬಾಬುಡನ್‌ಗಿರಿ ಸಮಸ್ಯೆಯನ್ನ ಸೃಷ್ಟಿಸಿರುವ ಮದಾಂಧರು ಈಗ ಮತಾಂತರವನ್ನ ಅಸ್ತ್ರವಾಗಿಸಿಕೊಂಡಿದ್ದಾರೆ.

"ಹಿಂದು ನಾವೆಲ್ಲಾ ಒಂದು" ಎಂದು ಹೇಳುತ್ತಲೇ ಜಾತಿ ಪದ್ಧತಿ, ವರ್ಗ ತಾರತಮ್ಯ ಹಾಗೂ ಸಮಾಜದ ವೈರುಧ್ಯಗಳನ್ನ ಪೋಷಿಸುತ್ತಾ ಬಂದಿರುವ ಪುರೋಹಿತ ಶಾಹಿಗಳು ಬ್ರಾಹ್ಮಣ್ಯದ ಯಜಮಾನಿಕೆಯನ್ನ ಪುನರ್‌ಸ್ಥಾಪಿಸುವುದನ್ನೇ ಗುಪ್ತ ಅಜೆಂಡಾವಾಗಿಸಿಕೊಂಡಿದ್ದಾರೆ. ಇಂದಿಗೂ ವೈದಿಕ ಧರ್ಮದ ಕೆಲವು ಜಾತಿಗಳ ಜನ ಇತರರ ಮನೆಗೆ ಪ್ರವೇಶಿಸುವಂತಿಲ್ಲ. ದಲಿತರು ಊರ ಹೊರಗೆ ಜೀವಿಸುವಂತಾಗಿದೆ. ಸಮಾನತೆಯನ್ನ ಪ್ರತಿಪಾದಿಸಬೇಕಾದ ದೇವಳಗಳಲ್ಲಿ ಜಾತಿಗನುಗುಣವಾಗಿ ಊಟದ ವ್ಯವಸ್ಥೆ ಇದೆ.

ಇಷ್ಟೆಲ್ಲಾ ದೌರ್ಬಲ್ಯಗಳನ್ನ ತನ್ನ ಒಡಲಿನಲ್ಲಿಸಿಕೊಂಡಿರುವ ಹಿಂದು ಧರ್ಮದ ಪ್ರಶಂಸಕರು, ಪರಧರ್ಮ ನಿಂದನೆಯಲ್ಲಿ ತೊಡಗಿರುವುದು ಇವರ ಬೌದ್ಧಿಕ ದಾರಿದ್ರ್ಯಕ್ಕೆ ಸಾಕ್ಷಿಯಾಗಿದೆ. ಧರ್ಮರಕ್ಷಣೆಯ ಹೆಸರಿನಲ್ಲಿ ಅನ್ಯಧರ್ಮಿಯರ ಮೇಲೆ ಕಿಡಿ ಕಾರುತ್ತಿರುವ ಮನುವಾದಿಗಳ ಮೂಲ ಉದ್ದೇಶವೇ ಬೇರೆಯದಾಗಿದೆ. ಬಹುಪಾಲು ವೈದಿಕರು ತಮ್ಮ ಹೊಟ್ಟೆ ಹೊರೆಯಲು ಪೂಜೆ, ಹೋಮ, ಹವನ, ವಾಸ್ತು, ಜ್ಯೋತಿಷ್ಯವೆಂಬ ಮೌಢ್ಯಗಳನ್ನ ಮುಂದೆ ಮಾಡಿ ಬೇರೊಬ್ಬರ ಶ್ರಮದ ದುಡಿಮೆಯನ್ನ ಅವಲಂಬಿಸಿದ್ದಾರೆ. ಒಬ್ಬ ಮನುಷ್ಯ ಹುಟ್ಟಿದಾಗಿನಿಂದ ಪ್ರಾರಂಭವಾಗುವ ಇವರ ಸುಲಿಗೆ ಆತನ ಸಾವಿನವರೆಗೂ ಅವ್ಯಾಹತವಾಗಿ ಸಾಗುತ್ತದೆ.

ವಾಸ್ತವತೆ ಹೀಗಿರುವಾಗ ಈ ದೇಶದ ದಲಿತ, ಹಿಂದುಳಿದ, ಆದಿವಾಸಿ, ಬುಡಕಟ್ಟು, ಶೂದ್ರರೆಲ್ಲಾ ಒಬ್ಬಬ್ಬರಾಗಿ ಮತಾಂತರಗೊಂಡರೆ ಮುಂದೆ ತಮ್ಮ ಹೊಟ್ಟೆಗೆ ತಣ್ಣೀರು ಬಟ್ಟೆಯೇ ಗತಿಯಾಗುತ್ತದೆಂಬ ಭೀತಿ ಆವರಿಸಿದೆ. ಸೃಷ್ಟಿಯಲ್ಲಿನ ಜೀವಗಳಲ್ಲಿ ಸಾಮಾನ್ಯವಾಗಿ ನಮಗೆ ಗೋಚರಿಸುವ ಅತ್ಯಂತ ಸಣ್ಣಜೀವಿ ಇರುವೆ. ಇಂಥ ಸಣ್ಣ ಜೀವಿಯು ತನ್ನ ಸಾಮರ್ಥ್ಯಕ್ಕನುಗುಣವಾಗಿ ಶ್ರಮವಹಿಸಿ ತನ್ನ ಆಹಾರವನ್ನ ಸಂಪಾದಿಸುವುದರ ಮೂಲಕ ಶ್ರಮಧರ್ಮಕ್ಕೆ ಬದ್ಧವಾಗಿದೆ. ವಿಪರ್ಯಾಸವೆಂದರೆ ಸೃಷ್ಟಿಯ ಶ್ರೇಷ್ಠ ಜೀವಿಯಾದ ಮಾನವ ರೂಪದ ಮನುವಾದಿಗಳು ತಮ್ಮ ಹೊಟ್ಟೆ ಹೊರೆಯಲು ಮತ್ತೊಬ್ಬರ ಶ್ರಮವನ್ನಾಧರಿಸಿರುವುದು ಜೀವಜಗತ್ತಿನಲ್ಲಿ ಮಾನವನ ಶ್ರೇಷ್ಠತೆಗೆ ಕಪ್ಪುಚುಕ್ಕಿಯಾಗಿದೆ.

ಕಾಲಕಾಲಕ್ಕೆ ತಮ್ಮ ಪುಂಡಾಟಿಕೆಯನ್ನ ಪ್ರಶ್ನಿಸುವ ವೈದಿಕರು ಪರಧರ್ಮೀಯರು ಹಾಗೂ ಪ್ರಗತಿಪರರನ್ನ ಬೆದರಿಸಲು ಬಲಾಢ್ಯ ಜಾತಿಗಳನ್ನ ಬಳಸಿಕೊಳ್ಳುತ್ತಿದ್ದಾರೆ. ಹಿಂದೆ ಕ್ಷತ್ರಿಯರನ್ನ ಮತ್ತು ವೈಶ್ಯರನ್ನ ಬಳಸಿಕೊಂಡ ಪುರೋಹಿತ ಶಾಹಿಗಳು ಪ್ರಸಕ್ತ ಕರ್ನಾಟಕದ ಸಂದರ್ಭದಲ್ಲಿ ಪ್ರಬಲ ಜಾತಿಗಳಾದ ಒಕ್ಕಲಿಗರು (ಆವರಣ ಕೃತಿಯಲ್ಲಿ ನರಸಿಂಹೇಗೌಡನೆಂಬ ಪಾತ್ರ ಸೃಷ್ಟಿ) ಹಾಗೂ ಲಿಂಗಾಯತ (ಸಿದ್ದಗಂಗಾ ಮಠದ ಶಿವ ಕುಮಾರಸ್ವಾಮೀಜಿಗಳು ಬಗ್ಗೆ ಕ್ರೈಸ್ತರ ವಿರುದ್ಧ ಪ್ರಸ್ತಾಪಿಸಿರುವುದು)ರನ್ನು ಬಳಸಿಕೊಳ್ಳುತ್ತಿರುವುದರ ಮೂಲಕ ತಲತಲಾಂತರದಿಂದ ನಡೆಸಿಕೊಂಡು ಬಂದ ತಲೆ ಹಿಡುಕ ಕೆಲಸಕ್ಕೆ ಜೀವಂತ ಸಾಕ್ಷಿಯಾಗಿದ್ದಾರೆ.

ಮಾನವೀಯತೆಯೇ ಮೈವೆತ್ತಂತೆ ಬಾಳಿ ಬದುಕಿದ ಮದರ್ ಥೆರೇಸರನ್ನ ಮತಾಂತರಿ ಎಂದು ಸಂಬೋಧಿಸುವುದರ ಮೂಲಕ ಭೈರಪ್ಪ ತಾನು ಹೊಟ್ಟೆಗೆ ಅನ್ನ ತಿನ್ನುವುದಿಲ್ಲ ಎಂಬುದನ್ನ ನಿರೂಪಿಸಿದ್ದಾರೆ. ಆವರಣ ಕೃತಿಯಲ್ಲಿ ಇಸ್ಲಾಂ ಧರ್ಮವನ್ನ ಅವಹೇಳನ ಮಾಡುವುದರ ಮೂಲಕ ತನ್ನ ವಿಕೃತ ಮನಸ್ಸನ್ನ ಅನಾವರಣಗೊಳಿಸಿಕೊಂಡಿದ್ದ ಭೈರಪ್ಪ ಅನಂತಮೂರ್ತಿ, ತೇಜಸ್ವಿಯವರ ಕಟುವಿಮರ್ಶೆಗೆ ತುತ್ತಾಗಿದ್ದರೂ ಹುಟ್ಟುಗುಣ ಸುಟ್ಟರೂ ಹೋಗುವುದಿಲ್ಲವೆಂಬಂತೆ ಕ್ರೈಸ್ತರ ವಿರುದ್ಧ ಬರೆದು ತಾವೊಬ್ಬ ಕೋಮುವಾದದ ಖಿನ್ನತೆಯಿಂದ ಬಳಲುತ್ತಿರುವ ಮನೋರೋಗಿ ಎಂಬುದನ್ನ ಮತ್ತೆ ಸ್ಪಷ್ಟಪಡಿಸಿದ್ದಾರೆ.

ಬನ್ನಿ ಮನುಷ್ಯರಾಗಿ ಪ್ರಗತಿಗೆ ಯಾವಾಗಲೂ ವಿರುದ್ಧವಾಗಿರುವ ಪುರೋಹಿತರನ್ನ ಒದ್ದೋಡಿಸಿ. ಶತಶತಮಾನಗಳಿಂದ ಬಂದ ಮೂಡನಂಬಿಕೆಯ ಹಾಗೂ ದಬ್ಬಾಳಿಕೆಯ ಸಂತಾನ, ಸನಾತನಿಗಳು ಮೊದಲು ಮನುವಾದಿಗಳನ್ನ ಬೇರು ಸಹಿತ ಕಿತ್ತೊಗೆಯಿರಿ ಎಂಬ ಸ್ವಾಮಿ ವಿವೇಕಾನಂದರ ವಾಣಿಯನ್ನ ಈ ನಾಡಿನ ಸಮಸ್ತ ದುಡಿಯುವ ವರ್ಗದ ಜನತೆ ಕಾರ್ಯರೂಪಕ್ಕೆ ತರಬೇಕಾಗಿದೆ.

ಎಸ್.ಮಹದೇವ,
ಬೆಂಗಳೂರು

ಪತ್ರಾಗಾರ



ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ		
ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ		
ರೂ.೨೪೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ		
ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಪ್ರಭುತ್ವಕ್ಕೆ ಪ್ರಶ್ನೆಗಳು.

ಈ ಮಕ್ಕಳಿಗೆ
ಬಟ್ಟಲಿನಂತೆರಡು ಕಣ್ಣುಗಳ
ಕೊಟ್ಟವರಾರು?
ನಾನು ಅಂತು ನಕ್ಷತ್ರ!

ಈ ಮಕ್ಕಳಿಗೆ
ಕಪಟರಹಿತ ನಗುವ
ಕೊಟ್ಟವರಾರು?
ನಾನು ಅಂತು ಮಲ್ಲಿಗೆ!

ಈ ಮಕ್ಕಳಿಗೆ
ತೊದಲ್ನುಡಿ ಮಧುರ ಕಂಠ
ಕೊಟ್ಟವರಾರು?
ನಾನು ಅಂತು ತಂಗಾಳಿ!

ಹಾಗಾದರೆ
ಇವರ ಕಣ್ಣ ಬೆಳಕ
ಆರಿಸಿದವರಾರು?
ನಗೆ,ಹೂವ
ಹೊಸಕಿದರಾರು?
ಗಂಟಲು ನರ
ಕತ್ತರಿಸಿದವರಾರು?
ಅವರ ಮುಂದೆ ಖಾಲಿ ತಟ್ಟೆಗಳ ನಿಟ್ಟು
ನಕ್ಕವರಾರು?
ಮುಂದೆ ಹಸಿದ ಈ ಮಕ್ಕಳು
ಬಂದೂಕು ಹಿಡಿದು ನಿಂತರೆ
ಹೊಣೆ ಯಾರು?
ಉತ್ತರಿಸಬೇಕಾದ
ಪ್ರಭುತ್ವ
ಮೌನವಾಗಿದೆ

○ ಕು.ಸ. ಮಧುಸೂದನ

ಸಂಪಾದಕೀಯ



ಗೌರವ ಡಾಕ್ಟರೇಟ್‌ಗ್ಯಾಕೆ ಇಂಥ ಸ್ಥಿತಿ!

ಗೌರವ ಡಾಕ್ಟರೇಟ್ ಪದವಿಗೆ ಇಂಥ ಹೀನಾಯ ಸ್ಥಿತಿ ಬರಬಾರದಾಗಿತ್ತು!

ಅಪಾತ್ರರರಿಗೆಲ್ಲ ಗೌರವ ಡಾಕ್ಟರೇಟ್ ನೀಡುವಂಥ ಹೀನಾಯ ಸ್ಥಿತಿಗೆ ವಿಶ್ವವಿದ್ಯಾಲಯಗಳು ಇಳಿಯಬಾರದಾಗಿತ್ತು!!

ಇಂಥ ಹೀನಾಯ ಪರಿಸ್ಥಿತಿಯೊಂದಕ್ಕೆ ಸಾಕ್ಷಿಯಾಗುವಂತ ದುರಂತ ನಮಗೂ ಬರಬಾರದಾಗಿತ್ತು!!!

ಆದರೆ ಈ ಮೂರೂ ಆಗಿಹೋಗಿದೆ. ಕರ್ನಾಟಕದ ದೌರ್ಭಾಗ್ಯವೋ ಏನೋ ಅಂಥ ಪರಿಸ್ಥಿತಿಗೆ ಕಾರಣೀಭೂತನಾದ ವ್ಯಕ್ತಿ ಬೇರಾರೂ ಆಗಿರದೆ ನಾಡಿನ ಮುಖ್ಯಮಂತ್ರಿಯೇ ಆಗಿದ್ದಾರೆ. ಅದರಲ್ಲೂ ನ್ಯಾಯ, ನಿಷ್ಠೆ, ಸಂಸ್ಕೃತಿ, ದೇಶಭಕ್ತಿ ಅಂತೆಲ್ಲ ಬುರುಡೆ ಹೊಡೆಯುವ ಭಾರತೀಯ ಜನತಾ ಪಕ್ಷದ ನಾಯಕಮಣಿಯೇ ಆಗಿದ್ದಾರೆ!

ಯಡಿಯೂರಪ್ಪ ಅವರಿಗೆ ಯಾಕೆ ಇಂಥ ದುಸ್ಥಿತಿ ಬಂತು? ಯಾರೂ ಕೇಳಿರದ, ಉತ್ತಮ ಹೆಸರನ್ನು ಪಡೆಯದ ಅನಾಮಿಕ ವಿಶ್ವ ವಿದ್ಯಾಲಯವೊಂದರಿಂದ ಇಂಥ ಪದವಿ ಪಡೆಯುವ ಅಗತ್ಯವಾದರೂ ಏನಿತ್ತು? ಗೌರವ ಡಾಕ್ಟರೇಟ್‌ನ ಪಿತ್ತವನ್ನು ಅವರ ನೆತ್ತಿಗೆ ಏರಿಸಿದ ಪಾಪಿಯಾದರೂ ಯಾರು? ಅಷ್ಟೊಂದು ಕೀಳರಿಮೆ ಒಬ್ಬ ಮುಖ್ಯಮಂತ್ರಿಗೆ ಬಂಧರೆ ನಾಡಿನ ಗೌರವದ ಪಾಡೇನು? ಕನಿಷ್ಠ ಬಿಜೆಪಿಯಲ್ಲಿರುವ ಕೆಲವರಾದರೂ ಮಾನವಂತರು ಇದನ್ನು ತಡೆದು ಪಕ್ಷದ ಹಾಗೂ ರಾಜ್ಯದ ಘನತೆಯನ್ನಾದರೂ ಉಳಿಸಬಹುದಿತ್ತಲ್ಲವೆ?

ಅದೆಲ್ಲಾ ಹೋಗಲಿ ಈ ಯಡಿಯೂರಪ್ಪ ಯಾವ ಕನ್ನರಿಂಬಾಡಿ ಕಟ್ಟೆ ಕಟ್ಟಿದ್ದಾರೆ ಅಂತ ಇವರಿಗೆ ಗೌರವ ಡಾಕ್ಟರೇಟ್ ನೀಡಬೇಕು? ಅಧಿಕಾರಕ್ಕೆ ಬಂದ ಆರು ತಿಂಗಳಲ್ಲಿ ಇಡೀ ರಾಜ್ಯವನ್ನು ದಿವಾಳಿಯ ಅಂಚಿಗೆ ತಂದು ನಿಲ್ಲಿಸಿರುವುದನ್ನು ಬಿಟ್ಟು ಬೇರೆ ಏನಾದರೂ ಸಾಧನೆ ಮಾಡಿದ್ದಾರೆಯೆ? ಅಭಿವೃದ್ಧಿ ಅಭಿವೃದ್ಧಿ ಎಂದು ಬೀಗುತ್ತಿದ್ದವರು ಈಗ ಖಜಾನೆ ಖಾಲಿಯಾಗಿದೆ ಎಂದು ಭಜನೆ ಮಾಡುತ್ತಿದ್ದಾರೆ. ವರ್ಷ ಮುಗಿಯುತ್ತಾ ಬಂದರೂ ಇನ್ನೂ ವರ್ಗಾವಣೆ ನಿಂತಿಲ್ಲ. ವರ್ಗಾವಣೆಯಂತೂ ಸಂತೆಯ ಹರಾಜಿನ ಮಟ್ಟಕ್ಕೆ ಬಂದು ನಿಂತಿದೆ. ಅಧಿಕಾರಿಗಳನ್ನು ಹಣಕ್ಕಾಗಿ ಫುಟ್ ಬಾಲಿನಂತೆ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಮನಸ್ಸಿಗೆ ಬಂದಂತೆ ಎತ್ತಿ ಎಸೆಯುತ್ತಿದ್ದಾರೆ. ಕಾನೂನು ಸುವ್ಯವಸ್ಥೆಯಂತೂ ಮೂರಾಬಟ್ಟೆಯಾಗಿದೆ. ದಲಿತರು, ಹಿಂದುಳಿದವರು, ಅಲ್ಪ ಸಂಖ್ಯಾತರು ಭಯದ ನೆರಳಿನಲ್ಲಿ ಬದುಕುವ ಸ್ಥಿತಿ ನಿರ್ಮಾಣವಾಗಿದೆ. ವರ್ಷವಿಡೀ ದುಡಿಯುವ ರೈತ ಎರಡು ಹೊತ್ತಿನ ಊಟಕ್ಕೂ ಗತಿ ಇಲ್ಲದೆ ನೇಣಿಗೆ ಕೊರಳೊಡ್ಡತ್ತಿದ್ದಾನೆ.

ಆಯ ಕಟ್ಟಿನ ಜಾಗಗಳಲ್ಲೆಲ್ಲಾ ಬರೀ ಬಲಿಷ್ಠ ಜಾತಿಯ ಅಧಿಕಾರಿಗಳನ್ನು ತಂದು ಕೂರಿಸಲಾಗುತ್ತಿದೆ. ಅದರಲ್ಲೂ ಯಡಿಯೂರಪ್ಪನವರ ಜಾತಿಗೆ ಸೇರಿದ ಅಧಿಕಾರಿಗಳದ್ದೇ ಕಾರು ಬಾರು. ವಿದ್ಯುತ್ ಸ್ಥಿತಿಯಂತೂ ಹೇಳಲಸದಳ! ಗ್ರಾಮೀಣ ಪ್ರದೇಶಗಳ ಜನರಂತೂ ಯಾಕಾದರೂ ಬಿಜೆಪಿಗೆ ಮತ ನೀಡಿದೆವೆಂದು ತಮ್ಮನ್ನು ತಾವೇ ಶಪಿಸಿಕೊಳ್ಳುತ್ತಿದ್ದಾರೆ. ವಿದ್ಯುತ್ ಅಭಾವ ಇರುವುದು ನಿಜವಾದರೂ ಇರುವ ವಿದ್ಯುತ್ತನ್ನಾದರೂ ಸಮರ್ಪಕವಾಗಿ ವಿತರಿಸುವ ವ್ಯವಸ್ಥೆಯನ್ನೂ ಇವರು ಮಾಡಲಾಗುತ್ತಿಲ್ಲ. ವಿದ್ಯುತ್ ಜಾಲದ ಸಮರ್ಪಕ ಅರಿವಿಲ್ಲದ ಅಧಿಕಾರಿಗಳು, ಬೇಜವಾಬ್ದಾರಿ ರಾಜಕಾರಣಿಗಳು ಸೇರಿಕೊಂಡು ವಿತರಣೆಯನ್ನೇ ಗಬ್ಬೆಬ್ಬಿಸಿಬಿಟ್ಟಿದ್ದಾರೆ. ಹಿಂದಿನ ಸರ್ಕಾರಗಳಲ್ಲೂ ಇಷ್ಟೇ ವಿದ್ಯುತ್ ಸಮಸ್ಯೆ ಇತ್ತಾದರೂ, ಇರುವ ವಿದ್ಯುತ್ ಅನ್ನು ಸಮರ್ಪಕವಾಗಿ ವಿತರಿಸುವ ಕೆಲಸವಾದರೂ ನಡೆಯುತ್ತಿತ್ತು. ಅಂಥ ಕನಿಷ್ಠ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಯಡಿಯೂರಪ್ಪನವರ ಸರ್ಕಾರ ಸಂಪೂರ್ಣ ವಿಫಲವಾಗಿದೆ.

ಯಾವ ಭಾಗ್ಯಕ್ಕೆ ಇಂಥ ಮುಖ್ಯಮಂತ್ರಿಗೆ ಗೌರವ ಡಾಕ್ಟರೇಟ್ ನೀಡಬೇಕು? ನಾಡನ್ನು ಮುನ್ನಡೆಸುವ ಹೊಣೆ ಹೊತ್ತ ವ್ಯಕ್ತಿಯೇ ಇಂಥ ಅನೈತಿಕ ಹರಾಕಿರಿಗೆ ಮುಂದಾದರೆ ಉಳಿದವರು ಏನು ಮಾಡಿಯಾರು? ನನಗೆ ಆಶ್ಚರ್ಯವಾಗುತ್ತಿರುವುದು ಇದೇ ಡಾಕ್ಟರೇಟ್ ಅನ್ನು ಹಿಂದೆ ಮುಖ್ಯಮಂತ್ರಿಯಾಗಿದ್ದ ಎಸ್.ಎಂ.ಕೃಷ್ಣ ನಿರಾಕರಿಸಿದ್ದರೆಂಬ ಅರಿವಿದ್ದೂ, ಯಡಿಯೂರಪ್ಪ ವಶೀಲಿ ಬಾಜಿ ಮೂಲಕ ಅದನ್ನು ಪಡೆಯಲು ಮುಂದಾದ್ದು. ಅದೂ ಅಲ್ಲದೆ ಡಾಕ್ಟರೇಟ್ ಪಡೆದು ಬೆಂಗಳೂರಿಗೆ ಹಿಂತಿರುಗುವಷ್ಟರಲ್ಲಿ ಮನೆ ಮುಂದಿನ ನಾಮಫಲಕಕ್ಕೆ ಡಾಕ್ಟರೇಟ್ ಅನ್ನು ಪೋಣಿಸಿದ್ದು ನೋಡಿದರೆ ಅವರ ನೈತಿಕ ಅದಃಪತನ ಎಂಥದ್ದು ಎಂಬುದು ಅರ್ಥವಾಗುತ್ತದೆ. ಗೌರವ ಡಾಕ್ಟರೇಟ್ ಪಡೆದ ಮಾನವಂತರ್‍ಯಾರೂ ಹೆಸರಿನ ಹಿಂದೆ ಆ ಡಾಕ್ಟರೆಟ್ ಪದವನ್ನು ಬಳಸುವುದಿಲ್ಲ. ಅಷ್ಟೇ ಏಕೆ ನಿಜವಾಗಿ ಸಂಶೋಧನೆ ಮಾಡಿ ಡಾಕ್ಟರೇಟ್ ಪಡೆದ ಎಷ್ಟೋ ಜನ ವಿದ್ವಾಂಸರು ಡಾಕ್ಟರೇಟ್ ಅನ್ನು ತಮ್ಮ ಹೆಸರಿನೊಂದಿಗೆ ಸೇರಿಸಿಕೊಳ್ಳಲು ಇಚ್ಛಿಸುವುದಿಲ್ಲ. ಯಡಿಯೂರಪ್ಪನವರ ಹಿಂದೆ ಮುಂದೆ ಓಡಾಡುವ ಕೆಲವರಾದರೂ ಪ್ರಜ್ಞಾವಂತರು ಇಷ್ಟು ಕನಿಷ್ಠ ತಿಳವಳಿಯನ್ನಾದರೂ ಅವರಿಗೆ ನೀಡಬೇಕಾಗಿತ್ತು.

ನಾಡಿನ ಮುಖ್ಯಮಂತ್ರಿಯ ಕಥೆಯೇ ಹೀಗಾದರೆ ಇನ್ನು ಅವರ ಕೈ ಕೆಳಗೆ ಇರುವ ವಿಶ್ವವಿದ್ಯಾನಿಲಯಗಳ ಕಥೆ ಕೇಳುವುದೇ ಬೇಡ. ನಮ್ಮ ಬಹುತೇಕ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಡಾಕ್ಟರೇಟ್ ಪದವಿಗಳು ಬಿಕರಿಗಿವೆ. ಎಷ್ಟೋ ಮಂದಿ ಹುಸಿ ಸಂಶೋಧಕರು ಅವರಿವರು ಪ್ರಕಟಿಸಿರುವ ಸಂಶೋಧನೆಗಳನ್ನೇ ಕಾಪಿ ಮಾಡಿ ತಮ್ಮ ಹೆಸರಿನಲ್ಲಿ ಪಿಹೆಚ್‌ಡಿ ಪಡೆದ ಉದಾಹರಣೆಗಳು ಹಲವಾರು. ಅದರಲ್ಲಿ ಜಾತಿ, ಹಣ, ಶಿಫಾರಸುಗಳದ್ದೇ ಪಾರುಪತ್ಯ. ಅಧಿಕಾರದ ಪ್ರಾಬಲ್ಯ. ಉಳ್ಳವರಂತೂ ಕೂತಲ್ಲೇ ಪಿಹೆಚ್‌ಡಿ ಪಡೆದ ಹಲವು ಉದಾಹರಣೆಗಳು ಉಂಟು. ಇತ್ತೀಚೆಗಂತೂ ನಮ್ಮ ಐಎಎಸ್, ಐಪಿಎಸ್ ಅಧಿಕಾರಿಗಳಿಗೂ ಈ ಪಿಹೆಚ್‌ಡಿ ಪಡೆವ ಗೀಳು ಅಂಟಿಕೊಂಡಿದೆ. ಹಣ ಅಧಿಕಾರದ ದೌಲತ್ತಿನ ಈ ಅಧಿಕಾರಿಗಳು ಹಣದ ಅಗತ್ಯವಿರುವ ಪ್ರತಿಭಾವಂತರನ್ನು ಹಿಡಿದು, ಅವರಿಗೆ ಹಣನೀಡಿ ಅವರಿಂದಲೇ ಪ್ರಬಂಧ ಸಿದ್ಧಪಡಿಸಿ ತಮ್ಮ ಹೆಸರಿನಲ್ಲಿ ಮಂಡಿಸಿ, ಡಾಕ್ಟರೇಟ್ ಪಡೆದದ್ದು ನನ್ನ ಗಮನಕ್ಕೂ ಬಂದಿದೆ. ನಿಜವಾದ ಸಂಶೋದಕರು ತಮ್ಮ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿ ಎಷ್ಟೋ ವರ್ಷಗಳಾದರೂ ಅವರಿಗೆ ಪಿಹೆಚ್‌ಡಿ ನೀಡದೆ ಸತಾಯಿಸುವ ಕೆಲವು ಪ್ರೊಫೆಸರ್‌ಗಳು ತಮಗೆ ಬೇಕಾದವರಿಗೆ ತಾವೇ ಪ್ರಬಂಧ ಸಿದ್ಧಪಡಿಸಿ ಡಾಕ್ಟರೇಟ್ ಕೊಡಿಸಿದ ಉದಾಹರಣೆಗಳೂ ಇವೆ. ಸಂಶೋಧನೆ ಹೆಸರಿನಲ್ಲಿ ಇಂಥ ದಂಧೆಗಳು ನಡೆದರೆ ನಿಜವಾದ ಸಂಶೋಧಕರು, ವಿದ್ವಾಂಸರು ತಲೆತಗ್ಗಿಸಿ ನಡೆಯಬೇಕಾಗುತ್ತದೆ.

ವಿಶ್ವವಿದ್ಯಾನಿಲಯಗಳು ಕನಿಷ್ಠ ಘನತೆಯನ್ನು ಉಳಿಸಿಕೊಳ್ಳಲಿಕ್ಕಾದರೂ ಇಂಥ ದಂಧೆಗಳನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ವಿಶ್ವ ವಿದ್ಯಾನಿಲಯಗಳೆಲ್ಲ ಕಿರಾಣಿ ಅಂಗಡಿಗಳಾಗಿ ಮಾರ್ಪಡುವ ದಿನ ದೂರವೇನೂ ಇಲ್ಲ.

○ ಇಂದೂಧರ ಹೊನ್ನಾಪುರ

ಜಾಗತೀಕರಣ ದಲಿತರ ಸ್ನೇಹಿಯೇ?

ಚಂದ್ರಭಾನ್ ಪ್ರಸಾದರ ಸಲಹೆಯಂತೆ ದಲಿತರು ಹಳ್ಳಿಗಳಲ್ಲಿರುವ ತಮ್ಮ ಆಸ್ತಿಯನ್ನು ಮಾರಿ ನಗರ ಪ್ರದೇಶಗಳಿಗೆ ವಲಸೆ ಹೋದರೆ, ಹೆಚ್ಚಿನವರಿಗೆ ನೆಲೆ ಸಿಕ್ಕುವುದು ಕೊಳೆ ಗೇರಿಗಳಲ್ಲಿ. ಅನೇಕರು ದಿನಗೂಲಿ ನೌಕರರಾಗಿ ದುಡಿಯಬೇಕಾಗುತ್ತದೆ. ಯಾವುದೇ ಸ್ಥಿರ ಅಥವಾ ಚರ ಆಸ್ತಿಯಿಲ್ಲದೆ, ಅವರಿಗೆ ಉದ್ಯಮಗಳನ್ನು ಶುರುಮಾಡುವುದಕ್ಕೆ ಹಣ ದೊರಕುವುದಿಲ್ಲ. ಕೊಳಗೇರಿಗಳಲ್ಲಿರುವ ಪರಿಸ್ಥಿತಿಯಲ್ಲಿ ಅವರ ಮಕ್ಕಳಿಗೆ ಸೂಕ್ತ ಶಿಕ್ಷಣ ದೊರಕುವುದಿಲ್ಲ; ಸರಿ ಯಾದ ತರಬೇತಿ ಸಿಗದೆ, ಒಳ್ಳೆಯ ಕೆಲಸಗಳು ಸಿಗು ವುದಿಲ್ಲ. ಆರೋಗ್ಯಕರ ವಾದ ಜೀವನವನ್ನೂ ನಡೆಸುವುದಕ್ಕೆ ಸಾಧ್ಯ ವಾಗುವುದಿಲ್ಲ. ಒಟ್ಟಿನಲ್ಲಿ ಅವರು ಅತಂತ್ರ ಸ್ಥಿತಿಯಲ್ಲೇ ಬಾಳಬೇಕಾ ಗುತ್ತದೆ. ದಲಿತರು ತೊರೆದ ಹಳ್ಳಿಗಳಲ್ಲಿರುವ ಭೂಮಿ ಕಾರ್ಪೋರೇಟ್ ಕೃಷಿ ಹಾಗೂ ವಿಶೇಷ ಆರ್ಥಿಕ ವಲಯಗಳ ಬಲಾಢ್ಯ ಶಕ್ತಿಗಳ ಪಾಲಾ ಗುವ ಸಾಧ್ಯತೆಗಳೇ ಹೆಚ್ಚು.

ಮ. ಶ್ರೀ.ಮುರಳಿ ಕೃಷ್ಣ

ಟಿನ (TINA-There is no alternative) ಎಂಬುದು ಜಾಗತೀಕರಣದ ಪರವಾಗಿರುವವರ ಉದ್ಘೋಷ. ಈ ನುಡಿಗಟ್ಟನ್ನು ಜಾಗತೀಕರಣ ಸಾರಥ್ಯ ವಹಿಸಿರುವ ಮುಂದುವರೆದ ರಾಷ್ಟ್ರಗಳ ಪ್ರಬಲ ಬಂಡವಾಳಶಾಹಿ ಶಕ್ತಿಗಳು ಮಾತ್ರ ಬಳಸುತ್ತಿಲ್ಲ. ಇದನ್ನು ಅಭಿವೃದ್ಧಿಶೀಲ ಹಾಗೂ ಬಡ ರಾಷ್ಟ್ರಗಳ ಅಭಿಪ್ರಾಯ-ರೂಪಿಸುವ ಮಂದಿ (Opinion-Makers) ಸಹ ಮಂತ್ರದಂತೆ ಉದ್ಧರಿಸುತ್ತಾರೆ. ಅಂತಹವರಲ್ಲಿ ಆರ್ಥಿಕ ತಜ್ಞರು, ಸಮಾಜ ವಿಜ್ಞಾನಿಗಳು, ಆಡಳಿತಶಾಹಿ ಉನ್ನತ ಅಧಿಕಾರಿಗಳು, ಶಾಲಾ ಕಾಲೇಜುಗಳ ಉಪನ್ಯಾಸಕರು ಹಾಗೂ ಕೆಲವು ಬುದ್ಧಿಜೀವಿಗಳೂ ಸೇರಿದ್ದಾರೆ. ಅವರ ಅಭಿಪ್ರಾಯಗಳನ್ನೇ ಪುನರುಚ್ಚರಿಸುತ್ತಾರೆ ಉಚ್ಚವರ್ಗದ ಹಾಗೂ ಮಧ್ಯಮ ವರ್ಗದ ಅನುಕೂಲಸ್ಥ ಜನ ಅಂದರೆ ಅದರ ಕೆನೆಪದರಿನಲ್ಲಿರುವ ಮಂದಿ! ಏಕೆಂದರೆ ಅವರೇ ಜಾಗತೀಕರಣದ ಪ್ರಭಾವಗಳಿಂದ ಅನೇಕ ಬಗೆಯ ಲಾಭಗಳನ್ನು ಪಡೆದು ಒಂದು ರೀತಿಯ ದ್ವೀಪವಾಸಿಗಳಾಗಿದ್ದಾರೆ.

ಈ ಕಾಲಘಟ್ಟದ ಜಾಗತೀಕರಣದಿಂದ ಇಡೀ ವಿಶ್ವವೇ ಒಂದು ಗ್ಲೋಬಲ್ ವಿಲೇಜ್ ಆಗಿದೆ ಎಂಬುದು ಅದರ ಸಮರ್ಥಕ ನಿಲುವು. ಮಾಹಿತಿ ತಂತ್ರಜ್ಞಾನ ಹಾಗೂ ಸಂಪರ್ಕ ಮಾಧ್ಯಮಗಳಲ್ಲಿ ಜರುಗಿರುವ ಕ್ರಾಂತಿಕಾರಕ ಬದಲಾವಣೆಗಳ ಹಿನ್ನೆಲೆಯಲ್ಲಿ ಈ ನಿಲುವನ್ನು ಒಪ್ಪಬಹುದು. ಆದರೆ ಜಗತ್ತಿನಲ್ಲಿ ಹಸಿವು, ಬಡತನ, ಅನಕ್ಷರತೆ, ರೋಗ-ರುಜಿನಗಳು ಮುಂತಾದ ಜ್ವಲಂತ ಸಮಸ್ಯೆಗಳಿಂದ ಬಾಧಿತರಾಗಿರುವ ಜನರ ಸಂಖ್ಯೆ ಕಡಿಮೆಯಾಗಿದೆಯೇ ಎಂಬ ಪ್ರಮುಖ ಪ್ರಶ್ನೆಗೆ ಸಿಗುವ ಉತ್ತರ ನಕಾರಾತ್ಮಕವಾಗಿಯೇ ಇರುತ್ತದೆ. ಉಳ್ಳವರು-ಇರದಿರುವವರು, ನಗರಗಳು-ಹಳ್ಳಿಗಳು, ಬಲಾಢ್ಯರು-ಬಲಹೀನರು ಮುಂತಾದವರ ನಡುವಿನ ಕಂದರಗಳು ಬೆಳೆಯುತ್ತಲೇ ಇವೆ. ಹೀಗಿರಬೇಕಾದರೆ, ಜಾಗತೀಕರಣವನ್ನು ಸರ್ವ ಜನರ ಕಲ್ಯಾಣದ ಸಾಧನವೆಂದು ಹೇಗೆ ಪರಿಗಣಿಸುವುದು? ಈ ಪ್ರಕ್ರಿಯೆ ಸಮಾಜದಲ್ಲಿರುವ ಅಸಮತೋಲನ, ಅಸಮಾನತೆಯನ್ನು ಹೆಚ್ಚು ಮಾಡಿದೆ ಎಂದರೆ ಉತ್ಪ್ರೇಕ್ಷೆಯಾಗುವುದಿಲ್ಲ.

ದಲಿತ ಸಂಘಟನೆಗಳಲ್ಲೂ ಜಾಗತೀಕರಣದ ಪರ ಹಾಗೂ ವಿರೋಧ ಅಭಿಮತಗಳಿರುವ ನಾಯಕರು, ಚಿಂತಕರು ಹಾಗೂ ಕಾರ್ಯಕರ್ತರಿದ್ದಾರೆ. ಜಾಗತೀಕರಣದಿಂದ ದಲಿತರಿಗೆ ವಿಫಲ ಅವಕಾಶಗಳು ದೊರೆತು, ಅವರು ಆರ್ಥಿಕ ಅಭಿವೃದ್ಧಿ ಮತ್ತು ಬೆಳವಣಿಗೆಯ ಪಾಲುದಾರರಾಗುತ್ತಾರೆಂದು ಅವರ ಅಂಬೋಣ. 'ಸಂವಾದ' ಶುರುವಾದಾಗಿನಿಂದ ನಾನು ಪತ್ರಿಕೆಯನ್ನು ನಿಯಮಿತವಾಗಿ ಓದುತ್ತಾ ಬಂದಿದ್ದೇನೆ. ಅದು ಅನೇಕ ಗಮನ ವಿಷಯಗಳು, ತೀವ್ರವಾಗಿ ಕಾಡುತ್ತಿರುವ ಸಮಸ್ಯೆಗಳ ಬಗೆಗೆ ವಿಚಾರ-ವಿನಿಮಯದ ವೇದಿಕೆಯಾಗಿ ವೈಚಾರಿಕ ಸಾಹಿತ್ಯಕ್ಕೆ ಗಮನಾರ್ಹ ಕೊಡುಗೆಗಳನ್ನು ನೀಡುತ್ತ ಬಂದಿದೆ. ಅನೇಕ ವರ್ಷಗಳಿಂದ 'ದಲಿತ್ ಡೈರಿ' ಅಂಕಣದಲ್ಲಿ ಕನ್ನಡ ಅನುವಾದ ಚಂದ್ರಭಾನ್ ಪ್ರಸಾದ್ ರ ಲೇಖನಗಳು ಪ್ರಕಟವಾಗುತ್ತಿವೆ. ಆ ಲೇಖನಗಳಲ್ಲಿ ಹೆಚ್ಚಾಗಿ ಕಂಡು ಬರುವುದು ಜಾಗತೀಕರಣ ಪ್ರೇರಿತ ನವ-ಉದಾರ ನೀತಿಗಳ ಸಮರ್ಥನೆ. ಅವರು ಒಬ್ಬ ಒಳ್ಳೆಯ ಲೇಖಕರೇನೊ ನಿಜ. ತಾವು ಮಂಡಿಸುವ ವಾದಗಳ ಪುಷ್ಟಿಗಾಗಿ ಅವರು ಅನೇಕ ನಿದರ್ಶನಗಳನ್ನು ಹಾಗೂ ಮಾಹಿತಿಗಳನ್ನು ಓದುಗರ ಮುಂದಿಡುತ್ತಾರೆ. ಒಬ್ಬ ಪ್ರಜೆಯಾಗಿ ಬುದ್ಧಿಜೀವಿಯಾಗಿ ಹಾಗೂ ಲೇಖಕನಾಗಿ ಅವರಿಗೆ ಅವರದೇ ಆದ ನಿಲುವುಗಳನ್ನು ಹಾಗೂ ಅಭಿಪ್ರಾಯಗಳನ್ನು ಹೊಂದುವ ಸ್ವಾತಂತ್ರ್ಯ ಮತ್ತು ಹಕ್ಕಿದೆ. ಚಂದ್ರಭಾನ್ ಪ್ರಸಾದರಿಗೆ ಕುತೂಹಲಕಾರಿ ಹಿನ್ನೆಲೆಯಿದೆ. ಅದರ ಕೆಲವು ವಿವರಗಳನ್ನು ತಿಳಿದುಕೊಳ್ಳೋಣ ಹಾಗೂ ಅವರು ಪ್ರತಿಪಾದಿಸುವ ವಿಚಾರಗಳ ಇನ್ನೊಂದು ಮಗ್ಗಲನ್ನು ಅರಿತುಕೊಳ್ಳೋಣ.

ಚಂದ್ರಭಾನ್ ಪ್ರಸಾದ್ ಉತ್ತರ ಪ್ರದೇಶ ರಾಜ್ಯದ ಅಜಮ್‌ಗಢ್ ಜಿಲ್ಲೆಯ ಗದ್ದುಪುರ ಹಳ್ಳಿಗೆ ಸೇರಿದವರು. ಅತ್ಯಂತ ಹಿಂದುಳಿದ ಪ್ರದೇಶದ ದಮನಿತ ಕುಟುಂಬದ ಹಿನ್ನಲೆಯಿರುವ ಇವರು ಹಿಂದೆ ಒಬ್ಬ ಮಾವೋವಾದಿಯಾಗಿದ್ದರು. ಉಚ್ಚ ಜಾತಿಗಳ ಜಮೀನುದಾರರನ್ನು ಸದೆಬಡಿಯುವುದು ಅವರ ಕಾರ್ಯಚಾರಣೆಗಳಲ್ಲಿನ ಮುಖ್ಯ ಉದ್ದೇಶವಾಗಿತ್ತು. ಆದರೆ ಈಗ ಅವರು ಆ ಸಿದ್ಧಾಂತದಿಂದ ಬಹುದೂರ ಸರಿದು ಬಂದಿದ್ದರೆ. ಒಬ್ಬ ಪತ್ರಕರ್ತನಾಗಿ ಆಂಗ್ಲ ಹಾಗೂ ಹಿಂದಿ ಭಾಷೆಗಳಲ್ಲಿ ನಿರರ್ಗಳವಾಗಿ ಬರೆಯುವ ಲೇಖಕನಾಗಿ ಅವರು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಹಾಗೂ ಸಾರ್ವಜನಿಕ ವೇದಿಕೆಗಳಲ್ಲಿ ಬಲವಾಗಿ ಪ್ರತಿಪಾದಿಸುತ್ತಿರುವುದು. Washington consensus ಸೂತ್ರಧಾರಿತ ಜಾಗತೀಕರಣದ ನೀತಿಗಳನ್ನು ಹಾಗೂ ಅವುಗಳ ಸಾರ್ಥಕ್ಯವನ್ನು. ಅಲ್ಲದೆ, ಅವರು ಬಲಪಂಥ ಹಾಗೂ ಬಿಜೆಪಿ ಪರವಾಗಿರುವ 'ದಿ ಪಂತೀವೀರ್' ಪತ್ರಿಕೆಯಲ್ಲಿ ನಿಯಮಿತವಾಗಿ ಬರೆಯುತ್ತಾರೆ. ಇತ್ತೀಚೆಗೆ ಕೇಂದ್ರ ಸರ್ಕಾರದಲ್ಲಿ ಮಂತ್ರಿಯಾಗಿರುವ ರಾಮ್ ವಿಲಾಸ್ ಪಾಸ್ವಾನರು ಅವರನ್ನು ಅಮೇರಿಕಾಗೆ ಕರೆದುಕೊಂಡು ಹೋಗಿದ್ದರು.

ಜಾಗತೀಕರಣ ಹಾಗೂ ದಲಿತರಿಗೆ ಸಂಬಂಧಪಟ್ಟ ವಿಚಾರದಲ್ಲಿ ಚಂದ್ರಭನ್ ಪ್ರಸಾದರ ನಿಲುವುಗಳು/ಅನಿಸಿಕೆಗಳು ಕೆಳಕಂಡತಿವೆ:

1) ಜಾಗತೀಕರಣದಿಂದ ದಲಿತರ ಆರ್ಥಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಪರಿಸ್ಥಿತಿಯಲ್ಲಿ ಗುರುತರವಾದ ಸುಧಾರಣೆಗಳು ತಲೆದೋರಿ, ಅವರು ಕ್ಷಿಪ್ರವಾಗಿ ದಲಿತೇತರ ಸಮಾನಸ್ಕಂದರಾಗುತ್ತಾರೆ.

2) ಭಾರತದಲ್ಲಿ 1991ರಿಂದ ಜಾರಿಯಲ್ಲಿರುವ ಆರ್ಥಿಕ ಉದಾರೀಕರಣದಿಂದ ಜಾತಿ ವ್ಯವಸ್ಥೆ ನಾಶವಾಗುತ್ತದೆ.

3) 1991ರಿಂದ ನಗರ ಪ್ರದೇಶಗಳಿಗೆ ಸ್ಥಳಾಂತರಗೊಂಡಿರುವ ಅಪಾರ ಸಂಖ್ಯೆಯ ದಲಿತರು ಹಸಿವೆ ಹಾಗೂ ಅವಮಾನದಿಂದ ಮುಕ್ತರಾಗಿದ್ದರೆ.

4) ತಮ್ಮ ಹಳ್ಳಿಗೆ ಹೋದಾಗ, ಅವರು ದಲಿತರನ್ನು ಉದ್ದೇಶಿಸಿ-"ನೀವು ದನಕರು ಹಾಗೂ ಇತರ ಜಾನುವಾರುಗಳನ್ನು ಮಾರಿಬಿಡಿ. ಏಕೆಂದರೆ ಅವುಗಳನ್ನು ನೋಡಿಕೊಳ್ಳಲು ಮಕ್ಕಳ ಶ್ರಮ ವಿನಿಯೋಗವಾಗುತ್ತದೆ. ಭೂಮಿ ಅಥವಾ ಒಡವೆಗಳ ಬದಲು ನಿಮ್ಮ

ಸಂಪಾದಕರೊಡನೆ ಸಂವಾದ

ಮಕ್ಕಳ ವಿದ್ಯಾಭ್ಯಾಸದ ಮೇಲೆ ಹಣವನ್ನು ಮಾಡಿ. ನಮ್ಮಂಥ ಬಹಿಷ್ಕೃತರಿಗೆ ನಗರಗಳೇ ಸರಿಯಾದ ತಾಣಗಳು. ಹಾಗೆಯೇ ಭಾರತದ ದೇಸಿ ಬಂಡವಾಳಶಾಹಿ ವ್ಯವಸ್ಥೆ ಕೂಡ"

5) 1992 ರಿಂದ ದಲಿತರಲ್ಲಿ ಆಗಿರುವ ಏಳಿಗೆಯ ಕುರಿತು ಪ್ರಸ್ತಾಪಿಸುತ್ತ " ಇಂದು, ನನ್ನ ಜಿಲ್ಲೆಯಲ್ಲೇ ಅಧಿಕ ಸಂಖ್ಯೆಯ ದಲಿತ ವರರು ತಮ್ಮ ಮದುವೆಗೆ ಕುದುರೆಗಳ ಬದಲು ಕಾರುಗಳಲ್ಲಿ ಹೋಗುತ್ತಿದ್ದಾರೆ. 1990ರಲ್ಲಿ ಇಂಥವರ ಸಂಖ್ಯೆಯೆ ಕೇವಲ ಶೆ. 27ರಷ್ಟು ಮಾತ್ರ ಇತ್ತು. ಕೆಲವು ದಶಕಗಳ ಹಿಂದೆ, ಉಚ್ಚ ಜಾತಿಗಳ ನಿಯಂತ್ರಣದಲ್ಲಿರುವ ಹಿಂದೂ ಸಮಾಜ ದಲಿತ ವರರು ಕುದುರೆಗಳನ್ನು ಬಳಸಲು ಆಸ್ಪದ ಮಾಡಿಕೊಡುತ್ತಿರಲಿಲ್ಲ. ಈ ಬದಲಾವಣೆಯಾಗಿರುವುದು ಏರುಮಟ್ಟದಲ್ಲಿರುವ ಆರ್ಥಿಕತೆಯಿಂದ." ಎಂದು ಅವರು ಹೇಳಿದ್ದಾರೆ.

ಚಂದ್ರಭಾನ್ ಪ್ರಸಾದರು ಜಾಗತೀರಕಣದ ಯುಗದಲ್ಲಿ ದಲಿತರಿಗೆ ಆಗಿರುವ ಅನಕೂಲತೆಗಳ ಬಗೆಗೆ ಏನೇ ಸಾರಿದರು, ಅಸಂಖ್ಯಾತ ದಲಿತರು ಇಂದೂ ಕೂಡ ಅನೇಕ ರೀತಿಯ ದಬ್ಬಾಳಿಕೆ, ದೌರ್ಜನ್ಯಗಳಿಗೆ ಈಡಾಗಿದ್ದಾರೆ. ಇತ್ತೀಚೆಗೆ, ಡಾ॥ ಅರ್ಜುನ್ ಸೇನ್ ಗುಪ್ತ ಸೂಲತಿಯ ವರದಿ ನಮ್ಮ ರಾಷ್ಟ್ರದ ಜನಸಂಖ್ಯೆಯು ಶೇ.77ರಷ್ಟು ಮಂದಿ ದಿನವೊಂದಕ್ಕೆ ರೂ.20/-(ತಲಾ) ಮಾಡುವಷ್ಟು ಮಾತ್ರ ಶಕ್ತರಾಗಿದ್ದಾರೆ.(ಆರ್ಥಿಕವಾಗಿ) ಎಂಬ ಕಳವಳಕಾರಿ ಅಂಶವನ್ನು ಬಹಿರಂಗಗೊಳಿಸಿದೆ. ಅಂತಹವರಲ್ಲಿ ದಲಿತರ ಪಾಲೇಷ್ಟು?

ನಿಜ, 1950 ರ ದಶಕದಿಂದ ಜಾರಿಯಲ್ಲಿರುವ ಅನೇಕ ಸವಲತ್ತುಗಳು ದಲಿತರನ್ನು ತಲುಪಿದೆ. ಆದರೆ ಅವು ಹೆಚ್ಚಾಗಿ ತಲುಪಿರುವುದು ಈ ಸಮುದಾಯದ ಕೆನೆಪದರಿನ ಜನರಿಗೆ. ಅಂತಹವರಲ್ಲಿ ರಾಜಕಾರಣಿಗಳು ಅಧಿಕಾರಿಗಳು ವ್ಯಾಪಾರಸ್ಥರು, ಮಧ್ಯಮ ವರ್ಗದ ಉದ್ಯೋಗಿಗಳು ಹಾಗೂ ನೌಕರರು ಸೇರಿದ್ದಾರೆ. ಭಾರತದಲ್ಲಿರುವ ಅಸಂಖ್ಯಾತ ಹಳ್ಳಿಗಳಲ್ಲಿರುವ ಅಸಂಖ್ಯಾತ ದಲಿತರು ಕಡು ಬಡತನದ ಬೇಗೆಯಲ್ಲೇ ಬೇಯುತ್ತಿದ್ದಾರೆ. ಇದು ಕಟು ವಾಸ್ತವ.

ಚಂದ್ರಭಾನ್ ಪ್ರಸಾದರ ಸಲಹೆಯಂತೆ ದಲಿತರು ಹಳ್ಳಿಗಳಲ್ಲಿರುವ ತಮ್ಮ ಆಸ್ತಿಯನ್ನು ಮಾರಿ ನಗರ ಪ್ರದೇಶಗಳಿಗೆ ವಲಸೆ ಹೋದರೆ, ಹೆಚ್ಚಿನವರಿಗೆ ನೆಲೆ ಸಿಕ್ಕುವುದು ಕೊಳಗೇರಿಗಳಲ್ಲಿ. ಅನೇಕರು ದಿನಗೂಲಿ ನೌಕರರಾಗಿ ದುಡಿಯಬೇಕಾಗುತ್ತದೆ. ಯಾವುದೇ ಸ್ಥಿರ ಅಥವಾ ಚರ ಆಸ್ತಿಯಿಲ್ಲದೆ, ಅವರಿಗೆ ಉದ್ಯಮಗಳನ್ನು ಶುರುಮಾಡುವುದಕ್ಕೆ ಹಣ ದೊರಕುವುದಿಲ್ಲ. ಕೊಳಗೇರಿಗಳಲ್ಲಿರುವ ಪರಿಸ್ಥಿತಿಯಲ್ಲಿ ಅವರ ಮಕ್ಕಳಿಗೆ ಸೂಕ್ತ ಶಿಕ್ಷಣ ದೊರಕುವುದಿಲ್ಲ; ಸರಿಯಾದ ತರಬೇತಿ ಸಿಗದೆ, ಒಳ್ಳೆಯ ಕೆಲಸಗಳು ಸಿಗುವುದಿಲ್ಲ. ಆರೋಗ್ಯಕರವಾದ ಜೀವನವನ್ನೂ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಒಟ್ಟಿನಲ್ಲಿ ಅವರು ಅತಂತ್ರ ಸ್ಥಿತಿಯಲ್ಲೇ ಬಾಳಬೇಕಾಗುತ್ತದೆ. ದಲಿತರು ತೊರೆದ ಹಳ್ಳಿಗಳಲ್ಲಿರುವ ಭೂಮಿ ಕಾರ್ಪೋರೆಟ್ ಕೃಷಿ ಹಾಗೂ ವಿಶೇಷ ಆರ್ಥಿಕ ವಲಯಗಳ ಬಲಾಢ್ಯ ಶಕ್ತಿಗಳ ಪಾಲಾಗುವ ಸಾಧ್ಯತೆಗಳೇ ಹೆಚ್ಚು ಏಕೆಂದರೆ ಅವುಗಳಿಗೆ ಸ್ಥಳೀಯ ಪ್ರತಿರೋಧನೇ ಇರುವುದಿಲ್ಲ. ಹೀಗಾಗಿ, ಚಂದ್ರಭಾನ್ ಪ್ರಸಾದ್ ರಂಥವರು ಯಾವ ಶಕ್ತಿಗಳ ಹಿತವನ್ನು ಪ್ರತಿನಿಧಿಸುತ್ತಿದ್ದಾರೆ? ಎಂಬುದು ಮುಖ್ಯ ಪ್ರಶ್ನೆಯಾಗುತ್ತದೆ.

ಚಂದ್ರಭಾನ್ ಪ್ರಸಾದ್

Washington Consensus ಪ್ರೇರಿತ ಜಾಗತೀಕರಣದ ಪ್ರಕ್ರಿಯೆಗಳಲ್ಲಿ ಸಮಾನತೆಗೆ ಸ್ಥಾನವೇ ಇಲ್ಲ. ಅವುಗಳು ಮುಂದಿಡುತ್ತಿರುವುದು Trickle-down theory ಅಂದರೆ ಏಳಿಗೆಯ ಫಲಗಳು ನಿಧಾನವಾಗಿ ಸಮಾಜದ ಕೆಳಸ್ತರದ ಜನರಿಗೂ ತಲುಪುತ್ತದೆ ಎಂಬುದು ಅದರ ಕಲ್ಪನೆ. ಮಾರುಕಟ್ಟೆ ಆಧಾರಿತ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಲಾಭ ಮಾಡುವುದೇ ಮೂಲಮಂತ್ರ, ಸಾಮಾಜಿಕ ನ್ಯಾಯವೆನ್ನುವುದು ಅಂಥಾ ವ್ಯವಸ್ಥೆಯಲ್ಲಿ ನಾಪತ್ತೆಯಾಗುವುದು ತೀರ ಸಹಜ. ಬಂಡವಾಳ ಶಾಹಿ ವ್ಯವಸ್ಥೆಯಲ್ಲಿ ಉದ್ಯೋಗಿಗಳು ಹಾಗೂ ನೌಕರರಿಗೆ ಪಿಂಚಣಿ, ವೃದ್ಧರಿಗಾಗಿ ಕೆಲವು ಕಲ್ಯಾಣ ಯೋಜನೆಗಳು, ಇತ್ಯಾದಿ ಜಾರಿಯಾಗಿದ್ದರೆ, ಅವುಗಳ ಹಿನ್ನೆಲೆಯಲ್ಲಿ ಕೆಲಸ ಮಾಡಿರುವುದು ಸಮಾಜವಾದದ ನೀತಿಗಳು ಎಂಬುದನ್ನು ಮರೆಯಬಾರದು. ಏಕೆಂದರೆ ತನ್ನ ಉಳಿವಿಗಾಗಿ ಬಂಡವಾಳ ಶಾಹಿ ವ್ಯವಸ್ಥೆ ಸಮಾಜವಾದದ ಕೆಲವು ಅಂಶಗಳನ್ನು ಅನಿವಾರ್ಯವಾಗಿ ಬಳಸಿಕೊಳ್ಳಬೇಕಾಗುತ್ತದೆ. ಪ್ರಪಂಚದ ಸುಮಾರು ಶೇ.15ರಷ್ಟು ಮಂದಿ ಉಳಿದ ಶೇ.85 ರಷ್ಟು ಮಂದಿಯ ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದಿದ್ದಾರೆ.

ಇತ್ತೀಚೆಗೆ, ಚಂದ್ರಭಾನ್ ಪ್ರಸಾದರು ಭಾರತದ ಹಾಗೂ ವಿದೇಶಿ ಪತ್ರಕರ್ತರಿದ್ದ ಒಂದು ತಂಡವನ್ನು ತಮ್ಮ ಹಾಗೂ ಸುತ್ತಮುತ್ತಲಿನ ಹಳ್ಳಿಗಳಿಗೆ ಕರೆದುಕೊಂಡು ಹೋಗಿದ್ದರು. ಗ್ರಾಮೀಣ ಪ್ರದೇಶಗಳಲ್ಲಿ ಜರುಗಿರುವ ದಲಿತರ ಸಬಲೀಕರಣವನ್ನು ಪ್ರತ್ಯಕ್ಷವಾಗಿ ತಂಡಕ್ಕೆ ತೋರಿಸುವುದು ಅವರ ಉದ್ದೇಶವಾಗಿತ್ತು. ಆದರೆ ಈ ತಂಡ ಚಂದ್ರಭಾನ್ ಪ್ರಸಾದರ ಹಳ್ಳಿಯಲ್ಲಿ (ಇತರ ಹಳ್ಳಿಗಳಲ್ಲಿ), ಕಂಡದ್ದೇನು? ಅಲ್ಲಿಯ ಸರ್ಕಾರಿ ಆರೋಗ್ಯ ಘಟಕ ನೆಲಕಚ್ಚಿತು. ಕೆಲವೇ ಮನೆಗಳಲ್ಲಿ ಶೌಚಾಲಯ ಗಳಿದ್ದವು. ಮಕ್ಕಳು ಬರಿಗಾಲಿನಲ್ಲಿ ಓಡಾಡುತ್ತಿದ್ದರು. ಪ್ರಸಾದರ ಹಳ್ಳಿಯಲ್ಲಿ ದಲಿತರು ವಾಸಿಸುತ್ತಿರುವುದು ಅದರ ಅಂಚಿನಲ್ಲಿ. ಮಳೆಗಾಲದಲ್ಲಿ ಅವರು ಮನೆಗಳನ್ನು ತಲುಪಲು ಹರಸಾಹಸ ಮಾಡಬೇಕಾಗುತ್ತದೆ. ದಲಿತರ ವಾಸಸ್ಥಾನಕ್ಕೆ ಹೋಗುವ ದಾರಿಯಲ್ಲಿ ಭೂಮಿಯ ಒಡೆತನವಿರುವುದು ಶ್ರೇಣೀಕೃತ ಸಮಾಜದ ಮಧ್ಯಮ ಸ್ತರದಲ್ಲಿರುವ ಜಾತಿಗಳ ವ್ಯಕ್ತಿಗಳ ಕೈಯಲ್ಲಿ ಅವರು ಸುಗಮವಾದ ದಾರಿಯ ನಿರ್ಮಾಣಕ್ಕೆ ಅಡ್ಡಿಯಾಗಿದ್ದಾರೆ. ವಸ್ತುಸ್ಥಿತಿ ಹೀಗಿರಬೇಕಾದರೆ, ಚಂದ್ರಭಾನ್ ಪ್ರಸಾದರು ಪ್ರತಿಪಾದಿಸುವ ನಿಲುವುಗಳು ಹಾಲಿ ಪರಿಸ್ಥಿತಿಗೂ ಅಜಗಜಾಂತರ ವ್ಯತ್ಯಾಸಗಳಿವೆ, ಅಲ್ಲವೆ?

Washington Consensus ಪ್ರೇರಿತ ಜಾಗತೀಕರಣದ ಪ್ರಕ್ರಿಯೆಗಳಲ್ಲಿ ಸಮಾನತೆಗೆ ಸ್ಥಾನವೇ ಇಲ್ಲ. ಅವುಗಳು ಮುಂದಿಡುತ್ತಿರುವುದು Trickle-down theory ಅಂದರೆ ಏಳಿಗೆಯ ಫಲಗಳು ನಿಧಾನವಾಗಿ ಸಮಾಜದ ಕೆಳಸ್ತರದ ಜನರಿಗೂ ತಲುಪುತ್ತದೆ ಎಂಬುದು ಅದರ ಕಲ್ಪನೆ. ಮಾರುಕಟ್ಟೆ ಆಧಾರಿತ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಲಾಭ ಮಾಡುವುದೇ ಮೂಲಮಂತ್ರ, ಸಾಮಾಜಿಕ ನ್ಯಾಯವೆನ್ನುವುದು ಅಂಥಾ ವ್ಯವಸ್ಥೆಯಲ್ಲಿ ನಾಪತ್ತೆಯಾಗುವುದು ತೀರ ಸಹಜ. ಬಂಡವಾಳ ಶಾಹಿ ವ್ಯವಸ್ಥೆಯಲ್ಲಿ ಉದ್ಯೋಗಿಗಳು ಹಾಗೂ ನೌಕರರಿಗೆ ಪಿಂಚಣಿ, ವೃದ್ಧರಿಗಾಗಿ ಕೆಲವು ಕಲ್ಯಾಣ ಯೋಜನೆಗಳು, ಇತ್ಯಾದಿ ಜಾರಿಯಾಗಿದ್ದರೆ, ಅವುಗಳ ಹಿನ್ನೆಲೆಯಲ್ಲಿ ಕೆಲಸ ಮಾಡಿರುವುದು ಸಮಾಜವಾದದ ನೀತಿಗಳು ಎಂಬುದನ್ನು ಮರೆಯಬಾರದು. ಏಕೆಂದರೆ ತನ್ನ ಉಳಿವಿಗಾಗಿ ಬಂಡವಾಳ ಶಾಹಿ ವ್ಯವಸ್ಥೆ ಸಮಾಜವಾದದ ಕೆಲವು ಅಂಶಗಳನ್ನು ಅನಿವಾರ್ಯವಾಗಿ ಬಳಸಿಕೊಳ್ಳಬೇಕಾಗುತ್ತದೆ.

ಪ್ರಪಂಚದ ಸುಮಾರು ಶೇ.15ರಷ್ಟು ಮಂದಿ ಉಳಿದ ಶೇ.85 ರಷ್ಟು ಮಂದಿಯ ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದಿದ್ದಾರೆ. ಈ ಪರಿಸ್ಥಿತಿಯ ಉತ್ಪನ್ನಗಳೆಂದರೆ ಅಸಮಾನತೆ ಹಾಗೂ ಅಸಮತೋಲನ ಭಾರತದಲ್ಲಂತೂ ಅನೇಕ ಅಂತರಗಳ ಜೊತೆ ಆರ್ಥಿಕ ಅಂತರವೂ ಗಂಡಾಂತರಕಾರಿಯಾಗಿ ಬೆಳೆಯುತ್ತಿದೆ. ನಮ್ಮ ನೆಮ್ಮದಿಯ ನಾಳೆಗಳಿಗಾಗಿ ಪರ್ಯಾಯ ರಾಜಕೀಯ ಶಕ್ತಿ ಹೊರಹೊಮ್ಮಬೇಕಾಗಿರುವುದು ವರ್ತಮಾನದ ತುರ್ತು. ಎಡಪಕ್ಷಗಳು, ಕಾರ್ಮಿಕರು, ದಲಿತರು, ರೈತರು, ಅಲ್ಪಸಂಖ್ಯಾತರು ಹಾಗೂ ಎಡಪಂಥೀಯರಲ್ಲಿ ತೀವ್ರವೆಂದು ಪರಿಗಣಿಸಲ್ಪಡುವ ಸಂಘಟನೆಗಳು ಒಂದು ವೇದಿಕೆಯಡಿ ಬಂದರೆ, ಒಂದು ಬಲಾಢ್ಯ ತೃತೀಯ ಶಕ್ತಿ ನಮ್ಮ ರಾಷ್ಟ್ರದ ರಾಜಕೀಯದಲ್ಲಿ ಉದಯವಾಗುವ ಸಾಧ್ಯತೆಗಳಿವೆ. ಇದು ಕಷ್ಟ ಸಾಧ್ಯ. □

ತಪ್ಪು ಪ್ರಶ್ನೆ ಮತ್ತು ತಪ್ಪು ಉತ್ತರಗಳ ತಪ್ಪು ಸಂಶೋಧನೆ...

ಮೊದಲ ದಿನಗಳಲ್ಲಿ ನಿಮ್ಮ ವಾದ ಜಾತಿಯೇ ಇಲ್ಲ ಎಂಬುದಾಗಿ ಕೇಳಿಸಿತು. ಇದನ್ನು ಕೇಳಿ ಕೆಲವರು ನಕ್ಕಾಗ ಅಧೀರರಾದ ನೀವು 'ಇಲ್ಲ, ಜಾತಿ ಇದೆ; ಜಾತಿ ತಾರತಮ್ಯವೆಂಬುದಿಲ್ಲ' ಎಂಬುದಾಗಿ ಉತ್ತರಿಸಿದ್ದಂತಿತ್ತು. ಆಗ ಇನ್ನೂ ಕೆಲವರು ಜೋರಾಗಿ ನಕ್ಕಾಗ ಗಡಬಡಿಸಿದಂತೆ ತೋರಿದ ನೀವು ಈಗ, 'ಜಾತಿ ಇದೆ; ಜಾತಿ ತಾರತಮ್ಯವೂ ಇದೆ. ಆದರೆ ಜಾತಿ ವ್ಯವಸ್ಥೆಯಿಲ್ಲ' ಎನ್ನತೊಡಗಿದ್ದೀರಿ! ಕ್ರಾಂತಿಕಾರಕವಾಗಿರುವಂತೆ ತೋರುವ ನಿಮ್ಮ ಈ ಸಂಶೋಧನೆಗಳು ಬಹಿರಂಗವಾಗಿ ಪ್ರಕಟವಾಗಿದ್ದರೆ ಅಥವಾ ಚರ್ಚೆಗೆ ಸಿಗುವಂತಿದ್ದರೆ, ಈ ಎಲ್ಲ ಗೊಂದಲಗಳಿಗೆ ಆಸ್ಪದ ವಿರುತ್ತಿರಲಿಲ್ಲ. ಆದರೆ ಇದೆಲ್ಲ ಅಕಸ್ಮಾತ್ತಾಗಿ 'ಸಂವಾದ'ದಲ್ಲಿ ಲೀಕ್ ಆಗತೊಡಗಿದಾಗಷ್ಟೇ ನೀವು ಕನ್ನಡ ಜಗತ್ತಿಗೆ-ಸ್ಥಳೀಯ ಆಸಕ್ತರಿಗೆ-ಸ್ಪಷ್ಟೀಕರಣಗಳನ್ನು ನೀಡಲು ಮುಂದೆ ಬಂದದ್ದು.

ಡಿ.ಎಸ್. ನಾಗಭೂಷಣ

'ಸಂವಾದ'ದ ೨೦೦೮ರ ನವೆಂಬರ್ ಸಂಚಿಕೆಯಲ್ಲಿ ಬಾಲ ಗಂಗಾಧರರ ಜಾತಿ ಮೀಮಾಂಸೆಗೆ ಸಂಬಂಧಪಟ್ಟಂತೆ ಪ್ರಕಟವಾದ ನನ್ನ 'ಮೂರು ಪ್ರಶ್ನೆಗಳು ಮತ್ತು ಒಂದು ಉದಾಹರಣೆ' ಲೇಖನಕ್ಕೆ ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟವಾಗಿರುವ ರಾಜರಾಮ ಹೆಗಡೆಯವರ ಪ್ರತಿಕ್ರಿಯೆ ಓದಿದೆ. ಬಾಲ ಗಂಗಾಧರರ ವಿಚಾರಗಳು ಮತ್ತು ಆ ಬಗ್ಗೆ ಅವರ ಶಿಷ್ಯರಿಂದ ನಡೆದಿರುವ ಸಂಶೋಧನೆಗಳ ಚರ್ಯೆಯ ಬಗ್ಗೆ ಅಕ್ಟೋಬರ್ ಸಂಚಿಕೆಯಲ್ಲಿ ಡಾ॥ರಮೇಶ್ ಬೈರಿ ಎಂಬುವವರು ಹೀಗೆ ಬರೆದಿದ್ದಾರೆ:

'....ಈ ಮೂರ್ನಾಲ್ಕು ವರ್ಷಗಳಲ್ಲಿ ಅವರು ಮತ್ತು ಅವರ ತಂಡದವರು ಜಾತಿಯ ಬಗ್ಗೆ ಮಾತನಾಡಿದ್ದನ್ನು ಗಮನದಲ್ಲಿರಿಸಿಕೊಂಡು ಹೇಳೋದಾದ್ರೆ; ಕಳೆದರೆಡು ಶತಮಾನಗಳಲ್ಲಿ ತಡೆಯಿಲ್ಲದೆ ನಡೆದ ಜಾತಿಯ ಕುರಿತಾದ ಅಧ್ಯಯನ-ಚಿಂತನೆ—ವಾದವಿವಾದಗಳ ಬಗ್ಗೆ ಈ ಗುಂಪಿಗಿರುವ ತಿರಸ್ಕಾರವೇ ಇವರ ಟ್ರೇಡ್ ಮಾರ್ಕು. ಇನ್ನಾರಿಗೂ ದೊರಕದ ಒಳನೋಟವೊಂದು ತಮಗೆ ದೊರಕಿದೆ ಅನ್ನೋದು ಆ ತಿರಸ್ಕಾರದ ಹಿಂದಿರುವ ಧಾರ್ಷ್ಟ್ಯದ ಬೆನ್ನೆಲುಬು. ಆ ತಿರಸ್ಕಾರ ಅವರ ಎಲ್ಲ ಸಾರ್ವಜನಿಕ ಮುಖಾಮುಖಿಗಳಲ್ಲಿ ಮುಖಕ್ಕೆ ರಾಚುತ್ತದೆ.

ಸಾಮಾನ್ಯವಾಗಿ ಇಂತಹ ಜ್ಞಾನೋದಯ ಆದವರು ಹುಲುಮಾನವರ ಬಗ್ಗೆ ಪ್ರೀತಿ, ಕರುಣೆ ಬೆಳೆಸಿಕೊಳ್ಳುತ್ತಾರೆ. ಆದರೆ ಇಲ್ಲಿ ನಮ್ಮಂತಹ ಅಜ್ಞಾನದ ಅಂಧಕಾರದಲ್ಲಿ ಮುಳುಗಿರುವವರ ಬಗ್ಗೆ ಇವರಿಗೆ ಕೋಪ ಮತ್ತು ಅಸಹನೆ. ಬಾಲಗಂಗಾಧರರನ್ನ, ಅಲ್ಲಾ ಸ್ವಾಮಿ, ಜಾತಿ ಬಗ್ಗೆ ಇವರು ಹೀಗೆ ಹೇಳ್ತಾರೆ, ಅವರು ಹಾಗೆ ಹೇಳ್ತಾರೆ, ಆದರೆ ನೀವು ಹೀಗಂತೀರಲ್ಲಾ, ಅದು ಹೆಂಗೆ ಅಂತೇನಾದ್ರೂ ನೀವು ಅಂದ್ರೋ, ಅಷ್ಟೇ. ಏ ಇವ್ರನ್ನು ಹೊರಗ್ ಹಾಕ್ರೋ ಅಂತ ತಮ್ಮ ಶಿಷ್ಯವೃಂದಕ್ಕೆ ಆದೇಶಿಸ್ತಾರೆ. ಸರಿ, ಗುರುಗಳ ಹತ್ರ ಬೇಡ, ಶಿಷ್ಯರ ಹತ್ರ ಕೇಳೋಣ, ಉದ್ಧಾರ ಆಗೋಣ ಅಂತಂದು ಹೋದ್ರೆ, ಶಿಷ್ಯರ ಪ್ರಿಯ ಅಸ್ತ್ರಗಳು ವ್ಯಂಗ್ಯ; ವ್ಯಂಗ್ಯ ಕೆಲಸ ಮಾಡದಿದ್ದಾಗ ಗುರು ಮಹಿಮೆಯ ಪ್ರವಚನ'

ಈ ಮಾತುಗಳನ್ನು ಬಾಲಗಂಗಾಧರರ ಆಪ್ತ ಶಿಷ್ಯರಾದ ಪ್ರೊ॥ ಸದಾನಂದ ಮತ್ತು ರಾಜರಾಮ ಹೆಗಡೆಯರೊಂದಿಗೆ ಕೆಲವು ವರ್ಷಗಳಿಂದ ಒಡನಾಡಿದ್ದ ನಾನು ಸ್ವಲ್ಪ ಉತ್ಪ್ರೇಕ್ಷೆಯ ಮಾತುಗಳೆಂದೇ ತಿಳಿದಿದ್ದೆ. ಆದರೆ ರಾಜರಾಂ ಹೆಗಡೆಯವರು ನನಗೆ ಪ್ರತಿಕ್ರಿಯಿಸಿರುವ ರೀತಿ ನೋಡಿದಾಗ ನನಗೆ ಬೈರಿಯವರ ಮಾತುಗಳು ಎಷ್ಟು ನಿಜ! ಅನ್ನಿಸಿದವು. ತಮ್ಮ ವಿಚಾರಗಳನ್ನು ಸಹಾನುಭೂತಿಯಿಂದ ಕೇಳಿಸಿಕೊಳ್ಳುತ್ತಿದ್ದಾರೆ ಎಂದು ಅನ್ನಿಸುವವರೆಗೂ ನಿಮ್ಮೊಡನೆ ಸ್ನೇಹ-ಸೌಜನ್ಯಗಳಿಂದಲೇ ವರ್ತಿಸುವ ಈ ತಂಡದ ಸದಸ್ಯರು, ಇವರ ಸಂಶೋಧನೆಗಳ ಬಗ್ಗೆ ಕೆಲವು ಮೂಲಭೂತ ಪ್ರಶ್ನೆಗಳನ್ನು ಕೇಳಿದೊಡನೆ ಅಧ್ಯಯನಶೀಲತೆಯ ಎಲ್ಲ ನಯವಿನಯಗಳನ್ನೂ ತೊರೆದು ಹೇಗೆ ಕಣ್ಣು ಮುಚ್ಚಿ ಹರಿಹಾಯಬಲ್ಲರು ಎಂಬುದಕ್ಕೆ ಹೆಗಡೆಯವರ ಬರಹವೇ ಒಂದು ಉದಾಹರಣೆ. ಇರಲಿ.

ಈ ಬರಹದ ಕೊನೆಯಲ್ಲಿ ಹೆಗಡೆಯವರು ಕೇಳುವ 'ಯಾವುದು ಅವಸರದ ಹೆಜ್ಜೆ? ವರ್ಷಾನುಗಟ್ಟಲೆ ಸಂಶೋಧನೆಯಲ್ಲಿ ತೊಡಗಿಸಿಕೊಂಡು ಒಂದು ಲೇಖನವನ್ನು ಬರೆಯುವುದೋ, ಇಲ್ಲ ಅದಕ್ಕೆ ಅವಸರದ ಪ್ರತಿಕ್ರಿಯೆಯನ್ನು ನೀಡುವುದೋ?' ಎಂಬ ಪ್ರಶ್ನೆಯಲ್ಲೇ ಇವರೆಲ್ಲ ಸಮಸ್ಯೆಗಳಿದ್ದಂತಿದೆ. ವರ್ಷಾನುಗಟ್ಟಲೆ ತೊಡಗಿಸಿಕೊಂಡು ಇವರು ಬರೆದ ಲೇಖನಕ್ಕೆ ಬಹುಶಃ ನಾವೂ ವರ್ಷಾನುಗಟ್ಟಲೆ ತೊಡಗಿಸಿಕೊಂಡೇ ಉತ್ತರ ಕೊಡಬೇಕೆಂದು ನಿರೀಕ್ಷಿಸುವಂತೆ ತೋರುವ ಇವರಿಗೆ ನನ್ನ ಉತ್ತರ: 'ವಿಶ್ವವಿದ್ಯಾಲಯಗಳಲ್ಲಿ ಎಲ್ಲೆಲ್ಲಿಂದಲೋ ತಂದ ಲಕ್ಷಗಟ್ಟಲೆ ರೂಪಾಯಿಗಳನ್ನು ಖರ್ಚುಮಾಡಿಕೊಂಡು ವರ್ಷಗಟ್ಟಲೆ ನೀವು ಮಾಡುವ ಸಂಶೋಧನೆಗಳು ವಿಶ್ವವಿದ್ಯಾಲಯಗಳ ಹೊರಗಿರುವ ನಮ್ಮಂಥ ಪಾಮರರಿಗೆ ಮೊದಲ ನೋಟಕ್ಕೇ ಹಾಸ್ಯಾಸ್ಪದವಾಗಿ ಕಾಣುವಂತಿದೆಯಲ್ಲ?' ಹಾಗೇ, ನಮ್ಮಂಥಹವರು ಕೇಳಿದ ಪ್ರಶ್ನೆಗಳಿಗೆ ನೇರವಾಗಿ, ಪೂರ್ಣವಾಗಿ ಉತ್ತರಿಸದೆ, ವ್ಯಂಗ್ಯ-ಕಟಕಿಗಳಲ್ಲೇ ಅವನ್ನು ಹಾರಿಸಿಕೊಂಡು ಹೋಗುತ್ತೀರಲ್ಲ, ಏಕೆ?

ನನ್ನ ಲೇಖನದ ಆರಂಭದ ಪೀಠಿಕೆಯೇ ಸೂಚಿಸುವಂತೆ, ಹೆಗಡೆ ಮತ್ತು ಅವರ ಗೆಳೆಯರಿಂದ ತಿಳಿದುಕೊಳ್ಳುವ ಕುತೂಹಲದಿಂದ ಕೇಳಿದ ಮೊದಲ ಪ್ರಶ್ನೆಗೆ ಅವರು, ನಾನು ಈಗಾಗಲೇ ಸ್ಪಷ್ಟ ಉತ್ತರವನ್ನಿಟ್ಟಿಕೊಂಡೇ ಪ್ರಶ್ನೆ ಕೇಳಿದ ಹಾಗೆ, ಈಗಾಗಲೇ ಎಲ್ಲರಿಗೂ ಗೊತ್ತಿರುವ ವಿಷಯಗಳನ್ನೇ ಬಡಬಡಿಸುತ್ತಾ, ಆ ಉತ್ತರವೂ ಬರೀ ಊಹಾತ್ಮಕವಾದದ್ದು ಎಂದು ಸಾಬೀತುಪಡಿಸಲು ಯತ್ನಿಸಿದ್ದಾರೆ. ಹೆಗಡೆಯವರೇ, ಈಗಾಗಲೇ ಬೈರಿಯವರು ಸ್ಪಷ್ಟಪಡಿಸಿರುವ ಹಾಗೆ ನೀವು ಯಾವುದನ್ನು-ಕ್ರಿಶ್ಚಿಯನ್ ಮಿಶನರಿಗಳ ಅವಾಂತರಗಳಿಂದ ಸೃಷ್ಟಿಯಾದದ್ದೆಂದು ಹೇಳಲಾಗುವ 'ಜಾತಿ ಪದ್ಧತಿಯ ಅಭಿಜಾತ ನಿರೂಪಣೆ'(Classical account of Caste system) ಎಂಬುದನ್ನು-ನೆಪವಾಗಿಟ್ಟುಕೊಂಡು ಅಂತಾರಾಷ್ಟ್ರೀಯ ಮಟ್ಟದ ಸಂಶೋಧನೆಯನ್ನು ಕೈಗೊಂಡಿದ್ದೀರೋ, ಆ ನಿರೂಪಣೆಯನ್ನು ಯಾರೂ ಈಗ ಎತ್ತಿ ಹಿಡಿಯುತ್ತಿಲ್ಲ. ನೀವು ಬಹುವಾಗಿ ಹಚ್ಚಿಕೊಂಡಿರುವಂತೆ ತೋರುವ ಅಂಬೇಡ್ಕರರ ಜಾತಿ ಮೀಮಾಂಸೆಯನ್ನೂ ಮೀರಿ ಹೊಸ ಹೊಸ ನಿರೂಪಣೆಗಳು ಚಾಲ್ತಿಗೆ, ಚರ್ಚೆಗೆ ಬಂದು ಅವು ಜಾತಿ ಪದ್ಧತಿ ಕುರಿತಂತೆ ಹೊಸ ತಿಳುವಳಿಕೆ ಮೂಡಿಸಲು ಯತ್ನಿಸುತ್ತಿವೆ ಎಂಬುದೇಕೆ ನಿಮ್ಮ ಗಮನಕ್ಕೆ ಬಂದಿಲ್ಲ?(ಈ ಹೊಸ ತಿಳುವಳಿಕೆಗನುಸಾರವಾಗಿಯೇ ಇಂದು ನಮ್ಮ ಶಾಸನ ಸಭೆಗಳು ಮತ್ತು ನ್ಯಾಯಾಲಯಗಳು ಸಾಮಾಜಿಕ ನ್ಯಾಯದ ಪ್ರಶ್ನೆಯನ್ನು ನಿರ್ವಹಿಸುತ್ತಿರುವುದು ಅಲ್ಲವೆ?) ನೀವಾಗಲೀ, ಸದಾನಂದರಾಗಲೀ ಮೂಲತಃ ಸಮಾಜಶಾಸ್ತ್ರ ಅಧ್ಯಯನ ಶಿಸ್ತಿಗೆ ಸೇರಿದವರಲ್ಲ; ಈ ಬಾಲಗಂಗಾಧರರ ಯೋಜನೆಗಾಗಿಯಷ್ಟೆ ಈ ಕ್ಷೇತ್ರಕ್ಕೆ ವಲಸೆ ಬಂದವರಷ್ಟೆ ಎಂಬುದು ಇದಕ್ಕೆ ಕಾರಣವೇ? ಮತ್ತೇಕೆ ಯಾವ ಪ್ರಶ್ನೆ ಕೇಳಿದರೂ ಪದೇ ಪದೇ, 'ಇಲ್ಲಿ 'ರಿಲಿಜಯನ್' ಎಂಬುದಿಲ್ಲ. ಹಾಗಾಗಿ.....' ಎಂಬ ನಮ್ಮ ಕಿವಿ ತೂತು ಹೊಡೆದಿರುವ ಉತ್ತರವನ್ನೇ ನೀಡುತ್ತೀರಿ?

ಮೊದಲ ದಿನಗಳಲ್ಲಿ ನಿಮ್ಮ ವಾದ ಜಾತಿಯೇ ಇಲ್ಲ ಎಂಬುದಾಗಿ ಕೇಳಿಸಿತು. ಇದನ್ನು ಕೇಳಿ ಕೆಲವರು ನಕ್ಕಾಗ ಅಧೀರರಾದ ನೀವು 'ಇಲ್ಲ, ಜಾತಿ ಇದೆ; ಜಾತಿ ತಾರತಮ್ಯವೆಂಬುದಿಲ್ಲ' ಎಂಬುದಾಗಿ ಉತ್ತರಿಸಿದ್ದಂತಿತ್ತು. ಆಗ ಇನ್ನೂ ಕೆಲವರು ಜೋರಾಗಿ ನಕ್ಕಾಗ ಗಡಬಡಿಸಿದಂತೆ ತೋರಿದ ನೀವು ಈಗ, 'ಜಾತಿ ಇದೆ; ಜಾತಿ ತಾರತಮ್ಯವೂ ಇದೆ. ಆದರೆ ಜಾತಿ ವ್ಯವಸ್ಥೆಯಿಲ್ಲ' ಎನ್ನತೊಡಗಿದ್ದೀರಿ! ಕ್ರಾಂತಿಕಾರಕವಾಗಿರುವಂತೆ ತೋರುವ ನಿಮ್ಮ ಈ ಸಂಶೋಧನೆಗಳು ಬಹಿರಂಗವಾಗಿ ಪ್ರಕಟವಾಗಿದ್ದರೆ ಅಥವಾ ಚರ್ಚೆಗೆ ಸಿಗುವಂತಿದ್ದರೆ,

ಚರ್ಚೆ

ಜಾತಿ ಧರ್ಮ ತಾರತಮ್ಯ

ಈ ಎಲ್ಲ ಗೊಂದಲಗಳಿಗೆ ಆಸ್ಪದವಿರುತ್ತಿರಲಿಲ್ಲ. ಆದರೆ ಇದೆಲ್ಲ ಅಕಸ್ಮಾತ್ತಾಗಿ 'ಸಂವಾದ'ದಲ್ಲಿ ಲೀಕ್ ಆಗತೊಡಗಿದಾಗಷ್ಟೇ ನೀವು ಕನ್ನಡ ಜಗತ್ತಿಗೆ–ಸ್ಥಳೀಯ ಆಸಕ್ತರಿಗೆ–ಸ್ಪಷ್ಟೀಕರಣಗಳನ್ನು ನೀಡಲು ಮುಂದೆ ಬಂದದ್ದು. ಹೀಗಿರುವಾಗ, ಇದೇ ಕ್ಷೇತ್ರದಲ್ಲಿ ನಿಮ್ಮಷ್ಟಲ್ಲದಿದ್ದರೂ ನಮ್ಮ ಕುತೂಹಲಕ್ಕೆ ತಕ್ಕಷ್ಟು ಶ್ರದ್ಧೆಯಿಂದ ಕ್ರಿಯಾಶೀಲರಾಗಿರುವರು ನಮ್ಮ ಗೊಂದಲಗಳನ್ನು ಪರಿಹರಿಸಿಕೊಳ್ಳಲು: ಜಾತಿ ಇದ್ದು, ಜಾತಿ ತಾರತಮ್ಯವೂ ಇರುವುದಾದರೆ, ಆ ತಾರತಮ್ಯವನ್ನು ಸೃಷ್ಟಿಸುವ ರಾಜಕಾರಣವೂ ಇರಬೇಕಲ್ಲವೇ ಎಂದು ಯೋಚಿಸತೊಡಗಿ, ನಿಮ್ಮಂತಹವರನ್ನು ಕೇಳಿದೊಡನೆ ಹೀಗೇಕೆ ನಮ್ಮ ಮೇಲೆ ಹರಿಹಾಯತೊಡಗಿದ್ದೀರಿ? ಏಕೆ, ಪ್ರಶ್ನೆ ನಿಮ್ಮ ಬುಡಕ್ಕೇ ಬಂದಿದೆ ಎಂದೆ?



ಭಾರತದ ಜಾತಿ ಪದ್ಧತಿ ಎಂಬುದನ್ನು Caste **system** ಎಂದು ಅನುವಾದಿಸಿಕೊಂಡು(ಅದನ್ನು ಮತ್ತೆ ಕನ್ನಡಕ್ಕೆ ಜಾತಿ ವ್ಯವಸ್ಥೆ ಎಂದು ಅನುವಾದಿಸಿಕೊಂಡು!), ಆ **System**ಗೆ ಇಂಗ್ಲಿಷ್ ಸಂದರ್ಭದ(ನಿಘಂಟಿನ) ಅರ್ಥವನ್ನು ಆರೋಪಿಸಿಕೊಂಡು ಮತ್ತು ಅದು ಯಾವಾಗಲೂ 'ರಾಷ್ಟ್ರ' ಮಟ್ಟದ ಏಕರೂಪಿ ರಚನೆಯೇ ಆಗಿರಬೇಕೆಂದು ಆಧುನಿಕ ಐರೋಪ್ಯ ಪರಿಕಲ್ಪನಾತ್ಮಕ ನೆಲೆಯಲ್ಲಿ ವಾದ ಮಾಡಹೊರಟಿರುವ ನೀವು, ತಪ್ಪು ಪ್ರಶ್ನೆಗಳಿಗೆ ತಪ್ಪು ಉತ್ತರಗಳನ್ನು ಕಂಡುಕೊಳ್ಳುತ್ತಾ ದಾರಿ ತಪ್ಪಿರುವುದರಲ್ಲಿ ಆಶ್ಚರ್ಯವೇನಿಲ್ಲ. ಭಾರತದ ಮೂಲ ಸಾಮಾಜಿಕತೆಯನ್ನು ನಿರ್ಧರಿಸಿದ ವರ್ಣಾಶ್ರಮ ಧರ್ಮ, ಕ್ರಮೇಣ ಜಾತಿ ಪದ್ಧತಿಯೆಂಬ ರಾಜಕಾರಣವಾದ ಪರಿ ಮಹಾಭಾರತದ ಕಾಲದಿಂದಲೇ ವಿಷದೀಕರಿಸಲ್ಪಟ್ಟಿದೆ. ನಂತರ ಅದೆಷ್ಟು ಸ್ಮೃತಿ–ಪುರಾಣ–ಕಾವ್ಯ–ಲೋಕ ಕಥೆಗಳಲ್ಲಿ ಈ ರಾಜಕಾರಣ ತನ್ನ ಪರಿಪರಿಯ ಮುಖಗಳನ್ನು ತೋರಿಸಿಲ್ಲ? ನಮ್ಮ ಬಹುತೇಕ ಪ್ರಾಚೀನ ರಾಜರ ಹೆಮ್ಮೆಯ ಬಿರುದುಗಳಲ್ಲಿ 'ವರ್ಣಾಶ್ರಮ ಧರ್ಮ ಪರಿಪಾಲಕ' ಎಂಬುದೇಕೆ ಸೇರಿರುತ್ತಿತ್ತು? ಈ ಬಿರುದುಗಳನ್ನು ಸೃಷ್ಟಿಸುತ್ತಿದ್ದವರು ಯಾರು, ಯಾಕೆ?

ಆದರೆ ಹೆಗಡೆಯವರಿಗೆ ರಾಜಕಾರಣವೆಂದರೆ ಬರೀ 'ಸ್ಟೇಟ್', 'ಸಿವಿಲ್ ಸೊಸೈಟಿ' ಎಂಬ ಕಲ್ಪನೆಗಳು ಚಾಲ್ತಿಗೆ ಬಂದ ನಂತರವಷ್ಟೇ ಶುರುವಾದ ವ್ಯವಹಾರವಾಗಿದೆ! ಐರೋಪ್ಯ 'ರಿಲಿಜಿಯನ್' ಕಲ್ಪನೆಗೆ ಯಾರೋ ಬಂಧಿತರಾಗಿ ದಾರಿ ತಪ್ಪಿದ್ದಾರೆಂದು ಹೇಳುವ ಹೆಗಡೆ ಮತ್ತವರ ಗೆಳೆಯರು, ಸ್ವತಃ ತಾವೇ ಇಂತಹ ಅನೇಕ ಐರೋಪ್ಯ–ವಿಶಿಷ್ಟ ಕಲ್ಪನೆಗಳಿಗೆ ಬಂಧಿತರಾಗಿ ತಮ್ಮ ಸಂಶೋಧನೆಗಳನ್ನು ಮುಂದುವರೆಸಿರುವುದು ಎಂತಹ ಸೋಜಿಗ! ಹಾಗಾಗಿಯೇ ಅವರಿಗೆ ಅಮೆರಿಕಾದಲ್ಲಿನ Racismಗೂ Race systemಗೂ ನಿರ್ಣಾಯಕ ವ್ಯತ್ಯಾಸ ಕಾಣುತ್ತದೆ. ಆದರೆ ಭಾರತದಲ್ಲಿ ಜಾತಿ ಪದ್ಧತಿ ಇದ್ದಿರುವಾಗಲೇ, ಅದರ ವಿರುದ್ಧ ಬುದ್ಧನ ಕಾಲದಿಂದಲೂ ವಿವಿಧ ರೀತಿಯ ಪ್ರತಿರೋಧ, ಹೋರಾಟಗಳು ನಡೆದಿದ್ದು, ಈ ನಿರಂತರ ಮತ್ತು ಹಲವು ನೆಲೆಗಳ ಘರ್ಷಣೆಯಲ್ಲಿ ಅದು ಹೆಗಡೆಯವರು ಹುಡುಕುತ್ತಿರುವಂತಹ ಅಥವಾ ಹುಡುಕಿ ಹುಡುಕಿ ಸಾಕಾಗಿ ಕೊನೆಗೆ ಇಲ್ಲವೆಂದು ಹೇಳುತ್ತಿರುವ 'ವ್ಯವಸ್ಥೆ' ತನ್ನ ಮೂಲ 'ರೂಪ'ಗಳನ್ನೂ ಮತ್ತು ಇವರು ನಿರೀಕ್ಷಿಸುವ 'ಐಕ್ಯತೆ'ಯನ್ನೂ ಕಳೆದುಕೊಂಡಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಈಗಂತೂ ಆಧುನಿಕ ಸಂವಿಧಾನ ಜಾರಿಗೆ ಬಂದ ಮೇಲೆ, ಆ ರೂಪಗಳ ಅವಶೇಷಗಳೂ ಕಾಣೆಯಾಗಿರಲಿಕ್ಕೆ ಸಾಕು. ಆದರೆ ಅವುಗಳ ರಾಜಕಾರಣ, ನಮ್ಮ ಹಳೆಯ ಮತ್ತು ಈಗ ಪ್ರಜಾಪ್ರಭುತ್ವ ಪದ್ಧತಿಗೇ ಕಣ್ಣು ಹೊಡೆದು ಪ್ರತಿ ಜಾತಿಯೂ ಹೊಸದಾಗಿ ಕಟ್ಟಿಕೊಳ್ಳುತ್ತಿರುವ ಮಠಗಳ ಮತ್ತು ಅವುಗಳಲ್ಲಿ ಸ್ಥಾಪಿಸಲಾಗುತ್ತಿರುವ ಮಠಾಧೀಶರ ಮತ್ತು ಅವುಗಳಿಗೆ ಹೆಚ್ಚುತ್ತಿರುವ ಭಕ್ತಸಮೂಹಗಳ ರೂಪದಲ್ಲಿ ಮುಂದುವರೆದೇ ಇದೆಯಲ್ಲ? ಇತ್ತೀಚೆಗೆ ತಾನೇ ನಮ್ಮ ಪೇಜಾವರ ಮಠಾಧೀಶರು ನಿಮಗೆ ಜಾತಿಪದ್ಧತಿ ಬೇಡದಿದ್ದರೆ ಬೌದ್ಧ ಧರ್ಮಕ್ಕೆ ಬದಲಾಗಿ ಆರ್ಯಸಮಾಜಕ್ಕೆ ಸೇರಿ ಎಂದು ಶೂದ್ರರಿಗೆ ಮತ್ತು ದಲಿತರಿಗೆ ಕರೆಕೊಟ್ಟಿರುವುದರ ಮರ್ಮವಾದರೂ ಏನು? ಹೋಗಲಿ, ಜಾತೀಯತೆ ಇದೆ, ಆದರೆ ಜಾತಿ ಪದ್ಧತಿ ಇರಲಿಲ್ಲ ಅಥವಾ ಇಲ್ಲ ಎಂಬಷ್ಟರ ಮಟ್ಟಿಗೆ ಸೂಕ್ಷ್ಮ ತರ್ಕ ಮಾಡುವ ನೀವು ಈ ಮೂಲಕ ಸಾಧಿಸ ಬಯಸಿರುವುದಾದರೂ ಏನನ್ನು? ನಿಮ್ಮ ಸಂಶೋಧನೆಗಳ ಪ್ರಕಾರ ಜಾತಿ ತಾರತಮ್ಯಗಳಿಗೆ ಹುಡುಕಿರುವ ಪರಿಹಾರಗಳಾದರೂ ಯಾವುವು? ಅದನ್ನಾದರೂ ಹೊರ ಜಗತ್ತಿಗೆ ಹೇಳಿ!

ಆಧುನಿಕ ಸಂವಿಧಾನ ಜಾರಿಗೆ ಬಂದ ಮೇಲೆ, ಆ ರೂಪಗಳ ಅವಶೇಷಗಳೂ ಕಾಣೆಯಾಗಿರಲಿಕ್ಕೆ ಸಾಕು. ಆದರೆ ಅವುಗಳ ರಾಜಕಾರಣ, ನಮ್ಮ ಹಳೆಯ ಮತ್ತು ಈಗ ಪ್ರಜಾಪ್ರಭುತ್ವ ಪದ್ಧತಿಗೇ ಕಣ್ಣು ಹೊಡೆದು ಪ್ರತಿ ಜಾತಿಯೂ ಹೊಸದಾಗಿ ಕಟ್ಟಿಕೊಳ್ಳುತ್ತಿರುವ ಮಠಗಳ ಮತ್ತು ಅವುಗಳಲ್ಲಿ ಸ್ಥಾಪಿಸಲಾಗುತ್ತಿರುವ ಮಠಾಧೀಶರ ಮತ್ತು ಅವುಗಳಿಗೆ ಹೆಚ್ಚುತ್ತಿರುವ ಭಕ್ತಸಮೂಹಗಳ ರೂಪದಲ್ಲಿ ಮುಂದುವರೆದೇ ಇದೆಯಲ್ಲ? ಇತ್ತೀಚೆಗೆ ತಾನೇ ನಮ್ಮ ಪೇಜಾವರ ಮಠಾಧೀಶರು ನಿಮಗೆ ಜಾತಿಪದ್ಧತಿ ಬೇಡದಿದ್ದರೆ ಬೌದ್ಧ ಧರ್ಮಕ್ಕೆ ಬದಲಾಗಿ ಆರ್ಯಸಮಾಜಕ್ಕೆ ಸೇರಿ ಎಂದು ಶೂದ್ರರಿಗೆ ಮತ್ತು ದಲಿತರಿಗೆ ಕರೆಕೊಟ್ಟಿರುವುದರ ಮರ್ಮವಾದರೂ ಏನು? ಹೋಗಲಿ, ಜಾತೀಯತೆ ಇದೆ, ಆದರೆ ಜಾತಿ ಪದ್ಧತಿ ಇರಲಿಲ್ಲ ಅಥವಾ ಇಲ್ಲ ಎಂಬಷ್ಟರ ಮಟ್ಟಿಗೆ ಸೂಕ್ಷ್ಮ ತರ್ಕ ಮಾಡುವ ನೀವು ಈ ಮೂಲಕ ಸಾಧಿಸ ಬಯಸಿರುವುದಾದರೂ ಏನನ್ನು? ನಿಮ್ಮ ಸಂಶೋಧನೆಗಳ ಪ್ರಕಾರ ಜಾತಿ ತಾರತಮ್ಯಗಳಿಗೆ ಹುಡುಕಿರುವ ಪರಿಹಾರಗಳಾದರೂ ಯಾವುವು? ಅದನ್ನಾದರೂ ಹೊರ ಜಗತ್ತಿಗೆ ಹೇಳಿ!

ಒಬ್ಬ ದೇವರು, ಒಬ್ಬ ಪ್ರವಾದಿ, ಒಂದು ಧರ್ಮ ಗ್ರಂಥವನ್ನಾಧರಿಸಿದ 'ರಿಲಿಜಿಯನ್' ಎನ್ನುವುದು ಕ್ರಿಶ್ಚಿಯನ್ ಮೂಲದ ಐರೋಪ್ಯ ಕಲ್ಪನೆ. ಅದನ್ನಾಧರಿಸಿ ಇಲ್ಲಿ ಕ್ರಿಶ್ಚಿಯನ್ ಮಿಷನರಿಗಳು 'ಜಾತಿ ಪದ್ಧತಿ'ಯ ಸಂಕಥನವನ್ನು ಕಟ್ಟಿದರು ಎಂದು ನೀವು ಹೇಳುತ್ತೀರಿ. ಆದರೆ ಕ್ರಿಶ್ಚಿಯನ್ ಮಿಷನರಿಗಳು ಇಲ್ಲಿಗೆ ಬರುವ ಹೊತ್ತಿಗಾಗಲೇ, ಶಂಕರಾಚಾರ್ಯರ ಕಾಲಕ್ಕೇ ಇಲ್ಲಿ ಹಿಂದೂ ಧರ್ಮವನ್ನು ಒಂದು 'ರಿಲಿಜಿಯನ್'ನಂತೆ ಕಟ್ಟುವ ಪ್ರಯತ್ನಗಳು ಆರಂಭವಾಗಿರಲಿಲ್ಲವೆ?(ಅವು ಇತ್ತೀಚಿನ ದಯಾನಂದ ಸರಸ್ವತಿ ಅವರ 'ಆರ್ಯ ಸಮಾಜ' ಮತ್ತು ವೀರ ಸಾವರ್ಕರರ 'ಹಿಂದುತ್ವ'ದ ಪ್ರಯತ್ನಗಳವರೆಗೂ ಒಂದಲ್ಲ ಒಂದು ರೀತಿಯಲ್ಲಿ ಮುಂದುವರೆದಿಲ್ಲವೆ?) ನಂತರ ಬಂದ ಕ್ರಿಶ್ಚಿಯನ್ ಮಿಷನರಿಗಳು ನಿಮ್ಮಲ್ಲಿ ಜಾತಿ ಪದ್ಧತಿ ಇದೆ ಎಂದಾಕ್ಷಣ ಇಲ್ಲಿನ ಜನ, ವಿದ್ವಾಂಸರು ಮತ್ತು ಧರ್ಮಜಿಜ್ಞಾಸುಗಳು ಅದನ್ನು ಪ್ರಶ್ನಿಸದೆ, ವಿನಾಃಕಾರಣ ಅದನ್ನು ಒಪ್ಪಿಬಿಡಲು ಅವರೇನು ಮೂರ್ಖರೆ? ಬಾಲಗಂಗಾಧರರು ಬೆಲ್ಜಿಯಂನಲ್ಲಿ ಕೂತು ಸಂಶೋಧನೆ ಮಾಡಿ, ಜಾತಿ ಪದ್ಧತಿ ಎಂಬುದೇ ಕ್ರಿಶ್ಚಿಯನ್ ಧರ್ಮಪ್ರಸಾರಕರ ಮತ್ತು ಐರೋಪ್ಯ ಅಧ್ಯಯನಕಾರರ ಸೃಷ್ಟಿ ಎಂದು ಪ್ರಚುರಪಡಿಸುವವರೆಗೂ ಇಡೀ ಭಾರತಕ್ಕೆ ಬೌದ್ಧಿಕ ಮಂಕು ಕವಿದಿತ್ತು ಎಂದು ಇವರು ಹೇಳಿದರೆ ನಾವು ನಂಬಬೇಕೆ?

ಈ ಧಾರ್ಷ್ಟ್ಯವೇ ಇವರ ಸಂಶೋಧನೆ ಮತ್ತು ಅದರ ಉದ್ದೇಶಗಳನ್ನು ಅನುಮಾನಾಸ್ಪದಗೊಳಿಸಿರುವುದು. ಇವರೆಲ್ಲ ಸ್ವಲ್ಪ ತಮ್ಮ ಈ ಸಮಾಜಮುಖಿ ಸಂಶೋಧನೆಗಳನ್ನು ಸ್ಥಳೀಯ ಸಮಾಜಕ್ಕೆ ಅರ್ಥವಾಗುವ ಹಾಗೆ–ಅಂದರೆ ಕನ್ನಡ ಜಾಯಮಾನದಲ್ಲಿ–ಬರೆಯತೊಡಗಿದಾಗ ಇವರ ಈ ಧಾರ್ಷ್ಟ್ಯ ಸ್ವಲ್ಪವಾದರೂ ಕಡಿಮೆಯಾದೀತು. ಇದನ್ನೇ ನಾನು ನನ್ನ ಎರಡನೇ ಪ್ರಶ್ನೆಯಲ್ಲಿ ಸೂಚ್ಯವಾಗಿ ಪ್ರಸ್ತಾಪ ಮಾಡಿದ್ದು. ಆದರೆ ಹೆಗಡೆಯವರು ಅದನ್ನು ತಮ್ಮದು ವೈಜ್ಞಾನಿಕ ಅನ್ವೇಷಣೆ ಎಂದು ಹೇಳಿಕೊಳ್ಳುತ್ತಾ,

ಇಡೀ ಪ್ರಶ್ನೆಯನ್ನೇ ಮೆಲ್ಲಗೆ ಪಕ್ಕಕ್ಕೆ ಸರಿಸುವ ಮಾಡುವ ಪ್ರಯತ್ನ ಮಾಡಿದ್ದಾರೆ. ಇವರ ಪ್ರಕಾರ ಸಮಾಜವೆಂಬುದು ಒಂದು ಭೌತವಸ್ತುವೇ ಆಗಿರಬಹುದು, ಸಮಾಜ ಶಾಸ್ತ್ರ ಇವರು ಹೇಳುವಂತಹ ಸಮಾಜ 'ವಿಜ್ಞಾನ'ವಾಗಲು! ಎಲ್ಲವನ್ನೂ ವಿಜ್ಞಾನ ಎಂದು ಸಾಧಿಸಿಕೊಳ್ಳುವ ಇಂತಹ ಪ್ರಯತ್ನ ಮತ್ತೆ ಇನ್ನೊಂದು ಐರೋಪ್ಯ ತೆವಲೇ! ಹಾಗೇ 'ಬಾಲಗಂಗಾಧರರು ಈಗ ಪ್ರಚಲಿತದಲ್ಲಿರುವ ವಿಚಾರಗಳನ್ನು ವಸಾಹತೀಕೃತವೆಂಬ ಕಾರಣಕ್ಕಾಗಿಯಾಗಲೀ, ಅವು ಪಶ್ಚಿಮದಲ್ಲಿ ಹುಟ್ಟಿದುವುಗಳು ಎಂಬ ಕಾರಣಕ್ಕಾಗಲೀ ವಿಮರ್ಶೆಗೊಳಪಡಿಸಿಲ್ಲ' ಎನ್ನುವ ಹೆಗಡೆಯವರು ತಮ್ಮ ಸಹ ಸಂಶೋದಕ ಡಾ॥ ಎ. ಷಣ್ಮುಖ ಅವರು 'ಸಂವಾದ'ದ ಅಕ್ಟೋಬರ್ ಸಂಚಿಕೆಯಲ್ಲಿ ಬರೆದಿರುವ 'ಪಾಶ್ಚಾತ್ಯ ಥಿಯಾಲಾಜಿಕಲ್ ಭಾಷೆಯ ಚೌಕಟ್ಟು' ಎಂಬ ಲೇಖನದಲ್ಲಿ ತಮ್ಮ ವಾದವನ್ನು ಮಂಡಿಸಲು ಬಳಸಿರುವ ಆಧಾರಗಳನ್ನು ಮತ್ತೊಮ್ಮೆ ಅವಲೋಕಿಸಲಿ.

ಇನ್ನು ನನ್ನ ಮೂರನೇ ಪ್ರಶ್ನೆಯನ್ನು ಹೆಗಡೆಯವರು ಹೆಚ್ಚೂ ಕಡಿಮೆ ತಪ್ಪಿಸಿಕೊಂಡೇ ಮುಂದೆ ಸರಿದಿದ್ದಾರೆ! ಹಿಂದೂ ಧರ್ಮವನ್ನು 'ರಿಲಿಜಿಯನ್' ಕಲ್ಪನೆಗೆ ಸಿಕ್ಕಿಕೊಳ್ಳದೆ ಗ್ರಹಿಸಿದಾಗಲೂ, ಅದರಲ್ಲಿ ಜಾತಿ ಪದ್ಧತಿಯನ್ನು ಕಂಡ ಮತ್ತು ಅದರ ವಿರುದ್ಧದ ಹೋರಾಟವನ್ನೂ ತಮ್ಮ ಸ್ವಾತಂತ್ರ್ಯ ಹೋರಾಟದ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಳ್ಳಬೇಕಾಗಿ ಬಂದ ಗಾಂಧಿಯವರ ನೋಟ ಕ್ರಮ ನಿಮ್ಮ ಗಮನ ಸೆಳೆಯದೆ, ಬೆಲ್ಜಿಯಂನಿಂದ ದುಡ್ಡು ವ್ಯವಸ್ಥೆ ಮಾಡುವ ಬಾಲಗಂಗಾಧರರ ಈ ಸಂಶೋಧನಾ ಯೋಜನೆಯೇ ಏಕೆ ಇಷ್ಟೊಂದು ನಿಮ್ಮಲ್ಲಿ ಉತ್ಸಾಹ ಹುಟ್ಟಿಸಿದೆ ಎಂಬ ನನ್ನ ಪ್ರಶ್ನೆಗೆ ಹೆಗಡೆಯವರ ಉತ್ತರ: 'ಈ ಸಲಹೆಗೆ ಧನ್ಯವಾದಗಳು'. ನಾನು ಸಲಹೆ ನೀಡಿಲ್ಲ, ಪ್ರಶ್ನೆ ಕೇಳಿದ್ದೇನೆ ಹೆಗಡೆಯವರೇ!

-೨-

ಕುವೆಂಪು ಅವರ 'ನೆನಪಿನ ದೋಣಿಯಲ್ಲಿ' ಕುರಿತ ಹೆಗಡೆಯವರ ಇಂಗ್ಲಿಷ್ ಲೇಖನಕ್ಕೆ ನಾನು ನನ್ನ ಸ್ನೇಹಿತರೊಬ್ಬರಿಗೆ ಪತ್ರ ರೂಪದಲ್ಲಿ ಬರೆದ ಪ್ರತಿಕ್ರಿಯೆಗೆ ಅವರು ಪ್ರತಿಕ್ರಿಯಿಸಿರುವ ರೀತಿಯಂತೂ ಅವರಿಗೆ ನಿಜವಾಗಿಯು ಹುಚ್ಚು ಹಿಡಿದಿದೆಯೇನೋ ಅನ್ನಿಸುವಂತಿದೆ! ಅದರ ತುಂಬಾ ವೈಯುಕ್ತಿಕ ವಿವರಣೆಗಳು ಮತ್ತು 'ತಪ್ಪು ಮಾಹಿತಿ', 'ಸುಳ್ಳು ಸೃಷ್ಟಿ', 'ಸುಳ್ಳು ಮಾಹಿತಿ', 'ತಿರುಚು', 'ಚರ್ಚೆಯ ಸಾಧ್ಯತೆಯನ್ನೇ ಮುಚ್ಚಿ ಹಾಕುವ ಪ್ರಯತ್ನ' ಮುಂತಾದ ವೈಯುಕ್ತಿಕ ಆರೋಪಗಳಿಂದ ತುಂಬಿ ಹೋಗಿವೆ. ಕೊನೆಗಂತೂ ಅವರು hysterical ಆದಂತೆ, ನನ್ನ ಲೇಖನ ಅವರ ಮೇಲೆ ಹಲ್ಲೆಗೆ ಪ್ರೇರೇಪಣೆ ನೀಡುವಂತೆಯೂ ಇದೆಯೆಂದು ಪರೋಕ್ಷವಾಗಿ ಸೂಚಿಸಿ ನನ್ನಲ್ಲಿ ಗಾಬರಿ ಹುಟ್ಟಿಸಿದ್ದಾರೆ! ಹೆಗಡೆಯವರೇ, ನೀವು ತುಂಬ ಹೆದರಿದಂತೆ ಕಾಣುತ್ತದೆ. ಒಂದು ವೇಳೆ ನನ್ನ ಆ ಲೇಖನದಿಂದಾಗಿ ನೀವು ಕುವೆಂಪು ವಿರೋಧಿಯೆಂಬಂತೆ ಪ್ರತಿಬಿಂಬಿತವಾಗಿ ನಿಮ್ಮ ಮೇಲಾನಾದರೂ ಹಲ್ಲೆಯಾದರೆ, ಅದರೆಲ್ಲ ದೈಹಿಕ ಮತ್ತು ಕಾನೂನು ಸಾಧಕ-ಬಾಧಕ ಖರ್ಚುಗಳನ್ನು ನಾನೇ ವಹಿಸಿಕೊಳ್ಳುತ್ತೇನೆ, ಹೆದರಬೇಡಿ!

ನಿಮ್ಮೆಲ್ಲ ಆರೋಪಗಳಿಗೆ, 'ನೆನಪಿನ ದೋಣಿಯಲ್ಲಿ' ಕುರಿತ ನಿಮ್ಮ ಆ ಇಂಗ್ಲಿಷ್ ಲೇಖನವನ್ನು ಅಥವಾ ಅದರ ಕನ್ನಡ ಅನುವಾದವನ್ನಾದರೂ ಪ್ರಕಟಿಸುವುದೇ ನನ್ನ ಪಾಲಿನ ಅತ್ಯುತ್ತಮ ಉತ್ತರವಾಗಬಹುದಿತ್ತು. ಹಾಗೆ ನೋಡಿದರೆ, ನಿಮ್ಮ ಆ ಲೇಖನಕ್ಕೆ ನನ್ನ ಪ್ರತಿಕ್ರಿಯೆಯ

ಬಾಲಗಂಗಾಧರರ ಚಿಂತನೆ ಜಾತಿ ಪದ್ಧತಿಯ ಆಚರಣೆಗಳನ್ನು ಕುರಿತಂತೆ ಮೇಲ್ಜಾತಿಗಳ ಮೇಲಿನ 'ವೃಥಾ' ಆರೋಪಗಳನ್ನು ಅಲ್ಲಗಳೆಯುತ್ತದೆ ಎಂಬ ಕಾರಣಕ್ಕೆ ಕೆಲವು ಗುಂಪುಗಳಲ್ಲಿ ಅದು ರೋಮಾಂಚನ ಉಂಟುಮಾಡಿದೆ ಎಂಬ ನನ್ನ ಅಭಿಪ್ರಾಯದ ಬಗ್ಗೆ ಹೆಗಡೆಯರೇಕೆ ಅಷ್ಟೊಂದು ಹಾರಾಡಬೇಕೋ ತಿಳಿಯದಾಗಿದೆ! ನಾನು ಅಂತರ್ಜಾಲದಲ್ಲಿ ಬಾಲು ಅವರ ವಿಚಾರಧಾರೆ ಬಗ್ಗೆ ನಡೆದಿರುವ ಚರ್ಚೆಯ ವೈಖರಿ ಮತ್ತು ಉತ್ಸಾಹಗಳನ್ನು ಮೊದಲ ಬಾರಿಗೆ ಕಂಡ ಗಾಬರಿಯಿಂದ ಮತ್ತು ಅದಕ್ಕೊಂದು ಪ್ರತಿಕ್ರಿಯೆ ಬರೆದು ಎದುರಿಸಿದ ವಾದ ಸರಣಿಯ ರೀತಿ-ನೀತಿಗಳಿಂದ ಉದ್ಭವವಾದ ಅಭಿಪ್ರಾಯವದು. ಯಾವ ಕಾರಣಕ್ಕೆ ಇಂತಹ 'ಬೃಹತ್' ಸಂಶೋಧನೆ ನಡೆಯುತ್ತಿದೆ ಎಂಬ ಕುತೂಹಲವೂ, ಸಂಶೋಧನೆ ಏನೆಂಬುದನ್ನು ಅರಿತುಕೊಳ್ಳುವುದರ ಭಾಗವಾಗಿರುತ್ತದೆ ಎಂಬುದು ಹೆಗಡೆಯವರಂತಹ ಹಿರಿಯ ಸಂಶೋಧಕರಿಗೆ ಗೊತ್ತಿಲ್ಲದಿರುವುದು ಆಶ್ಚರ್ಯಕರ. ಇದನ್ನು ತಮ್ಮನ್ನು ಟೀಕಿಸಲು ಹಾಕಿಕೊಂಡಿರುವ ಪೀಠಿಕೆ ಎಂದಷ್ಟೇ ಅವರು ಭಾವಿಸಿದರೆ ಅದು ಅವರ ದುರಂತವಷ್ಟೆ.

ಮುಖ್ಯ ನೆಲೆ ಇರುವುದೇ ಅದೇಕೆ ಇಂಗ್ಲಿಷ್‌ನಲ್ಲಿದೆ ಎಂಬ ಪ್ರಶ್ನೆಯಲ್ಲಿ. ಮೂಲ ಕೃತಿಯನ್ನೇ ಓದದ/ಓದಲಾಗದ (ಅದು ಇಂಗ್ಲಿಷ್‌ಗೆ ತರ್ಜುಮೆ ಆಗಿಲ್ಲವಾದ್ದರಿಂದ) ಮತ್ತು ನಿಮ್ಮ ಸುಪ್ರಸಿದ್ಧ ಸಂಶೋಧನಾ ಯೋಜನೆಯ ಭಾಗವಾಗಿ ಆಯೋಜಿತವಾದ ಅಂತಾರಾಷ್ಟ್ರೀಯ ವಿದ್ವಾಂಸರ ಸಭೆಯ ಮುಂದೆ ಅದರ ಯಾವುದೇ ನೆಲೆಯ ವಿಮರ್ಶೆಯನ್ನು ಮಂಡಿಸುವ ಉದ್ದೇಶವಾದರೂ ಏನು? ಪ್ರಯೋಜನವಾದರೂ ಏನು? ನೀವು ಪ್ರಾಯೋಜಿಸಿರುವ ಯೋಜನೆಗೆ ಬದ್ಧರಾಗಿ ನಾವು ಹೇಗೆ ಅದಕ್ಕೆ ಪೂರಕವಾದ ಸಾಕ್ಷ್ಯವನ್ನು ಕಲೆ ಹಾಕುತ್ತಿದ್ದೇವೆ ನೋಡಿ ಎಂಬುದನ್ನು ಅವರಿಗೆ ಸಾಬೀತುಪಡಿಸುವುದರ ಹೊರತಾಗಿ?

ಸ್ವಾಮಿ ಹೆಗಡೆಯವರೇ, 'ನೆನಪಿನ ದೋಣಿಯಲ್ಲಿ' ಕೃತಿ ಕುರಿತು-ನಿಮ್ಮ ಯೋಜನೆಯ ಸಲುವಾಗಿಯಾದರೂ-ಮೊದಲು ಚರ್ಚೆಯಾಗಬೇಕಾಗಿರುವುದು ಮತ್ತು ನಿಜವಾಗಿ ಚರ್ಚೆಯಾಗುವುದು ಕನ್ನಡ ಸಮಾಜದ ಮಧ್ಯೆ. ಈ ಬಗ್ಗೆ ನಿಮ್ಮದೇನಿದ್ದರೂ ಅದನ್ನು ಮೊದಲು ಅದರ ನಿಜ ಓದುಗರಾದ ಕನ್ನಡಿಗರಿಗೆ ಹೇಳಿ, ಆನಂತರ ಬೇಕಾದರೆ ತಮ್ಮ ಇತರ ಉಪಯೋಗಗಳಿಗಾಗಿ ಅದನ್ನು ಓದಲಾಗದವರಿಗೂ ಹೇಳಿ! ನೀವೇ ನನಗೆ ಹೇಳಿದಂತೆ, ನೀವು ನನಗೆ ನಿಮ್ಮ ಈ-ಮೇಲ್ ವಿಳಾಸ ನೀಡದಿದರಲು ನಿಮ್ಮೊಂದಿಗೆ ಮಾತನಾಡುತ್ತಾ ಎತ್ತಿದ ಈ ಪ್ರಶ್ನೆ ನಿಮ್ಮಲ್ಲಿ ಉಂಟುಮಾಡಿದ ಅಸಮಧಾನವೇ ಕಾರಣ. ನೀವು ಕೊಟ್ಟಿರುವ ಗೋಜಲು ಕಾರಣವಲ್ಲ. ನಾನು ನಿಮ್ಮ ಈ-ಮೇಲ್ ವಿಳಾಸ ಕೇಳಿದ್ದು, ನನ್ನ ಆ ಪ್ರತಿಕ್ರಿಯೆಯಲ್ಲಿ ನಿಮಗೆ ಆಕ್ಷೇಪಾರ್ಹವಾದ್ದೇನಾದರೂ ಕಂಡರೆ, ಅದನ್ನು ಗಮನಿಸಿ ಪ್ರಕಟಿಸಲು. ಅದಕ್ಕೇ ನೀವು ಅವಕಾಶ ಕೊಡಲಿಲ್ಲ. ಈಗ ನೋಡಿದರೆ, ಇದನ್ನು ಪ್ರಕಟಿಸಿದ್ದೇ ಮಹಾಪರಾಧವೆಂಬಂತೆ ಕಟಕಿಯ ಮೇಲೆ ಕಟಕಿಯಾಡುತ್ತಿರುವಿರಿ!

ಇನ್ನು ಈ ಲೇಖನದ ಬಗೆಗೆ ನಾನು ಎತ್ತಿರುವ ನಾಲ್ಕು ಆಕ್ಷೇಪಣೆಗಳಲ್ಲಿ ಮೊದಲನೆಯದನ್ನು ನಿರ್ಲಕ್ಷಿಸಿಯೇ ಹೆಗಡೆಯವರು ಮುಂದುವರೆದಿದ್ದಾರೆ! 'ನೆನಪಿನ ದೋಣಿಯಲ್ಲಿ' ಆತ್ಮಕತೆಯಲ್ಲ; ಅದನ್ನು ಹಾಗೆ ನೋಡಿ ಯಾವುದೇ ತೆರನ ವಿಮರ್ಶೆ ಮಾಡುವುದು ಉಚಿತವಲ್ಲ ಎಂಬ ನನ್ನ ವಾದಕ್ಕೆ ಅವರ ಉತ್ತರ: '(ಕುವೆಂಪು)ಅವರ ಆತ್ಯಂತಿಕ ನಿಲುವುಗಳನ್ನು ಕುರಿತೂ ನಾನಿಲ್ಲಿ ಹೇಳುತ್ತಿಲ್ಲ'. ತಮ್ಮ ಬದುಕು ಮುಗಿಸಿರುವ ಲೇಖಕನೊಬ್ಬನ ಆತ್ಯಂತಿಕ ನಿಲುವುಗಳ ಬಗ್ಗೆ ಮಾತನಾಡದೆ, ಆತನ ಯಾವುದೋ ಕಾಲದ ನಿಲುವುಗಳ ಬಗ್ಗೆ ನಿರ್ಣಾಯಕವಾಗಿ ಮಾತನಾಡುವುದು ಅದೆಂತಹ ವಿಮರ್ಶೆ ಅಥವಾ ಸಂಶೋಧನೆ ಹೆಗಡೆಯವರೇ?

ಎರಡನೆಯದಾಗಿ, ಕುವೆಂಪು ತಮ್ಮ ಜೀವನ ದರ್ಶನವನ್ನು ರೂಪಿಸಿಕೊಂಡ ಮೂಲಗಳು ಎಂದು ಹೆಗಡೆಯವರು ಪಟ್ಟಿ ಮಾಡುವ ಕೆಲವು ವಿವರಗಳೇ ಪ್ರಶ್ನಾರ್ಹವಾಗಿವೆ ಎಂದು ನಾನು ನೀಡಿರುವ ವಿಷದೀಕರಣಕ್ಕೆ ಹೆಗಡೆಯವರ ಪ್ರತಿಕ್ರಿಯೆ: 'ಅವರಿಗಿಂತಲೂ ಚೆನ್ನಾಗಿ ನಾನು ಆ ಕೆಲಸ ಮಾಡಿದ್ದೇನೆ'. ಅವರು ಇಂತಹ ಕೆಲಸಗಳನ್ನು ನನಗಿಂತ ಚೆನ್ನಾಗಿ ಮಾಡಬಲ್ಲರೆಂದು ನನಗೆಗೊತ್ತು. ಆದರೆ ಮಾಡಿಲ್ಲ ಎಂಬುದೇ ನನ್ನ ವಿಷಾದ! (ನಾನೇ ಸಂಪಾದಿಸಿರುವ-*'ಕುವೆಂಪು:ಒಂದು ಪುನರನ್ವೇಷಣೆ'*-ಪುಸ್ತಕದಲ್ಲಿ) ಅವರು ಆ ಕೆಲಸವನ್ನು ಹಾಗೆ ಚೆನ್ನಾಗಿ ಮಾಡಿದ್ದಾರೆ ಎಂದು ನನಗೆ ಮನವರಿಕೆಯಾಗಿದ್ದರೆ, ನಾನು ಆ ಪ್ರಶ್ನೆಯನ್ನೇ ಎತ್ತುತ್ತಿರಲಿಲ್ಲ. ಏಕೆಂದರೆ, ಹೆಗಡೆಯವರು ತಮ್ಮ ಮೂಲ ಲೇಖನದಲ್ಲಿ ಹೇಳುವ ಹಾಗೆ, ಕುವೆಂಪು ಅವರ ವ್ಯಕ್ತಿತ್ವವನ್ನು ನಿಜಾರ್ಥದಲ್ಲಿ ರೂಪಿಸಿದ್ದು ವೇದೋಪನಿಷತ್ತುಗಳಲ್ಲ; ಬದಲಿಗೆ, ಅವುಗಳನ್ನು ಕುರಿತು ಅವರಿಗೆ ಸಾಧ್ಯವಾದ ವೈಚಾರಿಕ ವಿಮರ್ಶೆಯ ಸಾಧ್ಯತೆಗಳು.

ಮೂರನೆಯದಾಗಿ, ವೈಯುಕ್ತಿಕ ಅಥವಾ ನೇರ ಅನುಭವದ ಆಧಾರದ ಮೇಲೇ ಬದುಕಿನ ಎಲ್ಲ ನಿಲುವುಗಳು ತೀರ್ಮಾನವಾಗುವುದಿಲ್ಲ. ಹಾಗಾಗಿ, ಕುವೆಂಪು ಅವರ ನಿಲುವುಗಳಿಗೆ ಅವರ ವೈಯುಕ್ತಿಕ ಬದುಕಿನಲ್ಲೇ ನೇರ 'ಸಾಕ್ಷ್ಯ'ಗಳನ್ನು ಹುಡುಕುವುದು ಮತ್ತು ಅಂತಹ ಸಾಕ್ಷ್ಯಗಳು ಸಿಕ್ಕುತ್ತಿಲ್ಲ ಎಂದು ಅವರ ನಿಲುವುಗಳ ಬಗ್ಗೆ ಯಾವುದೇ ತೆರನ ಟೀಕು ಬರೆಯುವುದು ಸಾಧುವಲ್ಲ ಎಂಬ ನನ್ನ ಸೂಚನೆಗೆ ಹೆಗಡೆಯವರ ಪ್ರತಿಕ್ರಿಯೆ ಬರೀ ಮೌನ!

ಇನ್ನು ಬಾಲಗಂಗಾಧರರ ಚಿಂತನೆ ಜಾತಿ ಪದ್ಧತಿಯ ಆಚರಣೆಗಳನ್ನು ಕುರಿತಂತೆ ಮೇಲ್ಜಾತಿಗಳ ಮೇಲಿನ 'ವೃಥಾ' ಆರೋಪಗಳನ್ನು ಅಲ್ಲಗಳೆಯುತ್ತದೆ ಎಂಬ ಕಾರಣಕ್ಕೆ ಕೆಲವು ಗುಂಪುಗಳಲ್ಲಿ ಅದು ರೋಮಾಂಚನ

ಚರ್ಚೆ

ಜಾತಿ ಧರ್ಮ ತಾರತಮ್ಯ

ಉಂಟುಮಾಡಿದೆ ಎಂಬ ನನ್ನ ಅಭಿಪ್ರಾಯದ ಬಗ್ಗೆ ಹೆಗಡೆಯರೇಕೆ ಅಷ್ಟೊಂದು ಹಾರ್ರಾಡಬೇಕೋ ತಿಳಿಯದಾಗಿದೆ! ನಾನು ಅಂತರ್ಜಾಲದಲ್ಲಿ ಬಾಲು ಅವರ ವಿಚಾರಧಾರೆ ಬಗ್ಗೆ ನಡೆದಿರುವ ಚರ್ಚೆಯ ವೈಖರಿ ಮತ್ತು ಉತ್ಸಾಹಗನ್ನು ಮೊದಲ ಬಾರಿಗೆ ಕಂಡ ಗಾಬರಿಯಿಂದ ಮತ್ತು ಅದಕ್ಕೊಂದು ಪ್ರತಿಕ್ರಿಯೆ ಬರೆದು ಎದುರಿಸಿದ ವಾದ ಸರಣಿಯ ರೀತಿ-ನೀತಿಗಳಿಂದ ಉದ್ಭವವಾದ ಅಭಿಪ್ರಾಯವದು. ಯಾವ ಕಾರಣಕ್ಕೆ ಇಂತಹ 'ಬೃಹತ್' ಸಂಶೋಧನೆ ನಡೆಯುತ್ತಿದೆ ಎಂಬ ಕುತೂಹಲವೂ, ಸಂಶೋಧನೆ ಏನೆಂಬುದನ್ನು ಅರಿತುಕೊಳ್ಳುವುದರ ಭಾಗವಾಗಿರುತ್ತದೆ ಎಂಬುದು ಹೆಗಡೆಯವರಂತಹ ಹಿರಿಯ ಸಂಶೋಧಕರಿಗೆ ಗೊತ್ತಿಲ್ಲದಿರುವುದು ಆಶ್ಚರ್ಯಕರ. ಇದನ್ನು ತಮ್ಮನ್ನು ಟೀಕಿಸಲು ಹಾಕಿಕೊಂಡಿರುವ ಪೀಠಿಕೆ ಎಂದಷ್ಟೇ ಅವರು ಭಾವಿಸಿದರೆ ಅದು ಅವರ ದುರಂತವಷ್ಟೆ

ಇನ್ನು ನಾಲ್ಕನೆಯದಾಗಿ, ಹೆಗಡೆಯವರ ಮುಖ್ಯ ಆಕ್ಷೇಪಣೆಗೆ ಬರೋಣ. '... ವಿಶೇಷವಾಗಿ ಬ್ರಾಹ್ಮಣರನ್ನು ಕುರಿತ ಕುವೆಂಪು ಅವರ ದ್ವಂದ್ವಾತ್ಮಕ ನಿಲುವುಗಳೆಂದು ಹೆಗಡೆಯವರು ಪ್ರಸ್ತುತಪಡಿಸುವ ಪ್ರಕರಣಗಳೇ, ಅವರ ನಿಲುವು ಹೆಗಡೆಯವರು ತೀರ್ಮಾನಿಸಿರುವಂತೆ **ಬ್ರಾಹ್ಮಣ ವಿರೋಧ ಅಥವಾ ದ್ವೇಷದ** ಮೇಲೆ ನಿಂತುದಲ್ಲ ಎಂದು ಸೂಚಿಸುವಂತಿದೆ' ಎಂಬ ನನ್ನ ಅಭಿಪ್ರಾಯವೇ ಹೆಗಡೆಯವರು ನನ್ನ ಮೇಲೆ ಈ ಹಿಂದೆ ಪಟ್ಟಿ ಮಾಡಿದಂತಹ ವಿವಿಧ ಆರೋಪ ಮತ್ತು ಟೀಕೆಗಳ ಸುರಿಮಳೆ ಮಾಡಲು ಕಾರಣವಾಗಿರುವುದು. ಅವರು ತಮ್ಮ ಈ ಆರೋಪ-ಟೀಕೆಗಳಿಗೆ ಸಮರ್ಥನೆಯಾಗಿ, 'ಪ್ರಸ್ತುತ ಇಡೀ ಲೇಖನದಲ್ಲಿ ಎಲ್ಲೂ ಕುವೆಂಪು ಅವರಿಗೆ ಬ್ರಾಹ್ಮಣ ವಿರೋಧ ಅಥವಾ ದ್ವೇಷವಿತ್ತು ಎಂಬ ಇಂಗಿತವನ್ನು ನಾನು ನೀಡಿಲ್ಲ' ಎಂದು ಹೇಳುತ್ತಾರೆ. ಅಲ್ಲದೆ ಕುವೆಂಪು ಅವರ ಬಗ್ಗೆ ಅವರು ಗೌರವ ಹೊಂದಿದ್ದಾರೋ ಇಲ್ಲವೋ ಅಥವಾ ಸದರಿ ಸಂಶೋಧನೆಯ ಸಂದರ್ಭದಲ್ಲಿ ಅವರು ಅವರಿಗೆ ಋಣಿಯಾಗಿದ್ದಾರೋ ಇಲ್ಲವೋ ಎಂಬುದು ಇಲ್ಲಿ ಚರ್ಚಿತವಾಗುತ್ತಿರುವಂತೆ ಆ ಬಗ್ಗೆ ಹೆಗಡೆಯವರು ವಿವರಣೆ ನೀಡುವ ಪ್ರಯತ್ನವನ್ನೂ ಮಾಡಿದ್ದಾರೆ. ಅದರ ಅಗತ್ಯ ಅವರಿಗೇಕೆ ಈಗ ಕಂಡುಬಂದಿತೋ ತಿಳಿಯದು!

'ನೆನಪಿನ ದೋಣಿಯಲ್ಲಿ' ಕುರಿತ ಹೆಗಡೆಯವರ ಲೇಖನದ ಉದ್ದೇಶವೇ, ಕುವೆಂಪು ಅವರು ಈ ಕೃತಿಯಲ್ಲಿ ಜಾತಿ ಪದ್ಧತಿ ಕುರಿತು ವ್ಯಕ್ತಪಡಿಸಿರುವ ಎಲ್ಲ ಅಭಿಪ್ರಾಯ, ಟೀಕೆಗಳೂ ಅವರ ನೇರ ಮತ್ತು ವೈಯುಕ್ತಿಕ ಅನುಭವಗಳನ್ನು ಆಧರಿಸಿಲ್ಲ; ಬದಲಿಗೆ, ಬ್ರಾಹ್ಮಣರೇ ಜಾತಿ ಪದ್ಧತಿಯ ಎಲ್ಲ ಅನಾಹುತಗಳಿಗೆ-ಜಾತಿ ತಾರತಮ್ಯ, ಶೂದ್ರರ ದಮನ ಮತ್ತು ನಿರ್ಲಕ್ಷ್ಯ ಇತ್ಯಾದಿ-ಕಾರಣವೆಂದು ಪ್ರತಿಪಾದಿಸುವುದೆಂದು ಹೇಳಲಾದ 'ಜಾತಿ ಪದ್ಧತಿ ಕುರಿತಾದ ಅಭಿಜಾತ ನಿರೂಪಣೆ'(Classical account of Caste System)ಯನ್ನು ನಂಬಿ ಮೂಡಿದಂತಹವು ಎಂದು ಸಾಬೀತುಪಡಿಸುವುದೇ ಆಗಿದೆ. ಹೆಗಡೆಯವರು ಕುವೆಂಪು ತಮಗೆ ಸಹಾಯ ಮಾಡಿದ, ಪ್ರೋತ್ಸಾಹಿಸಿದ ಬ್ರಾಹ್ಮಣರ ಬಗ್ಗೆ ವ್ಯಕ್ತಪಡಿಸಿರುವ ಸದಭಿಪ್ರಾಯಗಳನ್ನು ಉಲ್ಲೇಖಿಸಿರುವುದೂ ಈ ಉದ್ದೇಶದ ಭಾಗವಾಗಿಯೇ. ಕುವೆಂಪು ಅವರು ಎಲ್ಲ ಧರ್ಮಗಳಲ್ಲೂ ಗುರುತಿಸುವ ಪುರೋಹಿತಶಾಹಿಯ ಬಗ್ಗೆ ಮಾಡಿರುವ ಟೀಕೆಗಳನ್ನು ಇಡೀ ಬ್ರಾಹ್ಮಣ ಸಮುದಾಯಕ್ಕೆ ಅನ್ವಯಗೊಳ್ಳುವ ರೀತಿಯಲ್ಲಿ ಅರ್ಥೈಸಿ, ಅವನ್ನು ಜಾತಿ ಪದ್ಧತಿ ಕುರಿತ ಕುವೆಂಪು ಅವರ ಅಭಿಪ್ರಾಯಗಳಂತೆ ಮಂಡಿಸಿರುವ ಹೆಗಡೆಯವರ 'Caste System in Kuvempu' Autobiography, '*Nenapina Doniyallli*' ಲೇಖನದ ಈ ಕೆಲವು ತೀರ್ಮಾನಗಳನ್ನು ಅವು ಇಂಗ್ಲಿಷಿನಲ್ಲಿರುವಂತೆಯೇ ತದ್ವತ್ತಾಗಿ ಓದಿದರೆ, ಅವರ ಮಾತುಗಳ ಇಂಗಿತವೇನು ಮತ್ತು ನನ್ನ ಮಾತುಗಳು ದುರುದ್ದೇಶಪೂರಿತವೋ, ತಿರುಚಿದ್ದೋ, ಆರೋಗ್ಯಪೂರ್ಣ ಚರ್ಚೆಯ ಸಾಧ್ಯತೆಯನ್ನು ಮುಚ್ಚಿ ಹಾಕುವಂತಹದ್ದೋ ಎಂಬುದು ಓದುಗರಿಗೆ ಸ್ಪಷ್ಟಗೊಳ್ಳಬಹುದು:

Kuvempu's writings imbue the spirit of Shudra reformation and a criticism of Brahmans and Hinduism in general.

Kuvempu's conception of Hinduism and the caste system, **as it is expressed in many of his writings** (ಒತ್ತು ನನ್ನದು) goes as follows:

Brahmins are the priests of Hinduism and the greedy brahminical priesthood is entirely responsible for the degeneration of Hinduism. This degeneration has occurred in the following way:

a) Inspired by greed and ignorance the Brahman *purohitas* have introduced wrong practices and caste discrimination through interpolations in, and misinterpretations of, the original Hindu texts.

b) Through the caste system, they isolated the Shudra section from the rest of society as inferior people. They denied the Shudra access to the Hindu texts and revelations by denying them an education and imposing cruel punishments for violating the brahmanical restrictions.

c) They want the Shudras to remain in this status perpetually. Therefore, they continue to misguide them through them superstitious and immoral practices, by denying them Sanskrit education and equal status and by discouraging Shudras from elevating their status. They do not tolerate the Shudras who try to violate these restrictions and arrogate the status of the Brahmins.

The author(ie Kuvempu) was sceptical about Hinduism, he says, because of the illiberal and narrow minded propagations of the traditional Brahmins.

There are experiences which Kuvempu himself view as confirmation of the classical account: anecdotes concerning tha meanness of the Brahmins.....

-ಇಷ್ಟು ಸಾಕೆಂದು ಕಾಣುತ್ತದೆ. ಇಷ್ಟೆಲ್ಲ ಚರ್ಚೆಯ ನಂತರ ನಾನು ನನ್ನ ಪ್ರತಿಕ್ರಿಯೆಯಲ್ಲಿ ಮಾಡಿರಬಹುದಾದ ಒಂದು ತಾಂತ್ರಿಕ ತಪ್ಪೆಂದು ನನಗನ್ನಿಸಿದ್ದು, ಹೆಗಡೆಯರು ಆಕ್ಷೇಪಿಸಿರುವ ವಾಕ್ಯದಲ್ಲಿ 'ವಿರೋಧ' ಶಬ್ದದ ಜೊತೆಗೆ ಅದರ ಅತಿಯನ್ನು ಸೂಚಿಸಲು 'ದ್ವೇಷ' ಎಂಬ ಪದವನ್ನು (ಅದೂ ಪರ್ಯಾಯವಾಗಿ ಮಾತ್ರ) ಬಳಸಿರುವುದು. ಇದು ಬಿಟ್ಟರೆ ಹೆಗಡೆಯವರ ವಾದವನ್ನು ಅದು ಇದ್ದಂತೆಯೇ ಪ್ರಸ್ತುತಪಡಿಸಿರುವ ವಿಶ್ವಾಸ ನನಗಿದೆ. ಹಾಗಾಗಿ, ಈಗ ಹೆಗಡೆಯವರು ನಿರೀಕ್ಷಿಸಿರುವ ತಪ್ಪೊಪ್ಪಿಗೆ ನೀಡಬೇಕಾದವರು ಯಾರು ಮತ್ತು ಅವರ ಸಂಶೋಧನೆ ಅವಸರದಲ್ಲಿ ಮುಗ್ಗರಿಸಿದೆಯೋ ಇಲ್ಲವೋ ಎಂಬುದನ್ನು ಓದುಗರೇ ತೀರ್ಮಾನಿಸಬಹುದು. ಅಲ್ಲದೆ, ಈ ಮೇಲಿನ ಭಾಗಗಳನ್ನು ಆರಿಸಿರುವ ಲೇಖನದಲ್ಲಿ ತಾವು ಇಲ್ಲವೆಂದು ಸಾಧಿಸಿ ತೋರಿಸಲೆತ್ನಿಸಿರುವ Caste system ಎಂಬುದನ್ನು ಸ್ವತಃ ಅವರೇ ಚರ್ಚೆಯ ಮಧ್ಯೆ ಮತ್ತೆ ಮತ್ತೆ ಒಂದು ಪೂರ್ವಕಲ್ಪನೆಯಾಗಿ ಬಳಸಬೇಕಾದ ಅನಿವಾರ್ಯತೆಯನ್ನುಂಟು ಮಾಡಿರುವ ಕಡೆ ಹೆಗಡೆಯವರು ಸ್ವಲ್ಪ ಗಮನ ಹರಿಸಿದರೂ ಸಾಕು, ಅವರ ವಾದವನ್ನು ಪ್ರಶ್ನಿಸುತ್ತಿರುವವರ ವಿಚಾರಗಳ ನೆಲೆಗಳನ್ನು ಸಹಾನುಭೂತಿಯಿಂದ ಅರ್ಥಮಾಡಿಕೊಳ್ಳುವ ಅವಕಾಶ ಉಂಟಾಗಬಹುದೆಂದೂ ಅವರಿಗೆ ಈ ಸಂದರ್ಭದಲ್ಲಿ ಸೂಚಿಸಬಯಸುವೆ. □

ಕಳೆದ ಕೆಲವು ತಿಂಗಳುಗಳಿಂದ 'ಜಾತಿ, ಧರ್ಮ, ತಾರತಮ್ಯ' ಕುರಿತಂತೆ 'ಸಂವಾದ'ದಲ್ಲಿ ನಡೆದ ಚರ್ಚೆಯನ್ನು ಈ ಸಂಚಿಕೆಯೊಂದಿಗೆ ಮುಕ್ತಾಯಗೊಳಿಸುತ್ತಿದ್ದೇವೆ. ಚರ್ಚೆಯಲ್ಲಿ ಹತ್ತು ಹಲವು ವಿಚಾರಗಳು ಪ್ರಸ್ತಾಪವಾಗಿದ್ದು, ಅದು ಮುಕ್ತ ವೈಚಾರಿಕ ನೆಲೆಗಟ್ಟಿನಲ್ಲಿ ನಡೆದ ಆರೋಗ್ಯ ಪೂರ್ಣ ಚರ್ಚೆ ಎಂದೇ 'ಸಂವಾದ' ಭಾವಿಸುತ್ತದೆ. ಚರ್ಚೆಯಲ್ಲಿ ಪ್ರಸ್ತಾಪಿಸಲಾದ ಹಲವು ಅಭಿಪ್ರಾಯಗಳನ್ನು 'ಸಂವಾದ' ಒಪ್ಪದೆ ಇದ್ದರೂ ಮುಕ್ತ ಚರ್ಚೆ ನಡೆಯಲಿ ಎನ್ನುವ ಕಾರಣಕ್ಕಾಗಿ ಅವುಗಳನ್ನು ಪ್ರಕಟಿಸಿದೆ. ಇಡೀ ಚರ್ಚೆಯಲ್ಲಿ ಯಾರನ್ನೇ ನೋಯಿಸುವುದಾಗಲಿ ಅಥವಾ ತೇಜೋವಧೆ ಮಾಡುವುದಾಗಲಿ ನಮ್ಮ ಉದ್ದೇಶವಲ್ಲ. ಇಂಥ ವಿಚಾರ ಪ್ರಚೋದಕ ಮುಕ್ತ ಚರ್ಚೆಗೆ 'ಸಂವಾದ' ಸದಾ ತನ್ನ ಪುಟಗಳನ್ನು ಮೀಸಲಿಡುತ್ತದೆ. -ಸಂಪಾದಕ

ವಿ.ಪಿ.ಸಿಂಗ್: ಹೀಗೊಂದು ನಮನ...

ಡಾ. ಡೊಮಿನಿಕ್. ಡಿ

ವಿ.ಪಿ.ಸಿಂಗ್‌ರವರು ಸತ್ತದ್ದರಿಂದ ಈ ದೇಶಕ್ಕೆ ನಷ್ಟವೇನೂ ಆಗಿಲ್ಲ ಎಂದು ಒಬ್ಬ ಕಿರಾತಕ ತನ್ನ ಅದುಮಿಟ್ಟ ದ್ವೇಷವನ್ನು ಬರವಣಿಗೆಯಲ್ಲಿ ಕಾರಿಕೊಂಡರೆ ಮತ್ತೊಬ್ಬರು 'ಮಂಡಲ್ ವರದಿಯ ಜಾರಿಯಿಂದ ದಲಿತರಿಗೆ ಮತ್ತು ಆದಿವಾಸಿಗಳಿಗೆ ಮತ್ತಷ್ಟು ಅನ್ಯಾಯವಾಯಿತು' ಎಂದು ಫೋನಾಯಿಸಿದರು. ಈ ಎರಡು ರೀತಿಯ ಪ್ರತಿಕ್ರಿಯೆಗಳ ಹಿಂದೆ ಈ ದೇಶದಲ್ಲಿ ಸಂವಿಧಾನಾತ್ಮಕವಾಗಿ ತಾರತಮ್ಯವನ್ನು ನಿಭಾಯಿಸಿಕೊಳ್ಳುತ್ತಿರುವ ಸಕಾರಾತ್ಮಕ ಕ್ರಿಯೆ/ಮೀಸಲಾತಿಯನ್ನು ದೂಷಿಸುವ ಕಸರತ್ತು ಅಡಗಿದೆಯಲ್ಲವೇ? ಈ ನಿಲುವನ್ನು ನಿವೇದಿಸಿಕೊಳ್ಳಲು ಮಂಡಲ್ ವರದಿಯನ್ನು ಜಾರಿಗೊಳಿಸಿದ ರಾಜಕೀಯ ಧುರೀಣರಾದ ವಿ.ಪಿ.ಸಿಂಗ್‌ರವರನ್ನು ಬೈಯ್ಯುವುದು. ಹೀಗೆ ಮಾಡುವುದರ ಮೂಲಕ ಮೇಲಿನ ಪ್ರತಿಕ್ರಿಯೆಗಳಿಗೆ ಬೆಂಬಲಿಗರನ್ನು ಪಡೆದುಕೊಳ್ಳುವುದು. ಹಾಗಾದರೆ ಮೇಲಿನ ಪ್ರತಿಕ್ರಿಯೆಗಳಲ್ಲಿ ಏನಾದರೂ ಸತ್ಯ ಅಡಗಿದೆಯಾ ನೋಡೋಣ

ನಮ್ಮ ನೆನಪುಗಳೇ ಹೀಗೆ... ಯಾವುದನ್ನು ನಾವು ನೆನಪಿಸಿಕೊಳ್ಳಬೇಕೋ ಅದನ್ನು ಮರೆತುಬಿಡುತ್ತೇವೆ, ಯಾವುದನ್ನು ಮರೆಯಬೇಕೋ ಅದನ್ನು ಪದೇ ಪದೇ ನೆನಪಿಸಿಕೊಳ್ಳುತ್ತಿರುತ್ತೇವೆ. ಇದಕ್ಕೆ ಕಾರಣಗಳು ಸಾಕಷ್ಟು ಇವೆ. ಮೊನ್ನೆ ತಾನೇ ನಡೆದ ಮುಂಬಾಯಿ ಭಯಾನಕ ಹಿಂಸೆಯ ಕಾರಣವೋ ಅಥವಾ ದಿವ್ಯ ನಿರ್ಲಕ್ಷ್ಯೆಯೋ ಅಂತೂ ದಿವಂಗತರಾದ ಮಾಜಿ ಪ್ರಧಾನ ಮಂತ್ರಿ ಶ್ರೀ ವಿ.ಪಿ.ಸಿಂಗ್ ಈಗಾಗಲೇ ನಮ್ಮ ನೆನಪಿನ ಪುಟಗಳನ್ನು ಸೇರಿಯಾಗಿದೆ. ಹೀಗಿರುವಾಗ ಆ ವ್ಯಕ್ತಿಯನ್ನು ಮತ್ತೆ ನೆನಪಿಸಿಕೊಂಡು ಸಂತಾಪ ಪಡುವುದರ ಅಗತ್ಯವೇನು?

ವಿ.ಪಿ.ಸಿಂಗ್‌ರವರು ಸತ್ತದ್ದರಿಂದ ಈ ದೇಶಕ್ಕೆ ನಷ್ಟವೇನೂ ಆಗಿಲ್ಲ ಎಂದು ಒಬ್ಬ ಕಿರಾತಕ ತನ್ನ ಅದುಮಿಟ್ಟ ದ್ವೇಷವನ್ನು ಬರವಣಿಗೆಯಲ್ಲಿ ಕಾರಿಕೊಂಡರೆ ಮತ್ತೊಬ್ಬರು 'ಮಂಡಲ್ ವರದಿಯ ಜಾರಿಯಿಂದ ದಲಿತರಿಗೆ ಮತ್ತು ಆದಿವಾಸಿಗಳಿಗೆ ಮತ್ತಷ್ಟು ಅನ್ಯಾಯವಾಯಿತು' ಎಂದು ಫೋನಾಯಿಸಿದರು. ಈ ಎರಡು ರೀತಿಯ ಪ್ರತಿಕ್ರಿಯೆಗಳ ಹಿಂದೆ ಈ ದೇಶದಲ್ಲಿ ಸಂವಿಧಾನಾತ್ಮಕವಾಗಿ ತಾರತಮ್ಯವನ್ನು ನಿಭಾಯಿಸಿಕೊಳ್ಳುತ್ತಿರುವ ಸಕಾರಾತ್ಮಕ ಕ್ರಿಯೆ/ಮೀಸಲಾತಿಯನ್ನು ದೂಷಿಸುವ ಕಸರತ್ತು ಅಡಗಿದೆಯಲ್ಲವೇ? ಈ ನಿಲುವನ್ನು ನಿವೇದಿಸಿಕೊಳ್ಳಲು ಮಂಡಲ್ ವರದಿಯನ್ನು ಜಾರಿಗೊಳಿಸಿದ ರಾಜಕೀಯ ಧುರೀಣರಾದ ವಿ.ಪಿ.ಸಿಂಗ್‌ರವರನ್ನು ಬೈಯ್ಯುವುದು. ಹೀಗೆ ಮಾಡುವುದರ ಮೂಲಕ ಮೇಲಿನ ಪ್ರತಿಕ್ರಿಯೆಗಳಿಗೆ ಬೆಂಬಲಿಗರನ್ನು ಪಡೆದುಕೊಳ್ಳುವುದು. ಹಾಗಾದರೆ ಮೇಲಿನ ಪ್ರತಿಕ್ರಿಯೆಗಳಲ್ಲಿ ಏನಾದರೂ ಸತ್ಯ ಅಡಗಿದೆಯಾ ನೋಡೋಣ: ಮೊದಲಿನ ಪ್ರತಿಕ್ರಿಯೆಯಲ್ಲಿ ಈ ದೇಶಕ್ಕೆ ವಿ.ಪಿ.ಸಿಂಗ್ ಸತ್ತದ್ದರಿಂದ ಏನೂ ನಷ್ಟವಿಲ್ಲ ಎನ್ನುವುದು. ಈ ಹೇಳಿಕೆಯನ್ನು ಮತ್ತೊಂದು ರೀತಿಯಲ್ಲಿ ಬರೆಯೋಣ – 'ವಿ.ಪಿ.ಸಿಂಗ್ ಸತ್ತದ್ದರಿಂದ ಯಾರಿಗೆ ಖುಷಿಯಾಗಿರಬೇಕು?'. ಬಹುಶಃ ಮಂಡಲ್ ವರದಿಯನ್ನು ವಿರೋಧಿಸಿದ, ಈಗಲೂ ವಿರೋಧಿಸುತ್ತಿರುವವರೆಲ್ಲರಿಗೆ ನಿಜವಾಗಿಯೂ ವಿ.ಪಿ.ಸಿಂಗ್ ಸತ್ತದ್ದರಿಂದ ನೆಮ್ಮದಿಯೆನಿಸಿರಬೇಕು. ಇದಕ್ಕೂ ಕಾರಣಗಳನ್ನು ಹುಡುಕುವುದು ಕಷ್ಟವೇನಲ್ಲ. ಪ್ರಸ್ತುತ ವಿದ್ಯಮಾನಗಳಲ್ಲಿ ವ್ಯಕ್ತಿ ಸಾಧನೆಯೇ ಬಹುಮುಖ್ಯ ಎಂದು ಭಾವಿಸಿರುವ ಕುಲೀನ ಜನ ಮತ್ತು ಅದನ್ನು ಬೆಂಬಲಿಸುವ ಜಾತಿಗಳೆಲ್ಲವೂ ಸಹ ಯಾವುದೇ ರೀತಿಯ ತಾರತಮ್ಯವನ್ನು ಸರಿಪಡಿಸಿಕೊಳ್ಳಲು ಅಥವಾ ಅತ್ತಕಡೆ ಯೋಚಿಸಲೂ ಸಹ ಸಿದ್ಧರಿರುವುದಿಲ್ಲ. ಆದ ಕಾರಣ ಯಾವುದೇ ರಾಜಕಾರಣಿ ತಾರತಮ್ಯ ಕುರಿತು ಮಾತನಾಡಿದಲ್ಲಿ ಅಥವಾ ಅದರ ವಿರುದ್ಧ ಸಕಾರಾತ್ಮಕ ಕ್ರಿಯೆಗೆ ಮುಂದಾದಲ್ಲಿ ಆ ರಾಜಕಾರಣಿಯ ವಿರುದ್ಧ ಗೂಬೆ ಕೂರಿಸುವುದು ಹೊಸದೇನೂ ಅಲ್ಲ. ಅಲ್ಲದೆ ಯಾವುದೇ ನಿಲುವು ಸಹ ಅಪೊಲಿಟಿಕಲ್ ಏನು ಅಗಿರುವುದಿಲ್ಲ ತಾನೇ? ಹೀಗಿರುವಾಗ ವಿ.ಪಿ.ಸಿಂಗ್ ಜಾರಿಗೊಳಿಸಿದ ಮಂಡಲ್ ವರದಿಯಿಂದ ಹಿಂದುಳಿದ ಜಾತಿ ವರ್ಗಗಳ ಜನ ತಮಗೆ ದಕ್ಕಬೇಕಾದ ನ್ಯಾಯವನ್ನು ಪಡೆದುಕೊಂಡಿದ್ದು ಒಂದು ದೊಡ್ಡ ರಾಜಕಾರಣವೇ ಸರಿ. ಇದು ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲ್ಲುವುದಕ್ಕಿಂತಲು ಹೆಚ್ಚಿನ ಹೋರಾಟವೇ ಆಗಿತ್ತು ಎನ್ನುವುದರಲ್ಲಿ ಅತಿಶಯೋಕ್ತಿಯೇನಿಲ್ಲ ಬಿಡಿ. ಈ ಕಾರಣದಿಂದ ವಿ.ಪಿ.ಸಿಂಗ್ ಕುಲೀನ ಜಾತಿಗಳ ಸಹಜೀಕೃತ ಐಶರಾಮಿ ಬದುಕಿಗೆ ಕಂಟಕ ಪ್ರಾಯರೆಂದೇ ಆಗಿರಬೇಕು. ಮತ್ತೊಬ್ಬರನ್ನು ಶೋಷಿಸಿ ತಿನ್ನುವುದನ್ನೇ ಸಂಸ್ಕೃತಿಯನ್ನಾಗಿಸಿಕೊಂಡ ಇಂಥ ಕುಲೀನ ಜಾತಿ ಜನರ ದೇಶಕ್ಕೆ ಖಂಡಿತವಾಗಿಯೂ ವಿ.ಪಿ.ಸಿಂಗ್ ಸತ್ತದ್ದರಿಂದ ಖಂಡಿತವಾಗಿಯೂ ನಷ್ಟವೇನಿದೆ!

ಇನ್ನು ಇಂಥ ಕುಲೀನ ಜನರ ದೇಶದಲ್ಲಿ ವ್ಯಕ್ತವಾದ



ಮತ್ತೊಂದು ಪ್ರತಿಕ್ರಿಯೆಗೆ ಈಗ ಬರೋಣ: 'ಮಂಡಲ್ ವರದಿಯ ಜಾರಿಯಿಂದ ದಲಿತರಿಗೆ ಮತ್ತು ಆದಿವಾಸಿಗಳಿಗೆ ಮತ್ತಷ್ಟು ಅನ್ಯಾಯವಾಯಿತು' ಎನ್ನುವುದು. ಇದು ಹೊರ ನೋಟಕ್ಕೆ ಹೌದು ಎನಿಸುತ್ತದೆ. ಕಾರಣ ಮಂಡಲ್ ವರದಿಯಲ್ಲಿ ದಲಿತರಿಗೆ ಮತ್ತು ಆದಿವಾಸಿಗಳಿಗೆ ಯಾವುದೇ ರೀತಿಯ ಮೀಸಲಾತಿ ಇಲ್ಲವಲ್ಲ. ಆದ್ದರಿಂದ ಇಂದಿಗೂ ಫ್ಯೂಡಲ್ ವ್ಯವಸ್ಥೆಯನ್ನು ಪೋಷಿಸುತ್ತಿರುವ ಹಿಂದುಳಿದ ಜಾತಿಗಳು ಮಂಡಲ್ ವರದಿಯಿಂದ ಮತ್ತಷ್ಟು ಶಕ್ತಿಯನ್ನು ದಲಿತರನ್ನು ಮತ್ತು ಆದಿವಾಸಿಗಳನ್ನು ಶೋಷಿಸುತ್ತಿಲ್ಲವೇ? ಈ ದಲಿತ ಮತ್ತು ಆದಿವಾಸಿ ಜನ ಸಮುದಾಯಗಳಲ್ಲಿ ಅಲ್ಪ ಸ್ವಲ್ಪ ಉಳಿದಿರುವ ಭೂಮಿಯನ್ನು ಸಹ ಈ ಹಿಂದುಳಿದ ಜಾತಿಗಳು ಕಸಿದುಕೊಳ್ಳುತ್ತಿಲ್ಲವೇ? ಈ ಪ್ರಶ್ನೆಗಳು ವಾಸ್ತವವನ್ನು ಹೇಳುವಂತಿದ್ದರೂ ಸಹ ಅವು ಶೋಷಣೆಯನ್ನು ಏಕ ಮುಖವಾಗಿ ವಿವರಿಸಿಕೊಂಡು, ಮೇಲು ಜಾತಿಗಳು ದಲಿತ-ಆದಿವಾಸಿ ಜನ ಸಮುದಾಯಗಳ ಪರ ಇದ್ದಾರೆನ್ನುವುದನ್ನು ಸಾಬೀತು ಮಾಡುತ್ತಲ್ಲದೆ. ಕುಲೀನ ವರ್ಗಗಳಲ್ಲಿ ಇತ್ತೀಚೆಗೆ ಜಾಗ ಪಡೆದುಕೊಂಡಿರುವ ಇತರೆ ಹಿಂದುಳಿದ, ದಲಿತ ವ್ಯಕ್ತಿಗಳೊಡನೆ ಸೇರಿಕೊಂಡು, ಶೋಷಣೆಯಲ್ಲಿ ತಮ್ಮದು ಯಾವುದೇ ಪಾತ್ರವಿಲ್ಲವೆಂದೂ ಸಹ ಪ್ರತಿಪಾದಿಸುತ್ತವೆ ಎನ್ನುವುದನ್ನು ಗಮನಿಸಲೇ ಬೇಕಾಗುತ್ತದೆ.

ಅಲ್ಲದೆ, ಮಂಡಲ್ ವರದಿ ದಲಿತ ಆದಿವಾಸಿಗಳಿಗೆ ಈಗಾಗಲೇ ಇರುವ ಸಂವಿಧಾನಾತ್ಮಕ ಮೀಸಲಾತಿಯನ್ನು ತೆಗೆದು ಹಾಕಲು ಸಾಧ್ಯವೇ? ಖಂಡಿತವಾಗಿಯೂ ಇಲ್ಲ. ಹಾಗಾದರೆ ಮಂಡಲ್ ವರದಿಯನ್ನು ದಲಿತ ವಿರೋಧಿ ಎನ್ನುವುದಾದರೂ ಏಕೆ? ಇಲ್ಲಿ ಶೋಷಿತರಾದ ದಲಿತರು ಯಾವುದೇ ಬಗೆಯ ಅಸಮಾನತೆಯನ್ನು ಮತ್ತು ತಾರತಮ್ಯವನ್ನು ಒಪ್ಪಿಕೊಳ್ಳುವುದಿಲ್ಲ ಎಂಬುದನ್ನು ಗಮನಿಸಬೇಕಾಗುತ್ತದೆ. ಹೀಗಿರುವಾಗ ಯಾವುದೇ ಜಾತಿ, ಮತ್ತೊಂದು ಜಾತಿಯನ್ನು ತಾರತಮ್ಯಕ್ಕೆ ಒಳಪಡಿಸಿದಲ್ಲಿ ಅದನ್ನೂ ಸಹ ದಲಿತರು, ಆದಿವಾಸಿಗಳು ಮತ್ತು ಎಲ್ಲರೂ ಸಹ ವಿರೋಧಿಸಲೇ ಬೇಕಾಗುತ್ತದೆ. ಆದರೆ ಒಂದು ಜಾತಿ ವಂಶ ಪಾರಂಪರ್ಯವಾಗಿ ಅನುಭವಿಸುತ್ತಿದ್ದ ಅನುಕೂಲಗಳನ್ನು ಕಿತ್ತುಕೊಳ್ಳದೆ, ಆಚರಣೆಗೆ ತರುವ ಯಾವುದೇ ತರಹದ ಮೀಸಲಾತಿಯೂ ಸಹ ಅನ್ಯಾಯಕ್ಕೊಳಗಾದ ಜಾತಿ-ಸಮುದಾಯಗಳಿಗೆ ನ್ಯಾಯ ಒದಗಿಸಿತು ಎಂದೇನು ಭಾವಿಸಲಾಗದು.

ಹೀಗಿರುವಾಗ, ಮಂಡಲ್ ವರದಿಯನ್ನು ಜಾರಿಯಾಗಿಸಿದಾಕ್ಷಣ ಅವಕಾಶಗಳು ಯಾರಿಗೆ ತಪ್ಪಿದವು? ಅಥವಾ ಯಾರ ಅವಕಾಶಗಳನ್ನು ಕಸಿದುಕೊಳ್ಳಲಾಯಿತು? ಇಲ್ಲಿ ಯೋಚಿಸಬೇಕಾಗಿರುವ ಸಂಗತಿಯೆಂದರೆ, ಅವಕಾಶಗಳನ್ನು ಯಾರೂ ಸಹ ಹುಟ್ಟಿನಿಂದಲೇ ಪಡೆದುಕೊಂಡು ಬಂದಿರುವುದಿಲ್ಲವಾದ್ದರಿಂದ, ಅವಕಾಶಗಳು ಎಲ್ಲರಿಗೂ ಸಮಾನವಾಗಿ ಸಿಗುವಂತೆ ಮಾಡುವುದು ಸರ್ಕಾರದ ಕರ್ತವ್ಯವಾಗುತ್ತದೆ. ಆದರೆ ಸರ್ಕಾರವನ್ನು ಮುನ್ನಡೆಸುವ ಪ್ರಜಾಪ್ರತಿನಿಧಿಗಳು ಕೆಲವೊಮ್ಮೆ ತಮ್ಮನ್ನು ಆರಿಸಿ ಕಳುಹಿಸಿದ ಪ್ರಜೆಗಳ ಹಿತಾಸಕ್ತಿಗಳನ್ನು ಮರೆತು ಸ್ವ-ಹಿತಾಸಕ್ತಿಗಳನ್ನು ಪೋಷಿಸಿಕೊಳ್ಳುವ ಸಲುವಾಗಿ ಸರ್ಕಾರದ ನೀತಿಗಳನ್ನು ಕುಲೀನರ ಪರವಾಗಿ ಜಾರಿಗೊಳಿಸುವುದು ಅಚ್ಚರಿಯೆನಲ್ಲ. ಆದರೆ ಅಂಥ ವಿದ್ಯಮಾನಗಳ ನಡುವೆಯು ಸಹ ವಿ.ಪಿ. ಸಿಂಗ್‌ರಂಥವರು ಪ್ರಜೆಗಳಿಗೆ ಅಗತ್ಯವಾಗಿ ದೊರಕಲೇ ಬೇಕಾದ ನ್ಯಾಯಕ್ಕಾಗಿ ಕೆಲವೊಂದು ನೀತಿಗಳನ್ನು ಜಾರಿಗೊಳಿಸಿದಾಗ ಅದನ್ನು ಸಹಜವಾಗಿಯೇ ವಿರೋಧಿಸುವವರ ದೊಡ್ಡ ಪಡೆಯೇ ಇರುತ್ತದೆಯಲ್ಲವೇ! ಆದರೆ ಇಲ್ಲಿ ನಾವು ಕೇಳಿಕೊಳ್ಳಬೇಕಾಗಿರುವ ಪ್ರಶ್ನೆಯೆಂದರೆ ಪ್ರಜೆಗಳಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸುವಾಗ ಒಂದು ವೈಜ್ಞಾನಿಕ ಮಾನದಂಡವನ್ನು ಅನುಸರಿಸಬೇಕಲ್ಲವೇ? ಅಂಥ ಮಾನದಂಡವನ್ನು ನೀಡಿದ ಮಂಡಲ್‌ನನ್ನು ಮತ್ತು ಆತನು ಪ್ರತಿಪಾದಿಸಿದ ವಸ್ತು ಸಂಗತಿಗಳನ್ನು ಆಧರಿಸಿ ಒಬಿಸಿ ಮೀಸಲಾತಿಯನ್ನು ಜಾರಿಯಾಗಿಸುವ ಕ್ರಮಕ್ಕಾಗಿ ಸರ್ಕಾರವನ್ನು ಒತ್ತಾಯಿಸಿದಾಗ, ಯಾವ ಪಕ್ಷವಾಗಲೀ, ರಾಜಕಾರಣಿಯಾಗಲೀ ಅದನ್ನು ಜಾರಿಯಾಗಿಸದೆ ಮೀನಾಮೇಷ ಎಣಿಸುತ್ತಿದ್ದಾಗ, ವಿ. ಪಿ. ಸಿಂಗ್ ತನ್ನ ಇಚ್ಛಾಶಕ್ತಿಯಿಂದ ಅದನ್ನು ಜಾರಿಗೊಳಿಸಿದ್ದು ಹಿಂದುಳಿದ ಜಾತಿ-ವರ್ಗಗಳ ಬದುಕಿನಲ್ಲಿ ಒಂದು ಚಾರಿತ್ರಿಕ ಘಟನೆಯೇ ಸರಿ. ಹೀಗಿರುವಾಗ ಮಂಡಲ್ ವರದಿಯ ವೈಜ್ಞಾನಿಕತೆಯನ್ನಾಗಲೀ ಅಥವಾ ಅದನ್ನು ಜಾರಿಗೊಳಿಸಿದ ವಿ.ಪಿ.ಸಿಂಗ್‌ರವರ ರಾಜಕೀಯವನ್ನಾಲೀ ವರ್ತಮಾನದ ಕಾಲದಲ್ಲಿದ್ದುಕೊಂಡು ಪ್ರಶ್ನಿಸಬಹುದಾದರೂ ಸಹ, ಅವರ ಉದ್ದೇಶವನ್ನು ಯಾರೂ ಸಹ ಸಂಶಯಿಸಲಾಗದು. ಕಾಲದಿಂದ ಕಾಲಕ್ಕೆ ಸಮಾಜದಲ್ಲಿರುವ ತಾರತಮ್ಯವನ್ನು ಅಳೆಯಲು ಮತ್ತು ಅದನ್ನು ಸರಿಪಡಿಸಲು ಬಳಸುವ ಮಾನದಂಡಗಳು ಬದಲಾಗಬಹುದು. ಆದರೆ ಮಾನದಂಡಗಳು ಬದಲಾಗುತ್ತದೆಯೆಂದು ತಾರತಮ್ಯದ ಸ್ವರೂಪವನ್ನು ಅರಿಯದೇ ಕೂಡಲಾಗುತ್ತದೆಯೇ? ಇತ್ತೀಚೆಗೆ ನಮ್ಮ ಪ್ರಧಾನ ಮಂತ್ರಿ ಮನಮೋಹನ ಸಿಂಗ್ ಮುಸಲ್ಮಾನ ಬಂಧುಗಳ ಪ್ರಾತಿನಿಧ್ಯದ ಬಗೆಗೆ ಬಂದ ಸಾಚಾರ್ ವರದಿಯ ಅನ್ವಯ ಮೀಸಲಾತಿಯನ್ನು ಜಾರಿಗೊಳಿಸದಿದ್ದರೂ ಸಹ ಅದರ ಬಗ್ಗೆ ಮಾತನಾಡಿದ ಕೂಡಲೇ ಅದರ ವಿರೋಧಗಳು ಸಾಕಷ್ಟು ಕೇಳಿಬಂದವು. ಆದರೆ ಆಗುತ್ತಿರುವ ಶೋಷಣೆಯನ್ನು, ಅನ್ಯಾಯವನ್ನು ಎಷ್ಟು ದಿನ ಮುಚ್ಚಿಡಬಹುದು? ಖಂಡಿತವಾಗಿಯೂ ಆಗದು.

ಪ್ರಜೆಗಳಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸುವಾಗ ಒಂದು ವೈಜ್ಞಾನಿಕ ಮಾನದಂಡವನ್ನು ಅನುಸರಿಸಬೇಕಲ್ಲವೇ? ಅಂಥ ಮಾನದಂಡವನ್ನು ನೀಡಿದ ಮಂಡಲ್‌ರನ್ನು ಮತ್ತು ಅವರು ಪ್ರತಿಪಾದಿಸಿದ ವಸ್ತು ಸಂಗತಿಗಳನ್ನು ಆಧರಿಸಿ ಒಬಿಸಿ ಮೀಸಲಾತಿಯನ್ನು ಜಾರಿಯಾಗಿಸುವ ಕ್ರಮಕ್ಕಾಗಿ ಸರ್ಕಾರವನ್ನು ಒತ್ತಾಯಿಸಿದಾಗ, ಯಾವ ಪಕ್ಷವಾಗಲೀ, ರಾಜಕಾರಣಿಯಾಗಲೀ ಅದನ್ನು ಜಾರಿಯಾಗಿಸದೆ ಮೀನಾಮೇಷ ಎಣಿಸುತ್ತಿದ್ದಾಗ, ವಿ. ಪಿ. ಸಿಂಗ್ ತನ್ನ ಇಚ್ಛಾಶಕ್ತಿಯಿಂದ ಅದನ್ನು ಜಾರಿಗೊಳಿಸಿದ್ದು ಹಿಂದುಳಿದ ಜಾತಿ-ವರ್ಗಗಳ ಬದುಕಿನಲ್ಲಿ ಒಂದು ಚಾರಿತ್ರಿಕ ಘಟನೆಯೇ ಸರಿ. ಹೀಗಿರುವಾಗ ಮಂಡಲ್ ವರದಿಯ ವೈಜ್ಞಾನಿಕತೆಯನ್ನಾಗಲೀ ಅಥವಾ ಅದನ್ನು ಜಾರಿಗೊಳಿಸಿದ ವಿ.ಪಿ.ಸಿಂಗ್ ರವರ ರಾಜಕೀಯವನ್ನಾಲೀ ವರ್ತಮಾನದ ಕಾಲದಲ್ಲಿದ್ದುಕೊಂಡು ಪ್ರಶ್ನಿಸಬಹುದಾದರೂ ಸಹ, ಅವರ ಉದ್ದೇಶವನ್ನು ಯಾರೂ ಸಹ ಸಂಶಯಿಸಲಾಗದು.

ಹಾಗೆಯೇ ಕರ್ನಾಟಕದ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷರಾಗಿರುವ ಡಾ. ಸಿ. ದ್ವಾರಕನಾಥ್‌ರವರು ಸಾಮಾಜಿಕ ನ್ಯಾಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಜಾತಿವಾರು ಜನಗಣತಿಯನ್ನು ಕರ್ನಾಟಕದಲ್ಲಿ ಮಾಡಲು ಪ್ರಯತ್ನಿಸಿದಾಗ ಅದಕ್ಕೆ ಎದುರಾದ ವಿರೋಧಗಳನ್ನು ಸಹ ಈ ನಿಟ್ಟಿನಲ್ಲೇ ಗಮನಿಸಬೇಕಾಗುತ್ತದೆ. ಡಾ. ಸಿ.ಎಸ್.ದ್ವಾರಕನಾಥ್‌ರವರು ಈ ಜಾತಿವಾರು ಜನಗಣತಿಯ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸುವ ಮೊದಲ ಹಂತವಾಗಿ ಬೃಹತ್ ಬೆಂಗಳೂರಿನ ಸುತ್ತಲು ಕಳೆದ ಒಂದು ದಶಕದಿಂದ ಸ್ಥಳೀಯ ಸಂಪನ್ಮೂಲಗಳನ್ನು ಮತ್ತು ಶ್ರಮವನ್ನು ಬಳಸಿ ಕೊಬ್ಬಿ ಬೆಳೆದಿರುವ ಐಟಿ-ಬಿಟಿ ಉದ್ಯಮಗಳಲ್ಲಿ ಕನ್ನಡಿಗರ, ಮತ್ತು ಜಾತಿವಾರು ಅಂಕಿ-ಅಂಶಗಳನ್ನು ಒದಗಿಸಲು ಸುಮಾರು 177 ಕಂಪನಿಗಳಿಗೆ ಪತ್ರ ಬರೆದರು. ಅದಕ್ಕೆ ಬಂದ ಪ್ರತಿರೋಧಗಳನ್ನು ನೋಡಿದಾಗ ನಾವಿನ್ನು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಒಪ್ಪಿಕೊಂಡಿಲ್ಲವೇನೋ ಅನಿಸುತ್ತದೆ. ಅಥವಾ ಪ್ರಜಾಪ್ರಭುತ್ವ ಕೇವಲ ಅಂಥ ಮಾಧ್ಯಮಗಳಿಗಾಗಿಯೇ ಇರುತ್ತದೆ ಎಂಬ ಪೂರ್ವಗ್ರಹೀತದಿಂದ ಯಾರು ಹೊರಬಂದಿಲ್ಲವೇನೋ! ಆದರೆ ಇದ್ಯಾವುದಕ್ಕೂ ದ್ವಾರಕನಾಥ್‌ರವರು ಬಗ್ಗದಿದ್ದಾಗ ಅವರ ಕುರ್ಚಿಯನ್ನೇ ಉರುಳಿಸುವ ಪ್ರಯತ್ನಗಳು ನಡೆಯುತ್ತಿವೆ. ಇದೇ ರೀತಿ ಕರ್ನಾಟಕದಲ್ಲಿ ಹಿಂದೆ ದೇವರಾಜ್ ಅರಸುರವರು ಕ್ರಮ ಕೈಗೊಂಡಿದ್ದರಿಂದರಲ್ಲವೇ ಅನೇಕ ಹಿಂದುಳಿದ ಸಮುದಾಯಗಳು ಒಂದಷ್ಟು ಶಿಕ್ಷಣ, ಉದ್ಯೋಗ ಪಡೆದು ಸಾರ್ವಜನಿಕವಾಗಿ ಅಧಿಕಾರವನ್ನು ಪಡೆಯಲಾರಂಭಿಸಿದ್ದು. ಹಾಗಾಗಿ ಕರ್ನಾಟಕ ರಾಜ್ಯಕ್ಕೆ ಶ್ರೀ ದೇವರಜ್ ಅರಸುರವರು ಹೇಗೋ ಹಾಗೆಯೇ ದಿವಂಗತ ಮಾಜಿ ಪ್ರಧಾನ ಮಂತ್ರಿಯಾಗಿದ್ದ ವಿ.ಪಿ.ಸಿಂಗ್‌ರವರು ಇಡೀ ದೇಶಕ್ಕೆ ಸಾಮಾಜಿಕ ನ್ಯಾಯದ ಪ್ರತೀಕವಾಗಿ, ಕೋಟಿ ಕೋಟಿ ಜನಮಾನಸದಲ್ಲಿ ಮೊಳಗುತ್ತಿದ್ದಾರೆ. ಆದ್ದರಿಂದ ಅಂಥ ಮಹಾನ್ ಕನಸುಗಾರನ ಇಚ್ಛಾಶಕ್ತಿಗೆ ಎಷ್ಟು ಗೌರವ ಸೂಚಿಸಿ ಬರೆದರೂ ಸಹ ಕಮ್ಮಿಯೇ.

ಒಂದು ಸಮುದಾಯದ ಆರ್ಥಿಕ ಚಲನೆ ಮತ್ತು ಸಾಮಾಜಿಕ ಚಲನೆ ಎರಡೂ ಸಹ ಒಟ್ಟೊಟ್ಟಿಗೇ ಸಾಗುವುದೇ ಸಾಮಾಜಿಕ ನ್ಯಾಯದ ಅಂತಿಮ ಗುರಿ. ಆದರೆ ಈ ನಡೆಯನ್ನು ತಡೆಯುವ ಹುನ್ನಾರಗಳು ಇಂದು ಬಹುರೂಪಿತನವನ್ನು ಪಡೆದುಕೊಳ್ಳುತ್ತಲೇ ಜಾತಿಯೂ ಸಹ ತನ್ನ ಹಳೇ ಜಾಡನ್ನೇ ಸಾರ್ವಜನಿಕವಾಗಿ ತುಳಿಯುತ್ತಿದೆ. ಇದಕ್ಕೆ ಅಂತಿಮ ಮಂಗಳಾರತಿಯನ್ನು ಎತ್ತಲು ಅನೇಕ ಮಹನೀಯರು ಹಿಂದಿನಿಂದಲೂ ಸೆಣಸುತ್ತಲೇ ಬಂದಿದ್ದಾರೆ. ಅಂಥವರ ಸಾಲಿನಲ್ಲಿ ತಾರೆಗೆ ಶೋಭಿಸುತ್ತಿರುವವರು ದಿವಂಗತ ಶ್ರೀ ವಿ.ಪಿ.ಸಿಂಗ್‌ರವರು. ಅಂಥವರ ಸಾಲಿನಲ್ಲಿ ಮುಂದೆಯೂ ಅನೇಕರು ಬರಲಿದ್ದಾರೆ ಎನ್ನುವುದೇ ನಮಗೆಲ್ಲಾ ಮತ್ತಷ್ಟು ಭರವಸೆಯನ್ನು ಮೂಡಿಸುವ ಸಂಗತಿಯಾಗುತ್ತದೆ. □


ಕನ್ನಡಕ್ಕೆ
"ಶಾಸ್ತ್ರೀಯ ಭಾಷೆ"
ಸ್ಥಾನಮಾನ :
ಇದಕ್ಕಾಗಿ ಹೋರಾಡಿದ
ಸಮಸ್ತ ಕನ್ನಡಿಗರಿಗೆ
ವಂದನೆ, ಅಭಿನಂದನೆ.
ಕರ್ನಾಟಕ – ಸುಂದರ ನದಿವನಗಳ ನಾಡು. ಕಲೆ ಸಂಸ್ಕೃತಿಗಳ ಬೀಡು. ಕವಿಗಳು, ವಚನಕಾರರು, ದಾಸಶ್ರೇಷ್ಠರುಗಳ ನೆಲವೀಡು. ವೀರ ವನಿತೆಯರ ಪುಣ್ಯಭೂಮಿ. ಮಾದರಿ ಆಡಳಿತದ ಮಾರ್ಗದರ್ಶಿ ರಾಜ್ಯ. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದ ತವರೂರು. ಕರ್ನಾಟಕದ ರಾಜಧಾನಿ ಬೆಂಗಳೂರು ವಿಶ್ವ ವಿಖ್ಯಾತಿಯ ನಗರ. ಇಂತಹ ಭವ್ಯ ಪರಂಪರೆ, ಹಿನ್ನೆಲೆಯ ಭದ್ರ ಬುನಾದಿಯ ಮೇಲೆ
ಸಮೃದ್ಧ ಕರ್ನಾಟಕವನ್ನು ಕಟ್ಟುವ ಸಂಕಲ್ಪ ನಮ್ಮದು
ನಾಡು ನುಡಿಗೆ ವಿಶೇಷ ಕಾರ್ಯಕ್ರಮಗಳು
• ಬೆಂಗಳೂರಿನಲ್ಲಿ ವರನಟ ಡಾ॥ ರಾಜ್‌ಕುಮಾರ್ ಸ್ಮಾರಕ ನಿರ್ಮಾಣಕ್ಕೆ 8 ಕೋಟಿ ರೂ.
• ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನಕ್ಕಾಗಿ 25 ಕೋಟಿ ರೂ.
• ರಾಜ್ಯದ ಗಡಿಜಿಲ್ಲೆಗಳಲ್ಲಿ 4 ಸುವರ್ಣ ಕರ್ನಾಟಕ ಭವನಗಳ ನಿರ್ಮಾಣಕ್ಕೆ 5 ಕೋಟಿ ರೂ.
• ರಾಜ್ಯ ಮಟ್ಟದಲ್ಲಿ ಪ್ರಪ್ರಥಮ ಬಾರಿಗೆ ಸಂತಕವಿ ಕನಕದಾಸರ ಜಯಂತಿ ಆಚರಣೆ. ಕನಕ ಜಯಂತಿಗೆ ಸಾರ್ವತ್ರಿಕ ರಜೆ. ಕನಕದಾಸರ ಜನ್ಮಸ್ಥಳ "ಬಾಡ" ಅಭಿವೃದ್ಧಿಗೆ 1 ಕೋಟಿ ರೂ.
• ಕನ್ನಡದ ಮೇರು ಕೃತಿಗಳು ಮತ್ತು ಡಾ॥ ಬಿ. ಆರ್ ಅಂಬೇಡ್ಕರ್ ಕೃತಿಗಳ ಪುನರ್ ಮುದ್ರಣ.
• ಕೆ. ಪಿ ಪೂರ್ಣಚಂದ್ರ ತೇಜಸ್ವಿ ಸಂಶೋಧನಾ ಕೇಂದ್ರ, ಶಿವಯೋಗಿ ಶಿಶುನಾಳ ಷರೀಫ ... ಮತ್ತು ಸಂಗೊಳ್ಳಿ ರಾಯಣ್ಣ ಜನ್ಮಸ್ಥಳ ಅಭಿವೃದ್ಧಿಗೆ ತಲಾ 1 ಕೋಟಿ ರೂ.
• ಅಲ್ಲಮಪ್ರಭು ಸಾಹಿತ್ಯ ಸಂಶೋಧನಾ ಕೇಂದ್ರ ಸ್ಥಾಪನೆ.
• ಮೈಸೂರಿನಲ್ಲಿ ಸ್ವಾಮಿ ವಿವೇಕಾನಂದರ ಭೇಟಿ ನೆನಪಿಗೆ ಸಾಂಸ್ಕೃತಿಕ ಯುವ ಕೇಂದ್ರ ಸ್ಥಾಪನೆಗೆ 5 ಕೋಟಿ ರೂ.
• ಹಂಪಿ ಉತ್ಸವ, ಕಿತ್ತೂರು ಉತ್ಸವ, ಕದಂಬ ಉತ್ಸವ, ಕರಾವಳಿ ಉತ್ಸವ ಇತ್ಯಾದಿ ಸಾಂಸ್ಕೃತಿಕ ಉತ್ಸವಗಳ ಮೂಲಕ ನಾಡಿನಾದ್ಯಂತ ಕಲೆ ಸಂಸ್ಕೃತಿಗಳ ಪುನರುಜ್ಜೀವನಕ್ಕೆ ಪ್ರೋತ್ಸಾಹ.
• ರಾಜ್ಯೋತ್ಸವ ಪ್ರಶಸ್ತಿ ವಿಜೇತರಿಗೆ ಪ್ರಪ್ರಥಮ ಬಾರಿಗೆ 1 ಲಕ್ಷ ರೂ ನಗದು ಬಹುಮಾನ.
• ಅನಿವಾಸಿ ಕನ್ನಡಿಗರಿಗಾಗಿ "ಅನಿವಾಸಿ ಕನ್ನಡಿಗರ ಕೋಶ". ಸ್ಥಾಪನೆ.
ಕಟ್ಟುವೆವು ನಾವು ಹೊಸ ನಾಡೊಂದನು
ಅಭಿವೃದ್ಧಿಯೇ ಆಡಳಿತ ಮಂತ್ರ
ನಾಡಿನ ಜನತೆಗೆ
53ನೇ ಕರ್ನಾಟಕ ರಾಜ್ಯೋತ್ಸವದ
ಶುಭಾಶಯಗಳು
ಕರ್ನಾಟಕ ವಾರ್ತೆ

ಪೈಪೆ

○ ಬಿ.ರಾಜಣ್ಣ



ಊರಾಚೆಯ ಬೋರೆ ಕಿಳ್ಳಿನ ಕರಿಮಂಟಿಯೆದುರು
ದಕ್ಕಿದೊಂದು ತುಂಡು ದರಕಲಿನಲ್ಲೆ, ನೆಲೆನಿಂತ
ಸಂಸಾರ ದಬ್ಬೆಹುಲ್ಲಿನ ರಗ್ಗು ಹೊದ್ದಂತ
ಹೊರಕೆ ತಾರಾಳೆ ಗುಡ್ಲು !

*   *   *

ಹದವಾರಿದ ಮೇಲುಕ್ಕೆಗೆ ಬಗ್ಗದ
ಹೆಂಟೆ ಹೆಪ್ಪುಗಳ ಬಡಿದು, ಪಟಮಾಡುವ
ಕಾಯಕದಲ್ಲಿ ತಲ್ಲೀನ ; ಬಗರ್‌ಹುಕುಂ
ಭೂಮಾಲೀಕ.

ಅಡ್ಡನೀರಿಂದ ಹರವೇರಿಯ ಬೆಳೆದು
ಬಿಮ್ಮನಸೆ ತಂಗ್ಯಮ್ಮನಿಗೆ, ಸೀರೆಕುಪ್ಪಸ
ಉಡಿಸುವ ಕನಸು, ಕೈಸಾಲ ಕಳೆದು !

ಹನಿಯ ಸಂಗವಿಲ್ಲದೆಯು ಕಮುಗುಡುತ್ತಿದ್ದ
ಹುಡಿಹೆಣ್ಣು : ಅಬ್ಬರದ ಅಂಗ್ಡಿಗೊಬ್ಬರದ
ಸಾವಾಸದಿಂದ, ಬರಿ ಕಾಗದದ ಹೂವು !
ಕಳ್ಳುಗುಂಜುವ ತಂಗಳಿನರೆಹೊಟ್ಟೆತಟ್ಟೆ !
ಕಸುವಾಗುತ್ತಿರುವ ನರವುಡಿದ ಎಳೆರಟ್ಟೆ !
ಕುಪ್ಪೊಲೆಯ 'ರಸಪಾಕ'ಕ್ಕೆ ಮುರುಕು ಮಂಕರಿಯಲ್ಲಿ
ಪುಳ್ಳೆ ಜೋಡಿಸುವ ಧಾವಂತ ಹೆಂಡತಿ : ಬೇಲಿಸಂದಿಯಲ್ಲಿ !
ತಂಗಳಗುಳೂ ದಕ್ಕದ ಗರತಿಗೆ
ಇಲ್ಲ, ಮದುವೆಮೊದಲಿನ ಚುರುಕು !

ಅದೋ ಅಲ್ಲಿ, ಗೊಬ್ಬಳ್ಳಿ ನೆರಳಲ್ಲಿ
ತುರಿದ ಕಂಟಕ್ಕೆ ಪುರಿಕಾಳ ಹಾಕಿ
ಕುಕ್ಕುರಿಸಿದ ಕಂಕುಳ ಹೈದ
ಸುತ್ತೇಳು ಸೀಮೆಯಾಳುವ ಭಾವೀ ಅಮುಲ್ದಾರ !

*   *   *   *

ಹರುಬದುವಿನ ಹಂಚಿಗುತ್ತಿಯ ನಡುವೆ
ಗೆದ್ದ ಲಿಂಜಿನಿಯರುಗಳು ಕಟ್ಟಿದ
ನಾಗಪ್ಪನಗುಡಿ !
ಬಾಡೂಟಕ್ಕೆ ಅನಿಯೆರೆದ ಬುಡ ಕೆದರುವ
ಮರಿಕೋಳಿ !
ಅಡ್ಡಬದುವಿನಲ್ಲಿ ತೊಡೆಸೋತ ಉಕ್ಕೆಗಿಡ್ಡಕ್ಕೆ
ಒಣಸವುಡಿನ ಸುಖ !
ಒಬ್ಬೆಯ ಹಣ್ಣೆಲೆಯನ್ನೇ ಗಬಗಬ ಮುಕ್ಕುವ
ವಾರಕ್ಕೆ ಬಿಟ್ಟ ಗಬ್ಬದ ಆಡು : ಹಬ್ಬದ ಬಾಬು.

*   *   *   *

ನಾಗಪ್ಪನ ಗುಡಿಯ ಮುಡಿಯಲ್ಲಿ ಮುತ್ತನೆ ಮೂಡಿ
ತೂಗಾಡಲು, ಕಪ್ಪು ಮಿಂಚಿನ ಸೆಡೆ !
ದುಡು ದುಡು ದುಡು ದೌಡು ಕುಕ್ಕುಟ ಹಿಂಡು !
ಇಟ್ಟ ಪುರಿಕಾಳು ಸಾಲದ ಪುಟ್ಟ
ಪುಟು ಪುಟು ತಾನೂ ದೌಡು
ಕೋಳಿ ಬಿಟ್ಟೋಡಿದ ಊಟಕ್ಕೆ !

ಜಾಗತೀಕರಣದ ಜಾಲ:
ರೈತರ ಆತ್ಮಹತ್ಯೆ, ಮತ್ತು ಹಣದುಬ್ಬರ

ಡಾ. ಸಣ್ಣರಾಮ

> **ಜಾಗತೀಕರಣದಿಂದ ಇಡೀ ಭಾರತೀಯ ಸಮುದಾಯವೇ ವ್ಯಾಪಾರದ ಮನೆಯಂತಾಗಿದೆ. ಕೃಷಿ, ಶಿಕ್ಷಣ, ಆರೋಗ್ಯ ಕಡೆಗೆ ಗಂಡ ಹೆಂಡಿರ ಸಂಬಂಧಗಳು ವ್ಯಾಪಾರದ ಸರಕಾಗಿದೆ. ಪ್ರತಿಯೊಬ್ಬ ವ್ಯಕ್ತಿಯು ಹಣದ ಹಿಂದೆ ಬಿದ್ದಿದ್ದಾನೆ. ಹೇಗಾದರೂ ಮಾಡಿ ಹಣ ಸಂಪಾದನೆ ಮಾಡಬೇಕು. ಕೋಟಿ ಕೋಟಿ ಲೂಟಿ ಮಾಡಬೇಕು ಎಂಬುದೇ ಅವನ ಕಟ್ಟಕಡೆಯ ಆಸೆಯಾಗಿದೆ. ರೈತರು ಇದಕ್ಕೆ ಹೊರತೇನೂ ಅಲ್ಲ. ತಕ್ಷಣಕ್ಕೆ ದುಡ್ಡು ಮಾಡುವ ಭರಾಟೆಯಲ್ಲಿ ಸಾಂಪ್ರದಾಯಿಕ ಕೃಷಿಯನ್ನು ಬಿಟ್ಟು ಆಧುನಿಕ ಕೃಷಿ ವಿಧಾನದ ಕಡೆ ದಾಪುಗಾಲು ಹಾಕಿದ್ದಾರೆ. ಸಹಜ ರೋಗ ನಿರೋಧಕ ಶಕ್ತಿಯ ದೇಸಿ ತಳಿಗಳನ್ನು ಬಿಟ್ಟು ಹೈಬ್ರಿಡ್ ತಳಿಯ ಬೀಜಗಳನ್ನು ಬಳಸುತ್ತಿದ್ದಾರೆ. ರಾಸಾಯನಿಕ ಗೊಬ್ಬರಕ್ಕೆ ಶರಣಾಗಿದ್ದಾರೆ. ಆಹಾರ ಧಾನ್ಯಗಳಿಂದ ಲಾಭ ಕಡಿಮೆ ಎಂದು ವಾಣಿಜ್ಯ ಬೆಳೆಯಡೆಗೆ ಆಕರ್ಷಿತರಾಗುತ್ತಿದ್ದಾರೆ.**

ಜಾಗತೀಕರಣ ಒಂದು ವಿಷವೃಕ್ಷವಿದ್ದಂತೆ. ಅದರ ಅನಂತ ಫಲಗಳ ಪರಿಣಾಮ ಇಂದು ಭಾರತದ ಮೇಲಾಗುತ್ತಿದೆ. ಜಾಗತೀಕರಣ ಪ್ರವೇಶಿಸುತ್ತಲೆ ನಮ್ಮಿಂದಿಯ ಭಾರತೀಯ ಸಮಾಜದಲ್ಲಿ ದುರಂತದ ಸರಮಾಲೆ ಪ್ರಾರಂಭವಾಯಿತು. ವಿಚಾರವಂತರ ತೀವ್ರ ಪ್ರತಿರೋಧದ ನಡುವೆಯೂ ಈ ದೇಶದ ಭ್ರಷ್ಟರಾಜಕಾರಣಿಗಳು, ಲಾಭಕೋರ ಬೃಹತ್ ಉದ್ಯಮಿಗಳು, ಮೇಲುಶ್ರೇಣಿಯ ಅಧಿಕಾರಿಗಳ ಫಲವಾಗಿ ಭಾರತದ ಬಹುಕೋಟಿ ಜನಗಳು ಜಾಗತೀಕರಣದ ದುರಂತದ ಫಲ ಉಣ್ಣುವಂತಾಗಿದೆ. ಸಾಲದ ಬಾಧೆಯನ್ನು ತಾಳದೆ, ರಸಗೊಬ್ಬರ ಬೀಜಗಳು ಸಕಾಲಕ್ಕೆ ದೊರೆಯದೆ, ಸಮೂಹ ಸನ್ನಿಗೆ ಒಳಗಾದವರಂತೆ ರೈತರು ಹುಳಹುಪ್ಪಟೆಗಳಂತೆ ಪಟಪಟನೆ ಸಾಯುತ್ತಿದ್ದಾರೆ. ಹಣದುಬ್ಬರ ಗಗನಕ್ಕೇರಿದೆ. ಇದ್ಯಾವುದಕ್ಕೂ ಉತ್ತರವಿಲ್ಲದ ಸರ್ಕಾರ ಪೆಟ್ರೋಲ್, ಡೀಸಲ್ ದರವನ್ನು ಏರಿಸಿ ಕೈಕಟ್ಟಿ ಕುಳಿತುಕೊಂಡಿದೆ.

ಜಾಗತೀಕರಣದಿಂದ ಇಡೀ ಭಾರತೀಯ ಸಮುದಾಯವೇ ವ್ಯಾಪಾರದ ಮನೆಯಂತಾಗಿದೆ. ಕೃಷಿ, ಶಿಕ್ಷಣ, ಆರೋಗ್ಯ ಕಡೆಗೆ ಗಂಡ ಹೆಂಡಿರ ಸಂಬಂಧಗಳು ವ್ಯಾಪಾರದ ಸರಕಾಗಿದೆ. ಪರಿಣಾಮ ಭಾರತದ ಪ್ರತಿಯೊಬ್ಬ ವ್ಯಕ್ತಿಯು ಹಣದ ಹಿಂದೆ ಬಿದ್ದಿದ್ದಾನೆ. ಹೇಗಾದರೂ ಮಾಡಿ ಹಣ ಸಂಪಾದನೆ ಮಾಡಬೇಕು. ಕೋಟಿ ಕೋಟಿ ಲೂಟಿ ಮಾಡಬೇಕು ಎಂಬುದೇ ಅವನ ಕಟ್ಟ ಕಡೆಯ ಆಸೆಯಾಗಿದೆ. ರೈತರು ಇದಕ್ಕೆ ಹೊರತೇನೂ ಅಲ್ಲ. ತಕ್ಷಣಕ್ಕೆ ದುಡ್ಡು ಮಾಡುವ ಭರಾಟೆಯಲ್ಲಿ ಸಾಂಪ್ರದಾಯಿಕ ಕೃಷಿಯನ್ನು ಬಿಟ್ಟು ಆಧುನಿಕ ಕೃಷಿ ವಿಧಾನದಕಡೆ ದಾಪುಗಾಲು ಹಾಕಿದ್ದಾರೆ. ಸಹಜ ರೋಗ ನಿರೋಧಕ ಶಕ್ತಿಯ ದೇಸಿ ತಳಿಗಳನ್ನು ಬಿಟ್ಟು ಹೈಬ್ರಿಡ್ ತಳಿಯ ಬೀಜಗಳನ್ನು ಬಳಸುತ್ತಿದ್ದಾರೆ. ಕೊಟ್ಟಿಗೆ ಸೊಪ್ಪಿನ ಗೊಬ್ಬರಗಳನ್ನು ಬಿಟ್ಟು ರಸಾಯನಿಕ ಗೊಬ್ಬರಕ್ಕೆ ಶರಣಾಗಿದ್ದಾರೆ. ಕೀಟನಿಯಂತ್ರಣಕ್ಕೆ ತಿನ್ನುವ ಧಾನ್ಯಗಳ ಮೇಲೆ ವಿಷವನ್ನು ಸಿಂಪಡಿಸುತ್ತಿದ್ದಾರೆ. ಆಹಾರ ಧಾನ್ಯಗಳಿಂದ ಲಾಭ ಕಡಿಮೆ ಎಂದು ವಾಣಿಜ್ಯ ಬೆಳೆಯಡೆಗೆ ಆಕರ್ಷಿತರಾಗುತ್ತಿದ್ದಾರೆ. ಮೊದಮೊದಲು ಅಲ್ಪ-ಸ್ವಲ್ಪ ಹತ್ತಿ-ಕಬ್ಬುಗಳನ್ನು ವಾಣಿಜ್ಯ ಬೆಳೆಯಾಗಿ ಬೆಳೆಯುತ್ತಿದ್ದವರು ಅವುಗಳ ಕಷ್ಟದ ನಿರ್ವಹಣೆ, ಧಾರಣೆಯಲ್ಲಿ ಏರಿಳಿತಗಳಿಂದ ಅವುಗಳನ್ನು ಬೆಳೆಯುವುದು ನಿಲ್ಲಿಸಿ ಮುಸುಕಿನ ಜೋಳ ಮತ್ತು ಆಲೂಗಡ್ಡೆ ಕಡೆಗೆ ತಿರುಗಿದ್ದಾರೆ. ಇಂದು ಕರ್ನಾಟಕದ ಬಹು ಪಾಲು ಭಾಗಗಳಲ್ಲಿ ಮುಸುಕಿನ ಜೋಳ ಮತ್ತು ಆಲೂಗಡ್ಡೆ ಮುಖ್ಯ ಬೆಳೆಯಾಗಿದೆ. ಕಾಲಕಾಲಕ್ಕೆ ಮಳೆ ಚೆನ್ನಾಗಿ ಆದರೆ ಧಾರಣೆಯು ತಕ್ಕಮಟ್ಟಿಗೆ ಸಿಗುವುದರಿಂದ ರೈತರಿಗೆ ಇದರಿಂದ ನಾಲ್ಕು ಕಾಸು ಗಿಟ್ಟುತ್ತದೆ. ರಾಗಿ, ಜೋಳ ಕಡೆಗೆ ಭತ್ತ ಬೆಳೆಯುವ ಭೂಮಿಯಲ್ಲೆಲ್ಲಾ ಇಂದು ಮುಸುಕಿನಜೋಳದ ಬೆಲೆ ಆವರಿಸಿದೆ. ಮುಸುಕಿನ ಜೋಳ ಬಿತ್ತುವಾಗ ರೈತರು ಕಾಂಪ್ಲೆಕ್ಸ್ ಗೊಬ್ಬರದ ಹೊರತಾಗಿ ಇನ್ನಾವುದೇ ರಾಸಾಯನಿಕ ಗೊಬ್ಬರವನ್ನು ಬಳಸುವುದಿಲ್ಲ. ಆದ್ದರಿಂದಲೇ ಈ ವರ್ಷದ ಮುಂಗಾರಿನ ಹಂಗಾಮಿನಲ್ಲಿ ಯೂರಿಯಾ. ಡಿ.ಎ.ಪಿ ಸೂಪರ್ ಗೊಬ್ಬರಗಳು ಸಾಕಷ್ಟಿದ್ದರೂ. ಕಾಂಪ್ಲೆಕ್ಸ್ ಗೊಬ್ಬರಕ್ಕಾಗಿ ರೈತರು ಪರದಾಡಿ ಕಟ್ಟಕಡೆಗೆ ಪೊಲೀಸರ ಗುಂಡೇಟಿಗೆ ರಕ್ತವನ್ನು ಚೆಲ್ಲುವಂತಾದದ್ದು.

ಕರ್ನಾಟಕದಲ್ಲಿ ರೈತರು ಮುಖ್ಯ ಬೆಳೆಯಾಗಿ ಮುಸುಕಿನ ಜೋಳವನ್ನು ಬೆಳೆಯುತ್ತಿರುವುದರಿಂದ ರಾಗಿ, ಜೋಳ, ನವಣೆ, ಸಜ್ಜೆಯಂತಹ ಆಹಾರ ಧಾನ್ಯಗಳ ಬೆಳೆ ಕ್ಷೀಣಗೊಂಡಿದೆ. ಇನ್ನು ಭತ್ತದ ಬೆಳೆಗೆ ಏನೆಲ್ಲಾ ಸಂಕಷ್ಟಗಳು. ರಸಾಯನಿಕ ಗೊಬ್ಬರದ ಹೇರಳ ಬಳಕೆಯಿಂದ ಭತ್ತದ ಗದ್ದೆಗಳೆಲ್ಲ ನಿಸ್ಸಾರಗೊಂಡಿವೆ. ಎಕರೆ ಒಂದಕ್ಕೆ ನಲವತ್ತು ಕ್ವಿಂಟಲ್ ಬೆಳೆಯುತ್ತಿದ್ದ ಭತ್ತ ಇಂದು ಎಷ್ಟೇ ರಸಾಯನಿಕ ಗೊಬ್ಬರ ಹಾಕಿ ಕೀಟನಿರೋಧಕಗಳನ್ನು ಸಿಂಪಡಿಸಿದರೂ, ಎಕರೆಗೆ ೧೫ ಕ್ವಿಂಟಲ್ ಬೆಳೆಯುವುದು ಕಷ್ಟವಾಗಿದೆ. ಕೂಲಿಯಾಳುಗಳ ಕೊರತೆ, ಕೀಟಬಾಧೆ, ಮಳೆಯ ಅಸ್ಥಿರತೆಯಿಂದ ಭತ್ತದ ಕಣಜವಾಗಿದ್ದ ಮಲೆನಾಡಿನ ಸೀಮೆಯ ಗದ್ದೆಗಳಲ್ಲಿ ಅಡಿಕೆಯ ತೋಟಗಳು ತಲೆ ಎತ್ತುತ್ತಿವೆ. ಒಟ್ಟರೆಯಾಗಿ ಭತ್ತ, ರಾಗಿ, ಜೋಳ, ಮೆಣಸಿನ ಕಾಯಿ, ನವಣೆ, ಸಜ್ಜೆಯಂತಹ ಆಹಾರ ಧಾನ್ಯಗಳ ಬೆಳೆಯ ಉತ್ಪನ್ನ ಕಡಿಮೆಯಾಗಿ, ಮುಸುಕಿನ ಜೋಳ ಹತ್ತಿ, ಆಲೂಗಡ್ಡೆ ಮೊದಲಾದ ವಾಣಿಜ್ಯ ಬೆಳೆ ಹೆಚ್ಚಾಗಿರುವುದು ಹಣದುಬ್ಬರಕ್ಕೆ ಪ್ರಧಾನವಾದ ಕಾರಣವಾಗಿದೆ. ಉತ್ಪನ್ನ ಕಡಿಮೆಯಾದಾಗ ಬೆಲೆ ದುಪ್ಪಟಾಗುವುದು ಸಹಜ. ದುರಂತವೆಂದರೆ ಆಹಾರ ಧಾನ್ಯಗಳ ಬೆಲೆ ಹೆಚ್ಚಳದಿಂದಾದ ಲಾಭ ರೈತನಿಗಾಗದೆ ಮಧ್ಯವರ್ತಿಗಳು, ವ್ಯಾಪಾರಸ್ಥರ ಪಾಲಾಗುತ್ತಿದೆ. ಇಲ್ಲಿಯೂ ಕೂಡ ರೈತ ನತದೃಷ್ಟನೇ ಸರಿ.

ರೈತನ ಸಮಸ್ಯೆಯ ಪರಿಹಾರದಲ್ಲಿ



ನಾಡಿನ ಸಮ ಸ್ಯೆಯ ಪರಿಹಾರವೂ ಇದೆ. ರೈತನ ಸಮಸ್ಯೆಗೆ ಪರಿಹಾರ ವೆಂದರೆ ಮೊಟ್ಟಮೊದಲು ಕೃಷಿಗೆ ದೇಸಿ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸುವುದು. ಅಂದರೆ ಕೊಟ್ಟಿಗೆ ಗೊಬ್ಬರ, ಸೊಪ್ಪಿನ ಗೊಬ್ಬರ ಮತ್ತು ಎರೆಹುಳುಗೊಬ್ಬರ ಉತ್ಪತ್ತಿಗೆ ಹೆಚ್ಚಿನ ಪ್ರೋತ್ಸಾಹ ನೀಡುವುದು. ಎರಡನೆಯದು ಸಾಂಪ್ರ ದಾಯಿಕ ರೀತಿಯಲ್ಲಿ ಬೆಳೆದ ಧಾನ್ಯಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವುದು. ಮೂರನೆಯದು ರೈತರು ಬೆಳೆ ಯುವ ಬೆಳೆಗೆ ತಗಲುವ ಖರ್ಚನ್ನು ಲೆಕ್ಕಹಾಕಿ ಅದರ ಮೇಲೆ ಶೇ.೧೦ ರಷ್ಟು ಲಾಭವನ್ನು ಇಟ್ಟು ಸರ್ಕಾರ ಬೆಲೆ ಯನ್ನು ನಿಗಧಿಪಡಿಸಬೇಕು. ದೇಶದಲ್ಲಿ ತಾನು ಉತ್ಪತ್ತಿ ಮಾಡುವ ಉತ್ಪನ್ನಕ್ಕೆ ಬೆಲೆ ಕಟ್ಟದ ಏಕೈಕ ವ್ಯಕ್ತಿ ಅಂದರೆ ರೈತ. ರೈತರು ಬೆಳೆಯುವ ದವಸ ಧಾನ್ಯಗಳಿಗೆ ತಗಲುವ ವೆಚ್ಚದ ಅಂದಾಜಿಲ್ಲದೆ ಬಿಳಿಕಾಲರಿನ ಜನರ ಮನಸ್ಸಿಗೆ ಬಂದಂತೆ ಬೆಲೆ ನಿಗಧಿ ಮಾಡುವುದರಿಂದ ರೈತರಿಗೆ ಅನ್ಯಾಯವಾಗುತ್ತದೆ. ಬೆಂಬಲ ಬೆಲೆಗೆ ಧಾನ್ಯಗಳನ್ನು ಖರೀದಿಸಿ. ಸಾರ್ವಜನಿಕರಿಗೆ ಸಬ್ಸಿಡಿ ದರದಲ್ಲಿ ವಿತರಿಸಿದರೆ ರೈತರು ಮತ್ತು ಕೆಳವರ್ಗದವರಿಗೆ ಏಕಕಾಲದಲ್ಲಿ ಅನುಕೂಲಕಾರಿಯಾಗುತ್ತದೆ. ಕಡೆಯದಾಗಿ ಟಿ.ವಿ.,ಪತ್ರಿಕೆ ಮೊದಲಾದ ಮಾಧ್ಯಮಗಳಲ್ಲಿ ರಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಪ್ರಚಾರವನ್ನು ತಕ್ಷಣ ನಿಲ್ಲಿಸಿ, ದೇಸೀಕೃಷಿ ಪದ್ಧತಿಯ ಅನುಕೂಲ ಮತ್ತು ಪರಿಣಾಮಗಳನ್ನು ಪ್ರಚಾರ ಮಾಡಬೇಕು.

ಹಣದುಬ್ಬರಕ್ಕೆ ಪೆಟ್ರೋಲ್-ಡೀಸಲ್ ದರಗಳ ಏರಿಕೆಯೇ ಮುಖ್ಯವಾದ ಕಾರಣ. ಸರಕು ಸಾಗಾಣಿಕೆಯ ವೆಚ್ಚಳ ಸಹಜವಾಗಿಯೇ ಹಣದುಬ್ಬರದ ಮೇಲೆ ಪರಿಣಾಮ ಬೀರುತ್ತದೆ. ಭಾರತ ತೀವ್ರಗತಿಯಲ್ಲಿ ಪ್ರಗತಿ ಹೊಂದುತ್ತಿರುವ ರಾಷ್ಟ್ರ. ಜನಸಂಖ್ಯೆಯಲ್ಲಿ ಜಗತ್ತಿನ ಎರಡನೆಯ ದೊಡ್ಡ ರಾಷ್ಟ್ರ. ಇಷ್ಟು ದೊಡ್ಡ ಸಮುದಾಯದ ಬಳಕೆಗೆ ಹೇರಳವಾಗಿ ಇಂಧನದ ಅವಶ್ಯಕತೆ ಇರುತ್ತದೆ. ನಮ್ಮ ರಾಷ್ಟ್ರದಲ್ಲಿ ಇಂಧನದ ಉತ್ಪನ್ನ ಇಲ್ಲವೆನ್ನುವಷ್ಟು ಕಡಿಮೆ. ಆದ್ದರಿಂದ ಬೃಹತ್ ಪ್ರಮಾಣದ ಇಂದನ ಹೊರ ದೇಶಗಳಿಂದ ಆಮದಾಗಲೇಬೇಕು. ಪೂರ್ಣಪ್ರಮಾಣದಲ್ಲಿ ತೈಲಕ್ಕೆ ಕೊಲ್ಲಿ ರಾಷ್ಟ್ರಗಳನ್ನೇ ಅವಲಂಬಿಸಿಕೊಂಡಿರುವುದೆಂದರೇ ಅಮೇರಿಕಾದ ಎಲ್ಲ ಕುತಂತ್ರಗಳಿಗೆ ತಲೆಕೊಡುವುದೆಂದೇ ಅರ್ಥ. ಜಗತ್ತಿನಲ್ಲಿ ತೀವ್ರ ಅಭಿವೃದ್ಧಿ ಹೊಂದುತ್ತಿರುವ ಚೀನಾ ಮತ್ತು ಭಾರತದ ಮೇಲೆ ಅಮೇರಿಕದ ಕಣ್ಣು ಇದ್ದೇ ಇದೆ. ಈ ಎರಡೂ ರಾಷ್ಟ್ರಗಳು ಲಕ್ಷಾಂತರ ಕೋಟಿ ರೂಪಾಯಿಗಳನ್ನು ಕೇವಲ ತೈಲದ ಅಮದಿಗಾಗಿ ಉಪಯೋಗಿಸುವಂತಾದಾಗ ಅವುಗಳ ಅಭಿವೃದ್ಧಿ ಸಾಧ್ಯವಿಲ್ಲವೆಂಬುದನ್ನು ಅರಿತಿರುವ ಅದು ಕುತಂತ್ರದಿಂದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆಯ ಹೆಚ್ಚಳವಾಗುವಂತೆ ನೋಡಿಕೊಳ್ಳುತ್ತದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲದ ಬೆಲೆಯ ಹೆಚ್ಚಳ ದೇಶದಲ್ಲಿ ತೈಲದ ಬೆಲೆ ಹೆಚ್ಚಳಕ್ಕೆ ಕಾರಣವಾಗುತ್ತದೆ. ದೇಶದಲ್ಲಿ ಪೆಟ್ರೋಲ್-ಡೀಸಲ್ ಬೆಲೆ ಏರಿಕೆ ಆದರೆ ಹಣದುಬ್ಬರ ಉಂಟಾಗುತ್ತದೆ. ಒಂದು ಕಡೆ ಪೆಟ್ರೋಲ್ ದರವನ್ನು ಏರಿಸುತ್ತ ಮತ್ತೊಂದೆಡೆಯಲ್ಲಿ ಹಣದುಬ್ಬರವನ್ನು ನಿಯಂತ್ರಿಸುತ್ತೇವೆಂದು ಸರ್ಕಾರ ಹೇಳುತ್ತಿರುವುದು ಹಾಸ್ಯಾಸ್ಪದವೆನಿಸುತ್ತದೆ. ಇದಕ್ಕೆ ಪರ್ಯಾಯ ಇಲ್ಲವೇ? ಖಂಡಿತ ಇದೆ.

ನಮ್ಮ ದೇಶದಲ್ಲಿ ನಮಗೆ ಬೇಕಾಗುವಷ್ಟು ಪೆಟ್ರೋಲ್‌ನ್ನು ಉತ್ಪತ್ತಿ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಇದಕ್ಕೆ ಪರ್ಯಾಯ ಇಂಧನದ ಶೋಧ ಒಂದೇ ಮಾರ್ಗ ಆ ಪರ್ಯಾಯ ಇಂಧನ ಸೋಲಾರ್ ಮಾತ್ರ. ವರ್ಷಕ್ಕೆ ಹತ್ತು ತಿಂಗಳು ಬೆಂಕಿಯಂತೆ ಸುರಿಯುವ ಬಿಸಿಲನ್ನು ಬಳಸಿಕೊಳ್ಳುವುದು. ಆದರೆ ಈ ಸೋಲಾರ್ ತಂತ್ರಜ್ಞಾನವನ್ನು ಭಾರತದಲ್ಲಿ ಅಭಿವೃದ್ಧಿ ಏಕೆ ಪಡಿಸುತ್ತಿಲ್ಲ ಎಂಬುದು ನಿಜಕ್ಕೂ ಸಂಶಯಾಸ್ಪದವಾಗಿದೆ. ಅದಕ್ಕೆ ಬಹುಶಃ ರಾಜಕೀಯ ಪಕ್ಷಗಳ ಸ್ವಾರ್ಥ ಕಾರಣವೇ? ತೈಲಕಂಪನಿಯ ಲಕ್ಷಾಂತರ ಕೋಟಿ ರೂಪಾಯಿಯ ವ್ಯವಹಾರದಲ್ಲಿ ರಾಜಕೀಯ ಪಕ್ಷಗಳ ಲಾಭದ ಪ್ರಮಾಣವು ಹೇರಳವಾಗಿದೆ. ಈ ಸೋಲಾರ್ ತಂತ್ರಜ್ಞಾನದ ಅಭಿವೃದ್ಧಿಯಿಂದ ದೇಶದಲ್ಲಿ ಈ ತೈಲಕಂಪನಿಗಳು ಮುಚ್ಚುವಂತಾದರೆ, ರಾಜಕೀಯ ಪಕ್ಷಗಳಿಗೆ, ರಾಜಕಾರಣಿಗಳಿಗೇನು? ಉಳಿಯುತ್ತದೆ. ಬಹುಶಃ ಸೋಲಾರ್ ತಂತ್ರಜ್ಞಾನದ ಅಭಿವೃದ್ಧಿ ಪಡಿಸುವುದಕ್ಕೆ ನಮ್ಮ ರಾಜಕಾರಣಿಗಳ ಭ್ರಷ್ಟಾಚಾರ ಮುಖ್ಯ ಕಾರಣವಾಗಿರಬಹುದೆ? ಅಮೇರಿಕಾ, ರಷ್ಯಾದಂತಹ ಮುಂದುವರೆದ ರಾಷ್ಟ್ರಗಳಾದರೂ ಸೋಲಾರ್ ತಂತ್ರಜ್ಞಾನವನ್ನು ಅಭಿವೃದ್ಧಿ ಏಕೆ ಪಡಿಸಬಾರದಾಗಿತ್ತು. ಎಂಬುದು ಮತ್ತೊಂದು ಪ್ರಶ್ನೆ. ಅಮೇರಿಕಾ ಜಗತ್ತಿನಲ್ಲಿ ಏಕ ಮೇವಾದಿಪತ್ಯವನ್ನು ಉಳಿಸಿಕೊಳ್ಳಲು ಹಪಾಹಪಿಸುವ ರಾಷ್ಟ್ರ. ಅದಕ್ಕೆ ಕೊಲ್ಲಿ ರಾಷ್ಟ್ರಗಳಿಂದ ಕಡಿಮೆ ದರದಲ್ಲಿ ಕಚ್ಚಾತೈಲ ಹೇರಳವಾಗಿ ಸರಬರಾಜು ಆಗುವುದರಿಂದ ಅದು ಅದರ ಬಗ್ಗೆ ಯೋಚಿಸಲಾರದು.

ನಮ್ಮ ದೇಶದಲ್ಲಿ ನಮಗೆ ಬೇಕಾಗುವಷ್ಟು ಪೆಟ್ರೋಲ್‌ನ್ನು ಉತ್ಪತ್ತಿ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಇದಕ್ಕೆ ಪರ್ಯಾಯ ಇಂಧನದ ಶೋಧ ಒಂದೇ ಮಾರ್ಗ ಪರ್ಯಾಯ ಇಂಧನ ಸೋಲಾರ್ ಮಾತ್ರ. ವರ್ಷಕ್ಕೆ ಹತ್ತು ತಿಂಗಳು ಬೆಂಕಿಯಂತೆ ಸುರಿಯುವ ಬಿಸಿಲನ್ನು ಬಳಸಿಕೊಳ್ಳುವುದು. ಆದರೆ ಈ ಸೋಲಾರ್ ತಂತ್ರಜ್ಞಾನವನ್ನು ಭಾರತದಲ್ಲಿ ಅಭಿವೃದ್ಧಿ ಏಕೆ ಪಡಿಸುತ್ತಿಲ್ಲ ಎಂಬುದು ನಿಜಕ್ಕೂ ಸಂಶಯಾಸ್ಪದವಾಗಿದೆ. ಅದಕ್ಕೆ ಬಹುಶಃ ರಾಜಕೀಯ ಪಕ್ಷಗಳ ಸ್ವಾರ್ಥ ಕಾರಣವೇ? ತೈಲಕಂಪನಿಯ ಲಕ್ಷಾಂತರ ಕೋಟಿರೂಪಾಯಿಯ ವ್ಯವಹಾರದಲ್ಲಿ ರಾಜಕೀಯ ಪಕ್ಷಗಳ ಲಾಭದ ಪ್ರಮಾಣವು ಹೇರಳವಾಗಿದೆ. ಈ ಸೋಲಾರ್ ತಂತ್ರಜ್ಞಾನದ ಅಭಿವೃದ್ಧಿಯಿಂದ ದೇಶದಲ್ಲಿ ಈ ತೈಲ ಕಂಪನಿಗಳು ಮುಚ್ಚುವಂತಾದರೆ, ರಾಜಕೀಯ ಪಕ್ಷಗಳಿಗೆ, ರಾಜಕಾರಣಿಗಳಿಗೇನು? ಉಳಿಯುತ್ತದೆ. ಬಹುಶಃ ಸೋಲಾರ್ ತಂತ್ರಜ್ಞಾನದ ಅಭಿವೃದ್ಧಿ ಪಡಿಸುವುದಕ್ಕೆ ನಮ್ಮ ರಾಜಕಾರಣಿಗಳ ಭ್ರಷ್ಟಾಚಾರ ಮುಖ್ಯ ಕಾರಣವಾಗಿರಬಹುದೆ? ಅಮೇರಿಕಾ, ರಷ್ಯಾದಂತಹ ಮುಂದುವರೆದ ರಾಷ್ಟಗಳಾದರೂ ಸೋಲಾರ್ ತಂತ್ರಜ್ಞಾನವನ್ನು ಅಭಿವೃದ್ಧಿ ಏಕೆ ಪಡಿಸಬಾರದಾಗಿತ್ತು.

ಅಲ್ಲದೇ ಕೊಲ್ಲಿ ರಾಷ್ಟ್ರಗಳಿಂದ ಕಚ್ಚಾತೈಲವನ್ನು ಹೇರಳವಾಗಿ ಅಮದು ಮಾಡಿಕೊಂಡು ಆದಷ್ಟು ಬೇಗ ಆ ರಾಷ್ಟ್ರಗಳನ್ನು ಬರಿದು ಮಾಡುವುದು ಮತ್ತು ಇತರ ಅಭಿವೃದ್ಧಿಶೀಲ ರಾಷ್ಟ್ರಗಳು ಇಂಧನಕ್ಕಾಗಿ ತಮ್ಮ ಎಲ್ಲಾ ಸಂಪನ್ಮೂಲಗಳನ್ನು ಸುರಿದು ಅವುಗಳ ಅಭಿ ವೃದ್ಧಿಯು ಆಗದಿರಲೆಂಬುದು ಅದರ ಉದ್ದೇಶ. ಅಂದರೆ ಒಂದೇ ಏಟಿಗೆ ಎರಡು ಹಕ್ಕಿ ಹೊಡೆಯುವ ತಂತ್ರ ಅದರದ್ದು. ಅದಕ್ಕಾಗಿ ಅದು ಸೋಲಾರ್ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಆಲೋಚಿಸುವುದಿಲ್ಲ. ಉಳಿದ ಜಗತ್ತಿನ ಶ್ರೀಮಂತ ರಾಷ್ಟ್ರಗಳ ದೃಷ್ಟಿ ಇದಕ್ಕಿಂತ ಭಿನ್ನವಾಗಿಲ್ಲ. ಈ ಎಲ್ಲಾ ಕಾರಣಗಳಿಂದ ಶ್ರೀಮಂತ ರಾಷ್ಟ್ರಗಳು ಅವು ಸೋಲಾರನ್ನು ಅಭಿವೃದ್ಧಿಪಡಿಸಲು ಕೈಹಾಕುವುದಿಲ್ಲ. ಭಾರತ ತನ್ನೆಲ್ಲಾ ದೌರ್ಬಲ್ಯಗಳನ್ನು ಬಿಟ್ಟು ಸೋಲಾರ್ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿಕೊಂಡರೇ ಅದರ ಅನೇಕ ಸಮಸ್ಯೆಗಳಿಗೆ ಪರಿಹಾರ ಸಿಕ್ಕಂತಾಗುತ್ತದೆ. ವಾಯು ಮಾಲಿನ್ಯ, ಶಬ್ದಮಾಲಿನ್ಯ ತಡೆಗಟ್ಟಬಹುದಲ್ಲದೆ ಎಲ್ಲಕ್ಕಿಂತ ಹೆಚ್ಚಾಗಿ ಹಣದುಬ್ಬರವನ್ನು ನಿಯಂತ್ರಿಸಬಹುದು.

ಹಣದುಬ್ಬರಕ್ಕೆ ಕೇಂದ್ರ ಮತ್ತು ರಾಜ್ಯಸರ್ಕಾರಿ ನೌಕರರ ವೇತನದ ಹೆಚ್ಚಳದ ಕೊಡುಗೆಯೂ ಇದೆ. ಭಾರತೀಯ ಮಧ್ಯಮವರ್ಗ ಅಂದರೆ ಕೊಳ್ಳುಬಾಕ ರಾಕ್ಷಸ ವರ್ಗ. ವೇತನ ಹೆಚ್ಚಾಗುತ್ತಲೇ ಇವರ ಕೊಳ್ಳುಬಾಕ ಪ್ರವೃತ್ತಿಯು ಬೆಳೆಯುತ್ತದೆ. ಮೊದಲೇ ಭ್ರಷ್ಟ ವ್ಯವಸ್ಥೆಯಲ್ಲಿ ಕೊಳ್ಳೆಹೊಡೆಯುವ ಈ ವರ್ಗಕ್ಕೆ ವೇತನ ಹೆಚ್ಚಾಗುತ್ತಲೇ ಒಂದಕ್ಕೆರಡಾದರೂ ಮಾರ್ಕೆಟಿನಲ್ಲಿ ಬಂದ ವಸ್ತುವನ್ನು ಪ್ರತಿಷ್ಠೆಗಾದರೂ ಕೊಂಡುಕೊಳ್ಳಲು ಹಿಂದೇಟು ಹಾಕುವುದಿಲ್ಲ. ಇದರೊಂದಿಗೆ ಜಾಗತೀಕರಣದ ರೂವಾರಿಗಳಾದ ಐಟಿ-ಬಿಟಿ ಕಂಪನಿಗಳ ಉದ್ಯೋಗಿಗಳ ಮೋಜೆ ಬೇರೆ. ತಿಂಗಳೊಂದಕ್ಕೆ ಲಕ್ಷ-ಲಕ್ಷ ಸಂಪಾದನೆ ಮಾಡುತ್ತ ಸಕುಟುಂಬ ಪರಿವಾರದೊಡನೆ ರೆಸಾರ್ಟ್‌ಗಳಲ್ಲಿಯೇ ಊಟೋಪಚಾರಗಳನ್ನು ಮುಗಿಸುವ ಇವರಿಗೆ ಬೆಲೆ ಏರಿಕೆಯ ಕಾವು ಸಮೀಪ ಸುಳಿಯಲು ಸಾಧ್ಯವಿಲ್ಲ.

ಹಣದುಬ್ಬರದಿಂದ ಕೇಂದ್ರ ರಾಜ್ಯಸರ್ಕಾರಿ ನೌಕರರಿಗೆ, ಐಟಿ-ಬಿಟಿ ಕಂಪನಿ ಉದ್ಯೋಗಸ್ಥರಿಗೆ, ವ್ಯಾಪಾರಿಗಳಿಗೆ ಉದ್ಯಮಪತಿಗಳಿಗೆ, ರಾಜಕಾರಣಿಗಳಿಗೆ ಯಾವ ತೊಂದರೆಯೂ ಇಲ್ಲ. ತೊಂದರೆ ಅನುಭವಿಸುವವರು ಬಡತನ ರೇಖೆಗಿಂತ ಕೆಳಗಿರುವ ಕೊಟ್ಯಾನುಕೋಟಿ ಶ್ರಮಿಕವರ್ಗ. ದಿನ ಒಂದಕ್ಕೆ ಬೆವರು ಬಸಿದು ತರುವ ಐವತ್ತು-ಅರವತ್ತು ರೂಪಾಯಿಗಳಿಗೆ ಒಂದುಹೊತ್ತಿನ ತುತ್ತು ದಕ್ಕಲಾರದು ಎಂದರೆ ಅವರ ಸ್ಥಿತಿ ಏನಾದೀತು. ಅವರ ಹೆಂಡಿರ ಮಕ್ಕಳ ಪಾಡೇನು. ಈ ಎಲ್ಲಾ ಸವಾಲುಗಳನ್ನು ಎದುರಿಸಿ ಹಣದುಬ್ಬರವನ್ನು ನಿಯಂತ್ರಿಸಿ ನಾಡಿನ ಬಹುದೊಡ್ಡ ಸಮುದಾಯದ ಹಿತರಕ್ಷಣೆ ಮಾಡದಿದ್ದರೆ ದೇಶ ಬಹುದೊಡ್ಡ ಸಂಕಷ್ಟಕ್ಕೆ ಗುರಿಯಾಗುತ್ತದೆ. ಪ್ರಭುತ್ವಕ್ಕೆ ಇಚ್ಛಾಶಕ್ತಿ, ಪ್ರಾಮಾಣಿಕತೆ ಮತ್ತು ದಕ್ಷತೆ ಇದ್ದರೆ ಮಾತ್ರ ಸಾಧ್ಯ. ನಮ್ಮ ಇಂದಿನ ಪ್ರಭುತ್ವ ಇದನ್ನು ತೋರುವುದೇ? □

ಖೈರ್‌ಲಂಜಿ ಹೇಳುತ್ತಿದೆ:
ನ್ಯಾಯ ಇನ್ನೂ ಬದುಕಿದೆ !

ನಾ ದಿವಾಕರ

ದಲಿತರ ಮೇಲಿನ ಆಕ್ರಮಣಗಳು ಹೆಚ್ಚಾಗುತ್ತಿರುವ ಈ ಸಂದರ್ಭದಲ್ಲಿ ನ್ಯಾಯಾಲಯಗಳ ಇಂತಹ ತೀರ್ಪುಗಳು ಧನಾತ್ಮಕ ಪರಿಣಾಮಗಳನ್ನು ಉಂಟುಮಾಡುತ್ತವೆ. ದಲಿತ ಸಮುದಾಯದಲ್ಲೂ ನ್ಯಾಯಾಂಗದ ಬಗ್ಗೆ ಹೆಚ್ಚಿನ ವಿಶ್ವಾಸ ಮೂಡುವಲ್ಲಿ ನೆರವಾಗುತ್ತವೆ. ಆದರೆ ವಿಪರ್ಯಾಸವೆಂದರೆ ಈ ತೀರ್ಪನ್ನು ನೀಡುವ ಮುನ್ನ ನ್ಯಾಯಾಲಯವು ಪರಿಗಣಿಸಿರುವ ಅಪರಾಧಗಳು ದಲಿತರ ಮೇಲಿನ ಆಕ್ರಮಣಗಳಿಗೆ ಸಂವಿಧಾನಾತ್ಮಕವಾಗಿ ಸಂಬಂಧಿಸಿರುವ ಕಾನೂನುಗಳಡಿ ಬರುವುದಿಲ್ಲ. ಭಂಡಾರ ನ್ಯಾಯಾಲಯದ ನ್ಯಾಯಾಧೀಶರಾದ ಸನ್ಮಾನ್ಯ ಎಸ್.ಎಸ್. ದಾಸ್‌ರವರು ಸೆಪ್ಟೆಂಬರ್ ೧೫ ೨೦೦೮ರಂದು ನೀಡಿದ ಹೇಳಿಕೆಯಲ್ಲಿ 'ಖೈರಲಂಜಿ ಪ್ರಕರಣವು ಸೇಡಿನ ಕ್ರಮವಾಗಿದ್ದು ಪೋಲೀಸ್ ಪಾಟಿಲ್ ರವರು ಭಾಗಿಯಾಗಿದ್ದ ಹಲ್ಲೆಯ ಪ್ರಕರಣವೊಂದರ ಹಿನ್ನೆಲೆಯಲ್ಲಿ ಸಂಭವಿಸಿದೆ' ಎಂದು ಹೇಳಿರುವುದನ್ನು ಸ್ಮರಿಸಬಹುದು.

ಸೆಪ್ಟೆಂಬರ್ 6 2006ರಂದು ಮಹಾರಾಷ್ಟ್ರದ ಖೈರಲಂಜಿ ಗ್ರಾಮದಲ್ಲಿ ಭೂತ್‌ಮಂಗೆ ಎಂಬುವರ ದಲಿತ ಬೌದ್ಧ ಕುಟುಂಬದ ನಾಲ್ವರನ್ನು ಹತ್ಯೆಗೈದಿದ್ದ ಪ್ರಕರಣಕ್ಕೆ ಕೊನೆಗೂ ತೆರೆ ಬಿದ್ದಿದೆ. ದೇಶಾದ್ಯಂತ ದಲಿತ ಸಮುದಾಯಗಳನ್ನು ಮತ್ತು ಪ್ರಗತಿಪರರನ್ನು ಕೆರಳಿಸಿದ್ದ ಈ ಅಮಾನವೀಯ ಕೊಲೆಗೆ ಜಾತಿ ವೈಷಮ್ಯವೇ ಪ್ರಮುಖ ಕಾರಣವಾಗಿದ್ದು, ದಲಿತ ಸಂಘಟನೆಗಳು ತಪ್ಪಿತಸ್ಥರನ್ನು ಶಿಕ್ಷಿಸುವಂತೆ ಆಗ್ರಹಿಸಿ ರಾಷ್ಟ್ರವ್ಯಾಪಿ ಆಂದೋಲನವನ್ನೂ ನಡೆಸಿದ್ದವು. ಎರಡು ವರ್ಷಗಳ ನಂತರ ಈ ಪ್ರಕರಣದಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗಿದೆ.

ಮಹಾರಾಷ್ಟ್ರದ ಭಂಡಾರಾದಲ್ಲಿನ ಸೆಶನ್ಸ್ ನ್ಯಾಯಾಲಯವು 2008ರ ಸೆಪ್ಟೆಂಬರ್ 24ರಂದು ನೀಡಿದ ತೀರ್ಪಿನಲ್ಲಿ ಆರು ಜನ ಅಪರಾಧಿಗಳಿಗೆ ಮರಣ ದಂಡನೆ ವಿಧಿಸಿದ್ದು, ಈರ್ವರಿಗೆ ಜೀವಾವಧಿ ಶಿಕ್ಷೆ ಘೋಷಿಸಿದೆ. ಸ್ವತಂತ್ರ ಭಾರತದ ಇತಿಹಾಸದಲ್ಲೇ ಪ್ರಥಮಬಾರಿಗೆ ದಲಿತರ ಹತ್ಯೆಯ ಪ್ರಕರಣದಲ್ಲಿ ಅಪರಾಧಿಗಳಿಗೆ ಮರಣದಂಡನೆ ವಿಧಿಸಲಾಗಿದೆ ಎಂದು ಮಾಧ್ಯಮಗಳಲ್ಲಿ ಪ್ರಸಾರ ಮಾಡಲಾಗಿತ್ತು. ಅನೇಕ ಪತ್ರಿಕೆಗಳ ಸಂಪಾದಕೀಯದಲ್ಲೂ ಈ ಅಭಿಪ್ರಾಯಗಳು ವ್ಯಕ್ತವಾಗಿದ್ದು *ಜಾತಿ ವೈಷಮ್ಯದಿಂದ ನಡೆಯುವ ಹಲ್ಲೆಗಳನ್ನು ಇನ್ನು ಸಹಿಸಿಕೊಳ್ಳಲಾಗುವುದಿಲ್ಲ ಎಂಬ ಸಂದೇಶವನ್ನು ಈ ತೀರ್ಪು ದೃಢಪಡಿಸಿದೆ* ಎಂದು ಕೆಲವು ಸಂಪಾದಕರು ಪ್ರತಿಪಾದಿಸಿದ್ದಾರೆ. ದಲಿತರ ಮೇಲಿನ ಆಕ್ರಮಣಗಳ ಮೊಕದ್ದಮೆಗಳಲ್ಲಿ ಇಷ್ಟು ಶೀಘ್ರಗತಿಯಲ್ಲಿ ತೀರ್ಪು ನೀಡಿರುವುದೂ ಇದೇ ಮೊದಲು ಎಂದು ಹಲವು ಪತ್ರಿಕೆಗಳು ವರದಿ ಮಾಡಿವೆ. ದೇಶಾದ್ಯಂತ ದಲಿತ ಸಂಘಟನೆಗಳು ಮತ್ತು ಪ್ರಗತಿಪರರೂ ಈ ತೀರ್ಪನ್ನು ಮುಕ್ತ ಕಂಠದಿಂದ ಸ್ವಾಗತಿಸಿದ್ದಾರೆ.



ದಲಿತರ ಮೇಲಿನ ಆಕ್ರಮಣಗಳು ಹೆಚ್ಚಾಗುತ್ತಿರುವ ಈ ಸಂದರ್ಭದಲ್ಲಿ ನ್ಯಾಯಾಲಯಗಳ ಇಂತಹ ತೀರ್ಪುಗಳು ಧನಾತ್ಮಕ ಪರಿಣಾಮಗಳನ್ನು ಉಂಟುಮಾಡುತ್ತವೆ. ದಲಿತ ಸಮುದಾಯದಲ್ಲೂ ನ್ಯಾಯಾಂಗದ ಬಗ್ಗೆ ಹೆಚ್ಚಿನ ವಿಶ್ವಾಸ ಮೂಡುವಲ್ಲಿ ನೆರವಾಗುತ್ತವೆ. ಆದರೆ ವಿಪರ್ಯಾಸವೆಂದರೆ ಈ ತೀರ್ಪನ್ನು ನೀಡುವ ಮುನ್ನ ನ್ಯಾಯಾಲಯವು ಪರಿಗಣಿಸಿರುವ ಅಪರಾಧಗಳು ದಲಿತರ ಮೇಲಿನ ಆಕ್ರಮಣಗಳಿಗೆ ಸಂವಿಧಾನಾತ್ಮಕವಾಗಿ ಸಂಬಂಧಿಸಿರುವ ಕಾನೂನುಗಳಡಿ ಬರುವುದಿಲ್ಲ. ಭಂಡಾರ ನ್ಯಾಯಾಲಯದ ನ್ಯಾಯಾಧೀಶರಾದ ಸನ್ಮಾನ್ಯ ಎಸ್.ಎಸ್. ದಾಸ್‌ರವರು ಸೆಪ್ಟೆಂಬರ್ 15 2008ರಂದು ನೀಡಿದ ಹೇಳಿಕೆಯಲ್ಲಿ "ಖೈರಲಂಜಿ ಪ್ರಕರಣವು ಸೇಡಿನ ಕ್ರಮವಾಗಿದ್ದು ಪೋಲೀಸ್ ಪಾಟಿಲ್‌ರವರು ಭಾಗಿಯಾಗಿದ್ದ ಹಲ್ಲೆಯ ಪ್ರಕರಣವೊಂದರ ಹಿನ್ನೆಲೆಯಲ್ಲಿ ಸಂಭವಿಸಿದೆ" ಎಂದು ಹೇಳಿರುವುದನ್ನು ಸ್ಮರಿಸಬಹುದು. ಹಾಗಾಗಿ ಈ ಪ್ರಕರಣದ ಸಂಬಂಧದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ನಿಯಂತ್ರಣ) ಕಾಯ್ದೆ 1989 ಅನ್ವಯವಾಗಿಲ್ಲ ಎಂದು ನ್ಯಾಯಾಧೀಶರು ಸ್ಪಷ್ಟಪಡಿಸಿದ್ದಾರೆ.

ಭಾರತೀಯ ದಂಡ ಸಂಹಿತೆಯ ಸೆಕ್ಷನ್ 354 (ಮಹಿಳೆಯರ ಶೀಲಹರಣ ಮಾಡುವ ಉದ್ದೇಶದಿಂದ ಮಾಡಲಾದ ಆಕ್ರಮಣ) ಅಥವಾ ಸೆಕ್ಷನ್ 375 (ಮಹಿಳೆಯರ ಮೇಲಿನ ಅತ್ಯಾಚಾರ) ಈ ಕಾಯ್ದೆಗಳನ್ನೂ ಈ ಸಂಬಂಧದಲ್ಲಿ ಅನ್ವಯಿಸಲಾಗಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ. ಭೂತ್‌ಮಾಂಗೆಯ ಪತ್ನಿ ಸುರೇಖ ಮತ್ತು ಪುತ್ರಿ ಪ್ರಿಯಾಂಕ ಅವರನ್ನು ಚಿತ್ರಹಿಂಸೆಗೊಳಪಡಿಸಿ ಅವರ ಮೇಲೆ ಅತ್ಯಾಚಾರ ಎಸಗಿರುವುದು, ಈ ಮಹಿಳೆಯರನ್ನು ಅರೆನಗ್ನರನ್ನಾಗಿ ಮಾಡಿ ಸಾರ್ವಜನಿಕರ ಮುಂದೆ ಅಪಮಾನಗೊಳಿಸಿದ್ದು, ಪ್ರಿಯಾಂಕ ಮೃತ ಪಟ್ಟಮೇಲೂ ಆಕೆಯ ಮೇಲೆ ಅತ್ಯಾಚಾರ ಎಸಗಿದ್ದೂ ಅನೇಕ ಸತ್ಯ ಶೋಧನಾ ಸಮಿತಿಗಳ ವರದಿಗಳಲ್ಲಿ ನಿರೂಪಿತವಾಗಿದ್ದರೂ ನ್ಯಾಯಾಲಯವು ಈ ವಾಸ್ತವತೆಗಳನ್ನು ಪರಿಗಣಿಸದಿರುವುದು ಅಚ್ಚರಿ ಮೂಡಿಸುತ್ತದೆ.

ಸೆಪ್ಟೆಂಬರ್ 15ರ ಈ ತೀರ್ಪಿನ ನಂತರದಲ್ಲಿ ದಲಿತ ಸಂಘಟನೆಗಳು ಎಚ್ಚೆತ್ತುಕೊಂಡವು. ಈ ಹಿಂದೆಯೂ ಸಿ.ಬಿ.ಐ ತನಿಖೆ ಪ್ರಾರಂಭವಾಗುವ ಮುನ್ನ ಮರಣೋತ್ತರ ಪರೀಕ್ಷೆ ನಡೆಸಿದ ಅಧಿಕಾರಿಗಳು ಈ ಮಹಿಳೆಯರ ಮೇಲೆ ಯಾವುದೇ ರೀತಿಯ ಅತ್ಯಾಚಾರ ನಡೆದಿಲ್ಲ ಎಂದು ವರದಿ ನೀಡಿ, ಇದ್ದ ಕೆಲವು ಪುರಾವೆಗಳನ್ನೂ ನಾಶಗೊಳಿಸಲು ಪ್ರಯತ್ನಿಸಿದ್ದರು. ಈ ಹಿನ್ನೆಲೆಯಲ್ಲಿ ಭಯ್ಯಾಲಾಲ್ ಭೂತ್‌ಮಾಂಗೆ ಮತ್ತಿತರ ಕಾರ್ಯಕರ್ತರು ನ್ಯಾಯಾಲಯದ ತೀರ್ಪನ್ನು ವಿರೋಧಿಸಿ ಮತ್ತೊಮ್ಮೆ ಸಿ.ಬಿ.ಐ ತನಿಖೆ ಮಾಡುವಂತೆ ಸರ್ಕಾರವನ್ನು ಒತ್ತಾಯಿಸಿದರು. ಒಂದು ವೇಳೆ ಖೈರ್‌ಲಾಂಜಿ ಪ್ರಕರಣವನ್ನು ಜಾತಿ ವೈಷಮ್ಯದ ಪರಿಧಿಯಿಂದ ಹೊರ

ತಾಗಿ ಪರಿಗಣಿಸಿದಲ್ಲಿ, ಮುಂಬರುವ ದಿನಗಳಲ್ಲಿ ಮೇಲ್ಜಾತಿಯವರು ತಮ್ಮ ದಬ್ಬಾಳಿಕೆಯನ್ನು ಇನ್ನೂ ತೀವ್ರಗೊಳಿಸಬಹುದೆಂಬ ಆತಂಕ ದಲಿತ ಸಮುದಾಯವನ್ನು ಕಾಡತೊಡಗಿತ್ತು. ಖೈರಲಾಂಜಿಯಂತಹ ಪ್ರಕರಣಗಳನ್ನು ಕೇವಲ ಪಾತಕ ಕೃತ್ಯಗಳೆಂದು ಮಾತ್ರ ಪರಿಗಣಿಸಿದಲ್ಲಿ 1989ರ ದೌರ್ಜನ್ಯ ನಿಯಂತ್ರಣ ಕಾಯ್ದೆ ನಿರುಪಯುಕ್ತವಾಗುವುದೆಂಬ ಅಭಿಪ್ರಾಯವನ್ನೂ ಕೆಲವು ವಿದ್ವಾಂಸರು ವ್ಯಕ್ತಪಡಿಸಿದರು.

ಕೇಂದ್ರ ಸಚಿವೆ ಮೀರ ಕುಮಾರ್ ಅವರೂ ಸಹ ನ್ಯಾಯಾಲಯದ ಅಭಿಪ್ರಾಯಕ್ಕೆ ತಮ್ಮ ವಿರೋಧ ವ್ಯಕ್ತಪಡಿಸಿ ಮಹಾರಾಷ್ಟ್ರದ ಮುಖ್ಯಮಂತ್ರಿ ಮತ್ತು ಕೇಂದ್ರ ಗೃಹಮಂತ್ರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ನಿವೇದನೆ ಸಲ್ಲಿಸಿದ್ದರು. ನ್ಯಾಯಾಲಯವು ತೀರ್ಪು ನೀಡಿದ ನಂತರದ ಕೆಲವು ದಿನಗಳಲ್ಲಿ ಸಾರ್ವಜನಿಕ ವಲಯದಲ್ಲೂ ಸಾಕಷ್ಟು ಪ್ರತಿರೋಧ ವ್ಯಕ್ತವಾಗಿದ್ದು, ರಾಜಕೀಯ ಒತ್ತಡಗಳೂ ಹೆಚ್ಚಾಗತೊಡಗಿದ್ದವು. ಈ ಹಿನ್ನೆಲೆಯಲ್ಲೇ ಸೆಪ್ಟೆಂಬರ್ 24ರ ಅಂತಿಮ ತೀರ್ಪಿನಲ್ಲಿ ನ್ಯಾಯಾಲಯವು ಅಪರಾಧಿಗಳಿಗೆ ಮರಣದಂಡನೆ ವಿಧಿಸಿತು. ಒಂದು ರೀತಿಯಲ್ಲಿ 1989ರ ದೌರ್ಜನ್ಯ ನಿಯಂತ್ರಣ ಕಾಯ್ದೆಯನ್ನು ಪರಿಗಣಿಸದಿದ್ದುದಕ್ಕೆ ಪ್ರತಿಯಾಗಿ, ಅಸಮಧಾನವನ್ನು ಶಮನಗೊಳಿಸುವ ನಿಟ್ಟಿನಲ್ಲಿ ಮರಣದಂಡನೆ ವಿಧಿಸಲಾಗಿದೆ ಎಂದರೂ ತಪ್ಪಾಗಲಾರದು. ಆದರೆ ನ್ಯಾಯಾಲಯವು ಮರಣದಂಡನೆ ವಿಧಿಸಿದ್ದರೂ, ಯಾವುದೇ ಅತ್ಯಾಚಾರ, ಪಿತೂರಿ ಮತ್ತು ಜಾತಿ ದ್ವೇಷವನ್ನು ಪರಿಗಣಿಸದಿರುವುದರಿಂದ, ಉಚ್ಚನ್ಯಾಯಾಲಯವು ಮರಣದಂಡನೆಯ ತೀರ್ಪನ್ನು ಅನೂರ್ಜಿತಗೊಳಿಸುವ ಸಾಧ್ಯತೆಗಳನ್ನೂ ತಳ್ಳಿಹಾಕುವಂತಿಲ್ಲ. ಹಾಗಾಗಿ ದಲಿತರಿಗೆ ಸಂಪೂರ್ಣ ನ್ಯಾಯ ದೊರಕಿದೆ ಎಂದು ಸಂಭ್ರಮಿಸುವ ಅಗತ್ಯತೆಯೂ ಕಾಣುವುದಿಲ್ಲ.

ವಾಸ್ತವತೆಗೆ ಕೈಗನ್ನಡಿ

ಒಂದು ರೀತಿಯಲ್ಲಿ ಖೈರ್‌ಲಂಜಿಯ ತೀರ್ಪು ದೇಶದಲ್ಲಿ ದಿನನಿತ್ಯ ದಲಿತ ಸಮುದಾಯ ಅನುಭವಿಸುತ್ತಿರುವ ಸನ್ನಿವೇಶಕ್ಕೆ ಸಾಕ್ಷೀಭೂತವಾಗಿದೆ. ಪ್ರತಿನಿತ್ಯ ದೇಶದ ವಿವಿಧೆಡೆಗಳಲ್ಲಿ ದಲಿತರು ಎದುರಿಸುವ ಆಕ್ರಮಣ, ದಬ್ಬಾಳಿಕೆ ಮತ್ತು ಅವಮಾನಗಳು ಅನೇಕ ಸಂದರ್ಭಗಳಲ್ಲಿ ವರದಿಯಾಗದೆಯೇ ಹೋಗುತ್ತವೆ. ಕೆಲವೊಮ್ಮೆ ವರದಿಯಾದರೂ, ನಿರ್ಲಕ್ಷ್ಯಕ್ಕೊಳಗಾಗುತ್ತವೆ. ದಿನನಿತ್ಯ ರಸ್ತೆಗಳಲ್ಲಿ ನಡೆಯುವ ಅಪಘಾತಗಳಂತೆಯೇ ದಲಿತರ ಮೇಲಿನ ಆಕ್ರಮಣಗಳನ್ನೂ ಮಾಮೂಲಿಯಾಗಿ ಪರಿಗಣಿಸಲಾಗುತ್ತದೆ. ರಾಷ್ಟ್ರೀಯ ಅಪರಾಧ ದಾಖಲಾತಿ ಇಲಾಖೆಯ ಒಂದು ವರದಿಯ ಪ್ರಕಾರ ಪ್ರತಿದಿನವೂ ಇಬ್ಬರು ದಲಿತರ ಹತ್ಯೆಯಾಗುತ್ತದೆ, ಮೂವರು ದಲಿತ ಮಹಿಳೆಯರು ಅತ್ಯಾಚಾರಕ್ಕೆ ಬಲಿಯಾಗುತ್ತಾರೆ. ಪ್ರತಿ ಹದಿನೆಂಟು ನಿಮಿಷಕ್ಕೆ ಒಬ್ಬ ದಲಿತನ ಮೇಲೆ ಹಲ್ಲೆ ನಡೆಸಲಾಗುತ್ತದೆ. 2004ರಲ್ಲಿ ದಲಿತರ ಮೇಲಿನ ಅಕ್ರಮಣಗಳ ಸಂಖ್ಯೆ 26887 ರಷ್ಟು ವರದಿಯಾಗಿದ್ದರೆ, 2005ರಲ್ಲಿ 26127 ಪ್ರಕರಣಗಳು ವರದಿಯಾಗಿವೆ. ಈ ಆಕ್ರಮಣಗಳಲ್ಲಿ ಮಹಿಳೆಯರ ಮೇಲಿನ ಅತ್ಯಾಚಾರಗಳು 1172, ಕೊಲೆ ಪ್ರಕರಣಗಳು 669, ಅಪಹರಣಗಳು 258 ಕಂಡುಬರುತ್ತವೆ. ದೌರ್ಜನ್ಯ ನಿಯಂತ್ರಣ ಕಾಯ್ದೆಯ ಪರಿಧಿಯಲ್ಲೇ 8497 ಪ್ರಕರಣಗಳು ದಾಖಲೆಯಾಗಿವೆ. ಇವುಗಳ ಪೈಕಿ ಶೇ. 94ರಷ್ಟು ಪ್ರಕರಣಗಳಲ್ಲಿ ಆರೋಪ ಪಟ್ಟಿ ದಾಖಲಾಗಿದ್ದರೂ, ಶೇ. 30ರಷ್ಟು ಪ್ರಕರಣಗಳಲ್ಲಿ ಮಾತ್ರ ಶಿಕ್ಷೆ ವಿಧಿಸಲಾಗಿದೆ.

ಖೈರಲಂಜಿಯ ತೀರ್ಪಿನ ಹಿನ್ನೆಲೆಯಲ್ಲಿ ಹಂತಕರಿಗೆ ಮರಣದಂಡನೆ ವಿಧಿಸುವ ದಂಡ ಸಂಹಿತೆಯ ಪ್ರತಿಪಾದನೆ ಕಂಡು ಬರುವುದೇ ಹೊರತು ಭಾರತೀಯ ಸಮಾಜದಲ್ಲಿ ತಾಂಡವಾಡುತ್ತಿರುವ ಜಾತಿ ವೈಷಮ್ಯದ ಕರಾಳ ಮುಖದ ಬಗ್ಗೆ ಯಾವುದೇ ಕಾಳಜಿ ಕಂಡುಬರುವುದಿಲ್ಲ. ಶಿಕ್ಷೆಗೊಳಗಾಗಿರುವ ಪಾತಕಿಗಳು ತಾವು ಮಾಡಿದ ತಪ್ಪಿಗೆ ಸೂಕ್ತ ಶಿಕ್ಷೆ ಅನುಭವಿಸುತ್ತಾರೆ ಎಂಬ ಅಭಿಪ್ರಾಯದ ನಡುವೆ ಜಾತಿ ವ್ಯವಸ್ಥೆಯ ವಾಸ್ತವತೆಗಳು ಮರೆಯಾಗಿಬಿಡುವ ಅಪಾಯವನ್ನು ಕಡೆಗಣಿಸುವಂತಿಲ್ಲ. ಕೆಲವು ಅಪರಾಧಿಗಳಿಗೆ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆ ವಿಧಿಸುವುದರಿಂದ ಮುಂಬರುವ ದಿನಗಳಲ್ಲಿ ಈ ಆಕ್ರಮಣಗಳು, ಅಪರಾಧಗಳು ಕ್ಷೀಣಿಸುತ್ತವೆ ಎಂದೂ ಹೇಳಲಾಗುವುದಿಲ್ಲ. ಅಪರಾಧ ಮತ್ತು ದಂಡನೆಗಳ ಹಿಂದೆ ಅವಶ್ಯವಾಗಿ ಇರಬೇಕಾದ ಸಾಮಾಜಿಕ ಮತ್ತು ರಾಜಕೀಯ ತಳಹದಿ ಇಲ್ಲದೆ ಹೋದಲ್ಲಿ ಯಾವುದೇ ದಂಡನೆ ಆವೇಷಗಳಿಗೆ ಸೀಮಿತವಾಗಿಬಿಡುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಖೈರಲಂಜಿ ತೀರ್ಪು ಸಹ ಆಕ್ರೋಶಗಳನ್ನು ತಣ್ಣಗಾಗಿಸುವ ಸಮಾಧಾನಕರ ಕ್ರಮವಾಗಿಯೇ ಕಂಡುಬರುತ್ತದೆ.

ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯದ 2005ರ ವರದಿಯ ಪ್ರಕಾರ ದೌರ್ಜನ್ಯ ನಿಯಂತ್ರಣ ಕಾಯ್ದೆಯಡಿಯಲ್ಲಿ ಶಿಕ್ಷೆಗೊಳಗಾಗಿರುವ ಪ್ರಕರಣಗಳು ಶೇ. 15.71ರಷ್ಟು ಮಾತ್ರ. ಇದೇ ಸಾಲಿನಲ್ಲಿ ಭಾರತೀಯ ದಂಡ ಸಂಹಿತೆಯಡಿ ಶೇ. 40ರಷ್ಟು ಪ್ರಕರಣಗಳಲ್ಲಿ ಶಿಕ್ಷೆ ವಿಧಿಸಲಾಗಿರುವುದೂ ವರದಿಯಾಗಿದೆ. ಮಹಾರಾಷ್ಟ್ರದಲ್ಲಿ ದಲಿತರ ಮೇಲಿನ ಆಕ್ರಮಣಗಳು ಹೆಚ್ಚಾಗಿದ್ದರೂ 2004ರಲ್ಲಿ ದೌರ್ಜನ್ಯ ನಿಯಂತ್ರಣ ಕಾಯ್ದೆಯಡಿಯಲ್ಲಿ 6535 ಪ್ರಕರಣಗಳು ಬಾಕಿ ಉಳಿದಿದ್ದವು. ಈ ಪ್ರಕರಣಗಳ ವಿಲೇವಾರಿ ಪ್ರಮಾಣ ಕೇವಲ ಶೇ. 1ಕ್ಕಿಂತಲೂ ಕಡಿಮೆ ಇರುವುದು ವಾಸ್ತವ ಸ್ಥಿತಿಯ ಕುರುಹಾಗಿದೆ. ಇತರ ರಾಜ್ಯಗಳಲ್ಲಿ ಪರಿಸ್ಥಿತಿ ಇದಕ್ಕಿಂತಲೂ ಭಿನ್ನವಾಗಿಲ್ಲ. ಆದರೂ ಇಂತಹ ವಾತಾವರಣದಲ್ಲೂ, ಖೈರಲಂಜಿ ಪ್ರಕರಣದಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗಿರುವುದು ದಲಿತ ಸಮುದಾಯಗಳಲ್ಲಿ ಸಮಾಧಾನದ ಗೆರೆ ಮೂಡಿಸಿದೆ.

ಆದರೆ ಖೈರಲಂಜಿಯ ತೀರ್ಪಿನ ಹಿನ್ನೆಲೆಯಲ್ಲಿ ಹಂತಕರಿಗೆ ಮರಣದಂಡನೆ ವಿಧಿಸುವ ದಂಡ ಸಂಹಿತೆಯ ಪ್ರತಿಪಾದನೆ ಕಂಡು ಬರುವುದೇ ಹೊರತು ಭಾರತೀಯ ಸಮಾಜದಲ್ಲಿ ತಾಂಡವಾಡುತ್ತಿರುವ ಜಾತಿ ವೈಷಮ್ಯದ ಕರಾಳ ಮುಖದ ಬಗ್ಗೆ ಯಾವುದೇ ಕಾಳಜಿ ಕಂಡುಬರುವುದಿಲ್ಲ. ಶಿಕ್ಷೆಗೊಳಗಾಗಿರುವ ಪಾತಕಿಗಳು ತಾವು ಮಾಡಿದ ತಪ್ಪಿಗೆ ಸೂಕ್ತ ಶಿಕ್ಷೆ ಅನುಭಪಿಸುತ್ತಾರೆ ಎಂಬ ಅಭಿಪ್ರಾಯದ ನಡುವೆ ಜಾತಿ ವ್ಯವಸ್ಥೆಯ ವಾಸ್ತವತೆಗಳು ಮರೆಯಾಗಿಬಿಡುವ ಅಪಾಯವನ್ನು ಕಡೆಗಣಿಸುವಂತಿಲ್ಲ. ಕೆಲವು ಅಪರಾಧಿಗಳಿಗೆ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆ ವಿಧಿಸುವುದರಿಂದ ಮುಂಬರುವ ದಿನಗಳಲ್ಲಿ ಈ ಆಕ್ರಮಣಗಳು, ಅಪರಾಧಗಳು ಕ್ಷೀಣಿಸುತ್ತವೆ ಎಂದೂ ಹೇಳಲಾಗುವುದಿಲ್ಲ. ಅಪರಾಧ ಮತ್ತು ದಂಡನೆಗಳ ಹಿಂದೆ ಅವಶ್ಯವಾಗಿ ಇರಬೇಕಾದ ಸಾಮಾಜಿಕ ಮತ್ತು ರಾಜಕೀಯ ತಳಹದಿ ಇಲ್ಲದೆ ಹೋದಲ್ಲಿ ಯಾವುದೇ ದಂಡನೆ ಆವೇಷಗಳಿಗೆ ಸೀಮಿತವಾಗಿಬಿಡುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಖೈರಲಂಜಿ ತೀರ್ಪು ಸಹ ಆಕ್ರೋಶಗಳನ್ನು ತಣ್ಣಗಾಗಿಸುವ ಸಮಾಧಾನಕರ ಕ್ರಮವಾಗಿಯೇ ಕಂಡುಬರುತ್ತದೆ. ಜಾತಿ ವೈಷಮ್ಯದಿಂದಲೇ ಎಸಗಲಾಗಿರುವ ಅಪರಾಧಗಳಿಗೆ ಸಾಮಾನ್ಯ ದಂಡ ಸಂಹಿತೆಗನುಸಾರವಾಗಿ ಶಿಕ್ಷೆ ವಿಧಿಸುವುದರಿಂದ ದೌರ್ಜನ್ಯ ಕಾಯ್ದೆಯನ್ನೇ ಕಡೆಗಣಿಸಿದಂತಾಗುತ್ತದೆ. ಮುಂದೊಂದು ದಿನ ಈ ಕಾಯ್ದೆಯ ಅವಶ್ಯಕತೆಯೇ ಇಲ್ಲವೆಂದೂ ಪರಿಗಣಿಸಬಹುದು

ಮರಣದಂಡನೆಯ ಶಿಕ್ಷೆ ಯಾವುದೇ ಪ್ರಜಾತಾಂತ್ರಿಕ ವ್ಯವಸ್ಥೆಗೆ ತಕ್ಕುದಾದ ದಂಡನೆಯಲ್ಲ. ಭಾರತೀಯ ಸಂದರ್ಭದಲ್ಲಿ ಮರಣದಂಡನೆಯನ್ನು ವಿರೋಧಿಸಿ ಹೋರಾಟ ನಡೆಸುತ್ತಿರುವವರಲ್ಲಿ ದಲಿತ ಸಮುದಾಯದ ಪಾತ್ರ ಮಹತ್ವದ್ದಾಗಿದೆ. ಸ್ವತಂತ್ರ ಭಾರತದ ಇತಿಹಾಸದಲ್ಲಿ ಮರಣದಂಡನೆಗೆ ಬಲಿಯಾಗಿರುವವರಲ್ಲಿ ದಲಿತರು ಮತ್ತು ಅಲ್ಪಸಂಖ್ಯಾತರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇನ್ನೊಂದೆಡೆ ಕೆಲವು ರಾಜಕೀಯ ಪಕ್ಷಗಳು, ಬಲಪಂಥೀಯ ಸಂಘಟನೆಗಳು ಮರಣದಂಡನೆಯ ಮೂಲಕವೇ ಪಾತಕೀ ಕೃತ್ಯಗಳನ್ನು ತಡೆಗಟ್ಟುವ ವಾದವನ್ನೂ ಮಂಡಿಸುತ್ತವೆ.

ಅಫ್ಜಲ್ ಗುರುವಿಗೆ ಶಿಕ್ಷೆ ವಿಧಿಸದಿರುವುದೇ ಭಯೋತ್ಪಾದನೆ ಹೆಚ್ಚಾಗಲು ಕಾರಣ ಅಥವಾ ಶಿಕ್ಷೆ ವಿಧಿಸಿದಲ್ಲಿ ಭಯೋತ್ಪಾದನೆ ಕಡಿಮೆಯಾಗುತ್ತದೆ ಎಂಬ ವಾದದ ಹಿಂದೆಯೂ ಇದೇ ಅಭಿಪ್ರಾಯವನ್ನು ಕಾಣಬಹುದು. ಆದರೆ ಮರಣದಂಡನೆಯಾಗಲೀ ಯಾವುದೇ ರೀತಿಯ ಶಿಕ್ಷೆಯಾಗಲಿ ಪಾತಕಿ ಕೃತ್ಯಗಳಿಗೆ ಪ್ರತಿಬಂಧಕವಾಗಿ ಕಾರ್ಯ ನಿರ್ವಹಿಸುವುದಿಲ್ಲ ಎಂಬ ಅಂಶವನ್ನು ಅಲ್ಲಗಳೆಯಲಾಗುವುದಿಲ್ಲ. ಆದರೂ ಖೈರಲಂಜಿಯ ತೀರ್ಪಿನ ಹಿನ್ನೆಲೆಯಲ್ಲಿ ದಲಿತ ಸಂಘಟನೆಗಳು ಹಾಗೂ ಪ್ರಗತಿ ಪರ ಸಂಘಟನೆಗಳು ಹರ್ಷ ವ್ಯಕ್ತಪಡಿಸಿರುವುದನ್ನು ಸೂಕ್ಷ್ಮವಾಗಿ ನೋಡಿದಾಗ, ದಲಿತ ಸಮುದಾಯದ ಮೇಲೆ ನಡೆಯುತ್ತಿರುವ ಆಕ್ರಮಣಗಳನ್ನು ನಿರ್ಲಕ್ಷಿಸುತ್ತಿರುವ ಸರ್ಕಾರಗಳ ನಿಷ್ಕ್ರಿಯತೆಯ ಹಿನ್ನೆಲೆಯಲ್ಲಿ, ಒಂದು ಪ್ರಕರಣದಲ್ಲಾದರೂ ಅಪರಾಧಿಗಳಿಗೆ ಶಿಕ್ಷೆ ಆಯಿತಲ್ಲ ಎಂಬ ಸಮಾಧಾನದ ನಿಟ್ಟುಸಿರು ಕಂಡುಬರುತ್ತದೆ. ಪ್ರತಿ ಹನ್ನೆರಡು ಗಂಟೆಗಳಿಗೆ ಒಂದು ಜೀವವನ್ನು ಕಳೆದುಕೊಳ್ಳುವ ದಲಿತ ಸಮುದಾಯಕ್ಕೆ ಈ ತೀರ್ಪು ಯಾವ ರೀತಿಯ ಸಾಂತ್ವನ ಹೇಳಲು ಸಾಧ್ಯ ? □

ದಶಮಾನದ ಖಾನೇಷುಮಾರಿ-೨೦೧೧, ಜಾತಿಗಳ ಅಂತಸ್ತು ಎಲ್ಲಿಗೇರಿವೆ?

ಪ್ರತಿ ೧೦ ವರ್ಷಕ್ಕೊಮ್ಮೆ ದಶಕದ ಮೊದಲ ವರ್ಷದ ಮಾರ್ಚ ತಿಂಗಳಲ್ಲಿ ಖಾನೇಷುಮಾರಿ ನಡೆಸಬೇಕೆಂದು ಕಡ್ಡಾಯವಾದ ರಾಷ್ಟ್ರೀಯ ಕಾನೂನು ಇದೆ. ಖಾನೇಷುಮಾರಿಯಲ್ಲೂ ಪ್ರತಿ ತಲೆಯನ್ನು ಎಣಿಸಬೇಕು. ಅವರ ವಯಸ್ಸು, ಲಿಂಗ, ವಿದ್ಯಾರ್ಹತೆ, ಅಂಗವಿಕಲತೆ, ಮಾಡುವ ಕೆಲಸ, ಆರ್ಥಿಕ ಪರಿಸ್ಥಿತಿ, ಮಾತನಾಡುವ ಭಾಷೆ ಇನ್ನೂ ಇತ್ಯಾದಿ ವಿವರಗಳನ್ನು ಸಂಗ್ರಹಿಸಬೇಕು. ವಸತಿಹೀನರು ಈ ಕ್ರಿಯೆಯಲ್ಲಿ ಬಿಟ್ಟು ಹೋಗಬಾರದೆಂದು ಮಾರ್ಚ ತಿಂಗಳ ಕೊನೆಯ ಮೂರು ದಿನದ ರಾತ್ರಿಯಲ್ಲಿ ವಸತಿಹೀನರ ಲೆಕ್ಕ ಹಾಕಿ ದಾಖಲಿಸಬೇಕೆಂದು ಈ ಕಾನೂನಿನಲ್ಲಿ ಕಡ್ಡಾಯ ಮಾಡಿದ್ದಾರೆ. ನಮ್ಮ ದೇಶಕ್ಕೆ ಇದೊಂದು ನಾಚಿಕೆಯ ವಿಷಯ. ಆದರೆ ಪ್ರತಿ ಪ್ರಜೆಯನ್ನು ಒಂದು ಮೌಲ್ಯವೆಂದು ಗಣಿಸುವ ಈ ವಿಷಯ ಸ್ತುತ್ಯವಾದುದು. ನಮ್ಮ ದೇಶದಲ್ಲಿ ವಸತಿ ಪ್ರದೇಶಗಳು ಜಾತಿವಾರು ವಿಂಗಡನೆಯಾಗಿದೆ, ಎಂದರೆ ಆಶ್ಚರ್ಯವಾಗಬಹುದು.

ಸಿ.ಎಚ್.
ಜಾಕೋಬ್ ಲೋಬೊ

1931 ರ ಖಾನೇಷುಮಾರಿಯ ನಂತರ ಜಾತಿಗಳ ಖಾನೇಷುಮಾರಿ ಬರಖಾಸ್ತು ಮಾಡಿಬಿಟ್ಟರು. ಪ್ರತಿ 10 ವರ್ಷಕ್ಕೊಮ್ಮೆ ದಶಕದ ಮೊದಲ ವರ್ಷದ ಮಾರ್ಚ್ ತಿಂಗಳಲ್ಲಿ ಖಾನೇಷುಮಾರಿ ನಡೆಸಬೇಕೆಂದು ಕಡ್ಡಾಯವಾದ ರಾಷ್ಟ್ರೀಯ ಕಾನೂನು ಇದೆ. ಖಾನೇಷುಮಾರಿಯಲ್ಲೂ ಪ್ರತಿ ತಲೆಯನ್ನು ಎಣಿಸಬೇಕು. ಪ್ರತಿಯೊಬ್ಬರ ಪರಿಸ್ಥಿತಿಯನ್ನು ಅರಿಯಲು ಬೇಕಾದ ವಿವರಗಳನ್ನು ಸಂಗ್ರಹಿಸಬೇಕು. ಪ್ರಜೆಗಳ ಎಣಿಕೆಯ ಜೊತೆಗೆ ಅವರ ವಯಸ್ಸು, ಲಿಂಗ, ವಿದ್ಯಾರ್ಹತೆ, ಅಂಗವಿಕಲತೆ, ಮಾಡುವಕೆಲಸ, ಆರ್ಥಿಕ ಪರಿಸ್ಥಿತಿ ತೋರುವ ದಂಥೆ, ಜಮೀನು, ಮಾತನಾಡುವ ಭಾಷೆ ಇನ್ನೂ ಇತ್ಯಾದಿ ವಿವರಗಳನ್ನು ಸಂಗ್ರಹಿಸಬೇಕು. ವಸತಿ ಹೀನರು ಈ ಕ್ರಿಯೆಯಲ್ಲಿ ಬಿಟ್ಟು ಹೋಗಬಾರದೆಂದು ಮಾರ್ಚ್ ತಿಂಗಳ ಕೊನೆಯ ಮೂರು ದಿನದ ರಾತ್ರಿಯಲ್ಲಿ ವಸತಿಹೀನರ ಲೆಕ್ಕ ಹಾಕಿ ದಾಖಲಿಸಬೇಕೆಂದು ಈ ಕಾನೂನಿನಲ್ಲಿ ಕಡ್ಡಾಯ ಮಾಡಿದ್ದಾರೆ. ನಮ್ಮ ದೇಶಕ್ಕೆ ಇದೊಂದು ನಾಚಿಕೆಯ ವಿಷಯ. ಆದರೆ ಪ್ರತಿ ಪ್ರಜೆಯನ್ನು ಒಂದು ಮೌಲ್ಯವೆಂದು ಗಣಿಸುವ ಈ ವಿಷಯ ಸ್ತುತ್ಯವಾದುದು. ನಮ್ಮ ದೇಶದಲ್ಲಿ ವಸತಿ ಪ್ರದೇಶಗಳು ಜಾತಿವಾರು ವಿಂಗಡನೆಯಾಗಿದೆ, ಎಂದರೆ ಆಶ್ಚರ್ಯವಾಗಬಹುದು. ಆದರೆ ಅಗ್ರಹಾರಗಳೂ, ಕುಂಬಾರ ಬೀದಿಗಳೂ, ಉಳಿದೆಲ್ಲ ಜಾತಿವಾರು ವಸತಿ ಪ್ರದೇಶಗಳ ಜೊತೆಗೆ ಪ್ರತಿ ಹಳ್ಳಿಯ ಪ್ರತ್ಯೇಕ ಅನುಸೂಚಿತ ಜಾತಿಗಳವರ ವಸತಿ ಕಾಣಬಲ್ಲವರ ಕಣ್ಣಿಗೆ ರಾಚುತ್ತದೆ. ಅವರಿಗಾಗಿ ಪ್ರತ್ಯೇಕ ಸ್ಮಶಾನಗಳೂ ಇರಬೇಕೆಂಬ ಕಟ್ಟಳೆಯನ್ನು ಹಿಂದಿಗೂ ಪಾಲಿಸಲಾಗುತ್ತದೆ.

ಆದ್ದರಿಂದ ಅನುಸೂಚಿತ ಜಾತಿ ಪಂಗಡಗಳ 'ಜಾತಿ' ಕಾಲಂ ಉಳಿಸಿಕೊಂಡಿದ್ದಾರೆ. 1931ರವರೆಗೆ ಖಾನೇಷುಮಾರಿಯಲ್ಲಿ 'ಜಾತಿ'ಕಾಲಂ ಇದ್ದ ನಮೂನೆ ಜಾರಿಯಲ್ಲಿತ್ತು. ಇಂದಿಗೂ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದವರ ಲೆಕ್ಕ ಹಿಡಿಯಲು ಈ 70 ವರ್ಷಗಳ ಹಿಂದಿನ ವಿವರಗಳ ಮೇಲೆಯೇ ಲೆಕ್ಕಹಾಕುತ್ತಾರೆ. ಇಂದಿನ ಖಾನೇಷುಮಾರಿ ನಮೂನೆಯಲ್ಲೂ ಜೀವನ ಮಟ್ಟ ಅರಿಯಲು ಸ್ಕೂಟರ್, ದಂಪತಿಗಳಿಗಾಗಿ ಪ್ರತ್ಯೇಕ ಕೋಣೆ ಇನ್ನು ಇತ್ಯಾದಿ ಕಾಲಂಗಳನ್ನು ಸೇರಿಸಿದ್ದಾರೆ. ಎಲ್ಲಾ ಆರ್ಥಿಕ, ಶೈಕ್ಷಣಿಕ, ಜನಾರೋಗ್ಯ ಸೂತ್ರ (Hygiene) ಗಳು, ವಸತಿಗಳ ವಿಷಯದಲ್ಲಿ ದೇಶದ ಸಮಗ್ರ ಚಿತ್ರಣ ರೂಪಿಸುವ ದ್ಯೇಯ ಖಾನೇಷುಮಾರಿ ಪ್ರಕ್ರಿಯೆಯ ಉದ್ದೇಶ.



ಆದರೆ ಆದದ್ದೇನು? ಈ ನೂರು ಕೋಟಿ ಜನರ ಸಮಗ್ರ ಚಿತ್ರಣ ಸಾಧುವೇ? ಜಾತಿಯತೆಯು ಈ ದೇಶದ ಕಳಂಕವೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಈ ಒಂದು ಕಳಂಕದಿಂದಾಗಿ ಪ್ರಪಂಚದಲ್ಲಿ ಭಾರತ ತಲೆತಗ್ಗಿಸಿಕೊಂಡೇ ನಿಂತಿರುತ್ತದೆ. ಆದರೂ, 1947ರ ಖಾನೇಷುಮಾರಿ ಜಾಗತಿಕ ಯುದ್ಧದಿಂದಾಗಿ ನಡೆಯಲಿಲ್ಲ. 1951ರ ಖಾನೇಷುಮಾರಿ ಸ್ವತಂತ್ರ ಭಾರತದ ಪ್ರಥಮ ಪ್ರಕ್ರಿಯೆ. ಆಗ ಈ ದೇಶವನ್ನು ಜಾತ್ಯಾತೀತ ರಾಷ್ಟ್ರವನ್ನಾಗಿ ಮಾಡಬೇಕೆಂಬ ಹಂಬಲ ಸರ್ವವ್ಯಾಪಿಯಾಗಿತ್ತು. ಸ್ವತಂತ್ರ ಭಾರತದ ಪ್ರಥಮ ಪ್ರಧಾನಿ ದಿನನಿತ್ಯ ಜಾತ್ಯಾತೀತತೆ, ವೈಚಾರಿಕತೆ ಹಾಗೂ ವೈಜ್ಞಾನಿಕ ಮನೋಭೂಮಿಕೆಗಳ ಬಗ್ಗೆ ಪ್ರತಿ ಭಾಷಣದಲ್ಲೂ ಒತ್ತುಕೊಟ್ಟು ಹೇಳುತ್ತಿದ್ದರು. ಭಾರತವನ್ನು ಹಾಗೆ ಪರಿವರ್ತಿಸಬೇಕೆಂದೂ ಸ್ವತಃ ಹೃತ್ಪೂರ್ವಕವಾಗಿ ನಂಬಿ ನಡೆದುಕೊಂಡಿದ್ದರು.

ಜಾತ್ಯಾತೀತತೆ ಅವರ ವೈಯಕ್ತಿಕ ನಡೆ-ನುಡಿಗಳಲ್ಲಿ ಪ್ರತಿಫಲಿತವಾಗಿತ್ತು. ಆದರೆ ಸ್ವತಂತ್ರ ಭಾರತವೆಂದರೆ ಬಿಳಿಜನರ ಆಡಳಿತದ ಅಧಿಕಾರ, ಕಂದು ಬಣ್ಣದ ಜನರ ಕೈಗೆ ಹೋಗುತ್ತದೆ ಅಷ್ಟೇ. ನನ್ನ ಕರಿಜನರ ಸ್ವಾತಂತ್ರ್ಯ ಮುಖ್ಯ ಎಂದ ಅಂಬೇಡ್ಕರ್ ಅವರ ಒಂದು ಮಾತು ವೈಜ್ಞಾನಿಕವೂ, ವೈಚಾರಿಕವೂ ಆಗಿದ್ದುದಲ್ಲದೆ ಜಾತ್ಯಾತೀತ ಸಮಾನತೆಯ ಕಡೆಗಿಟ್ಟ ಪ್ರಥಮ ಹೆಜ್ಜೆಯೂ ಆಗಿತ್ತು. ಆದರೆ ಅವರ ಈ ಸತ್ಯವಾದ ಧೋರಣೆ ವಿಪರೀತ ಅರ್ಥ ಕಲ್ಪಿಸಿತು. ಅವರನ್ನು ಸ್ವಾತಂತ್ರ್ಯ ವಿರೋಧಿ ಎಂದೇ ಬಿಂಬಿಸಿ ಹಿಂಸಿಸಿದರು ಪಟ್ಟಭದ್ರರು. ಹಾಗೆಯೇ ಆಗಿಹೋಯಿತು. ಹೇಗೆಂದರೆ: 1951ರ ಖಾನೇಷುಮಾರಿ ನಮೂನೆಯಲ್ಲಿದ್ದ 'ಜಾತಿ' ಕಾಲಂ ಬಿಟ್ಟುಬಿಟ್ಟರು. ಖಾನೇಷುಮಾರಿ ಕಾನೂನು ರಾಷ್ಟ್ರಧ್ವ ಕಾನೂನು. ಅದರಲ್ಲಿದ್ದ ಬಹು ಮುಖ್ಯವಾದ 'ಜಾತಿ' ಕಾಲಂ ತೆಗೆಯಲು ಕಾನೂನಿಗೆ ತಿದ್ದುಪಡಿ ತಂದಿರುವ ಬಗ್ಗೆ ಯಾವುದೇ ಮಾಹಿತಿ ಇಲ್ಲ.

ಇರುವ ಮಾಹಿತಿ ಎಂದರೆ 1931ರ ಖಾನೇಷುಮಾರಿ ಸಂಪುಟದ ಪೀಠಿಕೆಯಲ್ಲಿ ಅಂದಿನ ರಿಜಿಸ್ಟ್ರಾರ್ ಜನರಲ್ ಬರೆದಿರುವ ಅವರ ವೈಯಕ್ತಿಕ ಅಭಿಪ್ರಾಯ. ಭಾರತದಲ್ಲಿ ಜಾತಿಗಳು ಅಸಂಖ್ಯಾತ. ಒಂದೇ ಜಾತಿಗೆ ಹಲವು ಹೆಸರುಗಳಿರಬಹುದು. ಒಂದೊಂದು ಪ್ರದೇಶದಲ್ಲಿ ಬೇರೆ ಬೇರೆ ಹೆಸರುಗಳಿಂದ ಸರಿಸಮಾ

ನವಾದ ಜಾತಿಗಳನ್ನು ಕರೆಯಬಹುದು. ಇತ್ಯಾದಿಗಳಿಂದಾಗಿ ಖಾನೇಷುಮಾರಿಯಲ್ಲಿ ಸಂಗ್ರಹಿಸಿದ ಜಾತಿ ವಿವರಗಳನ್ನು ಸಮೀಕ್ಷಿಸಿ ವಿಂಗಡಿಸುವ ಕೆಲಸ ಅಗಾಧವಾಗುತ್ತದಷ್ಟೇ ಅಲ್ಲ, ಬಹಳ ಕಷ್ಟಕರ ಕೆಲಸ. ಆರ್ಥಿಕ ಶೈಕ್ಷಣಿಕ ರಾಷ್ಟ್ರ ವ್ಯಾಪಿ ಲೆಕ್ಕಾಚಾರದಿಂದ ಅಭಿವೃದ್ಧಿ ಕೆಲಸಗಳ ಯೋಜನೆಗಳನ್ನು ತಯಾರಿಸಿ ಆಡಳಿತ ನಡೆಸಬಹುದು, ಎಂಬುದು. ಅವನೊಬ್ಬ 1931ರ ಬ್ರಿಟೀಷ್ ಅಧಿಕಾರಿ. ಅವನ ಕಿವಿ ಊದಿದವರು ಖಾನೇಷುಮಾರಿ ಇಲಾಖೆಯ ಕಂದು ಬಣ್ಣದ ಕ್ಲೀನ್ ಕಾಲರ್ಡ್ ಕಾರಕೂನರು.

1951ರ ಖಾನೇಷುಮಾರಿಯಲ್ಲಿ ಇದೇ ಕಂದುಜನರ ಕೈಗೆ ಅಧಿಕಾರ ಜರುಗಿತ್ತು. ಇವರ ಬಗ್ಗೆ ಇದೇ 2008ರಲ್ಲಿ ಉಚ್ಚನ್ಯಾಯಾಲಯ ಕಾರಕೂನರ ಅಭಿಪ್ರಾಯಗಳನ್ನೇ ಬದಲಿಸಲಾರದ ಅಧಿಕಾರ ವರ್ಗ ಇಲ್ಲಿದೆ ಎಂದು ಹೇಳಿರುವುದನ್ನು ಇಲ್ಲಿ ಜ್ಞಾಪಿಸುವುದು ಪ್ರಸ್ತುತ. ಇಷ್ಟೇ ಅಲ್ಲ ಎನ್.ಡಿ.ಎ ಸರ್ಕಾರ ಅಸ್ತಿತ್ವಕ್ಕೆ ಬಂದ ಹೊಸದರಲ್ಲಿ 2001ರ ಖಾನೇಷುಮಾರಿಗೆ ವ್ಯವಸ್ಥೆ ಮಾಡುವ ಕಾಲ. ಅದರ ಗೃಹಸಚಿವ ಎಲ್.ಕೆ. ಅಡ್ವಾನಿ 2001ರ ಖಾನೇಷುಮಾರಿಯನ್ನು 'ಜಾತಿ'ಯ ಕಾಲಂ ಸೇರಿಸಿ ಮಾಡುತ್ತೇವೆ ಎಂಬ ದೊಡ್ಡ ಹೇಳಿಕೆಯನ್ನು ನೀಡಿದರು. ಅಸಹಾಯಕರಾಗಿ ಅವಜ್ಞತೆಗೆ ಒಳಗಾದ ಅಸಂಖ್ಯಾತ ಜನರ ಕಣ್ಣ ಪ್ರತಿಬಿಂಬ ಮೊಳೆಯಿತು. ಅವರೆಲ್ಲರೂ ಹಿಂದುಳಿದ ಜಾತಿಗಳಿಗೆ ಸೇರಿದವರಾಗಿದ್ದರು.

ಆದರೆ 1931ರ ವಿದ್ಯಮಾನಗಳನ್ನೇ ಕಾರಕೂನ ಮನಸುಗಳ ಖಾನೇಷುಮಾರಿ ಇಲಾಖೆ ಅಡ್ವಾನಿಯವರ ಕಿವಿಯೂದಿತು. ಉದಾರಭಾವದ ಸಿಂಧಿ ಜನಾಂಗದ ಪ್ರತಿಭಿ ಅಡ್ವಾನಿಯವರಿಗೆ ಮೊದಲನೆ ಹೇಳಿಕೆ ಅರ್ಥವಾಗಿತ್ತು. ಈ ಎರಡನೇ ವಿದ್ಯಮಾನ ಅರ್ಥವಾಗಲಿಲ್ಲ. ಸರಿ ಎಂದುಬಿಟ್ಟರು. 2001ರ ಜಾತಿವಾರು ಸಮೀಕ್ಷೆ ನಡೆಯಲಿಲ್ಲ ಆದರೆ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದವರ ಏಳಿಗೆ ಕ್ರಮ ಕೈಗೊಳ್ಳುವ ಸಂವಿಧಾನಿಕ ವಿಧಿಯಿಂದಾಗಿ ಸಮಾಜದ ಈ ನಿಜವಾದ ಊನವನ್ನು ಖಾಯಂ ಆಗಿ ಬಚ್ಚಿಡಲಾಗಲಿಲ್ಲ. ಆದರೆ ಉಚ್ಚವರ್ಗಕ್ಕೆ ಸೇರಿದ ಉದ್ಯೋಗಿ ಜನರ ಹಿತ ಅಡಗಿದ್ದ ಈ ಲೆಕ್ಕಾಚಾರದ ಕೆಲಸವನ್ನೇ ರಾಜ್ಯಗಳಿಗೆ ಕೇಂದ್ರದಿಂದ ರವಾನಿಸಿಬಿಟ್ಟರು. ಅಲ್ಲಿಗೆ ಕಾನೂನಿನ ಪ್ರಕಾರ ವಿಧಿವತ್ತಾದ ಜಾತಿವಾರು ಖಾನೇಷುಮಾರಿ ತಪ್ಪಿತು. ಉಚ್ಚವರ್ಗದವರ ರೊಟ್ಟಿಯೂ ತುಪ್ಪವೂ ಎಗ್ಗಿಲ್ಲದೆ ಮುಂದುವರೆಯಿತು. ಈ ರೂಪಿನ ರಾಷ್ಟ್ರದ ಹಣ ರಾಜ್ಯಗಳಿಗೆ ಹಂಚಿಕೆ ಆಯಿತು.

ತೆರಿಗೆದಾರರ ರೊಕ್ಕವನ್ನು ಕೇಂದ್ರದಲ್ಲೊಂದು ಶಾಶ್ವತ ಹಿಂದುಳಿದವರ ಆಯೋಗವೆಂದೂ, ರಾಜ್ಯಗಳ ಮಟ್ಟದ ಹಿಂದುಳಿದವರ ಶಾಶ್ವತ ಆಯೋಗಗಳನ್ನು ರಚಿಸಿದರು. ಅವರ ಕರ್ತವ್ಯ ಹಿಂದುಳಿದ ಜಾತಿಗಳ ಅಭಿವೃದ್ಧಿ ಸಮೀಕ್ಷೆಮಾಡಿ ಕಾಲಕಾಲಕ್ಕೆ ಮುಂದುವರೆದ ಜಾತಿಗಳನ್ನು ಹಿಂದುಳಿದವರ ಪಟ್ಟಿಯಿಂದ ತೆಗೆದುಹಾಕುವುದು ಎಂದು ನಿಷ್ಕರ್ಷ ಮಾಡಿದ್ದರು. ಆದರೆ ಆದದ್ದೇನು? ಈ ಆಯೋಗಗಳು ರಾಷ್ಟ್ರಮಟ್ಟದಲ್ಲೂ, ರಾಜ್ಯಮಟ್ಟದಲ್ಲೂ ಪ್ರವಾಸಗಳನ್ನು ಮಾಡಿ ತಮ್ಮ ಕರ್ತವ್ಯದಿಂದ ದೂರವಾದ ಉಪೇಕ್ಷೆಗೊಳಗಾದ ಜಾತಿಗಳವರಿಂದ ಪಟ್ಟಿಗೆ ಸೇರಿಸಲು ಅರ್ಜಿಗಳನ್ನು ಆಹ್ವಾನಿಸಿದರು. ಮುಂದೆ ಜಾತಿವಾರು ಸಮೀಕ್ಷೆಗಳನ್ನೇ ನಡೆಸಬೇಕೆಂದು ಸರ್ಕಾರಗಳನ್ನು ಕೋರಿ ಮಂಜೂರಾತಿಯನ್ನು ಪಡೆದರು, ಸಮೀಕ್ಷೆಗಳನ್ನು ನಡೆಸಿದರು.

ಯಾವುದೂ ನೈಜ ಹಿಂದುಳಿದ ಜಾತಿಗಳ ಜನಕ್ಕೆ ಉಪಯೋಗವಾಗಲಿಲ್ಲ. ರಾಜಕೀಯ ಅಸ್ಥಿರತೆಗಳ, ವಿವೇಚನೆಗಳ, ಇಷ್ಟಾನಿಷ್ಟಗಳ ಕಾರಣಗಳೇನೇ ಇದ್ದರೂ ಈ ಆಯೋಗಗಳು ಕಾನೂನು ಬದ್ಧವಾಗಿ ರಚಿಸಲ್ಪಟ್ಟಿದ್ದರೂ ಕೇವಲ ಹಣ, ಸಮಯ ವ್ಯರ್ಥವಾಯಿತಲ್ಲದೇ ಉಪಯೋಗ ಏನೂ ಆಗಲಿಲ್ಲ. 1931ರ 71ವರ್ಷಗಳ ಹಿಂದಣ ಜಾತಿ ಸಮೀಕ್ಷೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಪ್ರಸಕ್ತ ಕಂಪ್ಯೂಟರ್ ಯುಗದಲ್ಲಿ ಸಾಕಷ್ಟು ಶಾರೀರಿಕ ಶ್ರಮ ಕಡಿಮೆಯಾಗಿದ್ದೂ, ರಾಷ್ಟ್ರವ್ಯಾಪಿ ನಡೆಯುವ ಖಾನೇಷುಮಾರಿ, ಈ ದೇಶದ ದಾರಿದ್ರ್ಯ ಎಲ್ಲಿ ಅಡಗಿದೆ, ಅದರ ಮೂಲೋತ್ಪಾಟನೆಗೆ ಏಕೆ ನಿರ್ದಿಷ್ಟ ಕಾರ್ಯಕ್ರಮ ಕೈಗೊಳ್ಳಲಿಲ್ಲ ಎಂಬುದು ಜಾಹೀರಾಗುತ್ತದಲ್ಲದೆ, ಉಚ್ಚವರ್ಗದ ಜನರ ಅತಿಯಾಸೆಗೆ, ಹಿತಾಸಕ್ತಿಗೆ ಮಾರಕವಾಗುತ್ತದೆ ಎಂಬುದೇ ಈ ಕುತಂತ್ರ ನೀತಿಯ ಗುರಿ. ರಾಷ್ಟ್ರದ ಸಮಗ್ರ ಅಭಿವೃದ್ಧಿ, ಉದ್ಯೋಗವೊಂದೇ ಅಲ್ಲ ನಿರಕ್ಷರತೆ ನಿರ್ಮೂಲನೆ, ಶುಚಿ ಜೀವನ ಪರಿಸರ, ಕೈತುಂಬ ಕೆಲಸ, ಹೊಟ್ಟೆತುಂಬಾ ಊಟ, ತಲೆಗೊಂದು ಸೂರು, ಇತ್ಯಾದಿಗಳಿಂದ ಯಾರಿಗೂ ಹಾನಿ ಇಲ್ಲ ಎಂಬ ಅಭಿಪ್ರಾಯ ಬುದ್ಧಿವಂತ ಜನರಿಗೆ ಹೊಳೆಯದೆ ಇರುವುದು ಆಶ್ಚರ್ಯ. ದೇಶ ಮುಂದುವರೆದರೆ ತಾವೂ ಭಾಗ್ಯವಂತರೇ ಎಂದರಿಯದ ಪ್ರತಿಭಾವಂತರ ನಡವಳಿಕೆ, ವಿಚಾರವಂತಿಕೆ ವಿಶಾಲಗೊಳ್ಳಲೇಬೇಕು.

ಭಾರತೀಯ ಸಮಾಜವೆಂಬ ಶರೀರದಲ್ಲಿ ಎಲ್ಲಿ ಊನವಿದೆ, ಕುರುಡಿದ್ದಿದೆ, ಕಿವುಡುತನವಿದೆ, ಪ್ರತ್ಯೇಕತೆ ಇದೆ ಅಲ್ಲಿಗೆ ಸರ್ವ ರಾಷ್ಟ್ರೀಯ ಉತ್ಪತ್ತಿ, ಪ್ರತಿಭೆ ಉಪಯೋಗಿಸಿ ಸದೃಢ ಸಮಾಜ ನಿರ್ಮಾಣ ಆದ್ಯತೆ ಪಡೆಯಬೇಕು. ಇದಕ್ಕಾಕೆ ವಿರೋಧ. ಸಮಾಜದ ಕ್ರಿಯಾಶೀಲ ಜಾತಿಗಳಾದ ಕಮ್ಮಾರ, ಕುಂಬಾರ, ಬಡಿಗ, ಅಗಸ, ಕ್ಷೌರಿಕ, ನೇಯ್ಗೆಯವ, ಕಂಬಳಿ ಮಾಡುವವ, ಕಾಡಿನಲ್ಲಿ ಅಲೆಮಾರಿ ಜನಾಂಗ, ಅರೆ ಅಲೆಮಾರಿ, ಕ್ರಿಮಿನಲ್‌ಟ್ರೈಬ್, ಡಿನೋಟಿಫೈಡ್‌ಟ್ರೈಬ್ ಇತ್ಯಾದಿ ಹಲವಾರು ಸಾವಿರ ಜಾತಿಗಳಿಗೆ ಸ್ವತಂತ್ರ ಭಾರತದಲ್ಲಿ ತಮ್ಮ ಅಂತಸ್ತನ್ನು ಕೋರಿ ತಮ್ಮ ಹಕ್ಕು ಸ್ಥಾಪಿಸಲು ಅವಕಾಶ ಮಾಡಿಕೊಡಲು 2011ರ ಖಾನೇಷುಮಾರಿ ನಮೂನೆಯಲ್ಲಿ 'ಜಾತಿ' ಕಾಲಂ ಸೇರಿಸಬೇಕು. ಸ್ವಲ್ಪ ಹೆಚ್ಚು ಕಡಿಮೆಯಾದರೂ [illegible] ಪ್ರಕಾರ ರಾಷ್ಟ್ರೀಯ ಸಮಾಜದ [illegible] ಪ್ರಕಾರವಾಗಬೇಕು. ಯೋಜನೆಗಳು ಅಗತ್ಯತೆಗಳಿಗನುಸಾರವಾಗಿ, ಅಗತ್ಯ ಗುಂಪುಗಳಿಗೆ ಸಮರ್ಪಕವಾಗಿರುವಂತೆ ರೂಪುಗೊಳ್ಳಲು ಸಾರ್ವತ್ರಿಕ ಮನವರಿಕೆಗಾಗಿ ಖಾನೇಷುಮಾರಿಯಲ್ಲಿ ಜಾತಿಯ ಚಿತ್ರ ಸರಿಯಾಗಿ ಮೂಡಬೇಕು. ಅಂತರಾಷ್ಟ್ರೀಯವಾಗಿ ನಾಚಿಕೆಯಾದರೂ ಚಿಂತೆ ಇಲ್ಲ.

ಸರ್ವರಿಗೂ ಸಹಜೀವನ ಮುಖ್ಯ. ಸಮಾನತೆಯೆಡೆಗೆ ದಿಕ್ಕು ತೋರುವುದವಶ್ಯ. ಪ್ರತಿ ಪ್ರಜೆಯೂ ಒಂದು ಮೌಲ್ಯ. ಪ್ರತಿ ಪ್ರಜೆಗೂ ಒಂದು ಮತ; ಹಾಗೂ ಸ್ವಾತಂತ್ರ್ಯ, ಸಮಾನತೆ, ಸಹೋದರ ಭಾವಗಳ ಪ್ರಚೋದನೆಗೆ ಸರ್ವರಿಗೂ ಒಂದು ದೃಷ್ಟಿಕೋನ, ಒಂದು ಆಕಾಂಕ್ಷೆ ನಿರ್ಮಾಣವಾಗಬೇಕು. ಸಾರ್ವತ್ರಿಕ ಮತದಾನದ ಹಕ್ಕಿನ ಬಗೆಗೆ ಕೆಲ ಸಂಘಟನೆಗಳಿಗೆ ವಿರೋಧವಿದೆ. ಆದರೆ ಅಡಲ್ಟ್‌ಫ್ರಾಂಚೈಸ್ ಎಂಬುದು ಪ್ರಪಂಚದಾದ್ಯಂತ ಒಪ್ಪಿರುವ ಆಡಳಿತ ಕ್ರಮ. ಅದನ್ನು ಸಡಿಲಗೊಳಿಸುವುದು ಸಾಧ್ಯವೇ ಇಲ್ಲದ ಕೆಲಸ. ಅಲ್ಲದೆ ಕೆಲವರ ಅಧಿಕಾರವನ್ನು ಹಲವರು ಒಪ್ಪಿಕೊಳ್ಳುವ ಕಾಲ ಸಂದುಹೋಗಿದೆ, 61 ವರ್ಷಗಳ ಸ್ವಾತಂತ್ರ್ಯದೇಶ.

ಅಷ್ಟಕ್ಕೂ 'ಸರ್ವೇ ಜನಾಃ ಸುಖಿನೋಭವಂತು' ಎಂದು ಯಾರ್‍ಯಾರು ಎಲ್ಲೆಲ್ಲಿರುವರೋ ಅವರನ್ನು ಅಲ್ಲಲ್ಲೇ ಸುಖವಾಗಿಡು ಎಂಬರ್ಥದ ಅವಿವೇಕ ಇನ್ನು ಸಲ್ಲದು. ಸರ್ವಜನರಿಗೂ ಸುಖ ಎಟುಕುವಂತಿರಬೇಕು-ಅದಕ್ಕಾಗಿ ವೈಜ್ಞಾನಿಕವಾಗಿ ಶ್ರಮಿಸಬೇಕು ಎಂಬುದು ಪ್ರಾಮುಖ್ಯವಾದುದು. ಅವಕಾಶಗಳು ಸರ್ವರಿಗೂ ಎಟುಕುವಂತಾದಾಗಲೇ ಜಾತಿಗಳು ಚೇತರಿಸಿಕೊಳ್ಳುತ್ತವೆ. ಸರ್ಕಾರಗಳಿಗೆ ಯೋಜನೆಗಳನ್ನು ಯಾವ ಯಾವ ಗುಂಪುಗಳಿಗೆ ಅಗತ್ಯವೆನಿಸುವ ಪರಿಹಾರಗಳನ್ನು ರೂಪಿಸಲು ಸಹಾಯಕವಾಗುತ್ತದೆ. ಕಗ್ಗಂಟಾಗಿರುವ ಮಹಿಳಾ ಮೀಸಲಾತಿಯನ್ನು ಸರಳಗೊಳಿಸಲು ಜಾತಿಯ ಕಾಲಂ ಖಾನೇಷುಮಾರಿಯಲ್ಲಿ ಅತ್ಯವಶ್ಯಕ. ನಮ್ಮ ಸಮಾಜ ಸಮಾನತೆಯೆಡೆಗೆ ಹೆಜ್ಜೆ ಇಕ್ಕಲು ಯಾರ್‍ಯಾರು ಎಲ್ಲೆಲ್ಲಿ ಬವಣೆಗೊಳಗಾಗಿದ್ದಾರೆ ಎಂಬುದನ್ನು ತಿಳಿಯಲು ಇದು ಒಂದು ಕಾಲಂ ಖಾನೇಷುಮಾರಿಯಲ್ಲಿ ಅತ್ಯಂತ ಸಹಾಯಕವಾಗುತ್ತದೆ. □

ಭಾರತೀಯ ಸಮಾಜವೆಂಬ ಶರೀರದಲ್ಲಿ ಎಲ್ಲಿ ಊನವಿದೆ, ಪ್ರತ್ಯೇಕತೆ ಇದೆ ಅಲ್ಲಿಗೆ ಸರ್ವರಾಷ್ಟ್ರೀಯ ಉತ್ಪತ್ತಿ, ಪ್ರತಿಭೆ ಉಪಯೋಗಿಸಿ ಸದೃಢ ಸಮಾಜ ನಿರ್ಮಾಣ ಆದ್ಯತೆ ಪಡೆಯಬೇಕು. ಇದಕ್ಯಾಕೆ ವಿರೋಧ. ಸಮಾಜದ ಕ್ರಿಯಾಶೀಲ ಜಾತಿಗಳಾದ ಕಮ್ಮಾರ, ಕುಂಬಾರ, ಬಡಿಗ, ಅಗಸ, ಕ್ಷೌರಿಕ, ನೇಯ್ಗೆಯವ, ಕಂಬಳಿ ಮಾಡುವವ, ಕಾಡಿನಲ್ಲಿ ಅಲೆಮಾರಿಜನಾಂಗ, ಅರೆ ಅಲೆಮಾರಿ, ಇತ್ಯಾದಿ ಹಲವಾರು ಸಾವಿರ ಜಾತಿಗಳಿಗೆ ತಮ್ಮ ಹಕ್ಕು ಸ್ಥಾಪಿಸಲು ಅವಕಾಶ ಮಾಡಿಕೊಡಲು ೨೦೧೧ನೇ ಖಾನೇಷುಮಾರಿ ನಮೂನೆಯಲ್ಲಿ 'ಜಾತಿ' ಕಾಲಂ ಸೇರಿಸಬೇಕು. ಯೋಜನೆಗಳು ಸಮರ್ಪಕವಾಗಿರುವಂತೆ ರೂಪುಗೊಳ್ಳಲು ಸಾರ್ವತ್ರಿಕ ಮನವರಿಕೆಗಾಗಿ ಖಾನೇಷುಮಾರಿಯಲ್ಲಿ ಜಾತಿಯ ಚಿತ್ರ ಸರಿಯಾಗಿಮೂಡಬೇಕು. ಅಂತ ರಾಷ್ಟ್ರೀಯವಾಗಿ ನಾಚಿಕೆ ಯಾದರೂ ಚಿಂತೆ ಇಲ್ಲ. ಸರ್ವರಿಗೂ ಸಹ್ಯಜೀವನ ಮುಖ್ಯ. ಸಮಾನತೆಯೆಡೆಗೆ ದಿಕ್ಕು ತೋರುವುದವಶ್ಯ. ಪ್ರತಿ ಪ್ರಜೆಯೂ ಒಂದು ಮೌಲ್ಯ. ಪ್ರತಿ ಪ್ರಜೆಗೂ ಒಂದು ಮತ; ಹಾಗೂ ಸ್ವಾತಂತ್ರ್ಯ, ಸಮಾನತೆ, ಸಹೋದರ ಭಾವಗಳ ಪ್ರಚೋದನೆಗೆ ಸರ್ವರಿಗೂ ಒಂದು ದೃಷ್ಟಿಕೋನ, ಒಂದು ಆಕಾಂಕ್ಷೆ ನಿರ್ಮಾಣವಾಗಬೇಕು.

ಭಯೋತ್ಪಾದನೆಯ ಹಿಂದಿರುವವರಾರು?

ಮುಂಬೈ ಮೇಲೆ ಭಯೋತ್ಪಾದಕರು ನಡೆಸಿದ ಭೀಕರ ದಾಳಿಯನಂತರ ದೇಶದ ರಕ್ಷಣೆ ಕುರಿತಾಗಿ ಹೊಸ ಆಲೋಚನೆಗಳು ಆರಂಭವಾಗಿವೆ. ಆದರೆ ಈ ಯಾವುದೇ ಚಿಂತನೆಗಳು ಹರಳುಗಟ್ಟುವ ಮೊದಲೇ ಭಯೋತ್ಪಾದಕರು ಹೊಸ ತಂತ್ರಗಳ ಮೂಲಕ ಮತ್ತೆ ಹೊಸ ದಾಳಿ ಆರಂಭಿಸಿರುತ್ತಾರೆ. ಭಯೋತ್ಪದನೆಯನ್ನು ತಡೆಗಟ್ಟುವುದಕ್ಕೆ ನಡೆಯುತ್ತಿರುವ ಪ್ರಯತ್ನಗಳ ಜತೆಯಲ್ಲೇ ಅದರ ಹುಟ್ಟಿಗೆ ಕಾರಣವಾದ ಅಂಶಗಳತ್ತ ಗಮನ ಹರಿಸದೇ ಹೋದರೆ ಆನೆಯನ್ನು ಬೇಟೆ ಮಾಡಲು ಕುರುಡನನ್ನು ಬಿಟ್ಟಂತಾಗುತ್ತದೆ. ಭಾರತದ ಸ್ಥಿತಿ ಈಗ ಇದೇ ಆಗಿದೆ. ಬೇಜವಾಬ್ದಾರಿ ಧಾರ್ಮಿಕ ಮುಖಂಡರು ಮತ್ತು ರಾಜಕೀಯ ನಾಯಕರು ತಮ್ಮ ಅವಿವೇಕದ ಹೇಳಿಕೆಗಳ ಮೂಲಕ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುತ್ತಿದ್ದಾರೆ. ಪರೋಕ್ಷವಾಗಿ ಭಯೋತ್ಪಾದನೆಗೆ ಪ್ರೇರಣೆಯಾಗುತ್ತಿದ್ದಾರೆ. ಹಾಗಾದರೆ ಭಯೋತ್ಪಾದನೆ ಹಿಂದಿರುವವರಾರು ?

ಎಂ.ಪಿ ಉಮೇಶಚಂದ್ರ

"ಕಾಂಗ್ರೆಸ್-ಬಿಜೆಪಿಗಳು ನನ್ನನ್ನು ಚುನಾವಣೆಯಲ್ಲಿ ಮುಲಿಸಲಾರರು. ಹಾಗಾಗಿ ಭಯೋತ್ಪಾದಕ ಸಂಘಟನೆಗಳೊಂದಿಗೆ ಅವರಿಗಿರುವ ನಂಟನ್ನು ಬಳಸಿಕೊಂಡು ನನ್ನನ್ನು ಕೊಲ್ಲಲು ಸಂಚು ಹೂಡಿದ್ದಾರೆ"

– **ಮಾಯಾವತಿ**, ಉತ್ತರ ಪ್ರದೇಶದ ಮುಖ್ಯಮಂತ್ರಿ,

ದಿನಾಂಕ: 09–08–08 ರಂದು ಲಖ್ನೋದಲ್ಲಿ ನಡೆದ BSP ರ್‍ಯಾಲಿಯಲ್ಲಿ ಆಡಿದ್ದು.

"ಇಂಡಿಯನ್ ಮುಜಾಹಿದೀನ್ ಎನ್ನುವುದು ಇಂಟಲಿಜೆನ್ಸ್ ಬ್ಯೂರೋ (ಕೇಂದ್ರ ಸರ್ಕಾರದ ಬೇಹುಗಾರಿಕೆ ಸಂಸ್ಥೆ)ದ ಸೃಷ್ಟಿ. ಇದನ್ನು ಮುಸ್ಲಿಮರನ್ನು ಪಿಶಾಚಿಗಳಾಗಿ ಚಿತ್ರಿಸಲು ಮಾಡಲಾಗಿದೆ."

– **ಶಾಹಿದ್ ಬದರ್**, ಮಾಜಿ ಸಿಮಿ ನಾಯಕ,

ದಿನಾಂಕ: 13–10–08ರ INDIA TODAY ನಿಯತಕಾಲಿಕೆಗೆ ನೀಡಿದ ಸಂದರ್ಶನದಲ್ಲಿ. ಪುಟ : 50

ಬಿಜೆಪಿಯ ಹಿರಿಯ ನಾಯಕಿ, ಮಾಜಿ ಕೇಂದ್ರ ಸಚಿವೆ ಶ್ರೀಮತಿ ಸುಷ್ಮಾ ಸ್ವರಾಜ್ ಎರಡು ತಿಂಗಳ ಹಿಂದೆ ಬೆಂಗಳೂರು ಹಾಗೂ ಅಹಮದಾಬಾದ್‌ಗಳಲ್ಲಿ ನಡೆದ ಬಾಂಬ್ ಸ್ಫೋಟಗಳ ಹಿನ್ನಲೆಯಲ್ಲಿ ಆಡಿರುವ ಬಹಿರಂಗ ಮಾತುಗಳು ನಮ್ಮ ಪ್ರಜಾತಂತ್ರ ಹಾಗೂ ಸಾಮಾಜಿಕ ಸಾಮರಸ್ಯದ ಬುಡಗಳನ್ನು ವಿಪತ್ತಿಗೆ ಗುರಿ ಮಾಡುತ್ತಿರುವ ಭಯೋತ್ಪಾದನೆ ಮತ್ತು ಕೋಮು ದಳ್ಳುರಿ ಹಾಗೂ ಇವುಗಳೊಂದಿಗೆ ಕಾಂಗ್ರೆಸ್ ಮತ್ತು ಬಿಜೆಪಿಗಳಿಗಿರುವ ನಿಕಟತೆಯ ಕುರಿತು ಅತ್ಯಮೂಲ್ಯ ಸುಳಿವನ್ನು ಕೊಡುತ್ತದೆ. ಇತ್ತೀಚೆಗೆ 'ದೆಹಲಿಯ ಜಾಮಿಯಾ ನಗರದಲ್ಲಿ ನಡೆದದ್ದು ನಕಲಿ ಎನ್‌ಕೌಂಟರ್; ಮತ್ತು ಅದರಲ್ಲಿ ಮೋಹನ್‌ಚಂದ್ರ ಶರ್ಮಾ ಎಂಬ ಪೊಲೀಸ್ ಅಧಿಕಾರಿಯ ಹತ್ಯೆಯಲ್ಲಿ ಪೊಲೀಸರದೇ ಪಾತ್ರವಿದೆ ಎಂಬುದನ್ನು ಅವರ ಕುಟುಂಬದವರೇ ಶಂಕಿಸಿರುವುದು ಹಾಗೂ ಮಂಗಳೂರಿನ ಉಲ್ಲಾಳದಲ್ಲಿ ಅಮಾಯಕರನ್ನು ಬಂಧಿಸಲಾಗಿದೆ' ಎನ್ನುವ ಹೊಸ ಆರೋಪಗಳು ಹೆಚ್ಚು ನಿಜವಾಗುತ್ತಿರುವ ಹಿನ್ನಲೆಯಲ್ಲಿ ಸುಷ್ಮಾರ ಮಾತುಗಳನ್ನು ನಾವು ಮತ್ತೆ ಜ್ಞಾಪಿಸಿಕೊಳ್ಳುವುದು ಮುಖ್ಯ.

"ಬೆಂಗಳೂರು ಮತ್ತು ಅಹಮದಾಬಾದ್‌ಗಳಲ್ಲಿ ನಡೆದಿರುವ ಬಂಬ್ ಸ್ಫೋಟಗಳು ಪಾರ್ಲಿಮೆಂಟ್‌ನಲ್ಲಿ ಸಂಸದರ ಓಟುಗಳನ್ನು ಹಣದಿಂದ ಖರೀದಿಸಿದ ಹಗರಣದಿಂದ ಜನತೆಯ ಗಮನವನ್ನು ಬೇರೆಡೆ ಸೆಳೆಯಲು ಹಾಗೂ ಅಮೇರಿಕದೊಂದಿಗೆ ಅಣುಬಂಧವನ್ನು ಮಾಡಿಕೊಂಡ ಪರಿಣಾಮವಾಗಿ ಮುನಿಸಿಕೊಂಡಿರುವ ಮುಸ್ಲಿಮರನ್ನು ಹಿಂದೆ ಕರೆ ತರಲು ಮಾಡಿರುವ ಕುತಂತ್ರ" ಎಂದು ಹೇಳಿದ್ದರು ಸುಷ್ಮಾ ಸ್ವರಾಜ್.

ಅಲ್ಲದೆ, ಸ್ವತಃ ಸುಷ್ಮಾ ಸ್ವರಾಜ್ ಈ ಮಾತುಗಳು ತಾನು off-the-cuff (ಅಂದರೆ, ಬೇಕಾಬಿಟ್ಟಿಯಾಗಿ, ಆತುರಾತುರವಾಗಿ, ಸಂದರ್ಭ ಸ್ಫೂರ್ತಿಯಿಂದ ಅಥವಾ ಬಾಯಿ ತಪ್ಪಿ) ಆಡಿ ಬಿಟ್ಟರುವ ಮಾತುಗಳಲ್ಲ ಎಂಬುದನ್ನು ಒಂದಕ್ಕಿಂತ ಹೆಚ್ಚು ಬಾರಿ ಮಾಧ್ಯಮಗಳೊಂದಿಗೆ ಸ್ಪಷ್ಟ ಪಡಿಸಿದ್ದಾರೆ. ಇಲ್ಲಿ ಯಾವುದನ್ನೂ ಊಹೆಗೆ ಬಿಡದೆ 'ಬಾಂಬ್ ಸ್ಫೋಟಗಳ ಹಿಂದಿನ ನಿಜವಾದ ರೂವರಿ ಕೇಂದ್ರದಲ್ಲಿರುವ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರ' ಎಂದು ಸುಷ್ಮಾ ತಾನು ಆಡಿರುವ ಮಾತುಗಳಿಗೆ ಬದ್ಧರಾಗೇ ಇರುವುದಾಗಿ ಸ್ಪಷ್ಟ ಪಡಿಸಿದ್ದಾರೆ

ಯಾವುದೇ ಕೋನದಿಂದ ನೋಡಿದರೂ ಸುಷ್ಮಾ ಸ್ವರಾಜ್‌ರ ಈ ಹೇಳಿಕೆ ಐತಿಹಾಸಿಕವಾದುವು. ಈ ದೇಶವನ್ನು ಪ್ರೀತಿಸುತ್ತೇನೆ ಎಂದು ಹೇಳುವ ಪ್ರತಿಯೊಬ್ಬನೂ/ಪ್ರತಿಯೊಬ್ಬಳೂ ಸುಷ್ಮಾರ ಮಾತುಗಳನ್ನು ಗಂಭೀರವಾಗಿ ಆಲಿಸದೆ, ಅದರ ಹಿಂದು-ಮುಂದುಗಳನ್ನು ಚಿಂತಿಸದೇ ಹೋದರೆ, ಅದು ಈ ದೇಶದ ಜನರ ರಕ್ಷಣೆ ಹಾಗೂ ಭವಿಷ್ಯಕ್ಕೆ ಈಗ ಸಿಡಿಯುತ್ತಿರುವ ಬಾಂಬುಗಳಿಗಿಂತಲೂ ಹೆಚ್ಚು ಅಪಾಯ, ನಷ್ಟಗಳನ್ನು ಒಡ್ಡುತ್ತದೆ. ಆದಾಗ್ಯೂ, ಸಂಘ ಪರಿವಾರದವರಾದ ಸುಷ್ಮಾ ಸ್ವರಾಜ್ ಕಾಂಗ್ರೆಸ್ ಅನ್ನು ಮಾತ್ರ ದೂರಿದ್ದಾರೆ ಹೊರತು ಬಿಜೆಪಿ ದೂರಿಲ್ಲ. ಆದರೇನಂತೆ, ಕಾಂಗ್ರೆಸ್, ಬಿಜೆಪಿ ಇಬ್ಬರೂ ಇಸ್ಲಾಮಿಕ್ ಭಯೋತ್ಪಾದನೆಯ ಹಾಗೂ ಕೋಮು

ದಳ್ಳುರಿಯ ಹಿಂದಿರುವ ನಿಜವಾದ ಶಕ್ತಿಗಳು ಎನ್ನುವ ಸತ್ಯಕ್ಕೆ, ಸುಷ್ಮಾ ಹೇಳಿಕೆ, ಹಾಗೂ ಅದಕ್ಕೆ ಕಾಂಗ್ರೆಸ್, ಬಿಜೆಪಿ ಹಾಗೂ ಮಾಧ್ಯಮಗಳು ವರ್ತಿಸಿರುವ ರೀತಿಗಳು ಒಂದು ಅಮೂಲ್ಯ ಸಾಂದರ್ಭಿಕ ಸಾಕ್ಷಾಧಾರ (CIRCUMSTANTIAL EVINDENCE) ವಾಗುತ್ತವೆ. ಸುಷ್ಮಾ ಹೇಳಿದ ಸತ್ಯವನ್ನು ಸಾಬೀತು ಪಡಿಸುವ ಇನ್ನಷ್ಟು ಸಾಕ್ಷ್ಯಾಧಾರಗಳು ನಮ್ಮ ಮುಂದಿವೆ.

ಬೆಂಗಳೂರಿನಲ್ಲಿ ಬಾಂಬ್ ಸ್ಫೋಟಗಳು ನಡೆದಾಗ "ಅರೇ, ಇದೆಲ್ಲಾ ಸರಕಾರದವರೇ ಮಾಡ್ತಾ ಇರೊದು..." ಎನ್ನುವಂತಹ ಮಾತುಗಳನ್ನು ಸಾಮಾನ್ಯ ಜನರಿಂದ ಹಿಡಿದು ಅನೇಕ ಪ್ರಜ್ಞಾವಂತರು ಆಡಿದ್ದಾರೆ. ಪುರಾವೆ ಇಲ್ಲದೆ ಮಾತನಾಡುವುದು ಸಭ್ಯತೆಯಲ್ಲ ಎನ್ನುವ ಕಾರಣಕ್ಕೆ ನಮ್ಮಂತಹವರು ಸುಮ್ಮನಿದ್ದೆವು. ಆದರೆ ಸುಷ್ಮಾ ಧೈರ್ಯವಾಗಿ ಮನಸ್ಸು ಬಿಟ್ಟು ಬಹಿರಂಗವಾಗಿ ಈ ಮಾತುಗಳನ್ನು ಆಡಬೇಕಾದರೆ ಆಕೆಗೆ ಸಾಕಷ್ಟು ಪುರಾವೆಗಳು ಇವೆ ಎಂದೇ ಅರ್ಥ. ಮೊದಲೇ ಸುಷ್ಮಾ ಸೀದಾ ಸಾದ ಮಾತುಗಾರಿಕೆಗೆ ಹೆಸರಾದವರು. ಅದಕ್ಕೆಂದೇ ಸಂಘ ಪರಿವಾರ ಆಕೆಯನ್ನು ಮುಂದಿಟ್ಟಿರುವುದು. ತಮ್ಮ ಹೇಳಿಕೆಗೆ ಪೂರಕವಾದ ಅನುಭವ, ಮಾಹಿತಿ, ಮತ್ತು ಜ್ಞಾನ ಆಕೆಯ ಅರಿವಿಗೆ ಬಂದಿರಲೇಬೇಕು. ಯಾಕೆಂದರೆ ಸುಷ್ಮಾರ ಮಾತುಗಳನ್ನು ಗಾಸಿಪ್ ಎಂದು ನಿರ್ಲಕ್ಷಿಸಿ ಬಿಡಲು ಆಕೆ ಏನೂ ಸಾಧಾರಣ ಮಹಿಳೆಯಲ್ಲ. ಕೇಂದ್ರ ಸರಕಾರದ ಸಂಪುಟದ ಸಚಿವೆ ಆಗಿದ್ದವರು. ಅದಕ್ಕೆ ಮೊದಲು ಸುಪ್ರೀಂ ಕೋರ್ಟ್ ಲಾಯರ್ ಆಗಿ ಹೆಸರು ಮಾಡಿದ್ದವರು. ಪ್ರಭುತ್ವದ ಕಾರ್ಯ ವೈಖರಿ–ವಿನ್ಯಾಸಗಳನ್ನು ಹತ್ತಿರದಿಂದ ನೋಡಿದವರು. ಅವರ ಬಿಜೆಪಿ ವಿರೋಧ ಪಕ್ಷದಲ್ಲಿದ್ದಾಗ ಮತ್ತು ಅಧಿಕಾರಕ್ಕೆ ಬಂದಾಗ ಏನೇನು ಕುತಂತ್ರಗಳನ್ನು ಹೆಣೆದು ಅವುಗಳನ್ನು ಸಾಧಿಸುವ ಸಲುವಾಗಿ ಏನೆಲ್ಲಾ ಕಾರ್ಯ ನೀತಿಗಳನ್ನು ರೂಪಿಸುತ್ತದೆ ಎಂಬುದರ ಆಪ್ತ ಪರಿಚಯ ಅವರಿಗಿದೆ. ಆದುದರಿಂದ ಸುಷ್ಮಾರ ಮಾತುಗಳನ್ನು ಯಾವ ಕಾರಣಕ್ಕೂ ನಿರ್ಲಕ್ಷಿಸುವಂತಿಲ್ಲ. ಬದಲಿಗೆ ಅವರ ಮಾತುಗಳನ್ನು ಗಂಭೀರವಾಗಿ ಪರಿಗಣಿಸುವ, ಅಂದರೆ, ಆಡಳಿತರೂಢ- ಪಕ್ಷವೊಂದು ತನ್ನ ಪೋಲೀಸ್–ಜಾಗೃತದಳಗಳಂತಹ ಇಲಾಖೆ–ಸಂಸ್ಥೆಗಳನ್ನು ಬಳಸಿಕೊಂಡು ಕೃತಕ ಭಯೋತ್ಪಾದನೆಯನ್ನು ಹುಟ್ಟು ಹಾಕಿ ಅದನ್ನು ಒಂದು ನಿರ್ದಿಷ್ಟ ಸಮುದಾಯದ ತಲೆಗೆ ಕಟ್ಟಿ ರಾಜಕೀಯ ದುರ್ಲಾಭ ಮಾಡಿಕೊಳ್ಳಬಹುದು ಎಂಬ ಹೈಪೋಥೀಸೀಸ್ ಅನ್ನು ಗಂಭೀರವಾಗಿ ಚರ್ಚಿಸಲು ಒತ್ತಾಯಿಸುವ ಸಂಗತಿಗಳೇ ನಮ್ಮ ಮುಂದೆ ಹೆಚ್ಚಾಗಿವೆ.

ಮೊದಲನೆಯದು ಮೇಲ್ನೋಟಕ್ಕೆ ಸಾಬೀತು ಆಗುವಂತಹುದು. ಇತ್ತೀಚೆಗೆ ಬೆಂಗಳೂರಿನಲ್ಲಿ ಕೋಮು ಗಲಭೆ ಎಬ್ಬಿಸಲು ಯತ್ನಿಸಿದ್ದು ಶ್ರೀರಾಮ ಸೇನೆಯವರು ಎಂಬುದು ಬಹಿರಂಗವಾಗಿ ಅದರ ಕಾರ್ಯಕರ್ತರನ್ನು ಬಂಧಿಸಲಾಗಿದೆ.

ಎರಡನೆಯದನ್ನು ಸ್ವಲ್ಪ ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ನಮ್ಮ ದೇಶದಲ್ಲಿ ಎಲ್ಲಿಯೋ ಭಯೋತ್ಪಾದಕ ಕೃತ್ಯ ನಡೆಯಲಿ, ಬಾಂಬ್ ಸ್ಫೋಟಗಳಾಗಲಿ... ಅವುಗಳ ತರುವಯ ಬಂಧಿತರಾಗುವ 'ಭಯೋತ್ಪಾದಕ'ರೆಲ್ಲಾ ನೇಪಥ್ಯದಿಂದ ಬರುತ್ತಾರೆ, ಅವರು ಯಾರು? ಅವರೆಲ್ಲ ನಿಜವಾಗಿ ಯಾವ ಧರ್ಮದವರು, ಯಾವ ಊರು, ಯಾವ ದೇಶ, ಅವರ ತಂದೆ–ತಾಯಿ, ಕುಟುಂಬಗಳ

ಸುಷ್ಮಾ ಧೈರ್ಯವಾಗಿ ಮನಸ್ಸು ಬಿಟ್ಟು ಬಹಿರಂಗವಾಗಿ ಈ ಮಾತುಗಳನ್ನು ಆಡಬೇಕಾದರೆ ಆಕೆಗೆ ಸಾಕಷ್ಟು ಪುರಾವೆಗಳು ಇವೆ ಎಂದೇ ಅರ್ಥ. ಮೊದಲೇ ಸುಷ್ಮಾ ಸೀದಾ ಸಾದ ಮಾತುಗಾರಿಕೆಗೆ ಹೆಸರಾದವರು. ಅದಕ್ಕೆಂದೇ ಸಂಘ ಪರಿವಾರ ಆಕೆಯನ್ನು ಮುಂದಿಟ್ಟಿರುವುದು. ತಮ್ಮ ಹೇಳಿಕೆಗೆ ಪೂರಕವಾದ ಅನುಭವ, ಮಾಹಿತಿ, ಮತ್ತು ಜ್ಞಾನ ಆಕೆಯ ಅರಿವಿಗೆ ಬಂದಿರಲೇಬೇಕು. ಯಾಕೆಂದರೆ ಸುಷ್ಮಾರ ಮಾತುಗಳನ್ನು ಗಾಸಿಪ್ ಎಂದು ನಿರ್ಲಕ್ಷಿಸಿ ಬಿಡಲು ಆಕೆ ಏನೂ ಸಾಧಾರಣ ಮಹಿಳೆಯಲ್ಲ. ಕೇಂದ್ರ ಸರಕಾರದ ಸಂಪುಟದ ಸಚಿವೆ ಆಗಿದ್ದವರು. ಅದಕ್ಕೆ ಮೊದಲು ಸುಪ್ರೀಂ ಕೋರ್ಟ್ ಲಾಯರ್ ಆಗಿ ಹೆಸರು ಮಾಡಿದ್ದವರು: ಪ್ರಭುತ್ವದ ಕಾರ್ಯವೈಖರಿ–ವಿನ್ಯಾಸಗಳನ್ನು ಹತ್ತಿರದಿಂದ ನೋಡಿದವರು. ಅವರ ಬಿಜೆಪಿ ವಿರೋಧ ಪಕ್ಷದಲ್ಲಿದ್ದಾಗ ಮತ್ತು ಅಧಿಕಾರಕ್ಕೆ ಬಂದಾಗ ಏನೇನು ಕುತಂತ್ರಗಳನ್ನು ಹೆಣೆದು ಅವುಗಳನ್ನು ಸಾಧಿಸುವ ಸಲುವಾಗಿ ಏನೆಲ್ಲಾ ಕಾರ್ಯ ನೀತಿಗಳನ್ನು ರೂಪಿಸುತ್ತದೆ ಎಂಬುದರ ಆಪ್ತ ಪರಿಚಯ ಅವರಿಗಿದೆ.

ಕುರಿತ ವಿವರಗಳೆಲ್ಲವೂ ನಿಗೂಢ. ಅವರ ವಿಚಾರಣೆಯೆಲ್ಲಾ ನೇಪಥ್ಯದಲ್ಲಿ ನಿಗೂಢವಾಗಿ ನಡೆದು ಅವರೆಲ್ಲಾ ನಿಗೂಢರಾಗೇ ಉಳಿಯುತ್ತಾರೆ. ಅವರೆಲ್ಲಾ ನಿಜವಾಗಿಯೂ ಭಯೋತ್ಪಾದಕರೇ ? ಆಗಿದ್ದಲ್ಲಿ, ಅವರು ಭಯೋತ್ಪಾದಕ ಗುಂಪುಗಳಿಗೆ ನೇಮಕವಾದ ಹಿನ್ನೆಲೆ ಹಾಗೂ ಆ ಗುಂಪುಗಳ ಹುಟ್ಟು, ಅಸ್ತಿತ್ವಗಳ ಕುರಿತು ಸರಕಾರಿ ಸಂಸ್ಥೆಗಳೂ ಹಾಗೂ ಬೃಹತ್ ಮಾಧ್ಯಮಗಳು ಹೇಳುವುದನ್ನೇ ಸತ್ಯ ಎಂದು ಸಾರ್ವಜನಿಕರು ನಂಬಲೇಬೇಕು ಹೊರತು ಅದರ ಸತ್ಯಾ ಸತ್ಯತೆಗಳನ್ನು ಪರೀಕ್ಷಿಸಿ, ಸಂದೇಹಿಸುವ ಜನಾಧಾರಿತ/ಸಾಂಸ್ಥಿಕ ವ್ಯವಸ್ಥೆಗಳು ಎಲ್ಲಿವೆ?

ಹೊರ ದೇಶಗಳಿಂದ ಬರುವ ಭಯೋತ್ಪಾದಕ ಸಂಘಟನೆಗಳಿಗೆ 'ಹಿಂದೂಗಳ' ಮೇಲೆ ಸೇಡು ತೀರಿಸಿಕೊಳ್ಳುವ ಉದ್ದೇಶವಿರುವುದಾಗಿಯೂ (ದಿ ಹಿಂದೂ ದಿನ ಪತ್ರಿಕೆ ದಿ.01–08–2008 ಪ್ರವೀಣ್ ಸ್ವಾಮಿ ಸಂಪಾದಕೀಯ ಪುಟದ ಲೇಖನ) ಅದಕ್ಕೆ ಸ್ಥಳೀಯ ಮುಸ್ಲಿಮರು ನೆರವಾಗುತ್ತಾರೆ ಎಂಬ ಥಿಯರಿಯನ್ನು ಸರಕಾರ ಹಾಗೂ ಮಾಧ್ಯಮಗಳು ಮುಂದಿಡುತ್ತವೆ. ಆದರೆ ಈ ಮುಸ್ಲಿಂ ಭಯೋತ್ಪಾದಕರು ಸ್ಥಳೀಯ ಮುಸ್ಲಿಂ ಜನರೊಂದಿಗೆ ಸೇರಿ ನಡೆಸುವ ಆ ಭೀಕರ ಸ್ಫೋಟಗಳಿಂದ ಮುಸಲ್ಮಾನರೇ ಹೆಚ್ಚು ಹಾನಿಗೊಳಗಾಗಿರುವುದು ಹೇಗಾಯ್ತು? ಅಷ್ಟೊಂದು ತಾಂತ್ರಿಕ ಕೌಶಲ ಇರುವ ಭಯೋತ್ಪಾದಕರಿಗೆ ಮುಸ್ಲಿಮರು ಇಲ್ಲದ ಪ್ರದೇಶಗಳನ್ನು ಆಯ್ಕೆ ಮಾಡಿಕೊಳ್ಳುವುದು ಅಷ್ಟೊಂದು ಕಷ್ಟವೇ?

ನಾಲ್ಕನೆಯದು, ಕಳೆದ ವರ್ಷ ಉತ್ತರ ಪ್ರದೇಶದಲ್ಲಿ ಸರಣಿ ಬಾಂಬ್ ಸ್ಫೋಟವಾದಾಗ ಆ ರಾಜ್ಯದ ಮುಖ್ಯಮಂತ್ರಿ ಮಾಯಾವತಿಯವರು ಮಾಧ್ಯಮಗಳಿಗೆ ನೀಡಿದ ಹೇಳಿಕೆ ಏನೆಂದರೆ, "ಇವುಗಳ ಹಿಂದೆ ಬಹಳ ಆಳವಾದ ಸಂಚು ಇವೆ." ಎಂಬುದು. ಆ ಹೇಳಿಕೆಯ ಸೂಚ್ಯಾರ್ಥ ಇಂದಿನ ಸುಷ್ಮಾರ ಹೇಳಿಕೆಗೆ ಹತ್ತಿರವಾದದ್ದು. ಮಾಯಾವತಿಯವರು ಸುಷ್ಮಾರಷ್ಟು ನೇರವಾಗಿ ಹೇಳಿಲ್ಲವಾದರೂ 'ಈ ಬಾಂಬ್ ಸ್ಫೋಟಗಳನ್ನು ಕೇವಲ ಭಯೋತ್ಪಾದಕರ ತಲೆಗೆ ಕಟ್ಟಿ ಬಿಡಲು ಸಾಧ್ಯವಿಲ್ಲ. ನಮ್ಮಲ್ಲೇ ರಾಜಕೀಯ ಪಕ್ಷಗಳು/ಸರಕಾರಗಳು ಈ ಸಮಾಜ ಘಾತುಕ ಕೃತ್ಯಗಳಲ್ಲಿ ತೊಡಗಿರುವ ಸಾಧ್ಯತೆ ಇದೆ' ಎಂಬಂತಹ ಅರ್ಥ ಕೊಡುವ ಪ್ರಬಲ ಹೇಳಿಕೆಯಾಗಿತ್ತು ಅವರದು.

ಇಂತಹ ಪ್ರತಿಪಾದನೆಯನ್ನು ಪುಷ್ಟೀಕರಿಸುವ ಘಟನೆಗಳು ಬೆಹೆನ್ ಮಾಯಾವತಿಯವರ ಸುತ್ತ ನಡೆಯುತ್ತಿರುವುದನ್ನು ನಾವು ಗಮನಿಸಬೇಕು. ಈ ವರ್ಷದ ಜನವರಿ ತಿಂಗಳಲ್ಲಿ ಕೆಲವು ಮುಸ್ಲಿಂ ಭಯೋತ್ಪಾದಕರನ್ನು ಲಕ್ನೋ ನಗರದಿಂದ ಅನತಿ ದೂರದಲ್ಲಿ ಬಂಧಿಸಲಾಗಿತ್ತು. ಮತ್ತು ಬಂಧಿತರಾದವರಲ್ಲಿ ಮಾಯಾವತಿಯವರ ವಸತಿ ಗೃಹದ ಮತ್ತು ಅದರ ಸುತ್ತ ಮುತಲಿನ ನಕ್ಷೆಗಳು ಮತ್ತು ಸ್ಕೆಚ್‌ಗಳು ಸಿಕ್ಕಿದ್ದವು.

ನಂತರ ಎರಡು ತಿಂಗಳ ಹಿಂದೆ ಮಾಯಾವತಿಯವರ ಕಚೇರಿಯನ್ನು ಸ್ಫೋಟಿಸಲು ಪ್ರಯತ್ನ ನಡೆದಿದೆ. ಈ ಸಂಬಂಧ ಲಷ್ಕರ್–ಎ–ತೋಯಿಬಾ ಹಾಗೂ ಸಿಮಿಗಳಿಗೆ ಸೇರಿದ ಪಾಕ್ ಪ್ರಜೆ ಶಕೀರ್ ಎಂಬಾತನನ್ನು ಬಂಧಿಸಿ ವಿಚಾರಣೆಗೆ ಗುರಿಪಡಿಸಲಾಗಿದೆ (ಡೆಕನ್ ಹೆರಾಲ್ಡ್ ದಿ: 01–08–2008). ಒಟ್ಟಾರೆ, 'ಮುಸ್ಲಿಂ' ಭಯೋತ್ಪಾದಕರು ಮಾಯಾವತಿಯವರ ಜೀವದ ಹಿಂದೆ ಬಿದ್ದಿರುವುದು ಸ್ಪಷ್ಟವಾಗಿದೆ.

ಈ ಸನ್ನಿವೇಶ ಎಷ್ಟು ಪ್ರಶ್ನೆಗಳಿಗೆ ಎಡೆ ಮಾಡಿದೆ ನೋಡಿ? ಜಿಹಾದಿ ವೆಬ್‌ಸೈಟ್‌ಗಳಲ್ಲಿ 'ಹಿಂದೂಗಳ ಮೇಲಿನ ಪ್ರತೀಕಾರ...ಹಿಂದೂಗಳ ಸರ್ವನಾಶ... ಹಿಂದೂ ದೇವರುಗಳ ನಾಶ.. ಹಿಂದೂಗಳ ರಕ್ತಪಾತ...' ಇವೇ ಮುಂತಾದ ವಿಚಾರಗಳಿರುವುದಾಗಿ ಮಾಧ್ಯಮಗಳು ವರದಿ ಮಾಡಿವೆ.

ಹಾಗಿದ್ದಲ್ಲಿ, ಮಾಯಾವತಿಯವರ ಜೀವ ತೆಗೆಯಲು ಹಪಹಪಿಸುತ್ತಿರುವ ಈ ಭಯೋತ್ಪಾದಕರು ಮುಸಲ್ಮಾನರಾಗಿಲು ಸಾಧ್ಯವೇ? ನರೇಂದ್ರ ಮೋದಿಯ ಮೇಲಿಲ್ಲದಷ್ಟು ಸೇಡು ಮಾಯಾವತಿಯವರ ಮೇಲೆ ಯಾಕೆ?

ಈ 'ಮುಸ್ಲಿಂ' ಭಯೋತ್ಪಾದಕರು ಮತ್ತು ಅವರಿಗೆ ನೆರವಾಗುವ ಸ್ಥಳೀಯ ಮುಸ್ಲಿಮರು ಮೂಢರೇ? ಅನಕ್ಷರಸ್ಥರೇ ? ಪ್ರಸಕ್ತ ನಮ್ಮ ದೇಶದ ಕೆಲವು ಅದರಲ್ಲಿ ಮುಖ್ಯವಾಗಿ ಬಿಎಸ್‌ಪಿ ಸಾಂಸ್ಕೃತಿಕ–ರಾಜಕೀಯ ಆಂದೋಲನದ ಬಗ್ಗೆ ಪರಿಚಯವೇ ಇಲ್ಲವೇ? ಹಿಂದೂ ಫ್ಯೂಡಲ್ ವ್ಯವಸ್ಥೆಯಲ್ಲಿ ದಲಿತರು ಅತ್ಯಂತ ಶೋಷಿತ ಬಲಿಪಶುಗಳು ಎಂಬ ತಿಳುವಳಿಕೆ ಇಲ್ಲವೇ? ದಲಿತರು "ನಾವು ಹಿಂದೂಗಳೇ ಅಲ್ಲ" ಎನ್ನುವುದು ತಿಳಿದಿಲ್ಲವೇ? ಅಂತಹ ದಲಿತರ ರಾಜಕೀಯ ಸಂಘಟನೆಗೆ ಪ್ರಯತ್ನಿಸಿ ಯಶಸ್ಸು ಕಾಣಲು ಈಗಷ್ಟೇ ಮುಂದಿಡುತ್ತಿರುವ ನಾಯಕಿ ಮಾಯಾವತಿಯ ಜೀವ ತೆಗೆದು ಬಿಡುವ ಅವಿವೇಕಿ ಕ್ರೌರ್ಯ ಉಳ್ಳವರೇ

'ಮುಸ್ಲಿಂ' ಭಯೋತ್ಪಾದಕರು? ಈ [illegible] ನಾಯಕಿ ಹಿಂದುತ್ವ ಅಥವಾ ಮೋದಿತ್ವಗಳನ್ನು ಆಚರಿಸಿದ್ದಾದರೂ ಎಲ್ಲಿ? 'ಹಿಂದೂ' ಭಯೋತ್ಪಾದನೆಯ ತವರಾದ ಉತ್ತರ ಪ್ರದೇಶದಲ್ಲಿ ಸಂಘ ಪರಿವಾರದ ರಾಜಕೀಯ ಬೆನ್ನು ಮೂಳೆ, ಕೈ, ಕಾಲುಗಳನ್ನು ಮುರಿದು ಹಾಕಿರುವುದು ಸ್ಥಳೀಯ ಮುಸ್ಲಿಮರಿಗಾದರೂ ತಿಳಿದಿರಲೇಬೇಕಲ್ಲವೇ? ಅಂತಹ ನಾಯಕಿಯನ್ನು ಕೊಲ್ಲಲು ಎಡೆಬಿಡದೆ ಹವಣಿಸುತ್ತಿರುವವರು ಅಸಲಿ ಮುಸ್ಲಿಮರೇ?

ಇಂತಹ ಪ್ರಶ್ನೆಗಳು ಹೊಳೆಯದಷ್ಟು ಜಡವಾಗಿಬಿಟ್ಟಿದೆ 'ನಮ್ಮವರ' ಚಿಂತನಾಕ್ರಮಗಳು. ನಮ್ಮ ಮಾಧ್ಯಮಗಳು ಹಾಗೂ ಬುದ್ಧಿಜೀವಿಗಳು ಬೇಕೆಂತಲೇ ಪೆದ್ದರಾದರೆ ಹೇಗೆ?

ಯುಪಿಯಲ್ಲಿ ಬೆಹನ್ ಮಾಯಾವತಿ ಮುಖ್ಯಮಂತ್ರಿಯಾದಾಗೆಲ್ಲಾ, ದಲಿತ-ಒಬಿಸಿಗಳಷ್ಟೇ, ಮುಸ್ಲಿಮರಿಗೂ ರಕ್ಷಣೆ ದೊರಕಿದೆ, ಲಾಭವಾಗಿದೆ. (ನಮ್ಮ ಮಾಧ್ಯಮಗಳು ಈ ವಾಸ್ತವ ಸಂಗತಿಯನ್ನು ವ್ಯವಸ್ಥಿತವಾಗಿ ಮುಚ್ಚಿ ಹಾಕಿದ್ದಾರೆ) ಆದರೆ ಬಿಎಸ್‌ಪಿ ಮುಸಲ್ಮಾನರ ಪಕ್ಷವಾಗಿರುವುದನ್ನೂ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಮುಖ್ಯ ಸಂಪದಕರಾದ ಆದಿತ್ಯ ಸಿನ್ಹಾರವರೇ ಹೀಗೆ ಬರೆದಿದ್ದಾರೆ: "ಸ್ವತಂತ್ರ ಭಾರತದ ಇತಿಹಾಸದಲ್ಲೇ ಮುಸಲ್ಮಾನರು ಪ್ರಥಮ ಬಾರಿಗೆ ರಾಜಕೀಯ ಅಭಿವ್ಯಕ್ತಿಯನ್ನು ನಿಜವಾಗಿ ಅನುಭವಿಸಿದ್ದು ಮಾಯಾವತಿಯ ಸರಕಾರದಲ್ಲಿ, ಇದಕ್ಕೂ ಹಿಂದೆ ಕಾಂಗ್ರೆಸ್ ಮುಸಲ್ಮಾನರಿಗೆ ಕೇವಲ ಮೊಸಳೆ ಕಣ್ಣೀರನ್ನು ಮಾತ್ರ ಸುರಿಸುತ್ತಿತ್ತು." ಇದರಿಂದಾಗಿ ಮುಸಲ್ಮಾನರು ಬಿಎಸ್‌ಪಿಯ ಕಟ್ಟ ಬೆಂಬಲಿಗರಾಗುತ್ತಿದ್ದಾರೆ. ಇದು ಉತ್ತರ ಪ್ರದೇಶದಲ್ಲಿ ಫೆಬ್ರವರಿ 2008ರಲ್ಲಿ ನಡೆದ ಉಪ ಚುನಾವಣೆಗಳಲ್ಲಿ ನಿಖರವಾಗಿ ಸಾಬೀತಾಗಿದೆ. 3 ವಿಧಾನ ಸಭೆ ಹಾಗೂ 2 ಲೋಕಸಭೆಗೆ ನಡೆದ ಆ ಚುನಾವಣೆಗಳಲ್ಲಿ, ಆ ಎಲ್ಲಾ 5 ಸ್ಥಾನಗಳನ್ನು ಬಿಎಸ್‌ಪಿ ಗೆದ್ದು ಬಿಜೆಪಿ-ಕಾಂಗ್ರೆಸ್‌ಗಳು ಅನುಕ್ರಮವಾಗಿ ನಾಲ್ಕು- ಮತ್ತು ಐದನೆ ಸ್ಥಾನಕ್ಕೆ ನೂಕಲ್ಪಟ್ಟಿವೆ. ಈ ಕಾರಣಕ್ಕೇನೇ ಅಲ್ಲಿ ಎಲ್ಲಾ ಪ್ರಮುಖ ಪಕ್ಷಗಳ ಧುರೀಣರು ಬಿಎಸ್‌ಪಿ ಸೇರುತ್ತಿದ್ದಾರೆ. ಸ್ವತಂತ್ರ ಭಾರತದ ರಾಷ್ಟ್ರ ರಾಜಕಾರಣ ರಂಗದಲ್ಲಿ ಇದೊಂದು ಅಪೂರ್ವ ವಿಪ್ಲವ. ಮಾಧ್ಯಮಗಳು ಮಾತ್ರ ಇದು ತಮ್ಮ ಕಣ್ಣಿಗೆ ಕಾಣುತ್ತಲೇ ಇಲ್ಲವೆಂಬಂತೆ ನಟಿಸುತ್ತಿದ್ದಾರೆ. ಈ ಮನುವಾದಿ ಮಾಧ್ಯಮಗಳಿಗೆ ತಮ್ಮ client ಗಳಾದ ಕಾಂಗ್ರೆಸ್, ಬಿಜೆಪಿ, ಎಸ್‌ಪಿಗಳಿಗೆ ಆಗಿರುವ ಗತಿಯನ್ನು ಅರಗಿಸಿಕೊಳ್ಳಲು ಆಗುತ್ತಿಲ್ಲ. ಆದರೆ ಇದರಿಂದ ಚಿಂತಾಕ್ರಾಂತವಾಗಿರುವ ಕಾಂಗ್ರೆಸ್‌ಗೆ ದಲಿತ-ಮುಸ್ಲಿಂ ಮತದಾರರ ಒಗಟ್ಟನ್ನೂ ಮುರಿಯುವುದು ಬಹಳ ಮುಖ್ಯವಾಗಿದೆ. "ಮುಸ್ಲಿಂ" ಭಯೋತ್ಪಾದಕರಿಂದಲೇ ಮಾಯಾವತಿಯವರನ್ನು ಕೊಲ್ಲಿಸುವುದರಿಂದ ದಲಿತರು ಮುಸ್ಲಿಂ ದ್ವೇಷಿಗಳಾಗುವುದು ಸಾಧ್ಯ. ಅದರಿಂದ ಮಾತ್ರ ದಲಿತ-ಮುಸ್ಲಿಂ ಒಗ್ಗಟ್ಟನ್ನು ಮುರಿದು ಮುಸ್ಲಿಂ ಮತದಾರರನ್ನು ಹಿಂದಕ್ಕೆ ಎಳೆದುಕ್ಕೊಳ್ಳುವುದು ಕಾಂಗ್ರೆಸ್ ತಂತ್ರ.

ಇದರ ಜೊತೆಗೆ ಮತ್ತೊಂದು ಅಜೆಂಡಾ ಕೂಡಾ ಕಾಂಗ್ರೆಸ್‌ಗೆ ಇದೆ. ಅದು, ಮೊದಲು ಈಗ ಸದ್ಯಕ್ಕೆ ಬಹುಜನರ ಸಮಾಜ ಪರಿವರ್ತನ ಚಳವಳಿಯ ಬಹು ದೈತ್ಯ ವರ್ಚಸ್ವೀ ನಾಯಕಿಯಾಗಿ ಬೆಳೆದು ನಿಂತಿರುವ ಮಾಯಾವತಿಯನ್ನು ದೈಹಿಕಾಗಿ eliminate ಮಾಡಿ ಬಿಟ್ಟರೆ ಸಾಕು! ಮುಂದೆ ಅಂತಹ ನಾಯಕಿ, ನಾಯಕ ಬರುವುದನ್ನು ನೋಡಿಕೊಳ್ಳೋಣ! ಸಮಾಜ ಪರಿವರ್ತನಾ ಚಳವಳಿಯ ಒರಿಜನಲ್ ವಿರೋಧಿ ಕಾಂಗ್ರೆಸ್. ಹೀಗೆ ಒಂದೇ ಏಟಿಗೆ ಎರಡು ಹಕ್ಕಿಗಳನ್ನು ಒಡೆದು ಬೀಳಿಸಿ ಅದನ್ನು ಮತ್ಯಾರದೋ, ತಲೆಗೆ ಕಟ್ಟಿ 'ನನಗೇನೂ ಗೊತ್ತಿಲ್ಲ' ಎಂದು ಸುಮ್ಮನಿದ್ದು ಬಿಡುವುದು ಕಾಂಗ್ರೆಸ್‌ನ ತಂತ್ರ, ಇದನ್ನು ಸುಷ್ಮಾರ ಮಾತುಗಳು ಕಿಂಚಿತ್ತೂ ಸಂದೇಹವಿಲ್ಲದೆ ದೃಢಪಡಿಸುತ್ತದೆ.

ಇನ್ನು ಬಿಜೆಪಿಗೆ ಬರೋಣ. ಸುಷ್ಮಾರ ಹೇಳಿಕೆ 'ಯನ್ನು ಅದರ ಸುಪ್ರಿಮೋ ಎಲ್.ಕೆ. ಅಡ್ವಾಣಿಯವರು ಅಂಗೀಕರಿಸಲ್ಲ. "ಅದು ಸುಷ್ಮಾರ ವೈಯಕ್ತಿಕ ಹೇಳಿಕೆ ಮಾತ್ರ, ಅದು ಪಕ್ಷದ ಹೇಳಿಕೆಯಾ ಪ್ರತಿಪಾದನೆ ಅಲ್ಲ" ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಇದನ್ನು ಸಹ ಸೂಕ್ಷ್ಮವಾಗಿ ಗಮನಿಸಬೇಕು. ಕಾಂಗ್ರೆಸ್‌ನ ವಿರುದ್ಧ ಹರಿ ಹಾಯಲು ಸದಾ ತುದಿಗಾಲ ಮೇಲೆ ನಿಂತಿರುವ ಬಿಜೆಪಿ ಈಗ ಸುಷ್ಮಾ ಕಾಂಗ್ರೆಸ್ ಮೇಲೆ ಮಾಡಿರುವ ಬಾಂಬ್ ಸ್ಫೋಟದ ಆರೋಪವನ್ನು ಅನುಮೋದಿಸದೆ ನಿರಾಕರಿಸಿರುವುದು ಆಶ್ಚರ್ಯವಲ್ಲವೇ? ಅದೂ ತಮ್ಮದೇ ಪಕ್ಷದ ಹಿರಿಯನಾಯಕಿ ಸದರಿ ಆರೋಪವನ್ನು ಮಾಡಿರುವಾಗ! ಏನಿರಬಹುದು ಇದರ ಮರ್ಮ?

ಕಳ್ಳನ ಮರ್ಮ ಕಳ್ಳನೇ ಬಲ್ಲ. ಒಬ್ಬ ಕಳ್ಳ ಸಿಕ್ಕಿ ಬೀಳುವುದನ್ನು ಇನ್ನೊಬ್ಬ ಕಳ್ಳ ಇಷ್ಟ ಪಡುವುದಿಲ್ಲ. ಅದರಲ್ಲೂ ಈ ಭಯೋತ್ಪಾದನೆಯ ಕುತಂತ್ರದ ವಿಷಯದಲ್ಲಿ ಕಾಂಗ್ರೆಸ್ ಸಿಕ್ಕಿ ಬೀಳುವುದು ಬಿಜೆಪಿಗೆ ಇಷ್ಟವಿಲ್ಲ. ಇಬ್ಬರದೂ ಒಂದೇ ಬತ್ತಳಿಕೆಯ ಅಸ್ತ್ರಗಳು. ಕಾಂಗ್ರೆಸ್‌ನ ವರಸೆಗಳನ್ನು ಅಧಿಕಾರಕ್ಕೆ ಬಂದಾಗ ಬಿಜೆಪಿಯೂ ಬಳಸುತ್ತದೆ. ಕಾಂಗ್ರೆಸ್ ಸಿಕ್ಕಿ ಬಿದ್ದರೆ ಬಿಜೆಪಿಯೂ ಸಿಕ್ಕಿ ಬೀಳುತ್ತದೆ. ಮಾಯವತಿಯನ್ನು eliminate ಮಾಡುವುದು ಕಾಂಗ್ರೆಸ್‌ಗೆ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಮನುವಾದದ ಪ್ರತ್ಯಕ್ಷ ವಕ್ತಾರರಾದ ಬಿಜೆಪಿಗೆ. ಸ್ವತಂತ್ರ ಭಾರತದಲ್ಲಿ ಕೋಮುದಳ್ಳುರಿಯು ಇಷ್ಟೊಂದು ಭೀಕರವಾಗಿ ಮನಾರಾಗಮಿಸಲು ಅಯೋಧ್ಯೆ ವಿವಾದವೇ ಮೂಲ ಕಾರಣ. ಈ ಅಯೋಧ್ಯೆಯಿಂದಲೇ ಅಡ್ವಾಣಿ, ಮೋದಿ, ಕಲ್ಯಾಣ್‌ಸಿಂಗ್, ಸುದರ್ಶನ್‌ಗಳೆಲ್ಲಾ ಉದಯವಾದದ್ದು. ಕಾಂಗ್ರೆಸ್, ಬಿಜೆಪಿ, ಎಸ್‌ಪಿಗಳೆಲ್ಲಾ ಅಲ್ಲಿ ಕೋಮುವಾದವನ್ನು ಜೀವಂತ ಇಟ್ಟಿದ್ದರು. ಆದರೆ ಯಾವಗ ಮಾಯಾವತಿ ಅಧಿಕಾರಕ್ಕೆ ಬಂದರೋ ಸಮಸ್ಯೆಯನ್ನು ಅದರ ಮೂಲ ಸ್ಥಳದಲ್ಲೇ, ಅಂದರೆ ಅಯೋಧ್ಯೆಯಿರುವ ಯುಪಿಯಲ್ಲೇ ಅಡಗಿಸಿ ಬಿಟ್ಟರು. ಅಲ್ಲಿ ಇಟ್ಟಿಗೆ ಹೊರುವ ಕರ ಸೇವಕರು ಎಂದೋ ಬಿಜೆಪಿ ತೊರೆದು ಬಿಎಸ್‌ಪಿ ಸೇರಿ ಬಿಟ್ಟಿದ್ದಾರೆ. ಇಂತಹ ಮಾಯಾವತಿಯನ್ನು ಸಂಘ ಪರಿವಾರದವರು ಕ್ಷಮಿಸುತ್ತಾರೆಯೇ? ಕಾಂಗ್ರೆಸ್‌ಗೆ ಮುಸ್ಲಿಂ ಮತದಾರರನ್ನು ಹಿಂದಕ್ಕೆ ಪಡೆಯುವುದು ಅನಿರ್ವಾವಾದರೆ, ಬಿಜೆಪಿಗೆ ಇಟ್ಟಿಗೆ ಹೊರುವವರನ್ನು ಹಿಂಪಡೆಯುವುದು ಅನಿವಾರ್ಯವಾಗಿಬಿಟ್ಟಿದೆ. ಅಂತೆಯೇ ಕೇಂದ್ರದಲ್ಲಿ ಆಡಳಿತ ಪಕ್ಷವಾಗಿ ಕಾಂಗ್ರೆಸ್ ವಿಫಲವಾಗಿದ್ದರೆ, ಬಿಜೆಪಿ ವಿರೋಧ ಪಕ್ಷದ ಕರ್ತವ್ಯ ಮಾಡುವುದರಲ್ಲಿ ಸೋತಿದೆ. ಇಬ್ಬರಿಗೂ ತಮ್ಮ ವೈಫಲ್ಯವನ್ನು ಮುಚ್ಚಿ ಹಾಕಲು; ಪ್ರಜೆಗಳು ವಾಸ್ತವಿಕತೆ ಅರಿಯದಂತೆ ಮಾಡಲು ಬಾಂಬುಗಳು ಸ್ಫೋಟಗೊಳ್ಳುವುದು ಅಗತ್ಯವಾಗಿದೆ. 'ಭಯೋತ್ಪಾದನೆ' ಭಯೋತ್ಪಾದಕರಿಗಿಂತಲೂ ಹೆಚ್ಚು ಕಾಂಗ್ರೆಸ್-ಬಿಜೆಪಿಗಳಿಗೆ ಅನಿವಾರ್ಯವಾಗಿದೆ. ಆ ಕಾರಣಕ್ಕೆ ಕಾಂಗ್ರೆಸ್ ಮೇಲೆ ಸುಷ್ಮಾ ಸ್ವರಾಜ್ ಮಾಡಿರುವ ಆರೋಪವನ್ನು ಬಿಜೆಪಿ ನಾಯಕತ್ವ ಅನುಮೋದಿಸುವುಲ್ಲ. ಆಕೆಯನ್ನು ಸಮರ್ಥಿಸುವುದಿಲ್ಲ.

ಈ ಕಾಂಗ್ರೆಸ್-ಬಿಜೆಪಿಗಳ ಕುಕೃತ್ಯಗಳಲ್ಲಿ ನಮ್ಮ ಮುಖ್ಯವಾಹಿನಿಯ ಮಾಧ್ಯಮಗಳು ಕೈ ಜೋಡಿಸಿರುವುದು ಪ್ರಕಾರವಾಗಿ ಎದ್ದು ಕಾಣುತ್ತದೆ. ಸುಷ್ಮಾರ ಹೇಳಿಕೆಯನ್ನು ಗಂಭೀರ ಸಾರ್ವಜನಿಕ ಚರ್ಚೆಗೆ ಒಳಪಡಿಸುವ ಬದಲಾಗಿ ಆಕೆಯನ್ನು ಬಹಳ ತುಚ್ಛವಾಗಿ ಟೀಕಿಸಿ ಅವಮಾನಿಸಿ ಅಣಕಿಸಿದ್ದಾರೆ. ಟೈಮ್ಸ್ ಆಫ್ ಇಂಡಿಯಾದಂತಹ ಪತ್ರಿಕೆ ಸುಷ್ಮಾರ ಹೇಳಿಕೆಯನ್ನು 'BELOW THE BELT' ಎಂದು ಛೀಮಾರಿ ಹಾಕಿದೆ. SENSATIONAL ಸುದ್ದಿಗಳಿಗಾಗಿ ಏನೆಲ್ಲಾ ಮಾಡಲು ಸಿದ್ಧವಿರುವ ಪತ್ರಿಕೆಗಳು, ಟಿವಿ ಚಾನೆಲ್‌ಗಳು ಸುಷ್ಮಾರ ಹೇಳಿಕೆಯನ್ನು ಮಾತ್ರ, ಅದು SENSATIONAL ಆಗಿರುವ ಎಲ್ಲಾ ಅರ್ಹತೆಗಳಿದ್ದರೂ ಸಹ, ಕಡೆಗಣಿಸಿ ಕಣ್ಣು-ಕಿವಿಗಳನ್ನು ಮುಚ್ಚಿಕೊಂಡಿದ್ದಾರೆ. ರಾಷ್ಟ್ರದ ಹಿತದೃಷ್ಟಿಯಿಂದ ಮಾಧ್ಯಮಗಳು ಆಕೆಯ ಮಾತಿಗೆ ಸ್ವಲ್ಪವಾದರೂ BENEFIT OF DOUBT ಅನ್ನು ಅನುಗ್ರಹಿಸಬೇಕಿತ್ತು. ಆದರೆ ಆಕೆಯನ್ನು ಬೆಂಬಲಿಸುವ ಮಾತಿರಲಿ ಆಕೆಯ ಪರವಾದ ಒಂದೇ ಒಂದು ಸಾಲಿನ ವಾಚಕರ ಪತ್ರವನ್ನೂ ಪ್ರಕಟಿಸಿಲ್ಲ. ಬದಲಿಗೆ ಆ ಹೇಳಿಕೆಯ ಸಾರ್ವಜನಿಕ ನೆನಪಿನಿಂದ ವ್ಯವಸ್ಥಿತವಾಗಿ ಮರೆಯಾಗುವಂತೆ ಮಾಡಲು ಯಶಸ್ವಿಯಾಗಿದ್ದಾರೆ. ಆ ಮೂಲಕ ಕೃತಕ ಭಯೋತ್ಪಾದನೆಯನ್ನು ಸೃಷ್ಟಿಸಿ ಅದು ಅಸಲಿ ಭಯೋತ್ಪಾದನೆಯಾಗಲು ಕಾಂಗ್ರೆಸ್‌ನ ಜೊತೆ ಕೈ ಜೋಡಿಸಿದ್ದಾರೆ. ಸಮಾಜ ಪರಿವರ್ತನ ಚಳವಳಿ ಮುನ್ನಡೆದಿರುವುದು, ಕಾಂಗ್ರೆಸ್-ಬಿಜೆಪಿಗಳ ಹಾಗೆಯೇ, ಮಾಧ್ಯಮದವರಿಗೂ ಒಂದು ಭೀಕರ ಸ್ವಪ್ನವಾಗಿರುವುದು ಅವುಗಳ ನಡತೆಯಿಂದ ಕಂಡು ಬರುತ್ತಿದೆ. ಮಾಯಾವತಿಯವರನ್ನು ಕೊಂದು ಅದನ್ನು ಭಯೋತ್ಪಾದಕರ ತಲೆಗೆ ಕಟ್ಟಿ ಸುಮ್ಮನಿದ್ದು ಬಿಡುವುದು ಕಾಂಗ್ರೆಸ್-ಬಿಜೆಪಿಗಳಷ್ಟೇ ಕೊಲೆಯಾಗಿ, ಇನ್ನಷ್ಟು ಬಾಂಬುಗಳು ಸ್ಫೋಟಗೊಂಡು, ಕೋಮುದಳ್ಳುರಿಯಿಂದ ಅಸಂಖ್ಯ ಅಮಾಯಕರು ಬಲಿಯಾದರೆ ಮತ್ತು ಅನಂತರ "ಭಯೋತ್ಪಾದಕರು" ನೇಪಥ್ಯದಲ್ಲೇ ಉಳಿದರೆ ಅದಕ್ಕೆ ನಮ್ಮ ಮಾಧ್ಯಮಗಳು ಕಾರಣ.

ಇದೆಲ್ಲದರ ನಡುವೆ ಸತ್ಯ ನುಡಿದ ಸುಷ್ಮಾ ಸ್ವರಾಜ್ ಇಷ್ಟೂ ದಿನಗಳ ನಂತರವೂ ತಾವು ಆಡಿದ ಮಾತಿಗೆ ಬದ್ಧರಾಗೇ ಉಳಿದಿದ್ದಾರೆ. ಅವರು ನುಡಿದಿರುವುದು ಮಹತ್ತರ ಮೌಲ್ಯಯುತ ಹೇಳಿಕೆ. ಪ್ರಭುತ್ವದ ಭಾಗವಾದ ಅವರು ಮಾಡಿರುವುದು ಒಂದು ಅಪೂರ್ವ ಐತಿಹಸಿಕ OPEN LEAK ಎಂಥಾ ಎದೆಗಾರ್ತಿ! ಸುಷ್ಮಾಜೀಯವರನ್ನು ನಾವು ಅಭಿನಂದಿಸಲೇಬೇಕು. ಹಾಗೆಯೇ, ಕಳೆದ ವರ್ಷ ನಾಂದೇಡ್‌ನಲ್ಲಿ ಮನೆಯೊಂದರಲ್ಲಿ ಬಾಂಬ್ ತಯಾರಿಸುತ್ತಿದ್ದವರು ಅದು ಆಕಸ್ಮಾತ್ ಸ್ಫೋಟಿಸಿ ಸ್ಥಳದಲ್ಲೆ ಇಬ್ಬರು ಸತ್ತು ನಾಲ್ವರು ಗಾಯಗೊಂಡರು. ಈ ವರ್ಷ ಸೆಪ್ಟೆಂಬರ್-19ರಂದು ಮಾಲೆಗಾಂವ್ ಹಾಗೂ ಮೊಡಾಸಗಳಲ್ಲಿ ನಡೆದ ಶಕ್ತಿಶಾಲಿ ಬಾಂಬ್ ಸ್ಫೋಟಗಳಿಂದ ಅನೇಕರು ಸತ್ತಿದ್ದಾರೆ. ಈ ಎಲ್ಲಾ ಘಟನೆಗಳಲ್ಲಿ ಬಜರಂಗದಳ-ಆರ್‌ಎಸ್‌ಎಸ್ ನವರ ಪಾತ್ರ ಬಹಳ ನಿಚ್ಚಳವಾಗಿ ಸಾಬೀತಾಗಿದ್ದು ಅನೇಕರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗಿದೆ. ಅವರಲ್ಲಿ ಕೆಲವರು ಸಾಧ್ಯ ಸನ್ಯಾಸಿಗಳು. ಮತ್ತೆ ಕೆಲವರು ಮಾಜಿ ಸೇನಾಧಿಕಾರಿಗಳು. ಇದನ್ನೂ ಸಹ ಖಂಡಿಸಿ ಮಾತನಾಡಿದರೆ ಸುಷ್ಮಾಸ್ವರಾಜ್ ನಮ್ಮ ಪೂರ್ತಿ ಅಭಿಮಾನಕ್ಕೆ ಪಾತ್ರರಾಗುತ್ತಾರೆ. □

ಕುಲವ ಬಿಟ್ಟೋರು ನಾವು

○ ಕೈವಾರ ತಾತಯ್ಯ
ಅನುವಾದ: ಸ.ರಘುನಾಥ



ಕುಲವ ಬಿಟ್ಟೋರು ನಾವು ಯಾವ ಕುಲದಿ ಬೆರೆಯೆವು
ಕುಲಗೋತ್ರಗಳ ಮೆಟ್ಟಿ ಕುದುರೆ ಏರಿದವರು

ಮುಟ್ಟು ಇಲ್ಲದವರು ಆರರ ತುದಿಯಲಿರುವೆವು
ಆತ್ಮದ ಸಿಕ್ಕನೆಲ್ಲ ಬಿಡಿಸಿ ಬಾಳೆ ಫಲವ ಪಡೆದವರು

ಭಯವು ಇಲ್ಲದವರು ಆ ದಾರಿ ಕಂಡವರು
ಭದ್ರವಾದ ಯೋಗನಿದ್ರೆ ಮುದ್ರೆ ಕಾಂಬುವವರು

ಸಿರಿಯು ಸ್ವತ್ತು ಬೇಡೆವು ಕಾಮಾತುರರ ಕೂಡೆವು
ಜ್ಞಾನಿ ಮಾನಸರ ಸೇವೆ ಸದಾ ಮಾಡುತಿರುವೆವು

ಜನರ ನಾವು ನಂಬೆವು ಒಳ ನೋಟ ನೋಡುವವರು
ಒಳಗೆ ಹದುಳವಿರಿಸಿ ಗುರು ಸ್ಮರಣೆ ಮರೆಯದಿಹೆವು

ಕಾಂತೆ ಜನರ ರೂಪವ ಕಣ್ಣೆತ್ತಿ ನೋಡೆವು
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ದೂರವು
ಗಾಳಿ ಕದಲೆ ಬಿಡುವುದಿಲ್ಲ ಒಂದು ಘಳಿಗೆ ತಡೆವೆವು
ಗಗನದಲ್ಲಿ ಓಂಕಾರ ಪ್ರಣವನಾದವಾಲಿಪೆವು

ಗಂಗಾ ಯಮುನ ತೀರವ ದಾಟಿ ಮೇಲಕೇರುವೆವು
ಆನಂದವೆ ಬ್ರಹ್ಮವಾದ ಜ್ಯೋತಿಯನ್ನು ಸೇವಿಪೆವು

ಮುಟ್ಟಿ ಮುಟ್ಟದಿರುವೆವು ಲೋಕ ಮಾಯಾತೀತರು
ಪರತತ್ವದಲ್ಲಿ ಬುದ್ಧಿ ನೆಟ್ಟು ನಿಲುವೆವು

ಸುಮವನ ವಿಹಾರವೆನಿತೊ ಪ್ರಾಣಾಧಾರವು
ಅರುಳು ಮರುಳು ಇರದ ಅರಿವು ಆರದಂತೆ ಇರುವೆವು

ಮರ್ತ್ಯದಲ್ಲಿ ಹುಟ್ಟಿವು ಸದ್ಗುರುವಿನಲ್ಲಿ ಐಕ್ಯವು
ಕೊರತೆಯೆಲ್ಲ ತೀರಿತೆಮಗೆ ಇದೇ ತಾನೆ ಜನ್ಮವು

ಏಕಚಕ್ರಪುರವು ಮತ್ತೆ ಬೇರೆ ಹೆಸರು ಇರದ
ಕೈವರದ ಶ್ರೀ ನಾರೇಯಣಸ್ವಾಮಿ ಕುಲ ನಮ್ಮದು.

ಆರೆಸ್ಸೆಸ್ ನಿಜ ಬಣ್ಣ ಏನು?

ಮೂಲ: ಮಧು ಲಿಮಯೆ

ಅನು: ಬಿ. ಗಂಗಾಧರಮೂರ್ತಿ

ನಾನು ರಾಜಕೀಯವನ್ನು ಪ್ರವೇಶಿಸಿದ್ದು 1937ರಲ್ಲಿ. ವಯೋಮಿತಿಗೂ ಮುಂಚೆಯೇ ಮೆಟ್ರಿಕ್ಯುಲೇಷನ್ ಪರೀಕ್ಷೆ ಪಾಸು ಮಾಡಿ ಕಿರಿಯ ವಯಸ್ಸಿನಲ್ಲೇ ಕಾಲೇಜು ಸೇರಿದೆ. ಆಗ್ಗೆ ಪೂನಾದಲ್ಲಿ ಧೃವೀಕರಣಗೊಂಡ ಎರಡು ಶಕ್ತಿಗಳು ಕ್ರಿಯಾಶೀಲವಾಗಿದ್ದವು. ಒಂದು ಕಡೆ ಆರೆಸ್ಸೆಸ್ ಮತ್ತು ಸಾವರ್ಕರ್‌ವಾದಿಗಳು. ಮತ್ತೊಂದು ಕಡೆ ರಾಷ್ಟ್ರೀಯವಾದಿಗಳು, ಸಮಾಜವಾದಿಗಳು ಮತ್ತು ಎಡಪಂಥೀಯ ರಾಜಕೀಯ ಸಂಘಟನೆಗಳು. ಮೇ ದಿನಾಚರಣೆಯ ಅಂಗವಾಗಿ ಮೇ 1 ರಂದು (1937) ಒಂದು ರ್‍ಯಾಲಿಯನ್ನು ಆಯೋಜಿಸಲಾಗಿತ್ತು. ಆ ದಿನ ಆರೆಸ್ಸೆಸ್ ಮತ್ತು ಸಾವರ್ಕರ್‌ವಾದಿಗಳು ರ್‍ಯಾಲಿಯಲ್ಲಿ ಭಾಗವಹಿಸಿದವರ ಮೇಲೆ ಹರಿಹಾಯ್ದು ಭಾರೀ ಹಲ್ಲೆ ನಡೆಸಿದರು. ಸಮಾಜವಾದಿಯೂ ನಮ್ಮೆಲ್ಲರ ನೆಚ್ಚಿನ ನೇತಾರರೂ ಆಗಿದ್ದ ಎಸ್.ಎಂ.ಜೋಷಿ ಮತ್ತು ಕ್ರಾಂತಿಕಾರರೆಂದೇ ಪ್ರಖ್ಯಾತರಾಗಿದ್ದ ಸೇನಾಪತಿ ಬಾಪಟ್ ಅವರೂ ಸೇರಿದಂತೆ ಹಲವರು ಗಾಯಗೊಂಡರು. ಮೊದಲಿನಿಂದಲೂ ಹಿಂದುತ್ವ ಸಂಘಟನೆಗಳಿಗೂ ನಮಗೂ ಹಲವು ಭಿನ್ನಾಭಿಪ್ರಾಯಗಳಿದ್ದವು.

ಆರೆಸ್ಸೆಸ್‌ನೊಂದಿಗೆ ನಮಗಿದ್ದ ಭಿನ್ನಾಭಿಪ್ರಾಯಗಳಲ್ಲಿ ಮೊದಲನೆಯದು ರಾಷ್ಟ್ರೀಯತೆಯ ಬಗ್ಗೆ ಅವರು ಇಟ್ಟುಕೊಂಡಿರುವ ಪರಿಕಲ್ಪನೆಗೆ ಸಂಬಂಧಿಸಿದ್ದು. ಭಾರತದ ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಹಕ್ಕುಗಳಿರಬೇಕು ಎಂಬುದರಲ್ಲಿ ನಮಗೆ ಅಚಲ ನಂಬಿಕೆ. ಆದರೆ ಆರೆಸ್ಸೆಸ್ ಮತ್ತು ಸಾವರ್ಕರ್‌ವಾದಿಗಳ ರಾಷ್ಟ್ರದ ಪರಿಕಲ್ಪನೆಯೇ ಬೇರೆ. ಭಾರತ ದೇಶವೆಂದರೆ ಹಿಂದೂ ರಾಷ್ಟ್ರ ಮತ್ತು ಮುಸ್ಲಿಂ ರಾಷ್ಟ್ರ ಎಂಬ ಎರಡು ರಾಷ್ಟ್ರಗಳ ದೇಶ ಎಂಬುದು ಅವರ ನಂಬಿಕೆ. ಮಹಮ್ಮದ್ ಆಲಿ ಜಿನ್ನಾ ಅವರಿಗಿದ್ದದ್ದೂ ಇದೇ ನಂಬಿಕೆಯೇ.

ನಮ್ಮಿಬ್ಬರ ನಡುವೆ ಪ್ರಮುಖವಾದ ಮತ್ತೊಂದು ಭಿನ್ನಭಿಪ್ರಾಯವೂ ಇತ್ತು. ನಾವು ಕಟ್ಟಲಿರುವ ಭಾರತವು ಪ್ರಜಾಪ್ರಭುತ್ವವಾದಿ ಗಣರಾಜ್ಯಗಳ ಒಕ್ಕೂಟವಾಗಿರಬೇಕು ಎಂಬುದು ನಮ್ಮೆಲ್ಲರ ಕನಸು. ಪ್ರಜಾಪ್ರಭುತ್ವ ವ್ಯವಸ್ಥೆ ಎಂಬುದು ಪಾಶ್ಚಾತ್ಯ ದೇಶಗಳಿಂದ ಎರವಲು ಪಡೆದ ವ್ಯವಸ್ಥೆಯಾಗಿದ್ದು ಅದು ಭಾರತಕ್ಕೆ ಆಗಿಬರುವುದಿಲ್ಲ ಎಂಬುದು ಆರೆಸ್ಸೆಸ್‌ನವರ ನಂಬಿಕೆ. ವಿಪರ್ಯಾಸವೆಂದರೆ ಆರೆಸ್ಸೆಸ್ ಕಾರ್ಯಕರ್ತರಿಗೆಲ್ಲಾ ಜರ್ಮನಿಯ ಹಿಟ್ಲರ್ ಆ ದಿನಗಳಲ್ಲಿ ಆರಾಧ್ಯ ದೈವ. ಎಲ್ಲ ಅವನ ಗುಣಗಾನ ಮಾಡುವವರೇ! *ಗುರೂಜಿ* (ಗೋಲ್ವಾಲ್ಕರ್) ಆರೆಸ್ಸೆಸ್‌ನ *ಸರಸಂಘಸಂಚಾಲಕ*ರಾಗಿದ್ದುದು(ಏಕತ್ರ ನಾಯಕ) ಮಾತ್ರವೇ ಅಲ್ಲದೆ ಆರೆಸ್ಸೆಸ್ ಸಿದ್ಧಾಂತಕ್ಕೆ ಸ್ಪಷ್ಟ ರೂಪುಕೊಟ್ಟ 'ಗುರು'ವೂ ಆಗಿದ್ದವರು.

ಜರ್ಮನಿಯ ನಾಜಿ ಸಿದ್ಧಾಂತಕ್ಕೂ *ಗುರೂಜಿ*ಯವರ ಚಿಂತನೆಗಳಿಗೂ ಹಲವಾರು ಸಾಮ್ಯತೆಗಳಿವೆ. *ಗುರೂಜಿ* ಬರೆದ ಪುಸ್ತಕಗಳಲ್ಲಿ ಒಂದಾದ *We or Our Nationhood Defined* ಹಲವಾರು ಮುದ್ರಣಗಳನ್ನು ಕಂಡಿರುವ ಪುಸ್ತಕವೆನ್ನಲಾಗುತ್ತದೆ. .1947ರಷ್ಟು ಹಿಂದೆಯೇ ಅದು ನಾಲ್ಕನೆಯ ಮುದ್ರಣ ಕಂಡಿತ್ತು. ಅದರಲ್ಲಿ ಅವರು ಒಂದು ಕಡೆ ಹೀಗೆ ಹೇಳುತ್ತಾರೆ:

"ಹಿಂದೂಸ್ತಾನದಲ್ಲಿರುವ ಹಿಂದೂಗಳಲ್ಲದವರು ಹಿಂದೂ ಸಂಸ್ಕೃತಿ ಮತ್ತು ಭಾಷೆಗಳನ್ನು ಅಳವಡಿಸಿಕೊಳ್ಳಬೇಕು. ಹಿಂದೂ ಧರ್ಮವನ್ನು ಪೂಜನೀಯವೆಂದು ಸ್ವೀಕರಿಸಬೇಕು. ಅದರ ಬಗ್ಗೆ ಗೌರವದ ಭಾವನೆಗಳನ್ನು ರೂಢಿಸಿಕೊಳ್ಳಬೇಕು. ಹಿಂದೂ ಜನಾಂಗದ ಮತ್ತು ಹಿಂದೂ ಸಂಸ್ಕೃತಿಯಲ್ಲಿನ ವೈಭವ ಸಂಗತಿಯ ವಿಚಾರಗಳನ್ನು ಬಿಟ್ಟು ಬೇರಾವ ವಿಚಾರಗಳನ್ನೂ ಮಾತಾಡಕೂಡದು. ಅಂದರೆ ಈ ದೇಶ ಮತ್ತು ಈ ದೇಶದ ಸನಾತನ ಸಂಸ್ಕೃತಿ ಸಂಪ್ರದಾಯಗಳ ಬಗ್ಗೆ ಅಸಹನೆಯನ್ನು ಹೊಂದಿರಕೂಡದು. ಅವುಗಳ ಬಗ್ಗೆ ಆಸಕ್ತಿ ಮತ್ತು ಸಮರ್ಪಣಾಭಾವಗಳನ್ನು ಬೆಳೆಸಿಕೊಳ್ಳಬೇಕು. ಒಂದು ಮಾತಿನಲ್ಲಿ ಹೇಳುವು

ಆರೆಸ್ಸೆಸ್‌ನೊಂದಿಗೆ ನಮಗಿದ್ದ ಭಿನ್ನಾಭಿಪ್ರಾಯಗಳಲ್ಲಿ ಮೊದಲನೆಯದು ರಾಷ್ಟ್ರೀಯತೆಯ ಬಗ್ಗೆ ಅವರು ಇಟ್ಟುಕೊಂಡಿರುವ ಪರಿಕಲ್ಪನೆಗೆ ಸಂಬಂಧಿಸಿದ್ದು. ಆದರೆ ಆರೆಸ್ಸೆಸ್ ಮತ್ತು ಸಾವರ್ಕರ್‌ವಾದಿಗಳ ರಾಷ್ಟ್ರದ ಪರಿಕಲ್ಪನೆ ಬೇರೆ. ದೇಶವೆಂದರೆ ಹಿಂದೂ ರಾಷ್ಟ್ರ ಮತ್ತು ಮುಸ್ಲಿಂ ರಾಷ್ಟ್ರ ಎಂಬ ಎರಡು ರಾಷ್ಟ್ರಗಳ ದೇಶ ಎಂಬುದು ಅವರನಂಬಿಕೆ. ಮಹಮ್ಮದ್ ಆಲಿ ಜಿನ್ನಾ ಅವರಿಗಿದ್ದದ್ದೂ ಇದೇ ನಂಬಿಕೆಯೇ.ನಮ್ಮಿಬ್ಬರ ನಡುವೆ ಪ್ರಮುಖವಾದ ಮತ್ತೊಂದು ಭಿನ್ನಭಿಪ್ರಾಯವೂ ಇತ್ತು. ನಾವು ಕಟ್ಟಲಿರುವ ಭಾರತವು ಪ್ರಜಾಪ್ರಭುತ್ವವಾದಿ ಗಣರಾಜ್ಯಗಳ ಒಕ್ಕೂಟವಾಗಿರಬೇಕು ಎಂಬುದು ನಮ್ಮೆಲ್ಲರ ಕನಸು. ಪ್ರಜಾಪ್ರಭುತ್ವ ವ್ಯವಸ್ಥೆ ಎಂಬುದು ಪಾಶ್ಚಾತ್ಯ ದೇಶಗಳಿಂದ ಎರವಲು ಪಡೆದ ವ್ಯವಸ್ಥೆಯಾಗಿದ್ದು ಅದು ಭಾರತಕ್ಕೆ ಆಗಿಬರುವುದಿಲ್ಲ ಎಂಬುದು ಆರೆಸ್ಸೆಸ್ ನಂಬಿಕೆ. ಆರೆಸ್ಸೆಸ್‌ರಿಗೆಲ್ಲಾ ಜರ್ಮನಿಯಹಿಟ್ಲರ್ ಆ ದಿನಗಳಲ್ಲಿ ಆರಾಧ್ಯ ದೈವ. ಎಲ್ಲ ಅವನ ಗುಣಗಾನ ಮಾಡುವವರೇ!

ದಾದರೆ, 'ಹೊರಗಿನವ'ರಾಗಿ ಅವರಿಗೆ ಇಲ್ಲಿ ಸ್ಥಾನವಿಲ್ಲ. ಇರುವುದಾದಲ್ಲಿ ನಾಗರಿಕ ಹಕ್ಕುಗಳೂ ಸೇರಿದಂತೆ ಯಾವ ಹಕ್ಕುಗಳನ್ನಾಗಲೀ, ಸವಲತ್ತುಗಳನ್ನಾಗಲೀ ವಿಶೇಷ ಸೌಲಭ್ಯಗಳನ್ನಾಗಲೀ ಅವರು ಕೇಳಕೂಡದು."**

ಲಕ್ಷಾಂತರ ಸಂಖ್ಯೆಯಲ್ಲಿರುವ ಹಿಂದುಯೇತರರಿಗೆ ಈ ದೇಶದ ನಾಗರಿಕರಾಗಿ ನಾವು ಸ್ಥಾನ ನೀಡುವುದಿಲ್ಲ ಎಂಬುದು *ಗುರೂಜಿ* ಮಾತುಗಳ ಅರ್ಥ. ಅವರ ಸಮಸ್ತ ಹಕ್ಕುಗಳನ್ನೂ ಮುಟ್ಟುಗೋಲು ಹಾಕಿಕೊಳ್ಳಬೇಕು ಎನ್ನುವುದು ಅವರ ನಿಲುವು. ಹಾಗೆ ನೋಡಿದರೆ ಇದೇನೂ ಹೊಸತಾಗಿ ಅವರು ರೂಪಿಸಿಕೊಟ್ಟ ಸಿದ್ಧಾಂತವೇನಲ್ಲ. ಆ ಹೊತ್ತಿಗಾಗಲೇ ಆರೆಸ್ಸೆಸ್ ಕಾರ್ಯಕರ್ತರು ಜನಾಂಗ ದ್ವೇಷಿ ಹಿಟ್ಲರನ ಆದರ್ಶಗಳಿಗೆ ನಿಷ್ಠರಾಗಿ ನಡೆದುಕೊಳ್ಳುತ್ತಿದ್ದುದನ್ನು ನಾವು ನಮ್ಮ ಕಾಲೇಜು ದಿನಗಳಿಂದಲೂ (1930ರ ದಶಕದ ಎರಡನೇ ಭಾಗದಲ್ಲಿ) ನೋಡುತ್ತಿದ್ದೆವು. ಜರ್ಮನಿಯಲ್ಲಿ 'ಹಿಟ್ಲರ್ ಯಹೂದಿಗಳಿಗೆ ತೋರಿಸಿದ ದಾರಿಯನ್ನೇ ನಾವು ಭಾರತದಲ್ಲಿ ಮುಸ್ಲಿಮರಿಗೆ ತೋರಿಸುತ್ತೇವೆ' ಎಂಬುದು ಅವರ ಖಚಿತ ನಿಲುವಾಗಿತ್ತು.

ಹಿಟ್ಲರ್‌ನ ನಾಜಿ ಪಕ್ಷದ ಸಿದ್ಧಾಂತದ ಬಗ್ಗೆ *ಗುರೂಜಿ*ಗೆ ಯಾವ ಮಟ್ಟದ ಮೆಚ್ಚುಗೆ ಇತ್ತು ಎಂಬ ಅಂಶದ ಮೇಲೆ *We or Our Nationhood Defined* ಪುಸ್ತಕದ ಈ ಸಾಲುಗಳು ಸಾಕಷ್ಟು ಬೆಳಕು ಚೆಲ್ಲುತ್ತವೆ:

"ತಮ್ಮ ಜನಾಂಗದ ಮತ್ತು ಸಂಸ್ಕೃತಿಯ ಪರಿಶುದ್ಧತೆಯನ್ನು ರಕ್ಷಿಸಿಕೊಳ್ಳುವ ಸಲುವಾಗಿ ಜರ್ಮನಿಯು ಜಗತ್ತೇ ಬೆಚ್ಚಿಬೀಳುವ ರೀತಿಯ ಕಾರ್ಯಾಚರಣೆ ನಡೆಸಿ ಸೆಮೆಟಿಕ್ ಜನಾಂಗಕ್ಕೆ ಸೇರಿದ ಯಹೂದಿಗಳನ್ನು ನಿರ್ನಾಮ ಮಾಡಿ ತಾಯ್ನಾಡಿನ ಶ್ರೇಷ್ಠತೆಯನ್ನು ಶಿಖರಕ್ಕೇರಿಸಿತು. ಜರ್ಮನಿಯಲ್ಲಿ ಜನಾಂಗೀಯ ಸ್ವಾಭಿಮಾನವು ರಾರಾಜಿಸಿತು. ಅಷ್ಟೇ ಅಲ್ಲದೆ ಮೂಲದಲ್ಲೇ ವ್ಯತ್ಯಾಸಗಳಿರುವ ವಿಭಿನ್ನ ಜನಾಂಗಗಳು ಮತ್ತು ಸಂಸ್ಕೃತಿಗಳು ಎಂದಿಗೂ ಬೆರೆತು ಬದುಕಲಾರವು ಎಂಬುದಕ್ಕೆ ಜರ್ಮನಿಯು ಉತ್ತಮ ನಿದರ್ಶನವಾಗಿದೆ. ಹಿಂದೂಸ್ತಾನವು ಅದನ್ನು ಅನುಕರಿಸಿ ಪ್ರಯೋಜನ ಪಡೆದುಕೊಳ್ಳಬೇಕು."

ಗುರೂಜಿ ಈ ಪುಸ್ತಕವನ್ನು ಬರೆದದ್ದು ದೇಶವು ಸ್ವಾತಂತ್ರ್ಯ ಚಳವಳಿಯಲ್ಲಿ ಮುಳುಗಿದ್ದ ಸನ್ನಿವೇಶದಲ್ಲಿ. ಆದ್ದರಿಂದ 'ಇದೆಲ್ಲಾ ಹಳೇ ಕತೆ, ಬಿಡಿ' ಎಂದು ನೀವು ಹೇಳಬಹುದು. ಅವರ ಎರಡನೆ ಪುಸ್ತಕವಾದ *Bunch of Thoughts* ಪ್ರಕಟವಾದ್ದು 1966ರಲ್ಲಿ. 'ಜನಪ್ರಿಯ ಪುಸ್ತಕ' ಎಂದು ಹೇಳಲಾಗುವ ಇದರಲ್ಲಿ ಅವರು ಭಾರತದ ಆಂತರಿಕ ಭದ್ರತೆಯ ಸಮಸ್ಯೆಯನ್ನು ಕುರಿತು ಚರ್ಚಿಸುತ್ತಾ ಮೂರು ಆಂತರಿಕ ಗಂಡಾಂತರಗಳನ್ನು ಪಟ್ಟಿ ಮಾಡುತ್ತಾರೆ. ಒಂದು: ಮುಸ್ಲಿಮರು, ಎರಡು: ಕ್ರೈಸ್ತರು, ಮತ್ತು ಮೂರು:ಕಮ್ಯುನಿಸ್ಟರು. *ಗುರೂಜಿ* ದೃಷ್ಟಿಯಲ್ಲಿ ಪ್ರತಿಯೊಬ್ಬ ಮುಸ್ಲಿಮನೂ, ಪ್ರತಿಯೊಬ್ಬ ಕ್ರೈಸ್ತನೂ, ಪ್ರತಿಯೊಬ್ಬ ಕಮ್ಯುನಿಸ್ಟನೂ ಈ ದೇಶದ ಭದ್ರತೆಗೆ ಗಂಡಾಂತರಕಾರಿಯೇ! *ಗುರೂಜಿ* ಬೋಧಿಸುವ ತತ್ವ-ಸಿದ್ಧಾಂತ ಇದು!

ಗುರೂಜಿ ಹಾಗೂ ಆರೆಸ್ಸೆಸ್‌ನೊಂದಿಗೆ ನಮಗಿರುವ ಎರಡನೆ ಪ್ರಮುಖ ಭಿನ್ನಾಭಿಪ್ರಾಯವು ಜಾತಿ ಸಮಸ್ಯೆಗೆ ಸಂಬಂಧಿಸಿದ್ದು. ಅವರು ಜಾತಿವ್ಯವಸ್ಥೆಯನ್ನು ಬೆಂಬಲಿಸುವ ಜನ. ಸಮಾಜವಾದಿಗಳು ಜಾತಿವ್ಯವಸ್ಥೆಯ ಕಡುವೈರಿಗಳು. ಜಾತಿವ್ಯವಸ್ಥೆ ಮತ್ತು ಬ್ರಾಹ್ಮಣವಾದದ ಕಡುವೈರಿಯೆಂದೇ ನಾನು ನನ್ನನ್ನು ಗುರುತಿಸಿಕೊಂಡಿದ್ದೇನೆ.

ಪ್ರಾರಂಭದಿಂದಲೂ ಭಾಷಾ ನೀತಿಗೆ ಸಂಬಂಧಿಸಿದಂತೆ ನಮ್ಮ ಮತ್ತು ಇವರ ನಡುವೆ ಭಿನ್ನಾಭಿಪ್ರಾಯಗಳು ಇದ್ದೇ ಇವೆ. ಗಾಂಧಿ ಮತ್ತು ತಿಲಕರು ಪ್ರಾಂತೀಯ ಭಾಷೆಗಳ ಪರ. ಅದೇ ಮಾರ್ಗ ನಮ್ಮದು. ಹಿಂದಿಯನ್ನು ಎಲ್ಲರ ಮೇಲೂ ಹೇರುವ ಧಾವಂತ ನಮಗಿಲ್ಲ. ತಮಿಳುನಾಡಿನಲ್ಲಿ ತಮಿಳು, ಆಂಧ್ರದಲ್ಲಿ ತೆಲುಗು, ಮಹಾರಾಷ್ಟ್ರದಲ್ಲಿ ಮರಾಠಿ, ಪಶ್ಚಿಮ ಬಂಗಾಳದಲ್ಲಿ ಬಂಗಾಳಿ. ಹೀಗೆ ಪ್ರತಿಯೊಂದು ರಾಜ್ಯದಲ್ಲೂ ಅಲ್ಲಿನ ಪ್ರಾಂತೀಯ ಭಾಷೆಗೇ ಪ್ರಮುಖ ಸ್ಥಾನವಿರಬೇಕು. ಹಿಂದಿಯೇತರ ರಾಜ್ಯಗಳು ಇಂಗ್ಲಿಷನ್ನು ಬಳಸಲು ಇಚ್ಛಿಸಿದರೆ ಅದು ಅವರ ನಿರ್ಧಾರಕ್ಕೆ ಬಿಟ್ಟ ವಿಷಯ. ನಮ್ಮದೇನೂ ತಕರಾರಿಲ್ಲ. ಆದರೆ ಸಂಸ್ಕೃತವು ಬೆರಳೆಣಿಕೆಯಷ್ಟು ಜನ ಬಳಸುವ ಭಾಷೆ. ಒಂದು ನಿರ್ದಿಷ್ಟ ಜಾತಿಯ ಭಾಷೆ. ಅದನ್ನು ರಾಷ್ಟ್ರಭಾಷೆಯಾಗಿ ಮಾಡುವುದೆಂದರೆ ಹಲವರ ಮೇಲೆ ಕೆಲವೇ ಕೆಲವರ ಆಧಿಪತ್ಯವನ್ನು ಹೇರಿದಂತಾಗುತ್ತದೆ. ಇಂಥ ಯಜಮಾನಿಕೆಯನ್ನು ನಾವು ಒಪ್ಪಲು ಸಾಧ್ಯವೇ ಇಲ್ಲ.

ಎಲ್ಲಿಯವರೆಗೆ ಭಾರತದಲ್ಲಿ ಜಾತಿವ್ಯವಸ್ಥೆ ಮತ್ತು ಆ ಆಧಾರದ ಮೇಲೆ ನಿಂತಿರುವ ಅಸಮಾನತೆಯು ಕೊನೆಗೊಳ್ಳುವುದಿಲ್ಲವೋ ಅಲ್ಲಿಯವರೆಗೆ ಈ ದೇಶದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಸಮಾನತೆಗಳು ಸಾಧ್ಯವೇ ಇಲ್ಲ ಎಂಬ ಅಚಲ ನಂಬಿಕೆ ನನ್ನದು.

ಆದರೆ *ಗುರೂಜಿ* ಹೇಳುವುದನ್ನು ನೋಡಿ: **"ವರ್ಣವ್ಯವಸ್ಥೆಯು ನಮ್ಮ ಸಮಾಜದ ಅನನ್ಯ ಲಕ್ಷಣ(ವೃತ್ತಿಯಾಧಾರಿತ ಸಮಾಜದ ವರ್ಗೀಕರಣ). ಇಂದಿನ ದಿನಗಳಲ್ಲಿ ಅದನ್ನು *ಜಾತಿಪ್ರಥಾ* (ಜಾತಿವ್ಯವಸ್ಥೆ) ಎಂದು ದೂಷಿಸಲಾಗುತ್ತಿದೆ".** ಮತ್ತೊಂದೆಡೆ ಹೀಗಿದೆ: **"ಸಮಾಜವೆಂಬುದು ಸರ್ವಶಕ್ತನಾದ ಭಗವಂತನ ರೂಪವೇ. ಅವನು ಒಳಗೊಂಡಿರುವ ನಾಲ್ಕು ಗುಣಲಕ್ಷಣಗಳನ್ನು ಆಧರಿಸಿಯೇ ಸಮಾಜವನ್ನು ವಿಭಜಿಸಲಾಗಿದೆ. ಒಂದೊಂದಕ್ಕೂ ಇರುವ ಸಾಮರ್ಥ್ಯಗಳನ್ನು ಗುರುತಿಸಿ ಪ್ರತ್ಯೇಕತೆಯನ್ನು ಕಲ್ಪಿಸಲಾಗಿದೆ. ಹೀಗೆ ಗುರುತಿಸಲಾಗಿರುವ ಸಾಮರ್ಥ್ಯಕ್ಕೆ ತಕ್ಕಂತೆ ಎಲ್ಲರೂ ಭಗವಂತನ ಸೇವೆಯಲ್ಲಿ ತೊಡಗತಕ್ಕದ್ದು. ಬ್ರಾಹ್ಮಣನು ಜ್ಞಾನ ನೀಡುವ ವೃತ್ತಿಯಿಂದ ಮುಖ್ಯನಾಗುತ್ತಾನೆ. ಕ್ಷತ್ರಿಯನು ವೈರಿಗಳನ್ನು ಸಂಹರಿಸುವವನಾದ್ದರಿಂದ ಬ್ರಾಹ್ಮಣನಷ್ಟೇ ಮುಖ್ಯನಾಗುತ್ತಾನೆ. ವ್ಯವಸಾಯ ಮತ್ತು ವ್ಯಾಪಾರದಲ್ಲಿ ತೊಡಗಿಸಿಕೊಂಡು ಸಮಾಜದ ಅಗತ್ಯಗಳನ್ನು ಪೂರೈಸುವುದರಿಂದ ವೈಶ್ಯನೂ ಅವರಿಗಿಂತ ಕಡಿಮೆಯಲ್ಲ. ಹಾಗೆಯೇ ತನ್ನ ಕಸುಬಿನಿಂದ ಸಮಾಜಕ್ಕೆ ಸೇವೆ ಒದಗಿಸುವ ಶೂದ್ರ ಕೂಡಾ ಮುಖ್ಯನಾದವನೇ".** ಶೂದ್ರನು ಸಮಾಜಕ್ಕೆ ಸೇವೆ ಒದಗಿಸುವವನು ಎಂದು ಬಹಳ ನಾಜೂಕಾಗಿ ಹೇಳುತ್ತಾರೆ *ಗುರೂಜಿ*. ಆದರೆ ಅವರಿಗೆ ಪ್ರೇರಣೆಯಾಗಿರುವ ಚಾಣಕ್ಯನ *ಅರ್ಥಶಾಸ್ತ್ರ*ವು ಬ್ರಾಹ್ಮಣ, ಕ್ಷತ್ರಿಯ, ಮತ್ತು ವೈಶ್ಯರ (ಮೇಲ್ಜಾತಿಗಳ) ಸೇವೆಮಾಡುವುದೇ ಶೂದ್ರನ ಧಾರ್ಮಿಕ ಕರ್ತವ್ಯ ಎಂಬುದನ್ನು ಯಾವುದೇ ಗೊಂದಲಕ್ಕೆ ಆಸ್ಪದವಿಲ್ಲದಂತೆ ಹೇಳುತ್ತದೆ. ಚಾಣಕ್ಯನು **ಮೇಲ್ಜಾತಿಗಳಿಗೆ ಒದಗಿಸುವ ಸೇವೆ** ಎಂದು ಹೇಳಿದ್ದನ್ನು, *ಗುರೂಜಿ* ಜಾಣಾಕ್ಷತನದಿಂದ **ಸಮಾಜಕ್ಕೆ ಒದಗಿಸುವ ಸೇವೆ** ಎಂದು ಬದಲಾಯಿಸಿ ಬರೆಯುತ್ತಾರೆ.

ನಮ್ಮ ನಡುವೆ ಇರುವ ಮೂರನೇ ಭಿನ್ನಾಭಿಪ್ರಾಯವು ಭಾಷೆಗೆ ಸಂಬಂಧಿಸಿದ್ದು. ಜನ-ಭಾಷೆಗಳನ್ನು ಪ್ರೋತ್ಸಾಹಿಸಬೇಕು ಎಂಬುದು ನಮ್ಮ ನಿಲುವು. ಪ್ರಾಂತೀಯ ಭಾಷೆಗಳೆಂದರೆ ದೇಶೀಯ ಭಾಷೆಗಳೇ ತಾನೇ? *ಗುರೂಜಿ* ಈ ಕುರಿತು ಏನು ಹೇಳುತ್ತಾರೆ ನೋಡೋಣ: **"ಹಿಂದಿ ಸಧ್ಯಕ್ಕೆ ರಾಷ್ಟ್ರಮಟ್ಟದಲ್ಲಿ ಸಂಪರ್ಕ ಭಾಷೆ. ಅಂತಿಮವಾಗಿ ಸಂಸ್ಕೃತವು ರಾಷ್ಟ್ರಭಾಷೆಯಾಗಬೇಕೆಂಬುದೇ ನಮ್ಮ ಗುರಿ. ಸಂಸ್ಕೃತ ಭಾಷೆಯು ಅಧಿಕೃತಗೊಳ್ಳುವವರೆಗೂ ಹಿಂದಿಯು ತಾತ್ಕಾಲಿಕವಾಗಿ ಸಂಪರ್ಕ ಕೊಂಡಿಯಾಗಿ ಅನುಕೂಲದ ದೃಷ್ಟಿಯಿಂದ ಮುಂದುವರೆಯಲಿ"** (*Bunch of Thoughts*). ಅಂದರೆ ಸಧ್ಯಕ್ಕೆ ಹಿಂದಿ; ಅಂತಿಮ ಗುರಿ ಸಂಸ್ಕೃತ.

ಪ್ರಾರಂಭದಿಂದಲೂ ಭಾಷಾ ನೀತಿಗೆ ಸಂಬಂಧಿಸಿದಂತೆ ನಮ್ಮ ಮತ್ತು ಇವರ ನಡುವೆ ಭಿನ್ನಾಭಿಪ್ರಾಯಗಳು ಇದ್ದೇ ಇವೆ. ಗಾಂಧಿ ಮತ್ತು ತಿಲಕರು ಪ್ರಾಂತೀಯ ಭಾಷೆಗಳ ಪರ. ಅದೇ ಮಾರ್ಗ ನಮ್ಮದು. ಹಿಂದಿಯನ್ನು ಎಲ್ಲರ ಮೇಲೂ ಹೇರುವ ಧಾವಂತ ನಮಗಿಲ್ಲ. ತಮಿಳುನಾಡಿನಲ್ಲಿ ತಮಿಳು, ಆಂಧ್ರದಲ್ಲಿ ತೆಲುಗು, ಮಹಾರಾಷ್ಟ್ರದಲ್ಲಿ ಮರಾಠಿ, ಪಶ್ಚಿಮ ಬಂಗಾಳದಲ್ಲಿ ಬಂಗಾಳಿ. ಹೀಗೆ ಪ್ರತಿಯೊಂದು ರಾಜ್ಯದಲ್ಲೂ ಅಲ್ಲಿನ ಪ್ರಾಂತೀಯ ಭಾಷೆಗೇ ಪ್ರಮುಖ ಸ್ಥಾನವಿರಬೇಕು. ಹಿಂದಿಯೇತರ ರಾಜ್ಯಗಳು ಇಂಗ್ಲಿಷನ್ನು ಬಳಸಲು ಇಚ್ಛಿಸಿದರೆ ಅದು ಅವರ ನಿರ್ಧಾರಕ್ಕೆ ಬಿಟ್ಟ ವಿಷಯ. ನಮ್ಮದೇನೂ ತಕರಾರಿಲ್ಲ. ಆದರೆ ಸಂಸ್ಕೃತವು ಬೆರಳೆಣಿಕೆಯಷ್ಟು ಜನ ಬಳಸುವ ಭಾಷೆ. ಒಂದು ನಿರ್ದಿಷ್ಟ ಜಾತಿಯ ಭಾಷೆ. ಅದನ್ನು ರಾಷ್ಟ್ರಭಾಷೆಯಾಗಿ ಮಾಡುವುದೆಂದರೆ ಹಲವರ ಮೇಲೆ ಕೆಲವೇ ಕೆಲವರ ಆಧಿಪತ್ಯವನ್ನು ಹೇರಿದಂತಾಗುತ್ತದೆ. ಇಂಥ ಯಜಮಾನಿಕೆಯನ್ನು ನಾವು ಒಪ್ಪಲು ಸಾಧ್ಯವೇ ಇಲ್ಲ.

ನಾಲ್ಕನೆಯ ಭಿನ್ನಾಭಿಪ್ರಾಯವು ಒಕ್ಕೂಟ ವ್ಯವಸ್ಥೆಯ ಪ್ರಭುತ್ವಕ್ಕೆ ಸಂಬಂಧಿಸಿದ್ದು. ಸ್ವಾತಂತ್ರ್ಯಕ್ಕಾಗಿ ನಾವು ಹಮ್ಮಿಕೊಂಡ ರಾಷ್ಟ್ರೀಯ ಚಳವಳಿಯ ಸಂದರ್ಭದಲ್ಲಿ ಪ್ರಭುತ್ವ ಲಕ್ಷಣದ ಬಗ್ಗೆ ಸರ್ವಸಮ್ಮತವಾಗಿದ್ದ ಸಂಗತಿಯೆಂದರೆ, ಭಾರತವು ಒಕ್ಕೂಟ ವ್ಯವಸ್ಥೆಯ ಪ್ರಭುತ್ವವಾಗಿರಬೇಕು ಎಂಬುದು. ಒಕ್ಕೂಟ ವ್ಯವಸ್ಥೆಯಲ್ಲಿ ಕೆಲವೊಂದು ಅಧಿಕಾರಗಳು ಸಂಪೂರ್ಣವಾಗಿ ಕೇಂದ್ರ ಸರ್ಕಾರದ ವ್ಯಾಪ್ತಿಗೊಳಪಡುತ್ತವೆ. ಇತರ ಹಲವಾರು ವಿಷಯಗಳಲ್ಲಿ ಅಧಿಕಾರವು ರಾಜ್ಯಗಳ ವ್ಯಾಪ್ತಿಯಲ್ಲಿರುತ್ತದೆ. ಈ ಬಗ್ಗೆ ಯಾರಿಗೂ ಯಾವುದೇ ಗೊಂದಲವಿರಲಿಲ್ಲ. ದೇಶ ವಿಭಜನೆಯ ನಂತರ, ರಾಜ್ಯಗಳೊಂದಿಗಿನ ಕೇಂದ್ರ ಸರ್ಕಾರದ ಸಂಬಂಧವನ್ನು ಬಲಪಡಿಸುವ ದೃಷ್ಟಿಯಿಂದ ಹಲವು ವಿಷಯಗಳು ಕೇಂದ್ರ ಮತ್ತು ರಾಜ್ಯಗಳ ಜಂಟಿ ವ್ಯಾಪ್ತಿಗೆ

...ಸಂವಿಧಾನದಲ್ಲಿ ಸಹಭಾಗಿತ್ವದ ಪಟ್ಟಿಯನ್ನು ...ಲಾಯಿತು. ರಾಜ್ಯಗಳ ವ್ಯಾಪ್ತಿಗೆ ಒಳಪಡಬೇಕಾದ ವಿಷಯಗಳನ್ನೂ, ಮೊದಲ ಬಾರಿಗೆ ಈ ಪಟ್ಟಿಯಲ್ಲಿ ಸೇರ್ಪಡೆಮಾಡಲಾಯಿತು. ಒಕ್ಕೂಟ ವ್ಯವಸ್ಥೆಯು ದೇಶದಲ್ಲಿ ಅಸ್ತಿತ್ವಕ್ಕೆ ಬಂದದ್ದು ಹೀಗೆ.

ಆದರೆ ಆರೆಸ್ಸೆಸ್ ಮತ್ತು ಅದಕ್ಕೆ ಸೈದ್ಧಾಂತಿಕ ಚೌಕಟ್ಟನ್ನು ತಯಾರಿಸಿದ ಗುರೂಜಿ ಸಂವಿಧಾನದ ಈ ನಿಬಂಧನೆಗಳಿಗೆ ಸತತವಾಗಿ ವಿರೋಧ ವ್ಯಕ್ತಪಡಿಸುತ್ತಲೇ ಬಂದಿದ್ದಾರೆ. ಈ ಜನಕ್ಕೆ 'ರಾಜ್ಯಗಳ ಒಕ್ಕೂಟ' ಎಂಬ ಕಲ್ಪನೆಯೇ ಗೇಲಿಯ ವಿಷಯ. ಇದಕ್ಕೆ ಮೂಲವಾಗಿರುವ ಸಂವಿಧಾನವನ್ನೇ ರದ್ದುಪಡಿಸಬೇಕೆಂದು ಬೊಬ್ಬೆಹೊಡೆಯುತ್ತಲೇ ಇದ್ದಾರೆ. *Bunch of Thoughts* ಪುಸ್ತಕದಲ್ಲಿ ಈ ಬಗ್ಗೆ ಅವರಾಡುವ ಮಾತುಗಳಿವು: **"ನಾವು ಸಂವಿಧಾನವನ್ನು ಪರಾಮರ್ಶಿಸಬೇಕು. ಏಕಾತ್ಮಕ ಪ್ರಭುತ್ವದ ವಿಷಯಕ್ಕೆ ಒತ್ತು ನೀಡಿ ಸಂವಿಧಾನದಲ್ಲಿ ಅದನ್ನು ಅಳವಡಿಸಬೇಕು."** *ಗುರೂಜಿ* ಅಪೇಕ್ಷಿಸುವುದು ಏಕಾತ್ಮಕ ಪ್ರಭುತ್ವದ ವ್ಯವಸ್ಥೆಯನ್ನು, ಅಂದರೆ ಅಧಿಕಾರವು ಪರಮಾಧಿಕಾರವಾಗಿ ಕೇಂದ್ರಿಕೃತವಾಗುವ ಪ್ರಭುತ್ವದ ರಾಷ್ಟ್ರವನ್ನು. ರಾಜ್ಯಗಳಿಗೆ ಯಾವ ಅಧಿಕಾರವನ್ನೂ ನೀಡದೆ ಒಕ್ಕೂಟ ವ್ಯವಸ್ಥೆಯನ್ನು ನಾಶಮಾಡುವುದೇ ಇವರ ಅಂತಿಮ ಗುರಿ. ಇವರು ಬಯಸುವುದು ಏಕತ್ವದ ರಾಷ್ಟ್ರ, ಏಕತ್ವದ ಪ್ರಭುತ್ವ ಏಕತ್ವದ ಶಾಸಕಾಂಗ, ಏಕತ್ವದ ಕಾರ್ಯಾಂಗ. ರಾಜ್ಯಗಳ ಶಾಸನ ಸಭೆಗಳನ್ನೂ ಮಂತ್ರಿಮಂಡಲಗಳನ್ನೂ ರದ್ದುಪಡಿಸುವುದು ಎಂಬುದೇ ಇದರ ಅರ್ಥ. ಅಂದರೆ ದೊಣ್ಣೆ ನಾಯಕನಾಗಿ ದಿಲ್ಲಿಯಲ್ಲಿ ಕುಳಿತು ದೇಶವನ್ನೆಲ್ಲಾ ಆಳುವ ಹೆಬ್ಬಯಕೆ ಇವರದ್ದು. ಇವರೇನಾದರೂ ಅಧಿಕಾರಕ್ಕೆ ಬಂದರೆ ಪರಮಾಧಿಕಾರದ ಕೇಂದ್ರೀಕೃತ ಪ್ರಭುತ್ವವನ್ನು ಜಾರಿಗೆ ತರುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

ಭಿನ್ನಾಭಿಪ್ರಾಯವಿರುವ ಮತ್ತೊಂದು ವಿಷಯವೆಂದರೆ, ನಮ್ಮ ರಾಷ್ಟ್ರೀಯ ಚಳವಳಿಯಲ್ಲಿ ನಾವೆಲ್ಲರೂ ಅಂಗೀಕರಿಸಿದ ತ್ರಿವರ್ಣ ಬಾವುಟಕ್ಕೆ ಸಂಬಂಧಿಸಿದ್ದು. ನಮ್ಮೆಲ್ಲರ ಆಯ್ಕೆಯಾಗಿರುವ ಈ ಬಾವುಟದ ಗೌರವ ಕಾಪಾಡಲು ಮತ್ತು ಘನತೆಯನ್ನು ಎತ್ತಿಹಿಡಿಯಲು ನೂರಾರು ಭಾರತೀಯರು ಪ್ರಾಣತ್ಯಾಗ ಮಾಡಿದ್ದಾರೆ; ಸಾವಿರಾರು ಸಂಖ್ಯೆಯಲ್ಲಿ ಲಾಠೀಪ್ರಹಾರದ ನೋವುಂಡಿದ್ದಾರೆ. ಆಶ್ಚರ್ಯದ ಮಾತೆಂದರೆ, ಆರೆಸ್ಸೆಸ್ ಎಂದೂ ನಮ್ಮ ತ್ರಿವರ್ಣ ಧ್ವಜವನ್ನು ರಾಷ್ಟ್ರಧ್ವಜವೆಂದು ಒಪ್ಪಲೇ ಇಲ್ಲ. ಇವರ ನಿಷ್ಠೆಯೆಲ್ಲಾ ಕೇಸರಿ ಧ್ವಜಕ್ಕೆ ಮೀಸಲು. ಅನಾದಿಕಾಲದಿಂದಲೂ ಕೇಸರಿ ಧ್ವಜವೇ ಹಿಂದೂ ರಾಷ್ಟ್ರದ ಧ್ವಜವಾಗಿದೆ ಎಂಬುದು ಇವರ ವಿತಂಡ ವಾದ.

ಒಕ್ಕೂಟದ ವ್ಯವಸ್ಥೆಯಲ್ಲಿ ನಂಬಿಕೆಯಿಲ್ಲದ *ಗುರೂಜಿಗೆ* ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲೂ ನಂಬಿಕೆ ಇರಲಿಲ್ಲ. ಪ್ರಜಾಪ್ರಭುತ್ವವೆಂಬುದು ಪಶ್ಚಿಮದಿಂದ ಆಮದಾದ ವ್ಯವಸ್ಥೆಯಾಗಿರುವುದರಿಂದ ಸಂಸದೀಯ ಪ್ರಜಾಪ್ರಭುತ್ವದ ವ್ಯವಸ್ಥೆಯು ನಮ್ಮ ತತ್ವಚಿಂತನೆ ಮತ್ತು ನಾಗರಿಕತೆಗಳೊಟ್ಟಿಗೆ ಎಂದಿಗೂ ಬೆರೆಯಲಾರದು ಎಂಬ ಅಚಲ ನಂಬಿಕೆ ಅವರದ್ದು. ಸಮಾಜವಾದವೂ ಅವರಿಗೆ ಪರದೇಶೀ ವ್ಯವಸ್ಥೆಯೇ! ಭಾರತೀಯ ಸಮಾಜವನ್ನು ಭಾರತೀಯ ಸಂಸ್ಕೃತಿಯ ತಳಹದಿಯ ಮೇಲೆ ನಿರ್ಮಿಸಬೇಕು. ಪ್ರಜಾಪ್ರಭುತ್ವ ಮತ್ತು ಸಮಾಜವಾದವೂ ಸೇರಿದಂತೆ ಎಲ್ಲ ವಾದಗಳೂ ನಮಗೆ 'ಹೊರಗಿನ'ವಾಗಿದ್ದು ಅವುಗಳೆಲ್ಲವನ್ನೂ ಸಾರಾಸಗಟಾಗಿ ತಿರಸ್ಕರಿಸಬೇಕು ಎಂದು ಏಕಪ್ರಕಾರವಾಗಿ ಹೇಳುತ್ತಲೇ ಬಂದಿದ್ದಾರೆ. ನಮ್ಮ ಬಗ್ಗೆ ಹೇಳುವುದಾದರೆ, ನಾವು ಸಂಸದೀಯ ಪ್ರಜಾಪ್ರಭುತ್ವದಲ್ಲಿ ಅಚಲವಾದ ನಂಬಿಕೆಯುಳ್ಳವರು. ಗಾಂಧೀಜಿಯವರ ತತ್ವಾದರ್ಶಗಳಿಗೆ ಬದ್ಧರಾಗಿ ಸಮಾಜವಾದವನ್ನು ಅಹಿಂಸಾ ಮಾರ್ಗದಲ್ಲಿ ಸ್ಥಾಪಿಸುವುದೇ ನಮ್ಮ ಗುರಿ.

ಇಂದಿರಾ ಗಾಂಧಿಯವರು ತುರ್ತುಪರಿಸ್ಥಿತಿಯನ್ನು ಘೋಷಿಸಿ ಸರ್ವಾಧಿಕಾರಿ ಕ್ರಮಗಳನ್ನು ಉಸಿರುಗಟ್ಟಿಸುವಷ್ಟು ಬಿಗಿಗೊಳಿಸಿದರು. ಸಂಜಯ್‌ಗಾಂಧಿಯನ್ನು ಅಧಿಕಾರಕ್ಕೇರಿಸುವ ಹುನ್ನಾರ ಹೂಡಿದರು. ಮಾರುತಿ ಹಗರಣ ಕೂಡ ಅದೇ ವೇಳೆ ಬಹಿರಂಗಗೊಂಡಿತು. ಈವಿದ್ಯಮಾನಗಳ ಹಿನ್ನೆಲೆಯಲ್ಲಿ ವಿರೋಧ ಪಕ್ಷಗಳೆಲ್ಲವೂ ಒಂದು ಪಕ್ಷದ ಹೆಸರಿನಲ್ಲಿ ಒಟ್ಟಾಗದಿದ್ದಲ್ಲಿ ಇಂದಿರಾಗಾಂಧಿಯವರ ಸರ್ವಾಧಿಕಾರವನ್ನು ಅಂತ್ಯಗೊಳಿಸುವುದು ಅಸಾಧ್ಯ ಎಂಬ ತೀರ್ಮಾನಕ್ಕೆ ಜೈಪ್ರಕಾಶ್‌ಜೀ ಬಂದಿದ್ದರು. ನನ್ನ ದೃಷ್ಟಿಯಲ್ಲಿ ನಾವು ಚುನಾವಣೆಗಳಲ್ಲಿ ಸ್ಪರ್ಧಿಸುವುದೇ ಸೂಕ್ತವೆನಿಸಿತು. ಚುನಾವಣೆ ಎಂದರೆ ಚಾಲಕ ಶಕ್ತಿಯ ಪ್ರಕ್ರಿಯೆ. ಚುನಾವಣೆಯ ಕಾವು ಏರಿದಂತೆಲ್ಲಾ ತುರ್ತುಪರಿಸ್ಥಿತಿಯ ಉಸಿರು ಗಟ್ಟಿಸುವ ವಾತಾವರಣವು ಸಡಿಲವಾಗುತ್ತದೆ. ಜನತೆ ತಮ್ಮ ಜನತಾಂತ್ರಿಕ ಹಕ್ಕನ್ನು ಚಲಾಯಿಸುತ್ತಾರೆ. ಈ ಎಲ್ಲ ಕಾರಣಗಳನ್ನು ಮನಗಂಡು ಚುನಾವಣೆಗಳಲ್ಲಿ ನಾವು ಸ್ಪರ್ಧಿಸುವ ಪ್ರಸ್ತಾಪವನ್ನು ಬೆಂಬಲಿಸಿದೆ.

ಕಾಂಗ್ರೆಸ್ ಸರ್ಕಾರದ ನಿರಂಕುಶ ಆಡಳಿತದ ವಿರುದ್ಧ ನಾವು ಹೋರಾಟವನ್ನು ಪ್ರಾರಂಭಿಸಿದ್ದೆವು. ಚೀನಾ ದೇಶದ ವಿರುದ್ಧ ದೇಶವು ಸೋಲನ್ನನುಭವಿಸಿತ್ತು. ಈ ಸೋಲಿಗೆ ಕಾಂಗ್ರೆಸ್ ಪಕ್ಷವೇ ಕಾರಣವಾಗಿರುವುದರಿಂದ ಅದನ್ನು ಅಧಿಕಾರದಿಂದ ಕೆಳಗಿಳಿಸಬೇಕಾಗಿತ್ತು. ಅದಕ್ಕಾಗಿ ಎಲ್ಲ ಕಾಂಗ್ರೆಸ್–ವಿರೋಧಿ ಶಕ್ತಿಗಳೊಂದಿಗೆ ಮೈತ್ರಿ ಬೆಳೆಸಿ ಹೋರಾಟ ಮುಂದುವರೆಸಬೇಕೆಂಬುದು ಲೋಹಿಯಾ ಅವರ ಅಭಿಪ್ರಾಯವಾಗಿತ್ತು. ಈ ವಿಷಯದಲ್ಲಿ ಸುಮಾರು ಎರಡು ವರ್ಷಗಳ ಕಾಲ ನಮ್ಮ ನಡುವೆ ಚರ್ಚೆಗಳು ನಡೆದವು. ಆರೆಸ್ಸೆಸ್ ಮತ್ತು ಜನಸಂಘಗಳೊಂದಿಗೆ ಮೈತ್ರಿ ಮಾಡಿಕೊಳ್ಳಕೂಡದು ಎಂದು ನಾನು ಉದ್ದಕ್ಕೂ ವಾದಿಸುತ್ತಲೇ ಬಂದೆ. ಕೊನೆಗೊಂದು ದಿನ ಲೋಹಿಯಾ, "ನಿನಗೆ ನನ್ನ ನಾಯಕತ್ವದಲ್ಲಿ ನಂಬಿಕೆ ಇದೆಯೋ ಇಲ್ಲವೋ ಹೇಳಿಬಿಡು" ಎಂದರು. "ಇದೆ" ಎಂದೆ. "ಹಾಗಿದ್ದರೆ ಪ್ರತಿಯೊಂದು ವಿಷಯದಲ್ಲೂ ಏಕಾಭಿಪ್ರಾಯವು ಇರಲೇಬೇಕೆಂದಿಲ್ಲ. ಹಾಗೆಯೇ ಪ್ರತಿಯೊಂದು ವಿಷಯವೂ ನಿನಗೆ ಮನವರಿಕೆಯಾಗಲೇಬೇಕೆಂದಿಲ್ಲ". ಮನವರಿಕೆಯಾಗದ ಒಂದೋ ಎರಡೋ ವಿಷಯಗಳು ಇದ್ದರೂ ಇರಲಿ ಎಂಬ ಅಭಿಪ್ರಾಯ ಅವರದು. "ನನ್ನ ತೀರ್ಮಾನವು ಸಮಂಜಸವೆನಿಸಬಹುದು ಅಥವಾ ನಿನ್ನ ನಿಲುವೇ ಸರಿಯಾಗಿತ್ತು ಅನಿಸಬಹುದು" ಎಂದರು. ಹೆಚ್ಚು ಗಂಡಾಂತರಕಾರಿಯಾದ ವೈರಿಯನ್ನು ಸೋಲಿಸುವುದು ಮುಖ್ಯ ಗುರಿಯಾಗಿತ್ತು. ಅವರ ಮತ್ತು ನನ್ನ ತೀರ್ಮಾನಗಳ ಸತ್ವ ಪರೀಕ್ಷೆಯಾಗುವುದಾದರೆ ಆಗಲಿ ಎಂದು ಭಾವಿಸಿದೆ. ಆದರೂ ಆರೆಸ್ಸೆಸ್ ಮತ್ತು ಲೋಹಿಯಾವಾದಿ ಸಿದ್ಧಾಂತಗಳ ಸಂಘರ್ಷವು ಅನಿವಾರ್ಯ ಘಟ್ಟವನ್ನು ತಲುಪುತ್ತಿದೆ ಎಂಬುದು ನನಗೆ ಖಚಿತವಾಗತೊಡಗಿತು.

ಇಂದಿರಾ ಗಾಂಧಿಯವರು ತುರ್ತುಪರಿಸ್ಥಿತಿಯನ್ನು ಘೋಷಿಸಿ ಸರ್ವಾಧಿಕಾರಿ ಕ್ರಮಗಳನ್ನು ಉಸಿರುಗಟ್ಟಿಸುವಷ್ಟು ಬಿಗಿಗೊಳಿಸಿದರು. ಸಂಜಯ್ ಗಾಂಧಿಯನ್ನು ಅಧಿಕಾರಕ್ಕೇರಿಸುವ ಹುನ್ನಾರ ಹೂಡಿದರು. ಮಾರುತಿ ಹಗರಣ ಕೂಡ ಅದೇ ವೇಳೆ ಬಹಿರಂಗಗೊಂಡಿತು. ಈ ವಿದ್ಯಮಾನಗಳ ಹಿನ್ನೆಲೆಯಲ್ಲಿ ವಿರೋಧ ಪಕ್ಷಗಳೆಲ್ಲವೂ ಒಂದು ಪಕ್ಷದ ಹೆಸರಿನಲ್ಲಿ ಒಟ್ಟಾಗದಿದ್ದಲ್ಲಿ ಇಂದಿರಾ ಗಾಂಧಿಯವರ ಸರ್ವಾಧಿಕಾರವನ್ನು ಅಂತ್ಯಗೊಳಿಸುವುದು ಅಸಾಧ್ಯ ಎಂಬ ತೀರ್ಮಾನಕ್ಕೆ ಜೈಪ್ರಕಾಶ್‌ಜೀ ಬಂದಿದ್ದರು. ಅದೇ ಅಭಿಪ್ರಾಯವನ್ನು ತಳೆದಿದ್ದ ಚೌಧರಿ ಚರಣ್‌ಸಿಂಗ್ ಕೂಡ ಸಂಯುಕ್ತ ಪಕ್ಷವೊಂದರ ರಚನೆಯನ್ನು ಬೆಂಬಲಿಸಿದರು. ಈ ವಿಷಯದ ಬಗ್ಗೆ ನಮ್ಮೆಲ್ಲರ ಅಭಿಪ್ರಾಯವನ್ನು ಕೇಳಲಾಯಿತು. ಜೈಲಿನಲ್ಲಿದ್ದ ನಾನು ಟೆಲಿಗ್ರಾಂ ಕಳಿಸಿ ನನ್ನ ಅಭಿಪ್ರಾಯವನ್ನು ತಿಳಿಸಿದ್ದು ನೆನಪಿನಲ್ಲಿದೆ. ನನ್ನ ದೃಷ್ಟಿಯಲ್ಲಿ ನಾವು ಚುನಾವಣೆಗಳಲ್ಲಿ ಸ್ಪರ್ಧಿಸುವುದೇ ಸೂಕ್ತವೆನಿಸಿತು. ಚುನಾವಣೆ ಎಂದರೆ ಚಾಲಕಶಕ್ತಿಯ ಪ್ರಕ್ರಿಯೆ. ಲಕ್ಷಾಂತರ ಸಂಖ್ಯೆಯಲ್ಲಿ ಜನ ಈ ಪ್ರಕ್ರಿಯೆಯಲ್ಲಿ ಭಾಗಿಯಾಗುತ್ತಾರೆ. ಚುನಾವಣೆಯ ಕಾವು ಏರಿದಂತೆಲ್ಲಾ ತುರ್ತುಪರಿಸ್ಥಿತಿಯ ಉಸಿರುಗಟ್ಟಿಸುವ ವಾತಾವರಣವು ಸಡಿಲವಾಗುತ್ತದೆ. ಜನತೆ ತಮ್ಮ ಜನತಾಂತ್ರಿಕ ಹಕ್ಕನ್ನು ಚಲಾಯಿಸುತ್ತಾರೆ. ಈ ಎಲ್ಲ ಕಾರಣಗಳನ್ನು ಮನಗಂಡು ಚುನಾವಣೆಗಳಲ್ಲಿ ನಾವು ಸ್ಪರ್ಧಿಸುವ ಪ್ರಸ್ತಾಪವನ್ನು ಬೆಂಬಲಿಸಿದೆ.

ಏಕಪಕ್ಷವಾಗಿ ಒಂದೇ ಹೆಸರಿನಲ್ಲಿ ಎಲ್ಲರೂ ಒಟ್ಟಾಗಲೇಬೇಕೆಂಬ ಜೈಪ್ರಕಾಶ್‌ಜಿ ಅವರ ತೀರ್ಮಾನವನ್ನು ಸಮಾಜವಾದಿಗಳಾದ ನಾವೆಲ್ಲರೂ ಬೆಂಬಲಿಸಿದೆವು. ಪ್ರಮುಖವಾದ ಒಂದು ವಿಷಯವನ್ನು ಇಲ್ಲಿ ಒತ್ತುಕೊಟ್ಟು ಹೇಳಲೇಬೇಕು:ಸಮಾಜವಾದಿ ಪಕ್ಷ, ಜನಸಂಘ, ಕಾಂಗ್ರೆಸ್ (ಒ), ಭಾರತೀಯ ಲೋಕತಾಂತ್ರಿಕದಳ ಹಾಗೂ ಕಾಂಗ್ರೆಸ್‌ನಿಂದ ಸಿಡಿದು ಹೊರಬಂದಿದ್ದ-ಗುಂಪುಗಳು–ಹೀಗೆ ರಾಜಕೀಯ ಪಕ್ಷಗಳ ನಡುವೆ ಮಾತ್ರವೇ ಮೈತ್ರಿಯಾಗಬೇಕೆಂಬುದು ಆ ತೀರ್ಮಾನದ ಹಿಂದಿದ್ದ ನಮ್ಮೆಲ್ಲರ ತಿಳುವಳಿಕೆಯಾಗಿತ್ತು. ಆರೆಸ್ಸೆಸ್‌ನೊಂದಿಗೆ ಮೈತ್ರಿಗಾಗಲೀ ಯಾವುದೇ ರೀತಿಯ ಒಡಂಬಡಿಕೆಗಾಗಲೀ ನಾವ್ಯಾರೂ ಸಮ್ಮತಿ ನೀಡಿರಲಿಲ್ಲ. ಚೌಧರಿ ಚರಣ್‌ಸಿಂಗ್ ಅವರು, ಹೊಸದಾಗಿ ರಚಿತವಾಗಲಿರುವ ಪಕ್ಷದ ಸದಸ್ಯತ್ವವನ್ನು ಆರೆಸ್ಸೆಸ್ ಸದಸ್ಯರಿಗೆ ನೀಡಬಹುದೇ? ಒಂದು ವೇಳೆ ನೀಡಿದಲ್ಲಿ ದ್ವಿ–ಸದಸ್ಯತ್ವದ ಪರಿಣಾಮವಾಗಿ ಸೈದ್ಧಾಂತಿಕ ಆಸಕ್ತಿಗಳ ನಡುವೆ ಸಂಘರ್ಷ ಸಂಭವಿಸಬಹುದು ಎಂಬ ಅಂಶವನ್ನು ಎತ್ತಿದ್ದರು. ಮನುಭಾಯ್ ಪಟೇಲರು ಆ ಕುರಿತು ಜೈಲಿನಲ್ಲಿದ್ದ ನಮಗೆಲ್ಲಾ ಪತ್ರ ಬರೆದರು. ವಿಷಯವು ನಮ್ಮ ಗಮನಕ್ಕೆ ಬಂದದ್ದು ಆಗಲೇ.

"ಹೊಸದಾಗಿ ರಚಿತವಾಗಲಿರುವ ಪಕ್ಷವು ರೂಪಿಸುವ ಸದಸ್ಯತ್ವದ ನಿಯಮಾವಳಿಗಳ ಬಗ್ಗೆ ನಮ್ಮ ಯಾವ ತಕರಾರೂ ಇರುವುದಿಲ್ಲ... ಆರೆಸ್ಸೆಸ್‌ಗೆ ಹಲವು ಅಗ್ನಿಪರೀಕ್ಷೆಗಳು ಎದುರಾಗಿ ಅದು ಕರಗಿಹೋಗುವ ದುಸ್ಥಿತಿಯಲ್ಲಿರುವುದರಿಂದ ಆರೆಸ್ಸೆಸ್-ಸದಸ್ಯತ್ವ ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ" ಎಂಬುದಾಗಿ ಅಂದಿನ ಜನಸಂಘದ ನಿಯೋಜಿತ ಪ್ರಧಾನ ಕಾರ್ಯದರ್ಶಿ ಓಂ ಪ್ರಕಾಶ್ ತ್ಯಾಗಿ ಆ ಪತ್ರಕ್ಕೆ ವಿವರಣೆ ನೀಡಿ ಉತ್ತರ ಬರೆದಿದ್ದರು.

ಆ ಬಳಿಕ, ಜನತಾ ಪಕ್ಷದ ಸಂವಿಧಾನವನ್ನು ಬರೆಯುವ ಸಂದರ್ಭದಲ್ಲಿ ಅದರ ಕರಡು ಪ್ರತಿಯನ್ನು ಸಿದ್ಧಪಡಿಸಲು ಒಂದು ಉಪಸಮಿತಿಯನ್ನು ರಚಿಸಲಾಯಿತು. ಜನತಾ ಪಕ್ಷದ ಧ್ಯೇಯೋದ್ದೇಶಗಳಿಗೆ, ನೀತಿಗಳಿಗೆ ಮತ್ತು ಕಾರ್ಯಕ್ರಮಗಳಿಗೆ ವ್ಯತಿರಿಕ್ತವಾದ ಧ್ಯೇಯೋದ್ದೇಶಗಳು, ನೀತಿಗಳು ಮತ್ತು ಕಾರ್ಯಕ್ರಮಗಳನ್ನು ಹೊಂದಿರುವ ಸಂಘಟನೆಗಳಿಗೆ ಪಕ್ಷವು ಸದಸ್ಯತ್ವವನ್ನು ನೀಡಬಾರದು ಎಂಬ ಪ್ರಸ್ತಾವವನ್ನು ಉಪಸಮಿತಿಯು ಮುಂದಿಟ್ಟಿತು. ಈ ವಿಷಯದಲ್ಲಿ ಯಾವುದೇ ಗೊಂದಲವಿರಲಿಲ್ಲ. ಹಾಗಾಗಿ ನಮ್ಮ ವಿರೋಧವಿರಲಿಲ್ಲ. ಆದರೆ ಜನಸಂಘದ ಸುಂದರಸಿಂಗ್ ಭಂಡಾರಿಯವರು ಪ್ರಸ್ತಾಪಕ್ಕೆ ವಿರೋಧ ವ್ಯಕ್ತಪಡಿಸಿದರು ಎಂಬುದು ಇಲ್ಲಿನ ವಿಶೇಷ.

ಮೈತ್ರಿಪಕ್ಷಗಳ ನಡುವೆ ಇರಬಹುದಾದ ಭಿನ್ನಾಭಿಪ್ರಾಯಗಳನ್ನು ಚರ್ಚಿಸಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಉದ್ದೇಶದಿಂದ 1976 ಡಿಸೆಂಬರ್‌ನಲ್ಲಿ ಒಂದು ಸಭೆಯನ್ನು ಕರೆಯಲಾಯಿತು. ಜನತಾ ಪಕ್ಷದ ಸದಸ್ಯತ್ವಕ್ಕೆ ಸಂಬಂಧಿಸಿದಂತೆ ಆರೆಸ್ಸೆಸ್ ಕುರಿತು ಯಾವುದೇ ಪ್ರಶ್ನೆಯನ್ನು ಎತ್ತಬಾರದು ಎಂಬ ಸಲಹೆಗೆ ರಚಿತವಾಗಲಿರುವ ಪಕ್ಷದ ಕೆಲವು ಮುಖಂಡರ ಸಮ್ಮತಿ ಇದೆ ಎಂಬುದಾಗಿ ವಾಜಪೇಯಿಯವರು ಒಂದು ಪತ್ರ ಬರೆದಿದ್ದರಂತೆ. ಆ ಪತ್ರವು ಸಭೆಯಲ್ಲಿ ಪ್ರಸ್ತಾಪಕ್ಕೆ ಬಂತು. ವಿರೋಧ ಪಕ್ಷಗಳನ್ನು ವಿಲೀನಗೊಳಿಸಿ ಹೊಸ ಪಕ್ಷ ರಚಿಸುವ ಸಂದರ್ಭದಲ್ಲಿ ಆರೆಸ್ಸೆಸ್ ಸಂಘಟನೆಯು ಯಾರ ಗಮನದಲ್ಲೂ ಇರಲಿಲ್ಲವಾಗಿ ಆ ಬಗ್ಗೆ ಯಾರೂ ಸಮ್ಮತಿ ನೀಡಿಲ್ಲ ಎಂಬುದಾಗಿ ಹಲವು ಮುಖಂಡರು ನನಗೆ ತಿಳಿಸಿದರು. ನಾನು ಆಗ ಜೈಲಿನಲ್ಲಿದ್ದೆನಾಗಿ ಒಂದು ವೇಳೆ ಅಂತಹ ಒಪ್ಪಂದವೇನಾದರೂ ಆಗಿದ್ದರೆ ಅದರಲ್ಲಿ ನನ್ನ ಪಾತ್ರವೇನೂ ಇಲ್ಲ ಎಂಬುದನ್ನು ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ.

ಜನತಾ ಪಕ್ಷದ ಪ್ರಣಾಳಿಕೆಯು ಆರೆಸ್ಸೆಸ್‌ನ ಯಾವುದೇ ಆಶಯಗಳನ್ನು ಯಾವ ರೀತಿಯಲ್ಲೂ ಸಮರ್ಥಿಸಲಿಲ್ಲ ಎಂಬುದನ್ನು ನಾನು ಗಂಟಾಘೋಷವಾಗಿ ಹೇಳಬಯಸುತ್ತೇನೆ. ಮತನಿರಪೇಕ್ಷತೆ, ಪ್ರಜಾಪ್ರಭುತ್ವ ಮತ್ತು ಗಾಂಧೀತತ್ವಗಳನ್ನು ಆಧರಿಸಿದ ಸಮಾಜ ನಿರ್ಮಾಣಕ್ಕೆ ನಾವು ಬದ್ಧರಾಗಿದ್ದೇವೆ ಎಂಬುದನ್ನು ಸ್ಪಷ್ಟವಾಗಿ ಹೇಳಲಾಗಿತ್ತು. ಹಿಂದೂರಾಷ್ಟ್ರದ ಬಗ್ಗೆ ಒಂದೇ ಒಂದು ಅಕ್ಷರವನ್ನೂ ನಾವು ಅದರಲ್ಲಿ ನಮೂದಿಸಿರಲಿಲ್ಲ. ಬದಲಾಗಿ ಅಲ್ಪಸಂಖ್ಯಾತರಿಗೆ ಸಮಾನ ಹಕ್ಕುಗಳನ್ನು ನೀಡುವುದರ ಜತೆಗೆ ಅವರ ಹಕ್ಕುಗಳನ್ನು ರಕ್ಷಿಸುವುದಾಗಿ ಘೋಷಿಸಿದ್ದೆವು. *ಗುರೂಜಿ* ಇದಕ್ಕೆ ತದ್ವಿರುದ್ಧವಾಗಿ ಅಲ್ಪಸಂಖ್ಯಾತರಿಗೆ ಸಮಾನ ಹಕ್ಕುಗಳನ್ನು ಅಲ್ಲಗಳೆದಿದ್ದರು; ಹಿಂದೂ ರಾಷ್ಟ್ರದಲ್ಲಿ ಅವರು ನಮ್ಮ ಆಜ್ಞಾನುವರ್ತಿಗಳಾಗಿರಬೇಕು ಎಂಬ ಸಿದ್ಧಾಂತಕ್ಕೆ ಅಂಟಿಕೊಂಡಿದ್ದವರು ಅವರು. ಜನತಾ ಪಕ್ಷವು ವಿಕೇಂದ್ರೀಕರಣಕ್ಕೆ ಬದ್ಧವಾಗಿದ್ದರೆ *ಗುರೂಜಿ* ಕೇಂದ್ರೀಕೃತ ವ್ಯವಸ್ಥೆಯ ಪ್ರತಿಪಾದಕರಾಗಿದ್ದರು. ರಾಜ್ಯಗಳನ್ನೂ ರಾಜ್ಯಗಳ ಶಾಸನ ಸಭೆಗಳನ್ನೂ ಮಂತ್ರಿಮಂಡಲಗಳನ್ನೂ ರದ್ದುಮಾಡಬೇಕೆಂಬುದು ಅವರ ಅಚಲ ನಿಲುವು. ಜನತಾ ಪಕ್ಷವು ವಿಕೇಂದ್ರೀಕರಣಕ್ಕೆ ಹೆಚ್ಚಿನ ಒತ್ತು ನೀಡಿತ್ತು. ರಾಜ್ಯಗಳಿಗಿರುವ ಸ್ವಾಯತ್ತತೆಯನ್ನು ನಾವು ಎಂದೂ ಕಸಿದುಕೊಳ್ಳುವ ಆಲೋಚನೆ ಮಾಡಿದವರಲ್ಲ. ಪ್ರಣಾಳಿಕೆಯಲ್ಲಿ ಸಮಾಜವಾದ, ಸಮಾನತೆ, ಮತ್ತು ಸಾಮಾಜಿಕ ನ್ಯಾಯಕ್ಕೆ ನಮ್ಮ ಬದ್ಧತೆಯನ್ನು ಘೋಷಿಸಿದ್ದೆವು. ಜಾತಿ ವ್ಯವಸ್ಥೆಯನ್ನು ಬೆಂಬಲಿಸುತ್ತೇವೆಂದಾಗಲೀ ಶೂದ್ರರು ಮೇಲ್ಜಾತಿಗಳ ಸೇವೆ ಮಾಡಿಕೊಂಡು ಜೀವಿಸಬೇಕು ಎಂದಾಗಲೀ ಹೇಳಿದ್ದೆವೇ? ಇವುಗಳ ಬದಲಿಗೆ ಹಿಂದುಳಿದ ಜಾತಿಗಳ ಅಭಿವೃದ್ಧಿಗೆ ಅಗತ್ಯವಾದ ಪೂರ್ಣ ಪ್ರಮಾಣದ ಅವಕಾಶಗಳನ್ನು ಕಲ್ಪಿಸಿಕೊಡುವುದಾಗಿ ಭರವಸೆ ನೀಡಿದ್ದೆವು. ಸರ್ಕಾರಿ ಹುದ್ದೆಗಳನ್ನು ಶೇ. 25–30ರ ಪ್ರಮಾಣದಲ್ಲಿ ಇವರಿಗಾಗಿ ಮೀಸಲಿಡುವ ನೀತಿಯನ್ನು ಜಾರಿಗೊಳಿಸುವುದಾಗಿ ಪ್ರತಿಜ್ಞೆ ಮಾಡಿದ್ದೆವು. ಈ ಪ್ರತಿಯೊಂದು ಅಂಶವನ್ನೂ ಯಾವುದೇ ಗೊಂದಲಕ್ಕೆ ಆಸ್ಪದವಿಲ್ಲದಂತೆ ಪ್ರಣಾಳಿಕೆಯಲ್ಲಿ ವಿವರಿಸಲಾಗಿತ್ತು.



ಆರ್.ಎಸ್.ಎಸ್ ಗುರು ಗೋಳ್ವಾಲ್ಕರ್

ಈ ಆರೆಸ್ಸೆಸ್ ಜನ ಕ್ರಮೇಣ ತಮ್ಮ ಸಂಘಟನೆಯ ಸಂಕಲ್ಪಗಳನ್ನು ಜನತಾ ಪಕ್ಷದ ಮೇಲೆ ಹೇರುತ್ತಾ ಬಂದರು. ನಿಜ ಸಂಗತಿ ಎಂದರೆ ಸದಾಕಾಲಕ್ಕೂ ನಾಗಪುರದ (ಆರೆಸ್ಸೆಸ್ ಕೇಂದ್ರಸ್ಥಾನ) ವಾದ್ಯಕ್ಕೆ ಕುಣಿಯುವ ಜನ ಇವರು. 'ಏಕಮಾತ್ರ ನಾಯಕ' ಎಂಬ ಸಿದ್ಧಾಂತ ಇವರದು. ಉದಾಹರಣೆಗೆ *ಗುರೂಜಿಯನ್ನೇ* ತೆಗೆದುಕೊಳ್ಳಿ: 'ಏಕಮಾತ್ರ ನಾಯಕನಿದ್ದಾಗಲೇ ಶಿಸ್ತುಬದ್ಧ ಮನೋರೂಢಿ ಬೆಳೆಯುತ್ತದೆ. ನಾಯಕ ಹೇಳಿದ್ದನ್ನು ಮಿಕ್ಕವರು ತಗಾದೆಯಿಲ್ಲದೆ ಕೇಳುತ್ತಾರೆ' ಎನ್ನುತ್ತಾರೆ ಇವರು. 'ಏಕಮಾತ್ರ ನಾಯಕ'ನೆಂಬುದೇ ಈ ಸಂಘಟನೆಯ ತಳಹದಿ. ಇವರದೇ ಆದ ಆರ್ಥಿಕನೀತಿ ಎಂಬುದಿಲ್ಲ. ದೇಶವು ಕೈಕೊಂಡ ಜಮೀನ್ದಾರಿ ಪದ್ಧತಿಯ ನಿರ್ಮೂಲನೆಯ ನೀತಿ ಅವರನ್ನು ವಿಚಲಿತಗೊಳಿಸುತ್ತದೆ. ಅದಕ್ಕಾಗಿ ಅವರು ದುಃಖಿಸುತ್ತಾರೆ. ಆದರೆ ದೇಶದ ಬಡಜನರಿಗಾಗಿ ಅವರಲ್ಲಿ ಒಂದು ಹನಿ ಕಣ್ಣೀರು ಕೂಡ ಇಲ್ಲ.

ಇಲ್ಲಿ ಹುದುಗಿರುವ ಸತ್ಯವೆಂದರೆ, ಆರೆಸ್ಸೆಸ್ ಜನ ಜನತಾ ಪಕ್ಷದ ಪ್ರಣಾಳಿಕೆಯನ್ನು ಮನಃಪೂರ್ವಕವಾಗಿ ಒಪ್ಪಿದವರೇ ಅಲ್ಲ ಎಂಬುದು. ನನಗೆ ಇದರ ಅರಿವಿತ್ತು. ಆದ್ದರಿಂದ ನಾನು, "ನೀವು ಚರ್ಚೆಗಳು ನಡೆಯುವ ಸಂದರ್ಭದಲ್ಲಿ ನಿಮ್ಮ ಅಂತರಂಗದಲ್ಲಿರುವುದನ್ನು ಬಹಿರಂಗವಾಗಿ ಹೇಳುವುದೇ ಇಲ್ಲ. ನಿಮಗೆ ಒಪ್ಪಿಗೆಯಾಗದ ವಿಷಯಗಳ ಬಗ್ಗೆ ಕೂಡ ಚಕಾರ ಎತ್ತದೆ ತಲೆ ಕುಣಿಸುತ್ತೀರಿ. ನಿಮ್ಮ ಇರಾದೆಗಳೆಲ್ಲವೂ ಸಂಶಯಾಸ್ಪದವಾಗಿರುತ್ತವೆ" ಎಂಬುದಾಗಿ ಕುಶಭಾವು ಠಾಕ್ರೆ ಅವರಿಗೆ ಪತ್ರ ಬರೆದು ತಿಳಿಸಿದೆ. ಈ ಪತ್ರ ಬರೆದು ಅದೆಷ್ಟೋ ವರ್ಷಗಳು ಉರುಳಿವೆ. ಆದರೂ ಲೋಹಿಯಾ ಅವರು ಬದುಕಿದ್ದ ಕಾಲದಿಂದಲೂ (ಮರಣ:1967) ಆರೆಸ್ಸೆಸ್ ಬಗ್ಗೆ ಇರುವ ನನ್ನ ಸಂಶಯ ಸಂದೇಹಗಳು ಇಂದಿಗೂ ಇವೆ. ಇದೇನೇ ಇದ್ದರೂ ಸರ್ವಾಧಿಕಾರದ ವಿರುದ್ಧ ಹೋರಾಡುವ ಸಲುವಾಗಿ ಆರೆಸ್ಸೆಸ್‌ನೊಂದಿಗೆ ರಾಜಕೀಯ ಹೊಂದಾಣಿಕೆ ಮಾಡಿಕೊಂಡಂತಾಯಿತು ಎನ್ನುವುದು ಸುಳ್ಳಲ್ಲ.

ಸರ್ವಾಧಿಕಾರದ ವಿರುದ್ಧ ಎಲ್ಲಾ ಪ್ರತಿಪಕ್ಷಗಳು ವಿಲೀನಗೊಂಡು ಒಂದು ಸಂಯುಕ್ತ ವಿರೋಧ ಪಕ್ಷವು ಅಸ್ತಿತ್ವಕ್ಕೆ ಬರಬೇಕೆಂಬುದು ಜೈಪ್ರಕಾಶ್‌ಜಿ ಅವರ ಅಪೇಕ್ಷೆಯಾಗಿತ್ತು. ಜತೆಗೆ ಪ್ರಣಾಳಿಕೆಯಲ್ಲಿ ಜನತಾ ಪಕ್ಷವು ಆರೆಸ್ಸೆಸ್‌ನೊಂದಿಗೆ ಯಾವುದೇ ಹೊಂದಾಣಿಕೆಯನ್ನು ಮಾಡಿಕೊಂಡಿರಲಿಲ್ಲ. ಈ ಎರಡು ಕಾರಣಗಳಿಂದಾಗಿ ನಾನು ಅವರೊಂದಿಗೆ ಕೈಜೋಡಿಸಲು ನಿರ್ಧರಿಸಿದೆ. ಜನತಾ ಪಕ್ಷವು ವಿಶ್ವಾಸನೀಯವೂ ಸುಸಂಘಟಿತವೂ ಆದ ಪಕ್ಷವಾಗಿ ಬೆಳೆಯಬೇಕಾದಲ್ಲಿ ನಾವು ಮಾಡಲೇಬೇಕಾದ ಮುಖ್ಯವಾದ ಎರಡು ಕೆಲಸಗಳಿವೆ ಎಂಬ ಬಗ್ಗೆ ಪ್ರಾರಂಭದಿಂದಲೂ ನನ್ನ ಮನಸ್ಸಿನಲ್ಲಿ ಸ್ಪಷ್ಟತೆ ಇತ್ತು. ಮೊದಲನೆಯದು: ಆರೆಸ್ಸೆಸ್ ತನ್ನ ಸಿದ್ಧಾಂತವನ್ನು ಬದಲಾಯಿಸಿಕೊಂಡು ಮತನಿರಪೇಕ್ಷ ಪ್ರಜಾಪ್ರಭುತ್ವದ ಆದರ್ಶಕ್ಕೆ ಬದ್ಧವಾಗಬೇಕು. ಎರಡನೆಯದು: ಭಾರತೀಯ ಮಜ್ದೂರ್ ಸಂಘ ಮತ್ತು ವಿದ್ಯಾರ್ಥಿ ಪರಿಷತ್ ಸಂಘಟನೆಗಳನ್ನು ವಿಸರ್ಜಿಸಿ ಅವನ್ನು ಜನತಾ ಪಕ್ಷದ ಮತನಿರಪೇಕ್ಷ ನೆಲೆಯ ಕಾರ್ಮಿಕ ಸಂಘ ಮತ್ತು ವಿದ್ಯಾರ್ಥಿ ಸಂಘಟನೆಗಳಲ್ಲಿ ವಿಲೀನಗೊಳಿಸಬೇಕು. ಈ ವಿಚಾರದಲ್ಲಿ ನನಗೆ ಮೊದಲಿನಿಂದಲೂ ಯಾವುದೇ ಗೊಂದಲವಿರಲಿಲ್ಲ. ಜನತಾ ಪಕ್ಷವು ನನಗೆ ಕಾರ್ಮಿಕ ಸಂಘಗಳು ಮತ್ತು ವಿದ್ಯಾರ್ಥಿ ಸಂಘಟನೆಗಳ ಉಸ್ತುವಾರಿಯನ್ನು ವಹಿಸಿಕೊಟ್ಟಾಗ ಆ ಅವಧಿಯಲ್ಲಿ ನಾನು ಈ ಸಂಘಟನೆಗಳ ಪ್ರತ್ಯೇಕ ಅಸ್ತಿತ್ವವನ್ನು ಕೊನೆಗೊಳಿಸಲು ಎಡೆಬಿಡದೆ ಶ್ರಮಿಸಿದೆ.

ಆದರೆ ಈ ಆರೆಸ್ಸೆಸ್ [illegible] ಕ್ರಮೇಣ ತಮ್ಮ ಸಂಘ [illegible]ಗಳನ್ನು ಜನತಾ ಪಕ್ಷದ ಮೇಲೆ ಹೇರುತ್ತಾ ಬಂದರು. ನಿಜ ಸಂಗತಿ ಎಂದರೆ ಸದಾಕಾಲಕ್ಕೂ ನಾಗಪುರದ (ಆರೆಸ್ಸೆಸ್ ಕೇಂದ್ರಸ್ಥಾನ) ವಾದ್ಯಕ್ಕೆ ಕುಣಿಯುವ ಜನ ಇವರು. 'ಏಕಮಾತ್ರ ನಾಯಕ' ಎಂಬ ಸಿದ್ಧಾಂತ ಇವರದು. ಉದಾಹರಣೆಗೆ *ಗುರೂಜಿಯನ್ನೇ* ತೆಗೆದುಕೊಳ್ಳಿ: **"ಏಕಮಾತ್ರ ನಾಯಕನಿದ್ದಾಗಲೇ ಶಿಸ್ತುಬದ್ಧ ಮನೋರೂಢಿ ಬೆಳೆಯುತ್ತದೆ. ನಾಯಕ ಹೇಳಿದ್ದನ್ನು ಮಿಕ್ಕವರು ತಗಾದೆಯಿಲ್ಲದೆ ಕೇಳುತ್ತಾರೆ"** ಎನ್ನುತ್ತಾರೆ ಇವರು. 'ಏಕಮಾತ್ರ ನಾಯಕ'ನೆಂಬುದೇ ಈ ಸಂಘಟನೆಯ ಕಾರ್ಯನಿರ್ವಹಿಸುವ ತಾತ್ವಿಕ ತಳಹದಿ. ಇವರಿಗೆ ಚರ್ಚೆ, ಸಂವಾದ, ಪ್ರಜಾಪ್ರಭುತ್ವಗಳಲ್ಲಿ ಎಳ್ಳಷ್ಟೂ ವಿಶ್ವಾಸವಿಲ್ಲ. ಇವರದೇ ಆದ ಆರ್ಥಿಕ ನೀತಿ ಎಂಬುದಿಲ್ಲ. *Bunch of Thoughts* ಪುಸ್ತಕದಲ್ಲಿ *ಗುರೂಜಿ* ದೇಶವು ಕೈಕೊಂಡ ಜಮೀನ್ದಾರಿ ಪದ್ಧತಿಯ ನಿರ್ಮೂಲನಾ ನೀತಿ ಮತ್ತು ಕಾರ್ಯಕ್ರಮಗಳ ಬಗ್ಗೆ ತಮ್ಮ ಅತೀವ ಅಸಮಾಧಾನವನ್ನು ವ್ಯಕ್ತಪಡಿಸುತ್ತಾರೆ. ಜಮೀನ್ದಾರಿ ಪದ್ಧತಿಯ ನಿರ್ಮೂಲನೆಯ ನೀತಿ ಅವರನ್ನು ವಿಚಲಿತಗೊಳಿಸುತ್ತದೆ. ಅದಕ್ಕಾಗಿ ಅವರು ದುಃಖಿಸುತ್ತಾರೆ. ಆದರೆ ದೇಶದ ಬಡ ಜನರಿಗಾಗಿ ಅವರಲ್ಲಿ ಒಂದು ಹನಿ ಕಣ್ಣೀರು ಕೂಡ ಇಲ್ಲ.

ಕೇವಲ ಹಿಂದೂಗಳನ್ನೇ ಗುಡ್ಡೆಹಾಕಿಕೊಂಡು ಸಂಘಟನೆ ಕಟ್ಟುವ ಬದಲು ಎಲ್ಲ ಧರ್ಮದವರನ್ನೂ ಸೇರಿಸಿಕೊಂಡು ಸಂಘಟನೆ ಕಟ್ಟುವ ಕೆಲಸ ಮಾಡಿ; ಜನತಾ ಪಕ್ಷದ ಸಂಘಟನೆಗಳಲ್ಲಿ ವಿಲೀನಗೊಳ್ಳಿ ಎಂದು ನಾನು ಈ ಆರೆಸ್ಸೆಸ್ ಜನಕ್ಕೆ ಹೇಳಿದ್ದುಂಟು. 'ಅಷ್ಟು ವೇಗವಾಗಿ ಹಾಗೆಲ್ಲಾ ಮಾಡುವುದು ಸಾಧ್ಯವಿಲ್ಲ. ಹಲವಾರು ತೊಂದರೆಗಳು ಎದುರಾಗುತ್ತವೆ. ಹಂತಹಂತವಾಗಿ ಬದಲಾವಣೆಯನ್ನು ತರುತ್ತೇವೆ' ಎಂದರು. ಈ ಹಾರಿಕೆಯ ಉತ್ತರವನ್ನು ಅದೆಷ್ಟೋ ವರ್ಷಗಳಿಂದ ಕೇಳುತ್ತಲೇ ಬಂದಿದ್ದೇನೆ.

ಇವರ ಈ ನಡತೆಯನ್ನು ಗಮನಿಸಿದರೆ ಯಾವುದೇ ಬದಲಾವಣೆ ತರುವ ಮನಸ್ಸು ಇವರಿಗಿಲ್ಲ ಎಂಬುದು ಯಾರಿಗಾದರೂ ಸ್ಪಷ್ಟವಾಗುತ್ತದೆ. ಜೂನ್ 1997ರಲ್ಲಿ ರಾಜ್ಯ ಶಾಸನಸಭೆಗಳಿಗೆ ನಡೆದ ಚುನಾವಣೆಗಳಲ್ಲಿ ಇವರು ನಾಲ್ಕು ರಾಜ್ಯಗಳಲ್ಲಿ ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ಅಧಿಕಾರಕ್ಕೆ ಬಂದರು. ಹೊಸ ಸನ್ನಿವೇಶವು ಇವರಿಗೆ ಪುನಃಶ್ಚೇತನ ನೀಡಿತಾದ್ದರಿಂದ ತಮ್ಮ ಮೂಲ ಸಿದ್ಧಾಂತದಲ್ಲಿ ಯಾವುದೇ ಬದಲಾವಣೆ ಮಾಡಿಕೊಳ್ಳಬೇಕಾದ ಅಗತ್ಯವಿಲ್ಲ ಎಂಬ ದಾರ್ಷ್ಟ್ಯ ಬಲಿಯಿತು.

ಈಗಂತೂ ನಾಲ್ಕು ರಾಜ್ಯಗಳಲ್ಲಿ ಅಧಿಕಾರ ಹಿಡಿದಿರುವ ಇವರು ಮುಂಬರುವ ದಿನಗಳಲ್ಲಿ ಕೇಂದ್ರದಲ್ಲೂ ಅಧಿಕಾರ ಹಿಡಿಯುವ ಸಾಧ್ಯತೆಗಳಿವೆ. ಇಳಿಯ ವಯಸ್ಸಿನಲ್ಲಿರುವ ಜನತಾ ಮುಖಂಡರಂತೂ ತಮ್ಮ ನಂತರದ ದಿನಗಳಿಗಾಗಿ ಈ ಆರೆಸ್ಸೆಸ್, ಜನಸಂಘದಿಂದ ಹೊರಗುಳಿದಿರುವ ಯುವನಾಯಕರನ್ನು ಗುರುತಿಸಿ ರಾಷ್ಟ್ರ ಮಟ್ಟದಲ್ಲಿ ಅವರನ್ನು ಬೆಳೆಸುವ ಜವಾಬ್ದಾರಿಯನ್ನು ನಿರ್ವಹಿಸಲೇ ಇಲ್ಲ.

ಪ್ರತಿಯೊಬ್ಬ ವ್ಯಕ್ತಿಯ ಬದುಕಿನ ಪ್ರತಿಯೊಂದು ವಿಷಯದಲ್ಲೂ ತಮ್ಮ ಸಿದ್ಧಾಂತದ ಛಾಯೆ ಇರಬೇಕು ಎಂಬುದಷ್ಟೇ ಇವರ ಗುರಿಯಲ್ಲ ಇಡೀ ಜನ ಜೀವನವನ್ನೇ ತನ್ನನಿಯಂತ್ರಣದಲ್ಲಿಟ್ಟುಕೊಳ್ಳಬೇಕು ಎಂಬುದು ಆರೆಸ್ಸೆಸ್‌ನ ನಿಜವಾದ ಗುರಿ. ಜಾರ್ಜ್ ಫರ್ನಾಂಡಿಸ್* ಅವರು *ಇಂಡಿಯನ್ ಎಕ್ಸ್‌ಪ್ರೆಸ್* ದಿನಪತ್ರಿಕೆಯಲ್ಲಿ ಬರೆದ ಲೇಖನವೊಂದರಲ್ಲಿ ಆರೆಸ್ಸೆಸ್‌ನ ದತ್ತೋಪಂತ್ ತೇಂಗಡಿ ಅವರ ಮಾತುಗಳನ್ನು ಉದಹರಿಸುವ ಮೂಲಕ ಈ ಅಂಶಗಳತ್ತ ಗಮನ ಸೆಳೆದಿದ್ದಾರೆ: 'ಪ್ರತಿಯೊಬ್ಬ ವ್ಯಕ್ತಿಯ ಪ್ರತಿಯೊಂದು ವಿಷಯದ ಮೇಲೂ ನಮ್ಮ ನಿಗಾ ಇರುತ್ತದೆ. ಇಡೀ ಸಮಾಜವನ್ನು ನಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳುತ್ತೇವೆ. ವ್ಯಕ್ತಿ ಜೀವನದ ಪ್ರತಿ ವಿಷಯದ ಮೇಲೂ ಯಜಮಾನಿಕೆಯನ್ನು ಸ್ಥಾಪಿಸುವುದೇ ನಮ್ಮ ಅಂತಿಮ ಗುರಿ'. ಹಾಗೆ ನೋಡಿದರೆ ತೇಂಗಡಿಯವರು ಹೇಳಿದ ವಿಚಾರ ಹೊಸತೇನಲ್ಲ. ತನ್ನ ಆಕ್ಟೋಪಸ್‌ನ ಹಂತಕ ಬಾಹುಗಳಿಂದ ಕಲೆ, ಸಂಗೀತ, ಅರ್ಥವ್ಯವಸ್ಥೆ, ಸಂಸ್ಕೃತಿ ಎಲ್ಲವನ್ನೂ ಇಡಿಯಾಗಿ ಬಾಚಿಕೊಂಡು ರಕ್ತಹೀರುತ್ತದೆ. ಎಲ್ಲ ಫ್ಯಾಸಿಸ್ಟ್ ಸಂಘಟನೆಗಳ ಲಕ್ಷಣ ಇದೇ.

ಆರೆಸ್ಸೆಸ್‌ನ ಮುಖವಾಣಿಗಳಾದ *ಆರ್ಗನೈಸರ್* (ಇಂಗ್ಲಿಷ್) ಮತ್ತು *ಪಾಂಚಜನ್ಯ* (ಹಿಂದಿ) ಪತ್ರಿಕೆಗಳು ಸಂಘಪರಿವಾರಿಗಳಲ್ಲದ ಯಾವ ಜನತಾ ಮುಖಂಡರನ್ನೂ ಬಿಡದಂತೆ ಅವರ ವಿರುದ್ಧ ಟೀಕಾಪ್ರಹಾರ ನಡೆಸುತ್ತಲೇ ಬಂದಿವೆ. ನನ್ನನ್ನು ಕಂಡರಂತೂ ಇವಕ್ಕೆ ಎಲ್ಲಿಲ್ಲದ ಪ್ರೀತಿ. ಸಂದರ್ಭ ಸೃಷ್ಟಿಸಿಕೊಂಡು ವಿಶೇಷ ಗುರಿಯಿಟ್ಟು ನನ್ನ ಮೇಲೆ ಬಾಣಪ್ರಯೋಗ ಮಾಡುತ್ತಲೇ ಬಂದಿದ್ದಾರೆ. ಬಹುಶಃ ಇಂದಿರಾ ಗಾಂಧಿಯವರನ್ನು ಟೀಕಿಸುವುದಕ್ಕಿಂತ ನನ್ನ ವಿರುದ್ಧದ ಟೀಕೆಗೆ ಹೆಚ್ಚು ಕಾಲಂಗಳನ್ನು ಮೀಸಲಿಟ್ಟಿವೆ ಎನ್ನಬಹುದು.

ಆದರೂ ಈ ಜನಗಳೊಂದಿಗೆ ಚರ್ಚೆಮಾಡಲು ನಾನು ಹಿಂದೆಗೆಯಲಿಲ್ಲ. ಹಲವಾರು ವರ್ಷಗಳವರೆಗೆ ಇವರೊಂದಿಗೆ ಚರ್ಚೆಯನ್ನು ಜೀವಂತವಾಗಿಟ್ಟಿದ್ದೆ. ಆರೆಸ್ಸೆಸ್‌ನ ಸರಸಂಘಸಂಚಾಲಕರಾಗಿದ್ದ ಬಾಳಾಸಾಹೆಬ್ ದೇವರಸ್ ಒಮ್ಮೆ ನನ್ನ ಮನೆಗೆ ಕೂಡ ಬಂದಿದ್ದ ನೆನಪು ನಿಚ್ಚಳವಾಗಿದೆ. 1971ರ ನಂತರ ಮತ್ತೊಮ್ಮೆ ನಾವು ಭೇಟಿಯಾಗಿದ್ದೆವು. ತುರ್ತುಪರಿಸ್ಥಿತಿಗೆ ಮುನ್ನಾದಿನಗಳಲ್ಲಿ ಮಾಧವರಾವ್ ಮುಳೆ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದ್ದೆ. ನಾಲ್ಕನೆಯ ಬಾರಿಗೆ, 1977ರ ಮೇ ತಿಂಗಳಿನಲ್ಲಿ ದೇವರಸ್ ಮತ್ತು ಮುಳೆ ಇಬ್ಬರನ್ನೂ ಒಟ್ಟಿಗೆ ಭೇಟಿಮಾಡಿದ್ದೆ. ಈ ಜನಗಳೊಂದಿಗೆ ಚರ್ಚೆ ನಡೆಸಿಯೇ ಇಲ್ಲ ಎಂದು ಯಾರೂ ನನ್ನ ಮೇಲೆ ಆರೋಪ ಹೊರಿಸುವಂತಿಲ್ಲ. ಹೊಸ ವಿಚಾರಗಳಿಗೆ ತೆರೆದುಕೊಳ್ಳುವ ಮನಸ್ಸುಗಳೇ ಇವರಿಗಿಲ್ಲ ಎಂಬುದು ನನಗೆ ಅಂತಿಮವಾಗಿ ದೊರೆತ ಅನುಭವಸಿದ್ಧ ವಾಸ್ತವ ಸಂಗತಿಯಾಗಿದೆ.

ಯಾವುದನ್ನೇ ಆಗಲಿ ಪೂರ್ವಾಗ್ರಹ ರಹಿತವಾಗಿ ಚರ್ಚಿಸುವ ತೆರೆದ ಮನಸ್ಸಿಲ್ಲದ ಇವರು ಬೇರೇನು ಮಾಡುತ್ತಿದ್ದಾರೆ? ಆಲೋಚನೆ ಮೂಡುವ ಮೊದಲೇ ಕಿರಿಯ ವಯಸ್ಸಿನ ಮಕ್ಕಳನ್ನು ಹಿಡಿದು ಅವರ ಮನಸ್ಸಿನಲ್ಲಿ ವಿಕಾರಗಳನ್ನು ತುಂಬುವ ಕಲೆಯಲ್ಲಿ ಇವರು ನಿಸ್ಸೀಮರು. ಎಳೆಯ ಮನಸ್ಸುಗಳ ಮೇಲೆ ಪ್ರಭಾವ ಬೀರಿ ಇನ್ನಿತರ ಯಾವುದೇ ವಿಚಾರಗಳಿಗೆ ಮನಸ್ಸನ್ನು ಅಭೇದ್ಯಗೊಳಿಸಿ ಜಡಗೊಳಿಸುವುದೇ ಇವರ ಘನೋದ್ದೇಶ. ಹೀಗೆ ಮಾಡಿದರೆಂದರೆ ಆ ಘಟ್ಟ ಕಳೆದ ನಂತರ ವೈಚಾರಿಕವಾಗಿ ಸ್ಪಂದಿಸುವ ಸಾಮರ್ಥ್ಯವನ್ನೇ ಮಕ್ಕಳು, ಯುವಕರು ಕಳೆದುಕೊಂಡು ಬಿಡುತ್ತಾರೆ.

ಈ ಜನಗಳ ಬಗ್ಗೆ ಇಷ್ಟೆಲ್ಲಾ ಗೊತ್ತಿದ್ದೂ ಇವರಲ್ಲಿ ಬದಲಾವಣೆ ತರುವ ನನ್ನ ಪ್ರಯತ್ನವನ್ನು ಮುಂದುವರೆಸಿದೆ. ಒಮ್ಮೆ ಜನತಾ ಪಕ್ಷದ ಕಾರ್ಮಿಕ ಸಂಘಗಳ ಮುಖಂಡರನ್ನೂ ಒಳಗೊಂಡಂತೆ ಎಲ್ಲಾ ಕಾರ್ಮಿಕ ಸಂಘಟನೆಗಳ ಮುಖಂಡರ ಸಭೆ ಕರೆದಿದ್ದೆ. ಭಾರತೀಯ ಮಜ್ದೂರ್ ಸಂಘವು ಸಭೆಯನ್ನು ಬಹಿಷ್ಕರಿಸಿತು. ಅಷ್ಟಕ್ಕೇ ಸುಮ್ಮನಾಗದೆ ಅವರು ವಿನಾಕಾರಣ ನನ್ನ ಮೇಲೆ ಗಲಾಟೆಯನ್ನೂ ಮಾಡಿದರು. ವಿದ್ಯಾರ್ಥಿ ಪರಿಷತ್ತು ಮತ್ತು ಯುವ ಮೋರ್ಚಾಗಳನ್ನು ಜನತಾ ಪರಿವಾರದ ಸಂಘಟನೆಗಳೊಂದಿಗೆ



ಆರ್.ಎಸ್.ಎಸ್‌ನ ಹಿಂದಿನ ಮುಖ್ಯ ಸುದರ್ಶನ್ ಮತ್ತು ವಾಜಪೇಯಿ

ವಿಲೀನಗೊಳಿಸುವ ಪ್ರಯತ್ನವನ್ನೂ ಮುಂದುವರೆಸಿದೆ. ಇವರ್‍ಯಾರೂ ಸ್ಪಂದಿಸಲೇ ಇಲ್ಲ. ಆರೆಸ್ಸೆಸ್ 'ಸೂಪರ್ ಪಾರ್ಟಿ'ಯಾಗಿ ಜನತಾ ಪಕ್ಷದ ಸಮಸ್ತ ಆಗುಹೋಗುಗಳನ್ನೂ ನಿಯಂತ್ರಿಸಬೇಕು ಎಂಬುದೇ ಇವೆಲ್ಲದರ ಹಿಂದಿನ ನಿಜವಾದ ಕಾರಣವಾಗಿತ್ತು.

ಪ್ರತಿಯೊಬ್ಬ ವ್ಯಕ್ತಿಯ ಬದುಕಿನ ಪ್ರತಿಯೊಂದು ವಿಷಯದಲ್ಲೂ ತಮ್ಮ ಸಿದ್ಧಾಂತದ ಛಾಯೆ ಇರಬೇಕು ಎಂಬುದಷ್ಟೇ ಇವರ ಗುರಿಯಲ್ಲ ಇಡೀ ಜನ ಜೀವನವನ್ನೇ ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳಬೇಕು ಎಂಬುದು ಆರೆಸ್ಸೆಸ್‌ನ ನಿಜವಾದ ಗುರಿ. ಜಾರ್ಜ್ ಫರ್ನಾಂಡಿಸ್' ಅವರು ಇಂಡಿಯನ್ ಎಕ್ಸ್‌ಪ್ರೆಸ್ ದಿನಪತ್ರಿಕೆಯಲ್ಲಿ ಬರೆದ ಲೇಖನವೊಂದರಲ್ಲಿ ಆರೆಸ್ಸೆಸ್‌ನ ದತ್ತೋಪಂತ್ ಠೇಂಗಡಿ ಅವರ ಮಾತುಗಳನ್ನು ಉದಹರಿಸುವ ಮೂಲಕ ಈ ಅಂಶಗಳತ್ತ ಗಮನ ಸೆಳೆದಿದ್ದಾರೆ: 'ಪ್ರತಿಯೊಬ್ಬ ವ್ಯಕ್ತಿಯ ಪ್ರತಿಯೊಂದು ವಿಷಯದ ಮೇಲೂ ನಮ್ಮ ನಿಗಾ ಇರುತ್ತದೆ. ಇಡೀ ಸಮಾಜವನ್ನು ನಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳುತ್ತೇವೆ. ವ್ಯಕ್ತಿ ಜೀವನದ ಪ್ರತಿ ವಿಷಯದ ಮೇಲೂ ಯಜಮಾನಿಕೆಯನ್ನು ಸ್ಥಾಪಿಸುವುದೇ ನಮ್ಮ ಅಂತಿಮ ಗುರಿ'. ಹಾಗೆ ನೋಡಿದರೆ ಠೇಂಗಡಿಯವರು ಹೇಳಿದ ವಿಚಾರ ಹೊಸತೇನಲ್ಲ. ಇದೇ ವಿಚಾರ *ಗುರೂಜಿ* ಅವರ ಎರಡು ಪುಸ್ತಕಗಳಲ್ಲೂ ಪದೇಪದೇ ಕಾಣಿಸಿಕೊಳ್ಳುತ್ತದೆ. ಸರ್ವಾಧಿಕಾರಿ ಧೋರಣೆಯ ಯಾವುದೇ ಸಂಘಟನೆಯಾಗಲೀ ವ್ಯಕ್ತಿ ಸ್ವಾತಂತ್ರ್ಯಕ್ಕೆ ಕಿಂಚಿತ್ತೂ ಆಸ್ಪದ ಕೊಡದಂತೆ ನಿಗಾ ವಹಿಸುತ್ತದೆ. ತನ್ನ ಆಕ್ಟೋಪಸ್‌ನ ಹಂತಕ ಬಾಹುಗಳಿಂದ ಕಲೆ, ಸಂಗೀತ, ಅರ್ಥವ್ಯವಸ್ಥೆ, ಸಂಸ್ಕೃತಿ ಎಲ್ಲವನ್ನೂ ಇಡಿಯಾಗಿ ಬಾಚಿಕೊಂಡು ರಕ್ತಹೀರುತ್ತದೆ. ಎಲ್ಲ ಫ್ಯಾಸಿಸ್ಟ್ ಸಂಘಟನೆಗಳ ಲಕ್ಷಣ ಇದೇ.

ಜನತಾ ಪಕ್ಷವನ್ನು ತನ್ನ ವಶಕ್ಕೆ ತೆಗೆದುಕೊಂಡು ಆ ಮೂಲಕ ಸರ್ಕಾರವನ್ನು ನಿಯಂತ್ರಿಸುವ ಹುನ್ನಾರವೇ ಆರೆಸ್ಸೆಸ್ ನಮ್ಮ ಜೊತೆ ಮೈತ್ರಿಗೆ ಸಮ್ಮತಿಸಿದ್ದರ ಹಿಂದಿನ ವಾಸ್ತವ ಸತ್ಯವಾಗಿತ್ತು. ಅದಕ್ಕಾಗಿಯೇ ಆರೆಸ್ಸೆಸ್ ಜನ ಜನತಾ ಪಕ್ಷದ ಹಲವು ನಾಯಕನ್ನು ಪ್ರಧಾನಿ ಪಟ್ಟಕ್ಕೆ ಒಳಗಿಂದೊಳಗೆ ಪುಸಲಾಯಿಸಿ ಎತ್ತಿಕಟ್ಟುವ ಕರಾಮತ್ತು ನಡೆಸಿದರು. ಮೊರಾರ್ಜಿ ದೇಸಾಯಿಯವರನ್ನೇ ಬೆಂಬಲಿಸುವುದಾಗಿ ಅಂತಿಮ ಘಟ್ಟದವರೆಗೂ ಹೇಳಿದರು. ಚೌಧರಿ ಚರಣ್‌ಸಿಂಗ್ ಪ್ರಧಾನಿ ಪಟ್ಟಕ್ಕೆ ತಾವೂ ಒಬ್ಬ ಆಕಾಂಕ್ಷಿ ಎಂದಾಗ ಅವರನ್ನು ಬೆಂಬಲಿಸುವುದಾಗಿ ಹೇಳಿದರು. ಚಂದ್ರಶೇಖರ್, ಜಗಜ್ಜೀವನ ರಾಂ ಹಾಗೂ ಜಾರ್ಜ್ ಫರ್ನಾಂಡಿಸ್ ಅವರುಗಳನ್ನೂ ಪುಸಲಾಯಿಸಿದರು. ವಿಶೇಷವೆಂದರೆ ನಾನಾಗಲೀ ವಾಜಪೇಯಿಯವರಾಗಲೀ ಅವರಿಗೆ ನೆನಪಾಗಲೇ ಇಲ್ಲ. 'ನಾನಾಜಿ ದೇಶಮುಖ್‌ಗೆ ನಾನಾಗಲೀ ನೀನಾಗಲೀ ಬೇಕಾಗಿಲ್ಲ' ಎಂದರು ವಾಜಪೇಯಿಯವರು ನನ್ನೊಂದಿಗೆ.

ಪ್ರತಿಕೂಲ ಸನ್ನಿವೇಶಗಳಲ್ಲಿ ಆರೆಸ್ಸೆಸ್‌ನ ಜನ ಏನು ಮಾಡುತ್ತಾರೆ ಎಂಬುದು ಅಷ್ಟೇನೂ ಮುಖ್ಯವಾದ ವಿಷಯವಲ್ಲ. ಆದರೆ ಅವರ ಚಿಂತನೆಯಲ್ಲಿ ಏನಾದರೂ ಬದಲಾವಣೆಯಾಗಿದೆಯೇ ಎಂಬುದು ಮುಖ್ಯ. *ಗುರೂಜಿ*–ಮಾರ್ಗದ ಚಿಂತನೆಗಳಿಂದ ದೂರ ಸರಿದಿದ್ದಾರೆಯೇ ಎಂಬುದು ಮುಖ್ಯ. ಅಲ್ಲೊಬ್ಬರು ಇಲ್ಲೊಬ್ಬರು–ವಾಜಪೇಯಿಯವರಂತೆ–ಸಮ್ಮಿಶ್ರ ರಾಷ್ಟ್ರೀಯತೆ, ಪ್ರಜಾಪ್ರಭುತ್ವ, ಸಮಾಜವಾದ, ಸಾಮಾಜಿಕ ನ್ಯಾಯ ಇತ್ಯಾದಿಗಳ ಬಗ್ಗೆ ಮಾತಾಡಿರುವುದು ಉಂಟು. ಆದರೆ ಆರೆಸ್ಸೆಸ್‌ಅನ್ನು ಈ

ಪ್ರತಿಯೊಬ್ಬ ವ್ಯಕ್ತಿಯ ಜೀವನವನ್ನೇ ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳಬೇಕು ಎಂಬುದು ಆರೆಸ್ಸೆಸ್‌ನ ನಿಜವಾದ ಗುರಿ. ಸರ್ವಾಧಿಕಾರಿ ಧೋರಣೆಯ ಯಾವುದೇ ಸಂಘಟನೆಯಾಗಲೀ ವ್ಯಕ್ತಿ ಸ್ವಾತಂತ್ರ್ಯಕ್ಕೆ ಕಿಂಚಿತ್ತೂ ಆಸ್ಪದ ಕೊಡದಂತೆ ನಿಗಾ ವಹಿಸುತ್ತದೆ. ತನ್ನ ಆಕ್ಟೋಪಸ್‌ನ ಹಂತಕ ಬಾಹುಗಳಿಂದ ಕಲೆ, ಸಂಗೀತ, ಅರ್ಥ ವ್ಯವಸ್ಥೆ, ಸಂಸ್ಕೃತಿ ಎಲ್ಲವನ್ನೂ ಬಾಚಿಕೊಂಡು ರಕ್ತಹೀರುತ್ತದೆ. ಎಲ್ಲ ಫ್ಯಾಸಿಸ್ಟ್ ಸಂಘಟನೆಗಳ ಲಕ್ಷಣ ಇದೇ.

ವಿಷಯಗಳಲ್ಲಿ ನಂಬಲೇಬಾರದು ಎಂಬುದು ನನ್ನ ಅಭಿಪ್ರಾಯ. ಜೈಲಿನಲ್ಲಿದ್ದಾಗ ಲಿಖಿತ ಕ್ಷಮೆಯಾಚಿಸಿ ಬಿಡುಗಡೆಗಾಗಿ

*ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದಲ್ಲಿ ಸಚಿವರಾಗಿ, **Man Friday** ಆಗಿ ಸಹಕಾರ ನೀಡಿದರು ಮತ್ತು 2002ರ ಗುಜರಾತ್ ಹಿಂಸಾಕಾಂಡದಲ್ಲಿ ಬಿಜೆಪಿ ನಿಲುವಿಗೆ ಅಂಟಿಕೊಂಡಿದ್ದರು.– *(ಜಾವೆದ್ ಆನಂದ್)*

*ಎನ್‌ಡಿಎ ಸರ್ಕಾರದಲ್ಲಿ ಪ್ರಧಾನ ಮಂತ್ರಿಗಳಾಗಿದ್ದ ಇವರು ಗುಜರಾತ್ ನರಮೇಧ ಹಾಗೂ ಇತರ ಹಲವಾರು ವಿಷಯಗಳಲ್ಲಿ ಅವರು ಆರೆಸ್ಸೆಸ್ ಸಿದ್ಧಾಂತವನ್ನು ಬೆಂಬಲಿಸುವುದರ ಜೊತೆಗೆ ತಾನು ಆರೆಸ್ಸೆಸ್ ಕಾರ್ಯಕರ್ತ ಎಂದು ಗರ್ವದಿಂದ ಹೇಳುತ್ತೇನೆ ಎಂಬುದಾಗಿ ಬಹಿರಂಗವಾಗಿ ಘೋಷಿಸಿದವರು. – *(ಜಾವೆದ್ ಆನಂದ್)*

ತವಕಿಸಿದವರು ಇವರು. ರಾಜನಾರಾಯಣ್ ಅವರ ಮೊಕದ್ದಮೆ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಇಂದಿರಾ ಗಾಂಧಿಯವರ ಪರ ತೀರ್ಪು ನೀಡಿದಾಗ ಆಕೆಗೆ ಶುಭಾಶಯ ಕಳುಹಿಸಿದವರು ಇವರು. ಇವರಾಡುವ ಮಾತುಗಳಲ್ಲಿ ನನಗೆ ಸುತಾರಾಂ ವಿಶ್ವಾಸವಿಲ್ಲ. ಇವರು (ಜನತಾ ಪಕ್ಷದಲ್ಲಿದ್ದ ಜನಸಂಘದ ಮುಖಂಡರು) ಪಕ್ಷದಲ್ಲಿದ್ದ ಆರೆಸ್ಸೆಸ್ ನಾಯಕರುಗಳನ್ನು ಪಕ್ಷದಿಂದ ಮತ್ತು ಕಾರ್ಯಕಾರಿಣಿಯಿಂದ ಉಚ್ಚಾಟಿಸಿದ್ದರೆ, ಆರೆಸ್ಸೆಸ್ ಚಟುವಟಿಕೆಗಳ ಮೇಲೆ ಕಡಿವಾಣ ಹಾಕಿದ್ದರೆ, ಅದರಲ್ಲೂ ನಾನಾಜಿ ದೇಶಮುಖ್, ಸುಂದರ್ ಸಿಂಗ್ ಮತ್ತು ಅವರ ಹಿಂಬಾಲಕರನ್ನು ಪಕ್ಷದಿಂದ ಹೊರಹಾಕಿದ್ದರೆ ನಾನು ಇವರನ್ನು ಸಂಶಯಾತೀತವಾಗಿ ನಂಬುವುದು ಸಾಧ್ಯವಿತ್ತು.

(ಮಧು ಲಿಮಯೆ ದೇಶದ ಹಿರಿಯ ಸಮಾಜವಾದಿ ನಾಯಕರಲ್ಲೊಬ್ಬರು. ಆರೆಸ್ಸೆಸ್ ಮತ್ತು ಅದರ ಪಕ್ಷವಾದ ಜನಸಂಘಗಳನ್ನು ಜನತಾ ಪಕ್ಷದಲ್ಲಿಟ್ಟುಕೊಳ್ಳುವುದು ಪ್ರಜಾಪ್ರಭುತ್ವಕ್ಕೆ ಗಂಡಾಂತರಕಾರಿ ಎಂದು ಬಗೆದಿದ್ದ ಅವರು ಕೊನೆಗಳಿಗೆಯವರೆಗೂ ಈ ಕೋಮುವಾದಿ ಶಕ್ತಿಗಳಿಂದ ಜನತಾ ಪಕ್ಷವನ್ನು ದೂರವಿಡಲು ಹೆಣಗಿದರು. ಅವರು 1979ರಲ್ಲಿ ಬರೆದ ಈ ಲೇಖನವು ಹಿಂದಿ ವಾರಪತ್ರಿಕೆ 'ರವಿವಾರ್'ನಲ್ಲಿ ಪ್ರಕಟವಾಯಿತು. ಇಂದಿಗೂ ಪ್ರಸ್ತುತ ವಿರುವ ಈ ಲೇಖನದ ಇಂಗ್ಲಿಷ್ ಅನುವಾದವನ್ನು ಜಾವೆದ್ ಆನಂದ್ ಅವರು *ಕಮ್ಯೂನಲಿಸಂ ಕಾಂಬ್ಯಾಟ್* ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ). □

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨–೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಬಿ.ಡಿ.ಎ. ಲೇಔಟ್ ಮತ್ತು ಚಿಕ್ಕತಾಯಮ್ಮನ ಜಮೀನು



ಕಥೆ

ಡಾ. ಜೆ. ಬಾಲಕೃಷ್ಣ

ಒಗೆದ ಬಟ್ಟೆಗಳನ್ನು ಹಿಂಡಿ, ಗಾಳಿಗೆ ಒದರಿ ಹಗ್ಗದ ಮೇಲೆ ಒಣಗಲು ಹಾಕಿ ತಮ್ಮಯ್ಯ ಅಲ್ಲೇ ಮನೆಯ ಮುಂದಿದ್ದ ಕಲ್ಲಿನ ಜಗುಲಿಯ ಮೇಲೆ ಉಸ್ಸೆಂದು ಕೂತ. ಮೈಯೆಲ್ಲಾ ಬೆವತಿದ್ದುದರಿಂದ ಗಾಳಿ ಬೀಸಿದಾಗ ತಂಪಾಗುತ್ತಿತ್ತು. ಎಲ್ಲೆಲ್ಲೂ ಬೆಳದಿಂಗಳು ಹಾಲಿನಂತೆ ಚೆಲ್ಲಿತ್ತು. ದೂರದ ಹೊಲಗದ್ದೆಗಳೂ ಕಾಣುತ್ತಿದ್ದವು. 'ಇನ್ನೆಷ್ಟು ದಿನ ಈ ಹೊಲಗದ್ದೆಗಳು......... ಎಲ್ಲವೂ ಸೈಟುಗಳಾಗಿಡುತ್ತವೆ. ಯಾರ್ಯಾರೋ ಪರದೇಶದವರು ಇಲ್ಲಿ ಬಂದು ಮನೆಗಳನ್ನು ಕಟ್ಟಿಕೊಂಡುಬಿಡುತ್ತಾರೆ. ನಾವು ಉತ್ತು, ಬಿತ್ತ ಜಮೀನು ಚೂರುಚೂರಾಗಿ ಯಾರ್ಯಾರದೋ ಆಗಿಬಿಡುತ್ತವೆ'ಎಂದು ಯೋಚಿಸಿದ. ಒಳಗಿನಿಂದ ಚಿಕ್ಕತಾಯಮ್ಮ ಕರೆದಂತಾಯಿತು. ಲೈಟ್ ಹಾಕಲಿಲ್ಲ, ಹಾಗೆಯೇ ಒಳಗೆ ಹೋಗಿ 'ಏನು, ಊಟ ತಿನ್ನಿಸಲೆ?' ಎಂದ. 'ಬೇಡ' ಎಂದಳು. ಇತ್ತೀಚೆಗೆ ತಮ್ಮಯ್ಯನೂ ಆಕೆಗೆ ಊಟಕ್ಕೆ ಬಲವಂತ ಮಾಡುವುದನ್ನು ಬಿಟ್ಟುಬಿಟ್ಟಿದ್ದ. 'ನೀರು ಕೊಡಲೇ?' ಎಂದ. ಸುಮ್ಮನಿದ್ದಳು. ಅಲ್ಲೇ ಚೊಂಬಿನಲ್ಲಿದ್ದ ನೀರನ್ನು ಗ್ಲಾಸಿಗೆ ಬಗಿಸಿ ಕೆಳಗೆ ಕೂತು ಚಿಕ್ಕತಾಯಮ್ಮಳ ಬೆನ್ನಿಗೆ ಕೈ ಹಾಕಿ ಸ್ವಲ್ಪ ಮೇಲಕ್ಕೆತ್ತಿ ಗ್ಲಾಸು ಬಾಯಿಗಿಟ್ಟ. ಎರಡು ಗುಟುಕು ಕುಡಿದು ಸಾಕು ಎನ್ನುವಂತೆ ಕೈ ಮಾಡಿದಳು. ಸ್ವಲ್ಪ ಹೊತ್ತು ಹಾಗೆಯೇ ಇದ್ದು ನಂತರ ಆಕೆಯನ್ನು ಹಾಗೆಯೇ ಹಿಂದಕ್ಕೆ ಮಲಗಿಸಿದ. 'ಆ ಗಡಿಯಾರ ಆಚೆಗಿಟ್ಟುಬಿಡು. ಅದರ ಟಿಕ್ ಟಿಕ್ ಶಬ್ದದಲ್ಲಿ ನಿದ್ದೆಯೇ ಬರೋದಿಲ್ಲ' ಎಂದಳು. ಗಡಿಯಾರದ ಟಿಕ್ ಟಿಕ್ ಶಬ್ದ ನಿದ್ದೆಮಾಡಲು ಬಿಡದಷ್ಟಿರುತ್ತದೆಯೇ ಎಂದು ತಮ್ಮಯ್ಯನಿಗೆ ಅಚ್ಚರಿಯಾಯಿತು. ಸ್ವಲ್ಪ ಹೊತ್ತು ಹಾಗೆಯೇ ಇದ್ದ. ರಾತ್ರಿಯ ನಿಶ್ಶಬ್ದದಲ್ಲಿ ಗಡಿಯಾರದ ಶಬ್ದ ಸ್ಫುಟವಾಗಿ ಕೇಳಿಸತೊಡಗಿತು. ಕೇಳುತ್ತ ಕೇಳುತ್ತ ಅದರ ಶಬ್ದ ಹೆಚ್ಚಾಗುತ್ತಿರುವಂತೆ ತೋರತೊಡಗಿತು. 'ಚಿಕ್ಕತಾಯಿಗೆ ಗಡಿಯಾರದ ಶಬ್ದದಿಂದ ಹೆದರಿಕೆಯಾಗತೊಡಗಿದೆಯೆ? ಸಮಯ ಕಳೆದಂತೆಲ್ಲ ಸಾವು ಹತ್ತಿರ ಹತ್ತಿರ ಬರುತ್ತಿದೆಯೆಂಬ ಭಯ ಆಕೆಗೆ ಹೆಚ್ಚಾಗುತ್ತಿರಬೇಕು' ಎಂದುಕೊಂಡ. ಆತನಿಗೇ ಹೆದರಿಕೆಯಾಗುವಂತೆ ಗಡಿಯಾರದ ಶಬ್ದ ಕರ್ಕಶವಾಗುತ್ತಿದೆಯೆನ್ನಿಸಿತು. ಗಡಿಯಾರವನ್ನು ತೆಗೆದುಕೊಂಡು ಹೊರಬಂದು ಮತ್ತೆ ಜಗುಲಿಯ ಮೇಲೆ ಕೂತ. ಬೆಳದಿಂಗಳ ಬೆಳಕಲ್ಲಿ ಸಮಯ ನೋಡಿದ. ರಾತ್ರಿ ಹನ್ನೊಂದಾಗುವುದರಲ್ಲಿತ್ತು.

ಅವರ ಮನೆಯಲ್ಲಿ ಗಡಿಯಾರವೇ ಇರಲಿಲ್ಲ. ಎಂದೂ ಅವರಿಗೆ ಅದರ ಅವಶ್ಯಕತೆ ಕಂಡೇ ಇರಲಿಲ್ಲ. ಚಿಕ್ಕತಾಯಿಗೆ ಕಾಯಿಲೆಯಾಗಿ ಸಮಯ ಸಮಯಕ್ಕೆ ಔಷಧ ಕೊಡಬೇಕೆಂದು ಡಾಕ್ಟರು ಹೇಳಿದಾಗ ಮಗನಿಗೆ ಹೇಳಿ ಆ ಗಡಿಯಾರ ತರಿಸಿಕೊಂಡಿದ್ದರು. ಆ ಗಡಿಯಾರ ಮನೆಗೆ ಬಂದಾಗಿನಿಂದ ಚಿಕ್ಕತಾಯಿಗೆ ಸಮಯ ಹೋಗುತ್ತಿರುವುದರ ಅರಿವಾಗಿರಬೇಕು; ಇನ್ನೇನು ಸಾವು ಹತ್ತಿರ ಹತ್ತಿರ ಬರುತ್ತಿದೆಯೆನ್ನಿಸಿ ಹೆದರಿಕೆಯೂ ಆಗಿರಬೇಕು.

ಒಣಗಿಸಿದ ಬಟ್ಟೆಗಳು ಗಾಳಿಗೆ ಪಟ ಪಟ ಎನ್ನುತ್ತಿದ್ದವು. ಚಿಕ್ಕತಾಯಮ್ಮಳ ರಕ್ತಸಿಕ್ತ ಬಟ್ಟೆಗಳ ಒಗೆಯುವುದನ್ನು ಯಾರೂ ನೋಡದಿರಲಿ ಎಂದು ತಮ್ಮಯ್ಯ ಆಕೆಯ ಬಟ್ಟೆಗಳನ್ನು ರಾತ್ರಿಯೇ ಒಗೆಯುತ್ತಿದ್ದ. ದಿನದಿನಕ್ಕೆ ರಕ್ತದಲ್ಲಿ ತೋಯುತ್ತಿದ್ದ ಆಕೆಯ ಬಟ್ಟೆಗಳ ರಾಶಿ ಹೆಚ್ಚುತ್ತಲ್ಲೇ ಇತ್ತು. ಆಕೆಯ ಮೈಯಲ್ಲಿ ಅಷ್ಟೊಂದು ರಕ್ತವಿದೆಯೇ ಎಂದು ಆತನಿಗೇ ಅಚ್ಚರಿಯಾಗಿತ್ತು. ಇನ್ನೆಷ್ಟು ದಿನ ಅವಳು ಬದುಕಬಹುದು ಎಂದು ಆಲೋಚಿಸಿದ. ಅವನಿಗರಿವಿಲ್ಲದೆ ಅವನ ಕಣ್ಣಂಚಿನಲ್ಲಿ ನೀರು ಹನಿಯಿತು. ದೂರದಲ್ಲೆಲ್ಲೋ ಆಟೋ ಬರುತ್ತಿರುವ ಸದ್ದಾಯಿತು. ಮಗ ವೆಂಕಟೇಶ ಮನೆಗೆ ಬರುತ್ತಿರಬಹುದು

ಚಿಕ್ಕತಾಯಮ್ಮಳಿಗೆ ಅದನ್ನು ಊಹಿಸಿಕೊಳ್ಳಲೂ ಸಾಧ್ಯವಿರಲಿಲ್ಲ. 'ಅದೆಂಗೆ ಕಿತ್ಕೊಕ್ತಾರೆ?' ಎಂದು ಪದೇ ಪದೇ ಕೇಳುತ್ತಿದ್ದಳು. 'ಬಿ.ಡಿ.ಎ.ನವರ ವಂಶ ಎಕ್ಕುಟ್ಹೋಗಲಿ' ಎಂದು ಶಾಪಹಾಕುತ್ತಿದ್ದಳು. 'ಇದು ನಮ್ಮಪ್ಪ ನಂಗೆ ಕೊಟ್ಟ ಜಮೀನು. ನಾನು ಹುಟ್ಟಿದ್ದಿಲ್ಲೇ, ಬೆಳದಿದ್ದಿಲ್ಲೇ. ಗೇಯ್ದಿರೋದೂ ಇದೇ ಜಮೀನಲ್ಲಿ. ಯಾರ್‍ಯಾರೋ ಮಾರ್ತೀಯಾ ಅಂದಾಗ್ಲೂ ಈ ಭೂಮಿ ನನ್ನ ಪ್ರಾಣಹೋದರೂ ಮಾರಲ್ಲ ಅಂದಿದ್ದೆ. ಈಗ ಅದೆಂಗೆ ಬಿ.ಡಿ.ಎ.ನೋರು ಈ ಜಮೀನು ತಗಂತೀವಿ, ಸೈಟ್ ಮಾಡಿ ಎಲ್ರಗೂ ಹಂಚ್ತೀವಿ ಅಂತಾರೆ. ನಂ ಭಮಿ ಕಿತ್ಕೊಂಡು ಸೈಟು ಮಾಡಿ ಕಂಡೋರಿಗೆ ಹಂಚೋಕೆ ಅವರ್‍ಯಾರು? ಅವರಪ್ಪಂದಾ ಜಮೀನಿದು?' ಎಂದು ಕೇಳಿದ್ದಳು. ತಮ್ಮಯ್ಯನಿಗೂ ಈವಿಷಯ ಅರ್ಥ ಆಗಿರಲಿಲ್ಲ. ಆದರೆ ಸರ್ಕಾರದೋರು ಯಾವ ಜಮೀನು ಬೇಕಾದರೂ ಕಿತ್ಕೋಬಹುದು, ಅವರಿಗೆ ಆ ಅಧಿಕಾರ ಇದೆ ಎಂದಾಗ ಸುಮ್ಮನಾಗಿದ್ದ. ಅದನ್ನೇ ಚಿಕ್ಕತಾಯಿಗೆ ಹೇಳಿದಾಗ ಆಕೆ ಕಿರುಚಾಡಿ ರಂಪಾಟ ಮಾಡಿದ್ದಳು. 'ಆ ಅಧಿಕಾರ ಅವರಿಗೆ ನಂ ತಾತ ಕೊಟ್ಟಿದ್ನಾ? ಈ ಆಸ್ತಿ ನಂ ತಾತ್ನಿಂದ ನಂ ಅಪ್ಪನಿಗೆ ಬಂದಿದ್ದು. ಅವರಿಂದ ನನಗೆ ಬಂದಿದೆ. ಇದು ನಂ ತಾತನ ಆಸ್ತಿ. ನಮ್ಮ ತಾತ ಏನಾದ್ರೂ ಅವರಿಗೆ ಬರಕೊಟ್ಟಿದ್ದನಾ?'ಎಂದು ಕೇಳಿದ್ದಳು. 'ಅದೆಂಗೆ ಬತ್ತಾರೆ, ಬರ್‍ಲಿ. ನಾನು ನನ್ನ ಜಮೀನು ಕೊಡೋಳಲ್ಲ' ಎಂದಿದ್ದಳು.

ಎಂದುಕೊಂಡ. ಅವನು ಈಗಿರುವ ಆಟೋ ಮಾರಿ ಟ್ಯಾಕ್ಸಿ ಕೊಳ್ಳಬೇಕೆಂದು ಕನಸು ಕಾಣುತ್ತಿದ್ದಾನೆ. ಇರುವ ಈ ಎರಡು ಎಕರೆ ಜಮೀನು ಬಿ.ಡಿ.ಎ.ನವರು ಕಿತ್ತುಕೊಳ್ಳುತ್ತಿರುವುದರಿಂದ ಸಂತೋಷಗೊಂಡಿರುವವನು ಅವನೊಬ್ಬನೇ ಇರಬಹುದು.

ಚಿಕ್ಕತಾಯಮ್ಮಳಿಗೆ ಅದನ್ನು ಊಹಿಸಿಕೊಳ್ಳಲೂ ಸಾಧ್ಯವಿರಲಿಲ್ಲ. 'ಅದೆಂಗೆ ಕಿತ್ಕೊಕ್ತಾರೆ?' ಎಂದು ಪದೇ ಪದೇ ಕೇಳುತ್ತಿದ್ದಳು. 'ಬಿ.ಡಿ.ಎ.ನವರ ವಂಶ ಎಕ್ಕುಟ್ಹೋಗಲಿ' ಎಂದು ಶಾಪಹಾಕುತ್ತಿದ್ದಳು. 'ಇದು ನಮ್ಮಪ್ಪ ನಂಗೆ ಕೊಟ್ಟ ಜಮೀನು. ನಾನು ಹುಟ್ಟಿದ್ದಿಲ್ಲೇ, ಬೆಳದಿದ್ದಿಲ್ಲೇ. ಗೇಯ್ದಿರೋದೂ ಇದೇ ಜಮೀನಲ್ಲಿ. ಯಾರ್‍ಯಾರೋ ಮಾರ್ತೀಯಾ ಅಂದಾಗ್ಲೂ ಈ ಭೂಮಿ ನನ್ನ ಪ್ರಾಣಹೋದರೂ ಮಾರಲ್ಲ ಅಂದಿದ್ದೆ. ಈಗ ಅದೆಂಗೆ ಬಿ.ಡಿ.ಎ.ನೋರು ಈ ಜಮೀನು ತಗಂತೀವಿ, ಸೈಟ್ ಮಾಡಿ ಎಲ್ರಗೂ ಹಂಚ್ತೀವಿ ಅಂತಾರೆ. ನಂ ಭಮಿ ಕಿತ್ಕೊಂಡು ಸೈಟು ಮಾಡಿ ಕಂಡೋರಿಗೆ ಹಂಚೋಕೆ ಅವರ್‍ಯಾರು? ಅವರಪ್ಪಂದಾ ಜಮೀನಿದು?' ಎಂದು ಕೇಳಿದ್ದಳು. ತಮ್ಮಯ್ಯನಿಗೂ ಈವಿಷಯ ಅರ್ಥ ಆಗಿರಲಿಲ್ಲ. ಆದರೆ ಸರ್ಕಾರದೋರು ಯಾವ ಜಮೀನು ಬೇಕಾದರೂ ಕಿತ್ಕೋಬಹುದು, ಅವರಿಗೆ ಆ ಅಧಿಕಾರ ಇದೆ ಎಂದಾಗ ಸುಮ್ಮನಾಗಿದ್ದ. ಅದನ್ನೇ ಚಿಕ್ಕತಾಯಿಗೆ ಹೇಳಿದಾಗ ಆಕೆ ಕಿರುಚಾಡಿ ರಂಪಾಟ ಮಾಡಿದ್ದಳು. 'ಆ ಅಧಿಕಾರ ಅವರಿಗೆ ನಂ ತಾತ ಕೊಟ್ಟಿದ್ನಾ? ಈ ಆಸ್ತಿ ನಂ ತಾತ್ನಿಂದ ನಂ ಅಪ್ಪನಿಗೆ ಬಂದಿದ್ದು. ಅವರಿಂದ ನನಗೆ ಬಂದಿದೆ. ಇದು ನಂ ತಾತನ ಆಸ್ತಿ. ನಮ್ಮ ತಾತ ಏನಾದ್ರೂ ಅವರಿಗೆ ಬರಕೊಟ್ಟಿದ್ದನಾ?'ಎಂದು ಕೇಳಿದ್ದಳು. 'ಅದೆಂಗೆ ಬತ್ತಾರೆ, ಬರ್‍ಲಿ. ನಾನು ನನ್ನ ಜಮೀನು ಕೊಡೋಳಲ್ಲ' ಎಂದಿದ್ದಳು.

ಬಿ.ಡಿ.ಎ. ನೋಟಿಫಿಕೇಶನ್ ಸುದ್ದಿ ಮೊದಲಿಗೆ ತಂದವನೇ ವೆಂಕಟೇಶ. ಆ ದಿನ ಪೇಪರ್ ಹಿಡಿದುಕೊಂಡು ಓಡಿಬಂದು, 'ಈ ಹಳ್ಳಿಯ ಜಮೀನುಗಳನ್ನೆಲ್ಲಾ ಬಿ.ಡಿ.ಎ.ನವರು ನೋಟಿಫೈ ಮಾಡಿದ್ದಾರೆ. ಎಕರೇಗೆ ಆರು ಲಕ್ಷ ಕೊಡ್ತಾರಂತೆ. ಈ ಡಬ್ಬ ಆಟೋ ಬಿಸಾಕಿ, ಟ್ಯಾಕ್ಸಿ ತಗೋತೀನಿ' ಎಂದು ಕುಣಿದಾಡಿದ್ದ. ಅದಕ್ಕೆ ಮೊದಲು ಅವನು ಅವರಮ್ಮನನ್ನು ಟ್ಯಾಕ್ಸಿ ಕೊಡಿಸುವಂತೆ ಪೀಡಿಸುತ್ತಿದ್ದ. ದುಡ್ಡಿಲ್ಲ ಎಂದಾಗ ಒಂದರ್ಧ ಎಕರೆ ಜಮೀನಾದರೂ ಮಾರಿ ಕೊಡಿಸುವಂತೆ ದುಂಬಾಲು ಬಿದ್ದಿದ್ದ. 'ಸಾಧ್ಯವೇ ಇಲ್ಲ' ಎಂದಿದ್ದಳು ಚಿಕ್ಕತಾಯಮ್ಮ.

ಅದೇ ಸಮಯದಲ್ಲಿ ತಮ್ಮಯ್ಯನಿಗೆ ಮತ್ತೊಂದು ಆಲೋಚನೆ ಬಂದಿತ್ತು. ಆದರೆ ಅದನ್ನು ಚಿಕ್ಕತಾಯಮ್ಮಳ ಹತ್ತಿರ ಹೇಳಲು ಹೋಗಿರಲಿಲ್ಲ. ಮೂರ್‍ನಾಲ್ಕು ವರ್ಷಗಳಿಂದ ಹೊಟ್ಟೆನೋವು ಹಾಗೂ ರಕ್ತಸ್ರಾವದಿಂದ ನರಳುತ್ತಿದ್ದ ಚಿಕ್ಕಯಮ್ಮನಿಗೆ ಏನೇನು ಔಷಧ ಕೊಟ್ಟರೂ ವಾಸಿಯಗಿರಲಿಲ್ಲ. ಕೊನೆಗೊಬ್ಬರು ಡಾಕ್ಟರು ಕಿದ್ವಾಯಿ ಆಸ್ಪತ್ರೆಗೆ ಹೋಗಿ ಅಂದಾಗ ತಮ್ಮಯ್ಯನಿಗೆ ಒಂದು ರೀತಿಯ ಆತಂಕ ಉಂಟಾಗಿತ್ತು. ಕಿದ್ವಾಯಿ ಆಸ್ಪತ್ರೆ ಕ್ಯಾನ್ಸರ್ ಆಸ್ಪತ್ರೆ ಎಂಬುದು ಆತನಿಗೆ ತಿಳಿದಿತ್ತು. ಅಲ್ಲಿ ಆತನ ಸಂಶಯ ನಿಜವಾಗಿತ್ತು. ಗರ್ಭಕೋಶದ ಕೊರಳಿನ ಕ್ಯಾನ್ಸರ್ ಎಂದಿದ್ದರು ಅಲ್ಲಿನ ಡಾಕ್ಟರು. 'ಕರೆಂಟ್' ಚಿಕಿತ್ಸೆ ಹಾಗೂ ರಾಶಿಗಟ್ಟಲೆ ಔಷಧಗಳ ಸೇವನೆಯಿಂದ ಗುಣಮುಖಳಾಗಲಿಲ್ಲ. ಬದಲಿಗೆ ಆಕೆಯ ತಲೆಯಮೇಲಿನ ಕೂದಲಿನಂತೆ ಇದ್ದಬದ್ದ ಹಣವೆಲ್ಲಾ ಖಾಲಿಯಾಯಿತು. ಹರಿಯುವ ರಕ್ತದ ಕೋಡಿ ನಿಲ್ಲಲಿಲ್ಲ. ಡಾಕ್ಟರೊಂದು ದಿನ ತಮ್ಮಯ್ಯನನ್ನು ತಮ್ಮ ಕೋಣೆಗೆ ಕರೆದು ಇದ್ದ ವಿಷಯ ತಿಳಿಸಿದರು: 'ಬೇರೇನೂ ದಾರಿಯಿಲ್ಲ. ಊರಿಗೆ ಕರೆದುಕೊಂಡು ಹೋಗಿ ಇರುವವರೆಗೂ ಚೆನ್ನಾಗಿ ನೋಡಿಕೊ. ನಾವು ಮಾಡುವುದು ಇನ್ನೇನೂ ಉಳಿದಿಲ್ಲ' ಎಂದರು. ಬಿ.ಡಿ.ಎ.ನವರು ಜಮೀನು ತೆಗೆದುಕೊಂಡು ಮಗ ವೆಂಕಟೇಶ ಹೇಳಿದಂತೆ ಎಕರೆಗೆ ಆರು ಲಕ್ಷ ಕೊಟ್ಟರೆ ಅವಳಿಗೆ ಬೇರೆಲ್ಲಾದರೂ ಚಿಕಿತ್ಸೆ ಕೊಡಿಸಿ ಹೆಂಡತಿಯನ್ನು ಉಳಿಸಿಕೊಳ್ಳಬಹುದೇನೋ ಎಂಬ ಆಸೆ ಮೊಳಕೆಯೊಡೆಯಿತು. 'ಆಸ್ತಿ ಹೋದ್ರೂ ಹೋಗ್ಲಿ, ಚಿಕ್ಕತಾಯಿ ಉಳ್ದರೆ ಸಾಕು' ಎಂದುಕೊಂಡ.

ಚಿಕ್ಕತಾಯಮ್ಮ ತನ್ನ ತಂದೆತಾಯಿಯವರಿಗೆ ಒಬ್ಬಳೇ ಮಗಳು. ಹಾಗಾಗಿ ಅವರ ತಂದೆ ತಾಯಿಯವರು ಆಕೆಯನ್ನು ಬೇರೆ ಊರಿಗೆ ಮದುವೆ ಮಾಡಿಕೊಡದೆ ನೆಂಟರಿಷ್ಟರಲ್ಲಿ ದಿಕ್ಕಿಲ್ಲದಿದ್ದ ತಮ್ಮಯ್ಯನಿಗೆ ಮದುವೆ ಮಾಡಿಕೊಟ್ಟು ಮನೆ ಅಳಿಯನನ್ನಾಗಿ ಮಾಡಿಕೊಂಡಿದ್ದರು. ತಮ್ಮಯ್ಯನೂ ಒಳ್ಳೆ ವ್ಯವಸಾಯ ಮಾಡುವವನಾಗಿದ್ದು ಇದ್ದ ಜಮೀನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ.

ಆಗ ಅಮೃತಹಳ್ಳಿ ಬೆಂಗಳೂರಿನಿಂದ ತುಂಬಾ ದೂರವಿರುವಂತೆ ತೋರುತ್ತಿತ್ತು. ತರಕಾರಿ ಅದೂ ಇದೂ ಮಾರಲು ಕೆ.ಆರ್. ಮಾರುಕಟ್ಟೆಗೆ ಗಾಡಿ ಹೊಡೆದುಕೊಂಡು ಹೋಗುತ್ತಿದ್ದುದು ತಮ್ಮಯ್ಯನಿಗೆ ಇನ್ನೂ ಚೆನ್ನಾಗಿ ನೆನಪಿದೆ. ನೋಡನೋಡುತ್ತಿದ್ದಂತೆಯೇ ಬೆಂಗಳೂರು ಬೆಳೆದುಬಿಟ್ಟಿತು. ಮಗ ವೆಂಕಟೇಶನಿಗೆ ನಗರದ ಗೀಳು ಬಿದ್ದು ಇತ್ತ ಬೇಸಾಯ ಮಾಡುವ ರೈತನೂ ಆಗಲಿಲ್ಲ, ಅತ್ತ ಶಾಲೆಗೆ ಹೋಗಿ ಓದಿ ವಿದ್ಯಾವಂತನೂ ಆಗಲಿಲ್ಲ. ಅವರಿವರು ಪೋಕರಿ ಹುಡುಗರ ಜೊತೆ ಸೇರಿ ಸಿನಿಮಾ ಅಂತ ಅಲೆದಾಡುವುದು, ಹೊತ್ತಲ್ಲದ ಹೊತ್ತಲ್ಲಿ ಮನೆಗೆ ಬರುವುದು, ಬೀಡಿ ಸಿಗರೇಟು ಸೇದುವುದು ಮಾಡುತ್ತಾ ತಮ್ಮಯ್ಯ, ಚಿಕ್ಕತಾಯಮ್ಮನವರ ಕಣ್ಣೆದುರಿನಲ್ಲಿಯೇ ಬೆಳೆದು ಬಿಟ್ಟಿದ್ದ. 'ಹೊಲ್ದಾಗಾದ್ರೂ ಗೇಯಿ ಅಥ್ವಾ ಏನಾದ್ರೂ ಬದುಕು ಮಾಡಿ ಊಟಕ್ಕೊಂದು ದಾರಿ ಮಾಡ್ಕೋ ' ಎಂದು ಅಪ್ಪ ಅಮ್ಮ ಇಬ್ಬರೂ ಬಯ್ಯತೊಡಗಿದಾಗ ಯಾರದೋ ಆಟೋ ಬಾಡಿಗೆಗೆ ಓಡಿಸತೊಡಗಿದ. 'ಏನೋ ಈ ಎರಡೆಕ್ರೆ ಜಮೀನಿದೆ. ಇರೊಬ್ಬ ಮಗನಿಗೆ ಮುಂದೇ ಇದೇ ದಿಕ್ಕು'ಎಂದು ಸಾಂತ್ವನಮಾಡಿಕೊಳ್ಳತ್ತಿದ್ದಳು ಚಿಕ್ಕತಾಯಮ್ಮ.

ಆ ಜಮೀನಿನ ಮೂಲೆಯ ತೋಡುಬಾವಿಯ ಪಕ್ಕದಲ್ಲೇ ಆಕೆಯ ಅಮ್ಮ ಅಪ್ಪನ ಸಮಾಧಿಗಳಿದ್ದವು. ಒಂದು ದಿನ ಮಗ ವೆಂಕಟೇಶನನ್ನು ಕರೆದು ಹೇಳಿದ್ದಳು, 'ನೋಡ್ಕೋ, ನಾವು ಸತ್ತಮೇಲೆ ನನ್ನೂ, ನಿಮ್ಮಪ್ಪನನ್ನೂ ಇಲ್ಲೇ ಹೂಳ್ಬೇಕು. ಜಾಗ ಗುರ್ತಿಟ್ಕೊ' ಎಂದು ಹೇಳಿದ್ದಳು. ಗರ್ಭಕೋಶದ ಕೊರಳಿನ ಕ್ಯಾನ್ಸರ್ ಆಗಿ ಸಾವಿನ ಬಾಗಿಲಲ್ಲಿದ್ದ ಚಿಕ್ಕತಾಯಮ್ಮನಿಗೆ ಈಗ ಸಮಸ್ಯೆಯಾಗಿದ್ದುದು ಬಿ.ಡಿ.ಎ..ನವರು ಜಮೀನನ್ನು ಸೈಟುಗಳಾಗಿ ಮಾಡಿದರೆ ಈ ಸಮಾಧಿಗಳ ಗತಿ ಏನಾಗುತ್ತದೆ ಎಂಬುದು. ಮತ್ತೊಂದು ಆತಂಕವಿದ್ದುದು ಬಿ.ಡಿ.ಎ.ನವರು ಆ ಜಮೀನನ್ನು ಕಿತ್ತುಕೊಂಡರೆ ಆಕೆ ಸತ್ತ ಮೇಲೆ ಆಕೆಯನ್ನು ಹೂಳುವುದು ಎಲ್ಲಿ ಎಂಬುದು. ಗಂಡ ತಮ್ಮಯ್ಯನ ಬಳಿ ಈ ವಿಷಯ ಹೇಳಿಕೊಂಡು ಗೋಳಾಡಿದ್ದಳು. ತಮ್ಮಯ್ಯನಿಗೂ ಏನೂ ಹೇಳಲು ತೋಚಿರಲಿಲ್ಲ. ಅವರಿವರನ್ನು ವಿಚಾರಿಸಿದ್ದ. ಬಿ.ಡಿ.ಎ.ನವರು ಜಮೀನುಗಳನ್ನು ಅವರ ಪ್ಲ್ಯಾನ್ ಪ್ರಕಾರ ಲೆವೆಲ್ ಮಾಡಿ ಲೇಔಟು ಮಾಡುತ್ತಾರೆ. ಜಮೀನುಗಳಲ್ಲಿಯ ಸಮಾಧಿಗಳನ್ನು ಅವರು ಕೇರ್ ಮಾಡುವುದಿಲ್ಲ. ಊರಿನ ಸ್ಮಶಾನಗಳಿದ್ದಲ್ಲಿ ಅವುಗಳನ್ನು ಏನೂ ಮಾಡುವುದಿಲ್ಲ ಎನ್ನುವುದನ್ನು ತಿಳಿದು ಆಕೆಗೆ ಅತ್ಯಂತ ದುಗುಡದಿಂದ ವಿಷಯ ತಿಳಿಸಿದ್ದ. ಆ ವಿಷಯ ತಿಳಿದು ಆಕೆ ಎರಡು ದಿನ ಊಟಮಾಡಿರಲಿಲ್ಲ. ತಮ್ಮಯ್ಯನಿಗೆ ಈ ವಿಷಯದಲ್ಲಿ ಯಾವ ರೀತಿ ಸಂತೈಸಬೇಕೆಂಬುದೂ ತಿಳಿದಿರಲಿಲ್ಲ.

ಆಟೋ ಸದ್ದು ಇನ್ನೂ ಹತ್ತಿರವಾಯಿತು. ತಮ್ಮಯ್ಯನಿಗೆ ಹಸಿವಾಗುತ್ತಿದ್ದರೂ ತಿನ್ನುವ ಮನಸ್ಸಾಗಲಿಲ್ಲ.

ಚಿಕ್ಕತಾಯಮ್ಮ ಆಸ್ಪತ್ರೆಯಿಂದ ಹಿಂದಿರುಗಿದ ಮೇಲೆ ತಮ್ಮಯ್ಯ ಮನೆ ಬಿಟ್ಟು ಎಲ್ಲೂ ಹೋಗುತ್ತಿರಲಿಲ್ಲ. ಆತನೇ ಒಂದಷ್ಟು ಅನ್ನ, ಗಂಜಿ ಮಾಡಿ ಆಕೆಗೆ ತಿನ್ನಿಸುತ್ತಿದ್ದ, ಆಕೆಯನ್ನು ಬಚ್ಚಲು ಮನೆಗೆ ಕರೆದೊಯ್ಯುತ್ತಿದ್ದ. ಮಗ ವೆಂಕಟೇಶ ಮನೆಗೆ ಬಂದರೆ ಬಂದ ಇಲ್ಲದಿದ್ದರೆ ಇಲ್ಲ. ಅವನೂ ಮನೆಗೆ ಏನೂ ದುಡ್ಡು ಕೊಡುತ್ತಿರಲಿಲ್ಲ, ಇವರೂ ಕೇಳುತ್ತಿರಲಿಲ್ಲ. ಅಮ್ಮನಿಗೆ ಅಷ್ಟು ಕಾಯಿಲೆಯಾಗಿದ್ದರೂ ಒಂದು ದಿನವಾದರೂ ತಲೆಕೆಡಿಸಿಕೊಳ್ಳಲಿಲ್ಲ. ತಮ್ಮಯ್ಯ ಹಾಗೂ ಚಿಕ್ಕತಾಯಮ್ಮ ಎಷ್ಟೋ ಸಾರಿ ಅವನ ಬಗ್ಗೆ ಮಾತನಾಡಿಕೊಂಡಿದ್ದರು. ಅವನು ನಗರಕ್ಕೆ ಸೇರಿ ಇಷ್ಟೊಂದು ಕಠೋರನಾದನೆ? ಸಂಪೂರ್ಣ ಹಳ್ಳಿಯ ಹುಡುಗನೇ ಆಗಿ ರೈತನಾಗಿದ್ದಿದ್ದರೆ ಅಮ್ಮನ ಸೆರಗು ಬಿಡದ ಕೂಸಾಗಿ ಅಪ್ಪ ಅಮ್ಮನನ್ನು ಪ್ರೀತಿಸುವ ಮುದ್ದಿನ ಮಾತನಾಗುತ್ತಿದ್ದನೆ?

ಹತ್ತಿರ ಹತ್ತಿರವಾದಂತೆ ಆಟೋದ ಬೆಳಕು ಕಂಡಿತು. ವೆಂಕಟೇಶ ಆಟೋವನ್ನು ಶೆಡ್‌ನಲ್ಲಿ ನಿಲ್ಲಿಸಿದ. ಅದೇ ಶೆಡ್ ಅಲ್ಲವೆ ಮೊದಲು ಎತ್ತುಗಳ ಕೊಟ್ಟಿಗೆಯಾಗಿದ್ದುದು! ಎಂಥ ಜೋಡಿ ಎತ್ತುಗಳವು ! ಅವುಗಳನ್ನು ಕೊಳ್ಳಲು ತಮ್ಮಯ್ಯ ಮತ್ತು ಚಿಕ್ಕತಾಯಮ್ಮ ಇಬ್ಬರೂ ಮಾಗಡಿ ದನಗಳ ಪರಷೆಗೆ ಹೋಗಿದ್ದರು. ನೀನು ಬರುವುದು ಬೇಡವೆಂದರೂ ಕೇಳದೆ ಬರುತ್ತೇನೆಂದು ಚಿಕ್ಕತಾಯಮ್ಮ ಹುರುಪಿನಿಂದ ಚಿಕ್ಕಹುಡುಗಿಯಂತೆ ಬಂದಿದ್ದಳು. ಆಕಾಲದಲ್ಲಿ ಎರಡು ಸಾವಿರದ ಎತ್ತುಗಳೆಂದರೆ ಕಡಿಮೆಯೇನಲ್ಲ. ತಂದ ಮರುದಿನ ಊರವರೆಲ್ಲಾ ನೋಡಲು ಬಂದಿದ್ದರು. ಸಂಕ್ರಾಂತಿಯ ದಿನ ಅವುಗಳಿಗೆ ಸಿಂಗಾರ ಮಾಡಿ ಮೆರವಣಿಗೆ ಮಾಡಿಸುವುದು ಅವರಿಗೆ ಅತ್ಯಂತ ಹೆಮ್ಮೆಯ ವಿಷಯವಾಗಿತ್ತು. ಈಗ ಊರಿನಲ್ಲಿ ಮೊದಲಿನ ಹಾಗೆ ಸಂಕ್ರಾಂತಿ ಮಾಡುವುದೇ ನಿಂತುಹೋಗಿದೆ. ಯಾರಲ್ಲಿಯೂ ದನಗಳಿಲ್ಲ. ಎಲ್ಲರೂ ಸೈಟುಗಳ ಬಿಸಿನೆಸ್‌ನಲ್ಲಿ ಮುಳುಗಿಹೋಗಿದ್ದಾರೆ ಎನ್ನಿಸಿತು ತಮ್ಮಯ್ಯನಿಗೆ.

ಆಟೋ ನಿಲ್ಲಿಸಿದ ವೆಂಕಟೇಶ ನೇರ ಅಡಿಗೆಮನೆಗೆ ಹೋಗಿ ಊಟಬಡಿಸಿಕೊಳ್ಳತೊಡಗಿದ. ಚಿಕ್ಕತಾಯಮ್ಮ ಏನೋ ಹೇಳಿದಳು. ವೆಂಕಟೇಶನೂ ಉತ್ತರಿಸಲಿಲ್ಲ, ಇತ್ತ ತಮ್ಮಯ್ಯನೂ ಏನೂ ಹೇಳಲಿಲ್ಲ.

ಕೆಲದಿನಗಳ ಹಿಂದೆ ಹೀಗೆಯೇ ರಾತ್ರಿ ಹೊರಗೆ ಜಗುಲಿಯ ಮೇಲೆ ತಮ್ಮಯ್ಯ ಹಾಸಿಕೊಂಡು ಮಲಗಿದ್ದ. ನಿದ್ರೆ ಬರುತ್ತಿರಲಿಲ್ಲ. ಬೀಡಿ ಸೇದುತ್ತಾ ಬಿಡುವ ಹೊಗೆ ಕತ್ತಲಲ್ಲಿ ಚಿತ್ತಾರಗಳನ್ನು ಬಿಡಿಸುತ್ತಿದ್ದುದನ್ನು ನೋಡುತ್ತಿದ್ದ. ಸಮಯ ಒಂದು ಗಂಟೆಯೋ ಎರಡು ಗಂಟೆಯೋ ಆಗಿದ್ದಿರಬಹುದು. ಚಿಕ್ಕತಾಯಮ್ಮ ಕರೆದಳು. ಅವಳನ್ನು ಬಚ್ಚಲಿಗೆ ಕರೆದೊಯ್ಯಬೇಕೇನೋ ಎಂದು ಕೊನೆಯ ದಮ್ಮು ಎಳೆದು ಬೀಡಿ ತುಂಡು ಬಿಸಾಕಿ, ಕ್ಯಾಕರಿಸಿ ಉಗಿದು ಒಳಗೆ ನಡೆದ . ಲೈಟ್ ಹಾಕಿದ. 'ಬೇಡ, ಆಫ್ ಮಾಡು' ಎಂದಳು ಕೈಯನ್ನು ಕಣ್ಣಿಗೆ ಮರೆಮಾಡುತ್ತಾ. ಆಫ್ ಮಾಡಿ ಆಕೆಯ ಬೆನ್ನಿಗೆ ಕೈಹಾಕಿ ಮೇಲೆತ್ತಲು ಹೋದ. 'ಬೇಡ, ಇಲ್ಲೇ ಕೂತ್ಕೋ' ಎಂದಳು. ಅಲ್ಲೇ ಅವಳ ಪಕ್ಕ ಗೋಡೆಗೆ ಒರಗಿ ಕೂತ. ಗೊಳೋ ಎಂದು ಅಳಲು ಪ್ರಾಂಭಿಸಿದಳು. ತಮ್ಮಯ್ಯನಿಗೆ ಏನು ಹೇಳಲೂ ತೋಚಲಿಲ್ಲ. 'ಹೊಟ್ಟೋವು ಜಾಸ್ತಿ ಆಗದೇನು? ಮಾತ್ರೆ ಕೊಡ್ಲಾ?' ಎಂದು ಕೇಳಿದ. ಬೇಡವೆಂಬಂತೆ ತಲೆಯಾಡಿಸಿದಳು. ಇತ್ತೀಚೆಗೆ ಅವಳ ಯಾತನೆ ಹೆಚ್ಚಾಗಿತ್ತು. ಕಿದ್ವಾಯಿಯ ಡಾಕ್ಟರು ಇನ್ನು ಒಂದೆರಡು ತಿಂಗಳಷ್ಟೇ ಎಂದು ಹೇಳಿದ್ದರು. ಆದರೆ ನಾಲ್ಕೈದು ತಿಂಗಳಾಯಿತು. ಅವಳ ಯಾತನೆಯನ್ನು ನೋಡಲಾಗದ ತಮ್ಮಯ್ಯ ಅವಳಿಗೆ ಸಾವಾದರೂ ಬೇಗ ಬರಬಾರದೇ ಎಂದುಕೊಳ್ಳುತ್ತಿದ್ದ. ಒಂದೈದು ನಿಮಿಷ ಇಬ್ಬರೂ ಮಾತನಾಡಲಿಲ್ಲ. ಕೊನೆಗೆ ಚಿಕ್ಕತಾಯಮ್ಮ ಹೇಳಿದಳು. 'ನಾಳೆ ಹೊತ್ತಾರೆ ಒಂದ್ಕೆಲಸ ಮಾಡು. ನಂ ಜಮೀನು ನಂಗೆ ಉಳಿಯಾಂಗಿಲ್ಲ. ಹೆಬ್ಬಾಳದ ಮಶಾಣಕ್ಕೆ ಹೋಗಿ ನಾ ಸತ್ ಮೇಲೆ ಹೂಳೋಕೆ ಜಾಗ ಐತಾ ನೋಡ್ಕೊಂಡು ಬಾ' ಎಂದಳು. 'ಹೇ ಆ ಮಾತ್ಯಾಕೆ? ನಿಂಗೇನು ಆಗಲ್ಲ, ಔಷಧಿ ತಗೊಳ್ತಾ ಇದೀಯ. ಎಲ್ಲಾ ಸರಿಹೋಗ್ತದೆ' ಎಂದ. ಆ ಮಾತು ಸುಳ್ಳು ಎಂಬುದು ಇಬ್ಬರಿಗೂ ತಿಳಿದಿತ್ತು. ಇಬ್ಬರೂ ಮಾತನಾಡಲಿಲ್ಲ. ಆ ನಡು ರಾತ್ರಿಯ ನೀರವದಲ್ಲಿ ಗಡಿಯಾರದ ಟಿಕ್ ಟಿಕ್ ಶಬ್ದ ಬಿಟ್ಟರೆ ಬೇರೆ ಶಬ್ದವಿರಲಿಲ್ಲ. ತಮ್ಮಯ್ಯನಿಗೆ ಆ ಶಬ್ದ ಕ್ಷಣಕ್ಷಣಕ್ಕೂ ಹೆಚ್ಚಾಗುತ್ತಿರುವಂತೆ ಅನ್ನಿಸಿತು. ಅದು ತಡೆದುಕೊಳ್ಳುವುದು ಅಸಾಧ್ಯವೆನ್ನಿಸಿ ಎದ್ದು ಅಲ್ಲೇ ಗೋಡೆಯ ಗೂಡಲ್ಲಿದ್ದ ಆ ಗಡಿಯಾರವನ್ನೆತ್ತಿಕೊಂಡು ಹೊರನಡೆದು ಜಗುಲಿಯ ಮೇಲೆ ಕೂತ. ಗಡಿಯಾರದ ಮುಳ್ಳುಗಳನ್ನು ನೋಡುತ್ತಾ ಬೇಗ ಬೆಳಗಾಗಲಿ ಎಂದು ಪ್ರಾರ್ಥಿಸಿದ.

ಮರುದಿನ ಬೆಳಿಗ್ಗೆ ಚಿಕ್ಕತಾಯಮ್ಮನಿಗೆ ಗಂಜಿ ಮಾಡಿ ತಿನ್ನಿಸಿ ಅವಳಿಗೆ ಏನೂ ಹೇಳದೆ ಹೆಬ್ಬಾಳದ ಸ್ಮಶಾನದ ಕಡೆಗೆ ಹೊರಟ. ತಮ್ಮಯ್ಯನಿಗೆ ಮದುವೆಯದ ಹೊಸತರಲ್ಲಿ ಆ ಸ್ಮಶಾನದ ಕಡೆಗೆ ರಾತ್ರಿಯ ಹೊತ್ತು ಓಡಾಡಲೇ ಹೆದರಿಕೆಯಾಗುತ್ತಿತ್ತು. ಮಾರುಕಟ್ಟೆಯಿಂದ ಗಾಡಿಯಲ್ಲಿ ಹಿಂದಿರುಗುವಾಗ ಕೆಲವೊಮ್ಮೆ ಕತ್ತಲಾಗುತ್ತಿರುತ್ತಿತ್ತು. ರಸ್ತೆಯ ಬದಿಗೇ ಇದ್ದ ಸ್ಮಶಾನದ ಕಡೆಗೆ ನೋಡದೆ ಗಾಡಿ ಓಡಿಸಿಕೊಂಡು ಬರುತ್ತಿದ್ದ.

ಚಿಕ್ಕತಾಯಮ್ಮ ಆಸ್ಪತ್ರೆಯಿಂದ ಹಿಂದಿರುಗಿದ ಮೇಲೆ ತಮ್ಮಯ್ಯ ಮನೆ ಬಿಟ್ಟು ಎಲ್ಲೂ ಹೋಗುತ್ತಿರಲಿಲ್ಲ. ಆತನೇ ಒಂದಷ್ಟು ಅನ್ನ, ಗಂಜಿ ಮಾಡಿ ಆಕೆಗೆ ತಿನ್ನಿಸುತ್ತಿದ್ದ, ಆಕೆಯನ್ನು ಬಚ್ಚಲು ಮನೆಗೆ ಕರೆದೊಯ್ಯುತ್ತಿದ್ದ. ಮಗ ವೆಂಕಟೇಶ ಮನೆಗೆ ಬಂದರೆ ಬಂದ ಇಲ್ಲದಿದ್ದರೆ ಇಲ್ಲ. ಅವನೂ ಮನೆಗೆ ಏನೂ ದುಡ್ಡು ಕೊಡುತ್ತಿರಲಿಲ್ಲ, ಇವರೂ ಕೇಳುತ್ತಿರಲಿಲ್ಲ. ಅಮ್ಮನಿಗೆ ಅಷ್ಟು ಕಾಯಿಲೆಯಾಗಿದ್ದರೂ ಒಂದು ದಿನವಾದರೂ ತಲೆಕೆಡಿಸಿಕೊಳ್ಳಲಿಲ್ಲ. ತಮ್ಮಯ್ಯ ಹಾಗೂ ಚಿಕ್ಕತಾಯಮ್ಮ ಎಷ್ಟೋ ಸಾರಿ ಅವನ ಬಗ್ಗೆ ಮಾತನಾಡಿಕೊಂಡಿದ್ದರು. ಅವನು ನಗರಕ್ಕೆ ಸೇರಿ ಇಷ್ಟೊಂದು ಕಠೋರನಾದನೆ? ಸಂಪೂರ್ಣ ಹಳ್ಳಿಯ ಹುಡುಗನೇ ಆಗಿ ರೈತನಾಗಿದ್ದಿದ್ದರೆ ಅಮ್ಮನ ಸೆರಗು ಬಿಡದ ಕೂಸಾಗಿ ಅಪ್ಪ ಅಮ್ಮನನ್ನು ಪ್ರೀತಿಸುವ ಮುದ್ದಿನ ಮಾತನಾಗುತ್ತಿದ್ದನೆ?

ಊರಿನ ಜನ ಆ ಸ್ಥಳದ ಬಗ್ಗೆ ಹೆದರಿಕೆಯ ಕತೆಗಳನ್ನು ಹೇಳುತ್ತಿದ್ದರು. ಚಿಕ್ಕತಾಯಿಯ ಅಮ್ಮ ಚಿಕ್ಕವಳಿದ್ದಾಗ ಆ ಸ್ಮಶಾನದ ಪಕ್ಕದಲ್ಲಿನ ತೋಡುಬಾವಿಯಲ್ಲಿ ಆಗಾಗ ಬಟ್ಟೆಒಗೆಯುವ ಸದ್ದು ಕೇಳಿಸುತ್ತಿತ್ತೆಂದೂ, ಯಾರೋ ಅಗಸರವಳು ಆ ಬಾವಿಯಲ್ಲಿ ಬಟ್ಟೆ ಒಗೆಯಲು ಹೋಗಿ ಸತ್ತುಹೋಗಿದ್ದು ಅವಳ ದೆವ್ವವೇ ಆ ರೀತಿ ಶಬ್ದಮಾಡುತ್ತಿತ್ತೆಂದು ಹೇಳುತ್ತಿದ್ದರು. ಇಂದು ಆ ಬಾವಿಯು ಮುಚ್ಚಿಹೋಗಿ ಅದರ ಮೇಲೆ ಒಂದು ಶಾಪಿಂಗ್ ಮಾಲ್ ಬಂದಿತ್ತು. ತಮ್ಮಯ್ಯ ನೋಡನೋಡುತ್ತಿದ್ದಂತೆಯೇ ಬಸ್ಸು, ಒಂದು ಎತ್ತಿನಗಾಡಿ ಹೋಗಬಹುದಾದಷ್ಟಿದ್ದ ರಸ್ತೆ ಊರಗಲವಾಗಿತ್ತು. ಸ್ಮಶಾನದ ಸುತ್ತಮುತ್ತಲಿನ ಅಳಿದುಳಿದ ಭೂಮಿಯನ್ನೆಲ್ಲಾ ಒತ್ತುವರಿ ಮಾಡಿಕೊಂಡುಬಿಟ್ಟಿದ್ದರು. ಅದನ್ನೆಲ್ಲ ನೋಡುತ್ತ ಬಂದ ತಮ್ಮಯ್ಯ 'ಈಗಿನ ಜನಗಳಿಗೆ ದೆವ್ವಗಳ ದಿಗಿಲೆ ಇಲ್ಲ' ಎಂದುಕೊಂಡ. ಸ್ಮಶಾನದಲ್ಲಿ ಈಗ ಎಲೆಕ್ಟ್ರಿಕ್ ಕ್ರಿಮೆಟೋರಿಯಂ ಒಂದು ಸ್ಥಾಪಿಸಿದ್ದರು. ಅಳುಕು, ಅಂಜಿಕೆಯ ಮನಸ್ಸಿನಿಂದಲೇ ಸ್ಮಶಾನದೊಳಗೆ ಕಾಲಿರಿಸಿದ. ಕಾಲಿಡಲೂ ಸ್ಥಳವಿಲ್ಲದಂತಿತ್ತು; ಹತ್ತಿರ ಹತ್ತಿರದಲ್ಲೇ ಸತ್ತವರನ್ನು ಹೂತಿದ್ದರು. ಚಿಕ್ಕತಾಯಮ್ಮನಿಗೆ ಬೇಕಾಗುವಷ್ಟು ಜಾಗ ಎಲ್ಲೂ ಕಾಣಲಿಲ್ಲ. ಅಲ್ಲೇ ಸಮಾಧಿಯೊಂದರ ಮೇಲೆ ಮಲಗಿದ್ದ ಒಬ್ಬಾತ ತಮ್ಮಯ್ಯನನ್ನೇ ನೋಡುತ್ತಿದ್ದು 'ಏನು ಬೇಕು ?' ಎಂದು ಕೇಳಿದ. ತಮ್ಮಯ್ಯ ಆತನನ್ನು ಗಮನಿಸಿರಲೇ ಇಲ್ಲ. ಆತನ ದನಿಗೆ ಬೆಚ್ಚಿಬಿದ್ದು, ಸಾವರಿಸಿಕೊಂಡು 'ಏನಿಲ್ಲ' ಎಂದ. 'ಮತ್ಯಾಕೆ ಇಲ್ಲಿ ಓಡಾಡ್ತಿದೀಯ? ನೀನೇನು ಮೂಳೆಗೀಳೆ ಕದಿಯೋವೋನು ಅಲ್ಲ ತಾನೆ?' ಮತ್ತೆ ಆ ವ್ಯಕ್ತಿ ಗಡಸು ದನಿಯಲ್ಲಿ ಕೇಳಿದ. ತಮ್ಮಯ್ಯನಿಗೆ ಆಶ್ಚರ್ಯವೂ ಭಯವೂ ಒಟ್ಟಿಗೇ ಆಯಿತು. 'ಮೂಳೇನೂ ಕದೀತಾರ?' ಕುತೂಹಲದಿಂದ ಕೇಳಿದ. 'ಯಾಕೆ ಹರಿಶ್ಚಂದ್ರ ಘಾಟ್‌ನಲ್ಲಿ ತಲೆಬುರುಡೆ, ಮೂಳೆಗಳನ್ನು ಕದ್ದು ಮೆಡಿಕಲ್ ಸ್ಟೂಡೆಂಟ್ಸ್‌ಗೆ ಮಾರೋದು ಪೇಪರ್‌ನಲ್ಲಿ ಬಂದಿತ್ತಲ್ಲಾ, ನಿನಗೆ ಗೊತ್ತಿಲ್ವಾ?' ಎಂದು ಹೇಳುತ್ತಾ ಆ ವ್ಯಕ್ತಿ ಎದ್ದು ಕೂತ. ತಮ್ಮಯ್ಯನಿಗೆ ಅಲ್ಲಿ ನಿಲ್ಲಲು ಎಂಥದೋ ಭಯವಾಗಿ ಹೊರನಡೆದ.

ಅಲ್ಲಿಂದ ಪಕ್ಕದಲ್ಲಿದ್ದ ಕ್ರಿಮೆಟೋರಿಯಂನೆಡೆಗೆ ನಡೆದ. ಅಲ್ಲಿ ಬಹಳಷ್ಟು ಜನ ನೆರೆದಿದ್ದರು. 'ಯಾರೋ ಸತ್ತೋಗವ್ರೆ' ಎಂದುಕೊಂಡ. 'ಕರೆಂಟ್'ನಲ್ಲಿ ಸುಡುವುದನ್ನು ತಮ್ಮಯ್ಯ ಎಂದೂ ನೋಡಿರಲಿಲ್ಲ, ಕೇಳಿದ್ದ ಅಷ್ಟೆ. ಅಷ್ಟೊಂದು ಜನ ನೆರೆದಿದ್ದರೂ ಎಂಥದೋ ಅಘೋಷಿತ ಮೌನವಿತ್ತು. ಜನ ಪಿಸುಪಿಸು ಮಾತನಾಡುತ್ತಿದ್ದರು. ಅವರ ನಡುವೆಯೇ ತಮ್ಮಯ್ಯ ಮುನ್ನಡೆದ. ಅಲ್ಲಿ ಒಂದು ಶವವನ್ನು ಬಿಳಿಬಟ್ಟೆಯಲ್ಲಿ ಹೊದಿಸಿ ಮಲಗಿಸಿದ್ದರು. ಅದರ ಪಕ್ಕದಲ್ಲಿ ಹೆಂಗಸರು ಅಳುತ್ತಿದ್ದರು. ಜನ ಒಬ್ಬೊಬ್ಬರಾಗಿ ಸಾಂಬ್ರಾಣಿ ಹೊಗೆ ಹಾಕಿ ಕೈಮುಗಿದು ಪಕ್ಕಕ್ಕೆ ಸರಿದು ಮತ್ತೊಬ್ಬರಿಗೆ ಅವಕಾಶ ಮಡಿಕೊಡುತ್ತಿದ್ದರು. ಏನೂ ಮಾಡಲು ತೋಚದೆ ತಮ್ಮಯ್ಯ ಅಲ್ಲೆ ಕಟ್ಟೆಯ ಮೇಲೆ ಕೂತು ಎಲ್ಲ ನೋಡತೊಡಗಿದ. ಸ್ವಲ್ಪ ಹೊತ್ತಾದ ಮೇಲೆ ಯಾರೋ ಏರು ದನಿಯಲ್ಲಿ 'ಎಲ್ಲರೂ ಸಾಂಬ್ರಾಣಿ ಹಾಕಿದ್ರ ಆಯಿತಾ?' ಎಂದು ಕೂಗಿದರು. 'ಆಯ್ತು ಆಯ್ತು . ಟೈಂ ಆಯ್ತು ಬೇಗ ತಗೊಂಡು ನಡೀರಿ ಎಂದರು. ಒಂದಷ್ಟು ಜನ ಶವವನ್ನು ಎಯ್ಯಲು ಮುಂದೆ ಬಂದರು. ಶವವನ್ನು ಮೇಲೆತ್ತಲು ತೊಡಗಿದಂತೆ ಪಕ್ಕದಲ್ಲಿದ್ದ ಹೆಂಗಸರ

ಗೋಳಾಟ ಜೋರಾಯಿತು. ಒಬ್ಬಾಕೆ ಆ ಶವದ ಮೇಲೆಯೇ ಮುನ್ನುಗಿದಳು. ಪಕ್ಕದಲ್ಲಿದ್ದ ಹೆಂಗಸರು ಆಕೆಯನ್ನು ಬಿಗಿಯಾಗಿ ಹಿಡಿದುಕೊಂಡರು. ತಮ್ಮಯ್ಯ ಆ ಜನರ ಜೊತೆಯೇ ಒಳಗೆ ಪ್ರವೇಶಿಸಿದ. ಒಳಗೆ ಮತ್ತೊಂದು ಕೋಣೆಯಿತ್ತು. ಶವವನ್ನು ಹೊರಗಡೆ ಕೋಣೆಯಲ್ಲಿಯೇ ಇರಿಸಿದರು. ಅಲ್ಲಿಯೂ ಎಂಥದೋ ಶಾಸ್ತ್ರಗಳನ್ನು ಮಾಡಿದರು. ಕೆಲವೊಬ್ಬರು ಒಳಗಡೆಯ ಕೋಣೆಯೊಳಕ್ಕೆ ಹೋಗುತ್ತಿದ್ದರು. ತಮ್ಮಯ್ಯನೂ ಅಲ್ಲಿಗೆ ಹೊರಟ. ಆ ಕೋಣೆ ಬಿಸಿಬಿಸಿಯಗಿತ್ತು; ಎಂಥದೋ ಕಮಟು ವಾಸನೆ. ಅದಕ್ಕೇ ಇದನ್ನು 'ಕಮಟೋರಿಯಾ' ಎನ್ನಾರೇನೋ ಎಂದುಕೊಂಡ. ಮಧ್ಯೆ ಒಂದು ಗೂಡಿನಂತಿದ್ದು ಅದರ ಮುಂದುಗಡೆ ರೈಲ್ವೇ ಹಳಿಯಂತಿತ್ತು. ಆ ಗೂಡಿನ ಮಧ್ಯಭಾಗಲ್ಲಿ ಕಿರಿದಾದ ಬಾಗಿಲೊಂದಿದ್ದು ಅದನ್ನು ಕಬ್ಬಿಣದ ಬಾಗಿಲಿನಿಂದ ಮುಚ್ಚಿತ್ತು. ಶವವನ್ನು ಒಳಕ್ಕೆ ತಂದರು. ಅಲ್ಲಿ ನಿಂತಿದ್ದ ಒಬ್ಬಾತ 'ಇಲ್ಲಿಡಿ' ಎಂದು ತೋಲಿಸಿದ. ಶವವನ್ನು ಕಬ್ಬಿಣದ ಸ್ಟ್ರೆಚರ್‌ನಂತಿದ್ದ ಹಲಗೆಯ ಮೇಲೆ ಮಲಗಿಸಿದರು. ಆಸ್ಪತ್ರೆಯಲ್ಲಿ ಚಿಕ್ಕತಾಯಮ್ಮನನ್ನು ಅಂಥದೇ ಸ್ಟ್ರೆಚರ್ ಮೇಲೆ ಸಾಗಿಸಿದ್ದುದು ತಮ್ಮಯ್ಯನಿಗೆ ನೆನಪಾಯಿತು. ಕೋಣೆಯಲ್ಲಿ ನೂಕುನುಗ್ಗಲಾಟ ಹೆಚ್ಚಾಯಿತು. ಶವವನ್ನು 'ಇಲ್ಲಿಡಿ' ಎಂದು ತೋರಿಸಿದಾತ ಯವುದೋ ಕಂಬಿಯನ್ನು ಜೋರಾಗಿ ಎಳೆದ. ಗೂಡಿನ ಕಬ್ಬಿಣದ ಬಾಗಿಲು ತೆರೆದುಕೊಂಡಿತು. ಒಳಗಡೆ ಬೆಂಕಿ ಧಗಧಗ ಉರಿಯುತ್ತಿತ್ತು. 'ಜಾಗಬಿಡಿ, ಜಾಗಬಿಡಿ' ಎಂದು ಶವದ ಒಂದು ಕೊನೆಗೆ ಬಂದು ಕಬ್ಬಿಣದ 'ಸ್ಟ್ರೆಚರ್' ಅನ್ನು ಜೋರಾಗಿ ತಳ್ಳಲು ಮುಂದಾದ. ನೆರೆದಿದ್ದ ಜನ ಎಲ್ಲಾ 'ಗೋವಿಂದಾ, ಗೋವಿಂದಾ' ಎಂದು ಕೂಗಿದರು. ಶವ ಒಳಗೆ, ಬೆಂಕಿಯ ಜ್ವಾಲೆಗಳೊಳಗೆ ಹೋಯಿತು. ಕ್ಷಣದಲ್ಲೇ ಶವಕ್ಕೆ ಹೊದಿಸಿದ್ದ ಬಟ್ಟೆ, ಹೂಗಳೆಲ್ಲಾ ಉರಿಯತೊಡಗಿದವು. ಜನರ 'ಗೋವಿಂದಾ, ಗೋವಿಂದಾ' ತಾರಕಕ್ಕೇರಿತು. ಆ ವ್ಯಕ್ತಿ ಮತ್ತೆ ಆ ಕಂಬಿಯನ್ನು ಎಳೆದ, ಗೂಡಿನ ಬಾಗಿಲು ಮುಚ್ಚಿಕೊಂಡಿತು. ಜನ ಒಬ್ಬೊಬ್ಬರಾಗಿ ಕೈಮುಗಿದು ಹೊರನಡೆಯತೊಡಗಿದರು. ಆ ಕಂಬಿ ಎಳೆದಾತ ಸಂಜೆಬಂದು ಅಸ್ಥಿ ತೆಗೆದುಕೊಳ್ಳಿ ಎನ್ನುತ್ತಿದ್ದ. ಸೆಖೆ, ಕಮಟು ವಾಸನೆ ತಡೆಯದಂತಾಗಿ ತಮ್ಮಯ್ಯ ಹೊರಬಂದ. ಟವೆಲ್ಲಿನಲ್ಲಿ ಮುಖ ಒರೆಸಿಕೊಂಡ. ಅವನಿಗರಿವಿಲ್ಲದಂತೆ ಆತನ ಎದೆಬಡಿತ ಜೋರಾಗಿತ್ತು, ಮೈಯೆಲ್ಲಾ ಬೆವೆತಿತ್ತು. ಮನೆಯ ಕಡೆಗೆ ದಾಪುಗಾಲು ಹಾಕಿದ.

ಸ್ನಾನಮಾಡಿ ಸಂಜೆ ಹೊರಗೆ ಕೂತ್ತಿದ್ದಾಗ ಎಲ್ಲವನ್ನೂ ಚಿಕ್ಕತಾಯಮ್ಮನಿಗೆ ಹೇಳಬೇಕೆನ್ನಿಸಿತು. ಆಕೆಯೂ ತಮ್ಮಯ್ಯ ಹಿಂದಿರುಗಿದಾಗಿನಿಂದ ಏನೂ ಮಾತನಾಡಿರಲಿಲ್ಲ. ಹೊರಗಡೆ ಬಂದು ಒಂದು ಬೀಡಿ ಸೇದಿ ತುಂಡನ್ನು ಎಸೆದು ಒಳಹೊರಟ. ಇವನ ಹೆಜ್ಜೆ ಸದ್ದು ಕೇಳಿ ಚಿಕ್ಕತಾಯಮ್ಮ ಕಣ್ಣುತೆರೆದಳು. ಅಲ್ಲೇ ಪಕ್ಕದಲ್ಲೇ ತಮ್ಮಯ್ಯ ಕೂತ. ಇಬ್ಬರೂ ಏನೂ ಮಾತನಾಡಲಿಲ್ಲ.

'ಜಾಗ ನೋಡ್ಕಂಬಂದ್ಯಾ?' ಚಿಕ್ಕತಾಯಮ್ಮ ಕೇಳಿದಳು.

ತಮ್ಮಯ್ಯ ಏನೂ ಹೇಳಲಿಲ್ಲ. ಮುಖ ಪಕ್ಕಕ್ಕೆ ತಿರುಗಿಸಿದ. ಆತನಿಗೆ ಏನೊಂದೂ ಹೇಳಲು ತೋಚಲಿಲ್ಲ.

'ನೀನ್ಯಾಕೆ ಅಷ್ಟೊಂದು ಯೋಚ್ನೆ ಮಾಡ್ತೀಯ? ಏನೂ ಆಗಲ್ಲ ಸುಮ್ಕಿರು' ಎಂದ ಆಕೆಯ ಕಡೆಗೆ ನೋಡದೆ.

'ಮತ್ತೇ ಅದೇ ರಾಗ ಎಳೀತಾ ಇದೀಯಾ. ನಾ ಕೇಳಿದ್ದಕ್ಕೆ ಸುಮ್ನೆ ಉತ್ರ ಹೇಳು. ಸಾಯೋವ್ಳೋಳ್ ನಾನಿದೀನಿ. ನಿನಗೇನ್ ಕಷ್ಟ' ಕೊಂಚ ಗಡುಸಾಗಿಯೇ ಕೇಳಿದಳು ಚಿಕ್ಕತಾಯಮ್ಮ.

ತಮ್ಮಯ್ಯ ಏನೂ ಹೇಳಲಿಲ್ಲ. ಮೇಲೇಳಲು ಹೊರಟ. ಚಿಕ್ಕತಾಯಮ್ಮ ಕೈಚಾಚಿ ಆತನ ಕಾಲುಹಿಡಕೊಂಡಳು.

'ಕೂತ್ಕೋ. ಎಲ್ಲಿಗೆ ಎದ್ದೋಗ್ತೀಯ? ಏನಾಯ್ತು ಹೇಳು' ಮತ್ತೆ ಪ್ರಶ್ನಿಸಿದಳು.

ಕೆಲವರ್ಷಗಳ ಹಿಂದೆಯಷ್ಟೇ ಎಲ್ಲವೂ ಹಚ್ಚ ಹಸುರಾಗಿದ್ದ ಹೊಲಗದ್ದೆಗಳು ಇಂದು ಲೇಔಟು, ಸೈಟುಗಳಾಗುತ್ತಿವೆ. ಭೂಮಿಯೊಳಗಿನ ಫಲವತ್ತಾದ ಮಣ್ಣನ್ನೆಲ್ಲ ಹೊಟ್ಟೆಯೊಳಗಿನ ಕರುಳು ಬಗೆದಂತೆ ಹೊರಹಾಕಿ ರಸ್ತೆ, ಚರಂಡಿ ಮಾಡಿದ್ದಾರೆ. ಆ ರಸ್ತೆ ಚರಂಡಿಗಳಲ್ಲಿ ಆಕೆಯ ಮನೆ, ಅಪ್ಪ ಅಮ್ಮನ ಸಮಾಧಿಗಳೆಲ್ಲವೂ ಮುಳುಗಿ ಹೋಗುತ್ತವೆನ್ನಿಸಿತು. ಬೀಸುವ ತಣ್ಣನೆ ಗಾಳಿ ಮಂಜಿನಿಂದಾಗಿ ಕೊಂಚ ಚಳಿಯೇ ಎನ್ನಿಸಿತು.

ತಮ್ಮಯ್ಯ ಕೂತು ಮತ್ತೆ ಗೋಡೆಗೆ ಒರಗಿದ.

'ಇಲ್ಲ ಬಿಡು, ಆ ಮಶಾಣದಲ್ಲಿ ಜಾಗ ಇಲ್ಲ. ಈಗ ಅಲ್ಲಿ ಯಾರ್‍ನೂ ಹೂಳ್ತಾ ಇಲ್ಲ. ಅಲ್ಲೇ ಕರೆಂಟ್‌ನಲ್ಲಿ ಸುಡತಾರಂತೆ'. ಇಷ್ಟು ಹೇಳುವಷ್ಟರಲ್ಲಿ ತಮ್ಮಯ್ಯನ ಗಂಟಲಲ್ಲಿ ಮಾತು ಹೂತು ಹೋಗುವಂತಾಯಿತು. ಟವೆಲ್ಲಿನಿಂದ ಮುಖ ಒರೆಸಿಕೊಂಡ. ಚಿಕ್ಕತಾಯಮ್ಮನ ಮುಖ ನೋಡಲು ಧೈರ್ಯವೇ ಬರಲಿಲ್ಲ.

ಮಬ್ಬುಗತ್ತಲಲ್ಲಿ ಚಿಕ್ಕತಾಯಮ್ಮ ಅಳುತ್ತಿರುವುದು ಕೇಳಿಸಿತು. ಆಕೆಯೆಡೆಗೆ ನೋಡಿ ಆಕೆಯ ತಲೆಯ ಮೇಲೆ ಕೈ ಆಡಿಸಿದ. ಆಗ ಕೈ ಹಿಡಿದುಕೊಂಡು ಆಕೆ ಇನ್ನೂ ಜೋರಾಗಿ ಅಳಲು ಪ್ರಾರಂಭಿಸಿದಳು.

'ನಮ್ ಜಾತಿ ಎಲ್ಲಾ ನಾಶ ಆಗೋಯ್ತು. ನಾವೇನ್ ಬ್ರಾಂಬರಾ ಸತ್ ಮೇಲೆ ಸುಡಿಸಿಕೊಳ್ಳೋಕೆ? ನಾವೇನ್ ಜಾತಿ ಕೆಟ್ಟಿದ್ದೀವಾ ಸುಟ್ಟು ಬೂದಿ ಆಗೋಕೆ?' ಚಿಕ್ಕತಾಯಮ್ಮ ಅಳುತ್ತಲೇ ಇದ್ದಳು.

ಆಕೆ ಚಿಕ್ಕವಳಾಗಿದ್ದಾಗ ಆಕೆಯ ತಾಯಿ ಹೇಳುತ್ತಿದ್ದುದು ನೆನಪಾಯಿತು. ಆಗ ಊರಿಗೆಲ್ಲಾ ಪ್ಲೇಗ್ ಬಂದಾಗ ಸತ್ತವರನ್ನೆಲ್ಲ ಜಾತಿಗೀತಿ ನೋಡದೆ ಗುಡ್ಡೆ ಹಾಕಿ ಸುಡುತ್ತಿದ್ದರಂತೆ. 'ನಾನೇನ್ ರೋಗಿಷ್ಟೇನಾ ಸುಡೋಕೆ...........'ಎನ್ನಲು ಹೊರಟವಳಿಗೆ ಆಕೆಯೂ ರೋಗಿಷ್ಟೆ ಎನ್ನುವುದು ನೆನಪಾಗಿ ಸುಮ್ಮನಾದಳು. ತಮ್ಮಯ್ಯ ಕೈಬಿಡಿಸಿಕೊಂಡು ಎದ್ದು ಹೊರಬಂದು ಜಗುಲಿಯ ಮೇಲೆ ಕೂತು ಬೀಡಿ ಹಚ್ಚಿದ.

ಅಡಿಗೆ ಮನೆ ಮತ್ತು ರೂಮಿನಲ್ಲಿ ಲೈಟ್‌ಗಳು ಅಫ್ ಆದವು. ವೆಂಕಟೇಶನ ಊಟವಾಗಿರಬಹುದೆಂದುಕೊಂಡ ತಮ್ಮಯ್ಯ 'ನಾನ್ ಕಣ್ಣು ಮುಚ್ಚೋ ಮೊದಲು ಒಂದ್ ಮದ್ವೆ ಆಗಿ ಸೊಸೇನ್ ಮನೇಗ್ ಕರ್‍ಕೊಂಡು ಬಾ' ಎಂದು ಆಗಾಗ ಗೋಗರೆಯುತ್ತಿದ್ದಳು ಚಿಕ್ಕತಾಯಮ್ಮ. 'ನಾನು ಟ್ಯಾಕ್ಸಿ ತಗೊಳ್ಳೋವರ್‍ಗೂ ಮದ್ವೆ ಆಗಲ್ಲ' ಎನ್ನುತ್ತಿದ್ದ ವೆಂಕಟೇಶ. ಅವನು ಮದುವೆ ಮುಂದೂಡಲು ಅದೊಂದೇ ಕಾರಣ ಅಲ್ಲ ಅಂತ ತಮ್ಮಯ್ಯನಿಗೆ ಗೊತ್ತಿತ್ತು. 'ಮದ್ವೇ ಆಗಿ ಹೆಂಡ್ತೀ ಮನೇಗ್ ಬಂದ್ರೆ ಅವಳು ಅಮ್ಮನ ರಕ್ತದ ಬಟ್ಟೆಗಳು ಒಗೆಯೋದರ ಜೊತೆಗೆ ಅವಳ ಗಲೀಜು ಬಟ್ಟೆಗಳನ್ನೂ ಒಗೀಬೇಕಾಗ್ತದೆ ಅಂತ ಅವನಿಗೆ ಗೊತ್ತಿದೆ" ಎಂದು ತಮ್ಮಯ್ಯ ಯೋಚಿಸುತ್ತಿದ್ದ. ಹಾಗೇ ಯೋಚನೆಯಲ್ಲಿ ಯಾವಾಗ ಕಣ್ಣು ಮುಚ್ಚಿತೋ ಗೊತ್ತಿಲ್ಲ, ಕಣ್ಣುಬಿಟ್ಟಾಗ ಬೆಳಕಾಗಿತ್ತು. ಎದ್ದು ಹೆಂಡತಿಯ ಬಳಿ ಹೋದ. ಅವಳನ್ನು ಬಚ್ಚಲು ಮನೆಗೆ ಕರೆದುಕೊಂಡು ಹೋಗಿ , ಮೈ ತೊಳೆದು ಬಟ್ಟೆ ಬದಲಿಸಬೇಕು. ಇಬ್ಬರೂ ಮಾತನಾಡಲಿಲ್ಲ. ಬೇರೆ ಬಟ್ಟೆ ತೊಡಿಸುತ್ತಿದ್ದಾಗ ಚಿಕ್ಕತಾಯಮ್ಮ ಹೇಳಿದಳು,

'ನನ್ನ ಅಮ್ಮ ಅಪ್ಪನ ಸಮಾಧಿ ಹತ್ರ ಕರೆದುಕೊಂಡು ಹೋಗು. ಕರೆದುಕೊಂಡು ಹೋಗೋದೆಲ್ಲಿ, ಎತ್ತಿಕೊಂಡು ಹೋಗಬೇಕು. ಹೇಗೆ ಅಂತ ತಮ್ಮಯ್ಯ ಯೋಚಿಸುವಷ್ಟರಲ್ಲಿ ಆಕೆಯೇ ಹೇಳಿದಳು, 'ವೆಂಕಟೇಶನ್ನ ಎಬ್ಬಿಸು. ಅವನ ಆಟೋ ಅಲ್ಲೀವರ್‍ಗೆ ಹೋಗ್ತದೆ' ಎಂದಳು.

ತಮ್ಮಯ್ಯ ಆಕೆಯನ್ನು ಹೊತ್ತು ತಂದು ಜಗುಲಿಯ ಮೇಲೆ ದಿಂಬಿಟ್ಟು ಒರಗಿಸಿ ಕಂಬಳಿ ಹೊದೆಸಿ ಮಗನನ್ನು ಎಬ್ಬಿಸಿ ಕರೆತಂದರು. ವೆಂಕಟೇಶನಿಗೂ ಬೆಳಬೆಳಿಗ್ಗೆ ಆಕೆಯ ಆಸೆ ಅರ್ಥವಾಗಲಿಲ್ಲ. ಹಳ್ಳಿಯ ಕಲ್ಲುಮಣ್ಣಿನ ರಸ್ತೆ ಚಿಕ್ಕತಾಯಮ್ಮನ ಮೈಯನ್ನು ಅಲುಗಾಡಿಸಿಹಾಕಿತು. ಆಕೆಯ ಹೊಟ್ಟೆಯೊಳಗೆ ಕಲ್ಲಿನಿಂದ ಜಜ್ಜಿದಂತೆ ನೋವಾಗುತ್ತಿತ್ತು. ತುಟಿಕಚ್ಚಿ ನೋವು ತಡೆದಳು. ಆಕೆಯ ಅಮ್ಮ ಅಪ್ಪನ ಸಮಾಧಿಯ ಪಕ್ಕದಲ್ಲಿನ ಜಗುಲಿಯ ಮೇಲೆ ತಂದಿದ್ದ ದಿಂಬನ್ನು ಇಟ್ಟು ಆಕೆಯನ್ನು ಒರಗಿಸಿ ತಮ್ಮಯ್ಯ ಬೀಡಿ ಸೇದಲು ಒಂದಷ್ಟು ದೂರದಲ್ಲಿ ಕೂತ. ವೆಂಕಟೇಶ ಆಟೋ ನಿಲ್ಲಿಸಿ ಪೊದೆಗಳ ಹಿಂದೆ ಹೋದ.

ಬೆಳಗಿನ ಮಂಜು ಸಂಪೂರ್ಣವಾಗಿ ಹೋಗಿರಲಿಲ್ಲ. ದೂರದ ಎಲ್ಲವೂ ಮಸಕು ಮಸುಕು. ಚಿಕ್ಕತಾಯಮ್ಮನಿಗೆ ಆ ಜಮೀನಿನಲ್ಲಿ ಸಾವಿರಾರು ಬಾರಿ ಓಡಾಡಿದ್ದರೂ ಆಕೆಗೆ ಆ ದಿನ ಎಲ್ಲ ಹೊಸದಾಗಿ ಕಾಣಿಸುತ್ತಿತ್ತು. ಕಾಯಿಲೆ ಬಿದ್ದು ಹಾಸಿಗೆ ಹಿಡಿದಾಗಿನಿಂದ ಆಕೆ ಇಲ್ಲಿಗೆ ಬಂದಿರಲಿಲ್ಲ. ಸುತ್ತಮುತ್ತಲೂ ಹೊಲಗದ್ದೆಗಳಿದ್ದರೂ ಎಲ್ಲವೂ ಬೀಳುಬಿದ್ದಿದ್ದವು. ಕೆಲವರ್ಷಗಳ ಹಿಂದೆಯಷ್ಟೇ ಎಲ್ಲವೂ ಹಚ್ಚ ಹಸುರಾಗಿದ್ದ ಹೊಲಗದ್ದೆಗಳು ಇಂದು ಲೇಔಟು, ಸೈಟುಗಳಾಗುತ್ತಿವೆ. ಭೂಮಿಯೊಳಗಿನ ಫಲವತ್ತಾದ ಮಣ್ಣನ್ನೆಲ್ಲ ಹೊಟ್ಟೆಯೊಳಗಿನ ಕರುಳು ಬಗೆದಂತೆ ಹೊರಹಾಕಿ ರಸ್ತೆ, ಚರಂಡಿ ಮಾಡಿದ್ದಾರೆ. ಆ ರಸ್ತೆ ಚರಂಡಿಗಳಲ್ಲಿ ಆಕೆಯ ಮನೆ, ಅಪ್ಪ ಅಮ್ಮನ ಸಮಾಧಿಗಳೆಲ್ಲವೂ ಮುಳುಗಿ ಹೋಗುತ್ತವೆನ್ನಿಸಿತು. ಬೀಸುವ ತಣ್ಣನೆ ಗಾಳಿ ಮಂಜಿನಿಂದಾಗಿ ಕೊಂಚ ಚಳಿಯೇ ಎನ್ನಿಸಿತು. ಹೊದೆದುಕೊಂಡಿದ್ದ ಕಂಬಳಿಯನ್ನು ಇನ್ನಷ್ಟು ಬಿಗಿಗೊಳಿಸಿಕೊಂಡು ಗುಬ್ಬಚ್ಚಿಯಂತಾದಳು. ಲೇಔಟುಗಳಾಗುತ್ತಿದ್ದ ಹೊಲಗದ್ದೆಗಳೆಲ್ಲವೂ ಚಿಕ್ಕತಾಯಮ್ಮನಿಗೆ ಒಂದು ದೊಡ್ಡ ಸ್ಮಶಾನದಂತೆ ಕಾಣಿಸತೊಡಗಿತು, ಸೈಟುಗಳನ್ನು ಗುರುತಿಸಲು ಹಾಕಿರುವ ಕಲ್ಲುಗಳು ಸಮಾಧಿಯ ತಲೆ ಕಲ್ಲುಗಳ ಹಾಗೆ............. □

ರಾಷ್ಟ್ರನಾಯಕಿ ಮಾಯಾವತಿ ರಾಜಕೀಯ ಒಳನೋಟ

ಕೆಲವೇ ವಾರಗಳ ಹಿಂದೆ ಉತ್ತರಪ್ರದೇಶದ ಮುಖ್ಯಮಂತ್ರಿ ಮಾಯಾವತಿಯವರು ಸಾರ್ವಜನಿಕ ಸಭೆಯೊಂದರಲ್ಲಿ 'ನಾನು ಈ ದೇಶದ ಪ್ರಧಾನಿಯಾಗುವುದನ್ನು ಯಾರೂ ತಡೆಯಲಾರರು' ಎಂದು ಘಂಟಾಘೋಷವಾಗಿ ಉದ್ಗರಿಸಿದ್ದು ಒಬ್ಬ ದಲಿತ ಮಹಿಳೆಯ ನಾಯಕತ್ವದಲ್ಲಿರುವ ಆತ್ಮವಿಶ್ವಾಸಕ್ಕೆ ಕೈಗನ್ನಡಿಯಾಗಿದೆ. ಹಿಂದೆ, ಯು.ಪಿ.ಎ. ಸರ್ಕಾರವನ್ನು ಪತನಗೊಳಿಸಲು ಅವರು ನಡೆಸಿದ ರಾಜಕೀಯ ತಂತ್ರಗಳು ವೈಫಲ್ಯಗೊಂಡರೂ 'ಪ್ರಧಾನಿ'ಯಾಗುವ ಕನಸು ಮಾತ್ರ ಹಚ್ಚಹಸಿರೇ ಆಗಿದೆ. ಹಲವರು ಮಾಯಾವತಿಯವರ ಮಾತುಗಳನ್ನು ಹಾಸ್ಯಾಸ್ಪದವೆಂದು ಹಗುರ ನಿರ್ಲಕ್ಷ್ಯ ಮಾತುಗಳಿಂದ ಗೇಲಿಮಾಡಿದ್ದೂ ನಿಜ. ಮತ್ತೆ ಕೆಲವು ಬೆಂಬಲಿಗರು ನಾಲ್ಕು ಬಾರಿ ಉತ್ತರಪ್ರದೇಶದ ಮುಖ್ಯಮಂತ್ರಿಯಾದ ಮಾಯಾವತಿಯವರು 'ಪ್ರಧಾನಿ' ಏಕಾಗಬಾರದು ಎಂಬ ಸವಾಲುಗಳನ್ನು ಹಾಕಿದರು. ಏನೇ ಇರಲಿ, ಅವರ ಈ ಕನಸಿನ ಹಿಂದೆ ಕೆಲವು ಗಂಭೀರವಾಗಿ ಆಲೋಚಿಸಬೇಕಾದ ವಿಷಯಗಳಿವೆ.

ಮಾಯಾವತಿಯವರು ರಾಷ್ಟ್ರಮಟ್ಟದ ನಾಯಕಿಯಾಗಿ ಬೆಳೆಯಲು ಮುಂದಾದುದು ಒಬ್ಬ ದಲಿತ ಮಹಿಳೆಯ ಅದ್ವಿತೀಯ ಸಾಧನೆ. ಭಾರತವು ಜಗತ್ತಿನ ಅತೀ ದೊಡ್ಡ ಪ್ರಜಾಪ್ರಭುತ್ವಗಳಲ್ಲಿ ಒಂದು. ಅಂತಹ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶ್ರೇಣೀಕೃತ ಬ್ರಾಹ್ಮಣೀಕರಣದ ಕೆಳವರ್ಗಕ್ಕೆ ಸೇರಿದ ಮಹಿಳೆಯೊಬ್ಬರು ಪ್ರಧಾನಿಯಾಗುತ್ತೇನೆ ಎಂಬ ಉತ್ಕೃಷ್ಟ ಗುರಿಯನ್ನು ಇಟ್ಟುಕೊಂಡಿರುವುದು ಅವರ ನಾಯಕತ್ವದ ಸಾಮರ್ಥ್ಯವನ್ನು ಸೂಚಿಸುತ್ತದೆ. ಇದರಲ್ಲಿ ಎರಡು ರೀತಿಯ ಪ್ರಾಮುಖ್ಯತೆಗಳಿವೆ. ೧) ಈ ದೇಶದಲ್ಲಿ ಲಿಂಗಭೇದದ ಹಿನ್ನೆಲೆಯಿಂದ ಮಹಿಳೆಯರು ಉನ್ನತ ಸ್ಥಾನಮಾನಕ್ಕೇರುವ ಆಶಯಗಳನ್ನು ಹೊಂದಿರುವುದು ಕಡಿಮೆ. ೨) ದುರ್ಬಲ ವರ್ಗದ ಜನರಿಗೆ ರಾಷ್ಟ್ರಮಟ್ಟದ ನಾಯಕತ್ವವನ್ನು ಪಡೆಯಲು ಎದುರಾಗುವ ಅಡಚಣೆಗಳು. ಡಾ. ಅಂಬೇಡ್ಕರವರು ಒಂದು ಮಾತು ಹೇಳಿದ್ದರು. 'ಒಂದು ಪ್ರಜಾಪ್ರಭುತ್ವ ದೇಶದಲ್ಲಿ ಮಾನವ ಸಂಪನ್ಮೂಲಗಳನ್ನು ನೈಜತೆಯಿಂದ ಬಳಸಿಕೊಳ್ಳಬೇಕಾದರೆ ಅದು ಕೆಳಸ್ತರದ ಜನರಿಂದಲೇ ಆರಂಭವಾಗಬೇಕು.' ನಮ್ಮ ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಮತ್ತು ದಲಿತರನ್ನು ದುರ್ಬಲ ವರ್ಗವೆಂದು ಅಂಬೇಡ್ಕರವರು ಪರಿಗಣಿಸಿದ್ದರು. ಈ ಹಿನ್ನೆಲೆಯಿಂದ ಮಾಯಾವತಿಯವರು ರಾಜಕೀಯ ಮತ್ತು ಪ್ರಸ್ತುತ ಸಾಮಾಜಿಕ ವ್ಯವಸ್ಥೆಯಲ್ಲಿ ಹಲವು ಅಡೆತಡೆಗಳನ್ನು ಮೀರಿ ದಲಿತರ ರಾಷ್ಟ್ರಮಟ್ಟದ ನಾಯಕಿಯಾಗಿ ಬೆಳೆದಿರುವುದು ಅತ್ಯಂತ ಪ್ರಶಂಸನೀಯವೇ ಸರಿ.

ನಮ್ಮ ದೇಶದಲ್ಲಿ ಧರ್ಮದ ಹೆಸರಿನಲ್ಲಿ ಸ್ವೀಕರಿಸಲ್ಪಟ್ಟ ಕೆಲವು ಆಯ್ದ ಆಚಾರ-ವಿಚಾರಗಳು, ಸಾಮಾಜಿಕ ನಿಯಮಗಳು, ಹುಟ್ಟಿನ ಆಧಾರದಲ್ಲಿ ವ್ಯಕ್ತಿಯ ಸ್ಥಾನಮಾನಗಳನ್ನು ಅಳೆಯುವ ಪ್ರವೃತ್ತಿ ಮುಂತಾದವುಗಳು ದುರ್ಬಲ ವರ್ಗದವರನ್ನು ಮೂಲೆಗುಂಪಾಗಿಸಿದ್ದು ಐತಿಹಾಸಿಕವಾಗಿ ನಡೆದು ಹೋದ ದುರಂತಕ್ಕೆ ಸಾಕ್ಷಿ. ಹಿಂದೆ ಮಹಿಳೆಯರು, ಅದರಲ್ಲೂ ದಲಿತ ಮಹಿಳೆಯರು ಸಾರ್ವಜನಿಕವಾಗಿ ದಿಟ್ಟ ಮನಸ್ಸಿನಿಂದ ಮಾತಾಡುತ್ತಿದ್ದುದೇ ಅಪರೂಪ; ಆ ಹಿಂಜರಿಯುವಿಕೆ ಸಾಮಾಜಿಕ ವಾಸ್ತವಕ್ಕೆ ಹಿಡಿದ ಕೈಗನ್ನಡಿಯಾಗಿತ್ತು. ಮಹಿಳೆಯರನ್ನು, ದಲಿತರನ್ನು ದಮನಿಸಿದ ವ್ಯವಸ್ಥೆಯಲ್ಲಿ ದೇಶದ ಪ್ರಧಾನಿಯಾಗುವ ಕನಸು, ಹಂಬಲಗಳು ಮರೀಚಿಕೆಯಾಗಿದ್ದವು.

ಸ್ವಾತಂತ್ರ್ಯ ಬಂದ ಮೇಲೂ ಮೇಲುನೋಟಕ್ಕೆ ಸಮಾನತೆ, ಸ್ವಾತಂತ್ರ್ಯ ಹಕ್ಕುಗಳು ಅನುಷ್ಠಾನಗೊಂಡಂತೆ ಕಂಡರೂ, ಸಮಾಜದ ಅಂತರಂಗ ಇಂದಿಗೂ ಅಸಮಾನತೆ, ಜಾತಿ ವ್ಯವಸ್ಥೆಯೊಳಗಿನ ಶ್ರೇಷ್ಠ-ಕನಿಷ್ಠ ಪರಿಕಲ್ಪನೆಗಳಿಂದ ಸಂಪೂರ್ಣ ಹೊರಬಂದಿಲ್ಲ. ಆ ಪರಿಸ್ಥಿತಿಯೊಳಗೆ ಮಾಯಾವತಿ ಪ್ರಭಾವಶಾಲಿ ನಾಯಕಿಯಾಗಿ ರೂಪುಗೊಂಡು, ರಾಜಕೀಯ ಸಂಸ್ಥೆ ಮತ್ತು ಪ್ರಗತಿಪರ ಕಾರ್ಯಗಳಲ್ಲಿ ಸ್ಪಂದನ ತೋರಿದ್ದು ಸಾಂಪ್ರದಾಯಕ ಸಾಮಾಜಿಕ ಚಿಂತನೆಗೆ ದೊಡ್ಡ ಸವಾಲು. ಒಬ್ಬ ದಲಿತಳಾಗಿ, ಮಹಿಳೆಯಾಗಿ ಸಮಾಜದ ಮುಖ್ಯವಾಹಿನಿಗೆ ಒಂದು ರಾಜಕೀಯ ವಲಯದಲ್ಲಿ ಭದ್ರ ತಳವೂರಿದ ಅವರನ್ನು ಸಮರ್ಥ ನಾಯಕಿಯೆಂದು ಒಪ್ಪಿಕೊಳ್ಳಬೇಕಾಗಿರುವುದು ಅನಿವಾರ್ಯ.

ಮಾಯಾವತಿಯವರು ಪ್ರಧಾನಿಯಾಗುವ ಕನಸು ಇನ್ನೊಂದು ರೀತಿಯಲ್ಲಿ ಬಹಳ ಮಹತ್ವವನ್ನು ಪಡೆಯುತ್ತದೆ. ಸ್ವಾತಂತ್ರ್ಯ ಬಂದ ದಿನದಿಂದ ಕಾಂಗ್ರೆಸ್ 'ನೆಹರೂ ಡೈನಾಸ್ಟಿ' ಆಳ್ವಿಕೆಯನ್ನು ಸಂಪೂರ್ಣ ಸ್ವೀಕರಿಸಿಕೊಂಡಿದೆ. ನೆಹರೂ ಕುಟುಂಬದ ಸದಸ್ಯರ ಭಾಗವಹಿಸುವಿಕೆ ಇಲ್ಲದಿದ್ದರೆ ಈ ದೇಶದ ರಾಜಕೀಯವೇ ನಡೆಯುವುದಿಲ್ಲವೇನೋ ಎಂಬ ಮನೋಭಾವ ಸರ್ವ ಸಮ್ಮತವಾಗಿದೆ. ನಾಯಕತ್ವದಲ್ಲಿ ನಿರೀಕ್ಷಿಸಬಹುದಾದ ಬೌದ್ಧಿಕಶಕ್ತಿ, ನಿಷ್ಠೆ, ಚರಿಷ್ಮಾ ಮುಂತಾದವುಗಳು ನೆಹರೂ ಕುಟುಂಬದ ಖಾಸಗಿ ಸೊತ್ತು ಎಂದು ಪರಿಭಾವಿಸುವ ಜನತೆ ಸರ್ಕಾರದ ಉನ್ನತ ಸ್ಥಾನಗಳಿಗೆ ಅವರೇ ಸರಿ ಎಂದು ತೀರ್ಮಾನಿಸಿರುವುದು ಗಮನಾರ್ಹ. ದುರ್ಬಲ ವರ್ಗದ ಮಹಿಳೆಯೊಬ್ಬರು ನೆಹರೂ ಹಿಂದೆ ಆಕ್ರಮಿಸಿಕೊಂಡ ಸ್ಥಾನಕ್ಕೆ ಸ್ಪರ್ಧಿಯಾಗುತ್ತೇನೆ ಎಂದು ಉದ್ಗರಿಸಿದ್ದು ಮಾಯಾವತಿಯವರ ರಾಜಕೀಯ ಅರಿವು ಮತ್ತು ಆತ್ಮ ವಿಶ್ವಾಸವನ್ನು ಅಭಿವ್ಯಕ್ತಿಪಡಿಸುತ್ತದೆ.

ಡಾ. ಸುಲೋಚನ ನಾರಾಯಣ್

ಮಾಯಾವತಿಯವರು ಪ್ರಧಾನಿಯಾಗುವ ಕನಸು ಇನ್ನೊಂದು ರೀತಿಯಲ್ಲಿ ಬಹಳ ಮಹತ್ವವನ್ನು ಪಡೆಯುತ್ತದೆ. ಸ್ವಾತಂತ್ರ್ಯ ಬಂದ ದಿನದಿಂದ ಕಾಂಗ್ರೆಸ್ 'ನೆಹರೂ ಡೈನಾಸ್ಟಿ' ಆಳ್ವಿಕೆಯನ್ನು ಸಂಪೂರ್ಣ ಸ್ವೀಕರಿಸಿಕೊಂಡಿದೆ. ನೆಹರೂ ಕುಟುಂಬದ ಸದಸ್ಯರ ಭಾಗವಹಿಸುವಿಕೆ ಇಲ್ಲದಿದ್ದರೆ ಈ ದೇಶದ ರಾಜಕೀಯವೇ ನಡೆಯುವುದಿಲ್ಲವೇನೋ ಎಂಬ ಮನೋಭಾವ ಸರ್ವ ಸಮ್ಮತವಾಗಿದೆ. ನಾಯಕತ್ವದಲ್ಲಿ ನಿರೀಕ್ಷಿಸಬಹುದಾದ ಬೌದ್ಧಿಕಶಕ್ತಿ, ನಿಷ್ಠೆ, ಚರಿಷ್ಮಾ ಮುಂತಾದವುಗಳು ನೆಹರೂ ಕುಟುಂಬದ ಖಾಸಗಿ ಸೊತ್ತು ಎಂದು ಪರಿಭಾವಿಸುವ ಜನತೆ ಸರ್ಕಾರದ ಉನ್ನತ ಸ್ಥಾನಗಳಿಗೆ ಅವರೇ ಸರಿ ಎಂದು ತೀರ್ಮಾನಿಸಿರುವುದು ಗಮನಾರ್ಹ. ದುರ್ಬಲ ವರ್ಗದ ಮಹಿಳೆಯೊಬ್ಬರು ನೆಹರೂ ಹಿಂದೆ ಆಕ್ರಮಿಸಿಕೊಂಡ ಸ್ಥಾನಕ್ಕೆ ಸ್ಪರ್ಧಿಯಾಗುತ್ತೇನೆ ಎಂದು ಉದ್ಗರಿಸಿದ್ದು ಮಾಯಾವತಿಯವರ ರಾಜಕೀಯ ಅರಿವು ಮತ್ತು ಆತ್ಮ ವಿಶ್ವಾಸವನ್ನು ಅಭಿವ್ಯಕ್ತಿಪಡಿಸುತ್ತದೆ. ಇದು ನಮ್ಮ ದೇಶದ ಪ್ರಜಾಪ್ರಭುತ್ವಕ್ಕೆ ನಿಜವಾದ ಅರ್ಥವನ್ನು ನೀಡುತ್ತದೆಯಲ್ಲದೆ ಒಂದು ಆರೋಗ್ಯಕರ ಬೆಳವಣಿಗೆಯಾಗಿದೆ.

ಆರೋಪಗಳು ರಾಜಕಾರಣದಲ್ಲಿ ತಪ್ಪಿದ್ದಲ್ಲ. ಮಾಯಾವತಿಯವರ ವ್ಯಕ್ತಿತ್ವ ಮೃದುವಾಗಿಲ್ಲ, ಸೌಮ್ಯವಾದ ಹಾವಭಾವಗಳಿಲ್ಲವೆಂದು ಕೆಲವರ ಅನಿಸಿಕೆ. ಈ ಅನಿಸಿಕೆಯು ಭಾರತೀಯ ಸಂಸ್ಕೃತಿಯು ರೂಪಿಸಿದ ಮಹಿಳೆಯಿಂದ ಇರಬಹುದಾದ ನಿರೀಕ್ಷೆಗಳವು. ಪುರುಷ ಪ್ರಧಾನ ವ್ಯವಸ್ಥೆಯು ರೂಢಿಸಿದ ಮಹಿಳೆಯರಲ್ಲಿ ಸೌಮ್ಯ, ನಯ ನಾಜೂಕು ಮತ್ತು ಮೃದುವಾಗಿರಬೇಕೆಂಬ ವ್ಯಾಖ್ಯಾನದೊಳಗೆ ಮಾಯಾವತಿಯವರನ್ನು ಸೇರಿಸಬಹುದೋ ಬೇಡವೋ.. ಎಂಬುದನ್ನು ದೊಡ್ಡ ಚರ್ಚೆಯ ವಿಷಯವೇನಲ್ಲ. ರಾಜಕೀಯದಲ್ಲಿ ಅಂತಹ ಸಾಂಪ್ರದಾಯಿಕ ಮಹಿಳಾ ಚಿತ್ರಣ ಇರಬೇಕೆಂದಿಲ್ಲ, ಮಹಾನ್ ನಾಯಕಿಯರಾದ ಇಂದಿರಾಗಾಂಧಿ, ಸೋನಿಯಾ, ವಸುಂದರ, ಸುಷ್ಮಾ ಮೊದಲಾದವರು ಆರ್ಥಿಕ ಮತ್ತು ಶೈಕ್ಷಣಿಕವಾಗಿ ಸಶಕ್ತವಾಗಿದ್ದ ಕುಟುಂಬದಿಂದ ಬಂದವರು. ಹೈಸೊಸೈಟಿ ಸಂಸ್ಕಾರಗಳನ್ನು ಪಡೆದವರು. ಆದರೆ ಮಾಯಾವತಿಯವರು ಹಾಗಲ್ಲ. ಚಿಕ್ಕ ಪೇಟೆಯಲ್ಲಿ ಒಬ್ಬ ಗುಮಾಸ್ತರ ಮಗಳಾಗಿ ಜನಿಸಿದವರು. ಮೂಲೆಗುಂಪಾಗಿದ್ದ ದಲಿತ ಕುಟುಂಬದ ವಾತಾವರಣದಲ್ಲಿ ಬೆಳೆದವರು. ನವನಾಗರಿಕತೆಯ ವರ್ತನೆ, ಕೃತಕ ಸೋಗುಗಳಿಲ್ಲದಿದ್ದರೆ ಏನಾಯಿತು? ಸಾರ್ವಜನಿಕ ಸ್ಥಳಗಳಲ್ಲಿ ತಮ್ಮ ಅನಿಸಿಕೆಗಳನ್ನು ನೇರವಾಗಿ ಮಾತನಾಡುವ ಶೈಲಿ ಮಾಯಾವತಿಯವರು ರೂಢಿಸಿಕೊಂಡಿರುವುದನ್ನು ಒರಟು ಸ್ವಭಾವ, ಸರ್ವಾಧಿಕಾರಿ ಧೋರಣೆ ಎಂಬುವುದಾಗಿ ಜನರು ಭಾವಿಸುತ್ತಾರೆ. 'ಜನಾರ್ದನನನ್ನು ಮೆಚ್ಚಿಸಬಹುದು.... ಆದರೆ ಜನರನ್ನಲ್ಲ' ಎಂಬ ಮಾತಿನಂತೆ ಮಾಯಾವತಿ ಸಾರ್ವಜನಿಕ ನಿಂದೆಗಳಿಗೆ ಮಣಿಯುವವರಲ್ಲ.

ರಾಜಕೀಯವಾಗಿ ಅವರೊಬ್ಬ ಆಕರ್ಷಣೆಯ ಕೇಂದ್ರವೇ ದಲಿತ ನಾಯಕತ್ವದ, ರಾಜಕೀಯ ಪಕ್ಷವು ದಲಿತರ ಹಿತಾಸಕ್ತಿಯನ್ನು ರಕ್ಷಿಸುವುದಕ್ಕೆ ಅನಿವಾರ್ಯವೆಂದು ಸೂಚಿಸಿದ್ದ ಅಂಬೇಡ್ಕರವರ ಕನಸನ್ನು ಮಾಯಾವತಿ ಸಾಕಾರಗೊಳಿಸಿದ್ದಾರಲ್ಲವೆ? ಭ್ರಷ್ಟತೆ, ಅನೀತಿಗಳು ರಾಜಕೀಯದೊಳಗೆ ಹಾಸು ಹೊಕ್ಕಾಗಿರುವಾಗ ಮಾಯಾವತಿಯವರು ಅದರ ನಕಾರಾತ್ಮಕ ಪ್ರಭಾವಗಳಿಗೆ ಹೊರತಲ್ಲ. ಅದನೇ ಇರಲಿ, ಪುರುಷಾಧಿಪತ್ಯವಿರುವ ರಾಜಕೀಯದಲ್ಲಿ ಭದ್ರವಾಗಿ ಅವರು ತಳವೂರಿರುವುದು ದಲಿತ ಮಹಿಳೆಯೋರ್ವರ ಪ್ರಾಬಲ್ಯತೆಗೆ ಸಾಕ್ಷಿಯಾಗಿಧೆ. ಪಕ್ಷದ ಹಿರಿಯ ಸದಸ್ಯರನ್ನು ಉಚ್ಚಾಟಿಸಲು ಹೆದರುವುದಿಲ್ಲ. ಸಮನ್ವಯತೆಯನ್ನು ಬಿಟ್ಟು ಬಿಡುವುದಿಲ್ಲ... ಅದೇ ಅಲ್ಲವೆ ರಾಜಕೀಯ ತಂತ್ರಗಳು...

ಮಹಾನ್ ನಾಯಕಿಯರಾದ ಇಂದಿರಾ ಗಾಂಧಿ, ಸೋನಿಯಾ, ಸುಷ್ಮಾ ಮೊದಲಾದವರು ಆರ್ಥಿಕ ಮತ್ತು ಶೈಕ್ಷಣಿಕವಾಗಿ ಸಶಕ್ತವಾಗಿದ್ದ ಕುಟುಂಬದಿಂದ ಬಂದವರು. ಹೈ ಸೊಸೈಟಿ ಸಂಸ್ಕಾರಗಳನ್ನು ಪಡೆದವರು. ಆದರೆ ಮಾಯಾವತಿಯವರು ಹಾಗಲ್ಲ. ಒಬ್ಬ ಗುಮಾಸ್ತರ ಮಗಳಾಗಿ ಜನಿಸಿದವರು. ಮೂಲೆ ಗುಂಪಾಗಿದ್ದ ದಲಿತ ಕುಟುಂಬದ ವಾತಾವರಣದಲ್ಲಿ ಬೆಳೆದವರು. ನವನಾಗರಿಕತೆಯ ವರ್ತನೆ, ಕೃತಕ ಸೋಗುಗಳಿಲ್ಲದಿದ್ದರೆ ಏನಾಯಿತು?

ತನ್ನ ಆದಾಯದ ಬಗ್ಗೆಯೂ ಅವರು ಮರೆಮಾಚಿಲ್ಲ. ೨೦೦೭-೦೮ರಲ್ಲಿ ೨೬ಕೋಟಿ ರೂಪಾಯಿ ತೆರಿಗೆ ನೀಡಿ ದೇಶದಲ್ಲಿಯೇ ಅತೀ ಹೆಚ್ಚು ತೆರಿಗೆ ಪಾವತಿಸುವವರ ಸಾಲಿಗೆ ಮಾಯಾವತಿ ಸೇರಿದವರು. ಭ್ರಷ್ಟ ಆರೋಪಗಳಿಗೆ ಹೆದರಿ ರಾಜಕೀಯ ಪಲಾಯನವಾದಿಯಂತೂ ಅಲ್ಲ. ಪ್ರಧಾನಿಯಾಗುವ ಕನಸಿನ ಹಿಂದೆ ಅವರ ನೈತಿಕ ಜವಾಬ್ದಾರಿಗಳೂ ಬಹಳ ಇದೆ. ದುರ್ಬಲ ವರ್ಗಕ್ಕೆ ಇನ್ನು ಗಗನ ಕುಸುಮವಾಗಿರುವ 'ಸಾಮಾಜಿಕ ನ್ಯಾಯ' ನೀಡಲು ಅವರು ಇನ್ನಷ್ಟು ಶ್ರಮಿಸಬೇಕಾಗಿದೆ. ಮುಂದೆ ಅವರೊಬ್ಬ ಬಡಜನರ, ದುರ್ಬಲ ವರ್ಗದ ಏಳಿಗೆಗಾಗಿ ಪ್ರಯತ್ನಿಸುವ ಆಶಾಕಿರಣವಾಗಬಲ್ಲರೇ ಕಾದು ನೋಡಬೇಕಷ್ಟೇ! □

ಅಪ್ಪ ಗಾರ್ಕಿಯ ಮಾನಸ ತಾಯಿ.



ಬೆಂಕಿ ಕಡ್ಡಿ ಒಣ ಹುಲ್ಲು
ಹಳೆ ಲಾಟೀನು
ಬತ್ತುವ ದಡದಲಿ ವಟಗುಡವ
ಬೆಂದ ಮಡಕೆ ಅಪ್ಪ!

ಅಪ್ಪನ ಸಿಟ್ಟಿಗೆ ಬೆಂಡಾದ ಮೇಣದ ಬತ್ತಿ
ಎಲುಬು ಚಿಕ್ಕಳಿದ್ದ
ಕಲಾವಿದನ ಹರಕು ಬಟ್ಟೆ ಹೊದ್ದ ಚಿತ್ರ
ಹೊಲದೊಳಗೆ ಬದುಕೊದ್ದ ಸಿಡುಕಿ
ಚಲನ ಶೀಲೆ ಅಪ್ಪ!

ಗಾರ್ಕಿಯ ಮಾನಸ ತಾಯಿ
ಜಗಳಗಂಟಿ ಸವೆದ ತಾಮ್ರ ತಾಟು
ಪುಕ್ಕಲಿ ಪ್ರಸನ್ನೆ ಪ್ರವಾದಿ ದಾದಿ
ಬೆಳಗು ಇಬ್ಬನಿ !

ಅಕ್ಷರ ತಿದ್ದದ ಸಂಜೀವಿನಿ
ಈಗಲೂ ಗಹನ ಕಾತುಕ
ಅಳು-ನಗು ವೃತ್ತದ
ಎಪ್ಪತ್ತರ ಪ್ರತಿಕ್ಷಣದಚ್ಚರಿ!

○ ಟಿ. ಎಸ್. ರಾಜೇಂದ್ರ ಪ್ರಸಾದ್

ಪ್ರಮಾಣ ನಿರಾಕರಣೆ

ಡಾ. ಎಸ್. ನಟರಾಜ್ ಬೂದಾಳು

ಸಂಗತಿಗಳು ಕೇವಲ ವಿದ್ವಾಂಸರಿಗಷ್ಟೇ ಅಲ್ಲ ಸಾಮಾನ್ಯರಿಗೂ ಅಗತ್ಯವೇ. ಆದರೆ ಇಲ್ಲೊಂದು ತೊಡಕಿದೆ. ಅದನ್ನು ನಿವಾರಿಸಿಕೊಳ್ಳದೆ ಗತ್ಯಂತರವಿಲ್ಲ. ಅದೇನೆಂದರೆ ಪ್ರಮಾಣಗಳನ್ನು ಸ್ವೀಕರಿಸುವವರು ಮತ್ತು ಅವುಗಳನ್ನು ನಿರಾಕರಿಸುವವರು ಇಬ್ಬರೂ ಅತ್ಯಂತ ಹರಿತವಾದ ತರ್ಕವನ್ನು ಬಳಸುತ್ತಾರೆ. ಇಲ್ಲಿ ತರ್ಕದ ಹತಾರವನ್ನು ಮೊದಲು ಕೈಗೆತ್ತಿಕೊಂಡವರು ಪ್ರಮಾಣಗಳನ್ನು ಸ್ವೀಕರಿಸಿದವರು. ನಿರಾಕರಿಸುವವರೂ ವಿಧಿಯಿಲ್ಲದೆ ತಾವೂ ತಮ್ಮ ತರ್ಕದ ಹತಾರುಗಳನ್ನು ಮಸೆದುಕೊಳ್ಳಬೇಕಾಯಿತು. ಇದರಿಂದಾಗಿ ಅನಕ್ಷರತೆಯ ಕಾರಣದಿಂದಾಗಿ ಅಕ್ಷರದ ಗುತ್ತಿಗೆ ಹಿಡಿದಿದ್ದವರ ದಾಸ್ಯಕ್ಕೆ ಒಳಗಾದ ಮಂದಿಯ ತಲೆಯ ಮೇಲೆ ತರ್ಕದ ಮತ್ತೊಂದು ದೊಡ್ಡ ಹೊರೆಯನ್ನು ಹೊರಿಸಲಾಯಿತು. ತರ್ಕಹೀನತೆಯೂ ಅನಕ್ಷರತೆಯಂತೆ ಶೋಷಣೆಗೆ ದಾರಿ ಮಾಡಿಕೊಡುತ್ತದೆ. ದುರಂತವೆಂದರೆ ಇಂದಿನ ಬಹುಪಾಲು ಅಕ್ಷರಸ್ತರು ತರ್ಕವಿಹೀನರೇ ಆಗಿರುವುದು.

ಇಂದು ಭಾರತೀಯ ಸಮಾಜಕ್ಕೆ ತಗಲಿಕೊಂಡಿರುವ ದೊಡ್ಡ ರೋಗವೆಂದರೆ ಪ್ರಮಾಣಗಳದ್ದು. ಬೌದ್ಧ ಮೀಮಾಂಸೆಯು 'ಭಾರತೀಯ ಮೀಮಾಂಸೆ'ಗಿಂತ ಹೇಗೆ ಭಿನ್ನ ಮತ್ತು ಅದು ಯಾಕೆ ಸರಿಯಾದುದು ಎಂದು ಸಾಧಿಸಲು ಮುಂದಿಡುವ ಪರಿಕಲ್ಪನೆಗಳಲ್ಲಿ 'ಪ್ರಮಾಣ ನಿರಾಕರಣೆಯು' ಪ್ರಮುಖವಾದುದು. ಈ ಪರಿಕಲ್ಪನೆಯು ಬೌದ್ಧೇತರ ದರ್ಶನಗಳಲ್ಲಿ ಹೇಗೆ ಬಳಕೆಯಾಗಿದೆ, ಇದರಿಂದಾಗಿ ನಮ್ಮ ಲೋಕಗ್ರಹಿಕೆಯಲ್ಲಿ ಉಂಟಾದ ಊನಗಳೇನು ಮತ್ತು ಬೌದ್ಧ ದರ್ಶನವು ಅದನ್ನು ನಿರಾಕರಿಸುವ ಮೂಲಕ ಸಾಧಿಸಿದ ಪರಿಣಾಮಗಳೇನು ಎಂಬ ಸಂಗತಿಗಳು ಕೇವಲ ವಿದ್ವಾಂಸರಿಗಷ್ಟೇ ಅಲ್ಲ ಸಾಮಾನ್ಯರಿಗೂ ಅಗತ್ಯವೇ. ಆದರೆ ಇಲ್ಲೊಂದು ತೊಡಕಿದೆ. ಅದನ್ನು ನಿವಾರಿಸಿಕೊಳ್ಳದೆ ಗತ್ಯಂತರವಿಲ್ಲ. ಅದೇನೆಂದರೆ ಪ್ರಮಾಣಗಳನ್ನು ಸ್ವೀಕರಿಸುವವರು ಮತ್ತು ಅವುಗಳನ್ನು ನಿರಾಕರಿಸುವವರು ಇಬ್ಬರೂ ಅತ್ಯಂತ ಹರಿತವಾದ ತರ್ಕವನ್ನು ಬಳಸುತ್ತಾರೆ. ಇಲ್ಲಿ ತರ್ಕದ ಹತಾರವನ್ನು ಮೊದಲು ಕೈಗೆತ್ತಿಕೊಂಡವರು ಪ್ರಮಾಣಗಳನ್ನು ಸ್ವೀಕರಿಸಿದವರು. ನಿರಾಕರಿಸುವವರೂ ವಿಧಿಯಿಲ್ಲದೆ ತಾವೂ ತಮ್ಮ ತರ್ಕದ ಹತಾರುಗಳನ್ನು ಮಸೆದುಕೊಳ್ಳಬೇಕಾಯಿತು. ಇದರಿಂದಾಗಿ ಅನಕ್ಷರತೆಯ ಕಾರಣದಿಂದಾಗಿ ಅಕ್ಷರದ ಗುತ್ತಿಗೆ ಹಿಡಿದಿದ್ದವರ ದಾಸ್ಯಕ್ಕೆ ಒಳಗಾದ ಮಂದಿಯ ತಲೆಯ ಮೇಲೆ ತರ್ಕದ ಮತ್ತೊಂದು ದೊಡ್ಡ ಹೊರೆಯನ್ನು ಹೊರಿಸಲಾಯಿತು. ತರ್ಕಹೀನತೆಯೂ ಅನಕ್ಷರತೆಯಂತೆ ಶೋಷಣೆಗೆ ದಾರಿ ಮಾಡಿಕೊಡುತ್ತದೆ. ದುರಂತವೆಂದರೆ ಇಂದಿನ ಬಹುಪಾಲು ಅಕ್ಷರಸ್ತರು ತರ್ಕವಿಹೀನರೇ ಆಗಿರುವುದು.

ತರ್ಕ ಮತ್ತು ಅಕ್ಷರಗಳೆರಡೂ ಭಾರತದ ಸಂದರ್ಭದಲ್ಲಿ ನೋವುಂಟು ಮಾಡುವ ಸಂಗತಿಗಳು. ದೊಡ್ಡ ಸಮೂಹಕ್ಕೆ ಅಕ್ಷರವನ್ನು ನಿರಾಕರಿಸುವುದರ ಮೂಲಕ ಮಾಡಿದ ಅನ್ಯಾಯ ತಕ್ಷಣ ಗೋಚರಿಸುತ್ತದೆ. ನಾವು ಅಕ್ಷರವನ್ನು ವಶಪಡಿಸಿಕೊಳ್ಳಲು ಪಟ್ಟಪಾಡು ಸಣ್ಣದಲ್ಲ. ಅದು ಇನ್ನೂ ಮುಂದುವರಿದೇ ಇದೆ. ತರ್ಕವಂತು ನಮಗಿನ್ನೂ ದೂರದ ಸಂಗತಿಯೇ ಆಗಿದೆ. ಅನಕ್ಷರತೆಯಂತೆಯೇ ತರ್ಕಹೀನತೆಯೂ ರೋಗಿಷ್ಠ ಅವಸ್ಥೆ.

ಬೌದ್ಧೇತರ ದರ್ಶನಗಳು ತಮ್ಮ ಲೋಕವಿವರಣೆಯನ್ನು ಸಮರ್ಥಿಸಲು ಪ್ರಮಾಣಗಳನ್ನು ರೂಪಿಸಿ ಬಳಸಿ ಕೊಂಡಿವೆ. ಪ್ರಮಾಣಗಳನ್ನು ತರ್ಕದ ಮೂಲಕ ಮಂಡಿಸಿದ್ದಾರೆ. ಇದೊಂದು ಇಬ್ಬಾಯಿಯ ಕತ್ತಿ. ಮೊದಲೇ ಅಕ್ಷರಹೀನ ಸಮಾಜ. ಅದರ ಮೇಲೆ ಹರಿತವಾದ ತರ್ಕವನ್ನು ಬಳಸಿದರೆಂದರೆ ಪ್ರತಿರೋಧದ ಎಲ್ಲ ಸಾಧ್ಯತೆಗಳೂ ಮುಚ್ಚಿ ಹೋಗುತ್ತವೆ. ಇಂದಿಗೂ ತರ್ಕ ಮತ್ತು ಪ್ರಮಾಣಗಳನ್ನು ಬೌದ್ಧೇತರ ಧರ್ಮಗಳು ಬಳಸಿ ಮೋಸಮಾಡುತ್ತಲೇ ಇವೆ. ನಮ್ಮ ಬದುಕಿನ ಬಹಳ ಮುಖ್ಯ ನಿರ್ಧಾರಗಳನ್ನು ನಾವು ತೆಗೆದುಕೊಳ್ಳಲು ಸಾಧ್ಯ ವಾಗದ ಹಾಗೆ ಅವುಗಳನ್ನು ನಿರ್ವಹಿಸಲಾಗುತ್ತಿದೆ. ಈ ನೆಲದ ಮುಖ್ಯಮಂತ್ರಿಯೊಬ್ಬ ತನ್ನ ಪದಗ್ರಹಣವನ್ನು ಸಂಪಿಧಾನದ ಬಗೆಗಿನ ನಿಷ್ಠೆಯನ್ನು ವ್ಯಕ್ತಪಡಿಸುವ 'ಪ್ರಮಾಣ'ದ ಮೂಲಕ ಮಾಡುತ್ತಾನೋ, ಮುಖ್ಯ ಮಂತ್ರಿ ಕುರ್ಚಿಯ ಮೇಲೆ ಕೂರುವ ಸಮಯ, ದಿಕ್ಕು, ಆಗ ಮಾಡ ಬೇಕಾದ ಯಜ್ಞಹೋಮಗಳ 'ಪ್ರಮಾಣ'ದ ಮೂಲಕ ಮಾಡುತ್ತಾನೋ ಎನ್ನುವುದು ಈಗ ಚರ್ಚೆಯ ಸಂಗತಿಯಾಗಿ ಉಳಿದಿಲ್ಲ. ನಮ್ಮ ಸಮಾಜವನ್ನು ಈಗಂತೂ 'ಪ್ರಮಾಣ'ಗಳೇ ನಿಯಂತ್ರಿಸುತ್ತಿವೆ. ತಿನ್ನುವ ಅನ್ನ, ಕಟ್ಟುವ ಮನೆ, ಪೂಜಿಸುವ ದೇವರು, ತೊಡುವ ಬಟ್ಟೆ, ಮದುವೆಯಾಗುವ ಸಂಗಾತಿ ಎಲ್ಲವನ್ನೂ 'ಪ್ರಮಾಣ'ಗಳು ನಿರ್ಧರಿಸುತ್ತಿರುವುದನ್ನು ನಾವೀಗ ನೋಡುತ್ತಿದ್ದೇವೆ.

ಸಾಮಾನ್ಯರ ಬದುಕನ್ನು ತಮ್ಮ ಅಂಕೆಗೆ ತೆಗೆದುಕೊಳ್ಳಲು ಹೇಗೆ ಪ್ರಮಾಣಗಳನ್ನು ಬಳಸುತ್ತಾರೆಯೋ ಹಾಗೆಯೇ. ತಮ್ಮ ದೋಷಪೂರ್ಣ ಲೋಕವಿವರಣೆಯನ್ನು ಸಮರ್ಥಿಸಿಕೊಳ್ಳಲು, ತಾವು ಮುಂದಿಡುವ ತಾತ್ವಿಕತೆಯ ದೋಷಗಳನ್ನು ಮುಚ್ಚಿಹಾಕಲು ಪ್ರಮಾಣಗಳನ್ನು ಮತ್ತು ತರ್ಕವನ್ನು ಬೌದ್ಧೇತರ ದರ್ಶನಗಳು ಬಳಸುತ್ತವೆ. ಪ್ರಮಾಣ ಒಂದು ಸಮರ್ಥನೆ, ತರ್ಕ ಒಂದು ಹತಾರು. ಇವೆರಡನ್ನೂ ನಿರ್ವಹಿಸುವುದು ಸಾಮಾನ್ಯರಿಗೆ ಕಷ್ಟಸಾಧ್ಯ. ಪ್ರಮಾಣಗಳು ಮತ್ತು ಅವುಗಳ ತಾರ್ಕಿಕ ನಿರ್ವಹಣೆ ಕೇವಲ ಬೌದ್ಧಿಕ ಕಸರತ್ತಲ್ಲ. ಅವು ನಮ್ಮ ಸಮಾಜದ ಬದುಕಿನ ಕ್ರಮವನ್ನೇ ನಿಯಂತ್ರಿಸುತ್ತಿರುವುದರಿಂದ ಹಠ ಮಾಡಿಯಾದರೂ ಸರಿ ಪ್ರಮಾಣಗಳ ನಿರ್ವಹಣೆ ಮತ್ತು ಅದಕ್ಕೆ ಬಳಕೆಯಾಗುತ್ತಿರುವ ಹರಿತವಾದ ತರ್ಕ ಇವುಗಳನ್ನು ದಕ್ಕಿಸಿಕೊಳ್ಳಲೇಬೇಕು., 'ತರ್ಕವೆಂಬುದು ತಗರುಗಳ ಹೋರಾಟ'ವೆಂಬ ಅಲ್ಲಮಪ್ರಭುವಿನ ಮಾತು ಎರಡು ಬಲವಾದ ಟಗರುಗಳ ನಡುವಿನ ವ್ಯರ್ಥಹೋರಾಟವನ್ನು ಕುರಿತದ್ದೇ ಹೊರತು, ತರ್ಕವೆಂಬ ಬಲವಾದ ಎರಡು ಕೊಂಬುಳ್ಳ ಒಂದು ಟಗರು ಇಡೀ ಕುರಿಮಂದೆಯನ್ನೇ ನಿಯಂತ್ರಿಸುವ ಸಂಗತಿಯನ್ನು ನಿರಾಕರಿಸುವುದಿಲ್ಲ.

ಪ್ರಮಾಣ ಎಂದರೇನು?

ಭಾರತೀಯ ಚಿಂತನಾ ಪ್ರಸ್ಥಾನಗಳು ಪ್ರಮಾಣಗಳನ್ನು ವಸ್ತುಪ್ರಪಂಚದ ವಿವರಣೆಗೆ ಪ್ರಧಾನ ಸಾಕ್ಷಿಗಳನ್ನಾಗಿ ಬಳಸಿಕೊಂಡಿವೆ. ಅದರ ವಿಸ್ತಾರವಾದ ವಿಶ್ಲೇಷಣೆಯ ಅಗತ್ಯವಿದೆ. "ಸರಿಯಾದ ಆಧಾರವುಳ್ಳ ಜ್ಞಾನವನ್ನು-ಪ್ರಮಾ-ಪಡೆಯಲು ಮುಖ್ಯವಾದ ಸಾಧನ ಯಾವುದೋ ಅದೇ ಪ್ರಮಾಣ. ಹಾಗೆ ತಿಳಿದ ವಸ್ತುವು ಪ್ರಮೇಯ, ತಿಳಿಯುವವನು ಪ್ರಮಾತಾ" (ಎನ್.ಹಿರಿಯಣ್ಣ-ಭಾರತೀಯ ತತ್ವಶಾಸ್ತ್ರದ ರೂಪುರೇಶೆಗಳು)"ವಸ್ತುಸ್ವಭಾವ ಅಥವಾ ಸತ್ಯವನ್ನು ತಿಳಿಯಲು ಇರುವ ಸಾಧನಗಳೇ ಪ್ರಮಾಣಗಳೆಂದು ಸ್ಥೂಲವಾಗಿ ಹೇಳಬಹುದು. ಪ್ರಮಾ ಎಂದರೆ ಯಥಾರ್ಥ ಜ್ಞಾನ. ಅದನ್ನುಂಟು ಮಾಡುವ ಕಾರಣ ಅಥವಾ ಸಾಧನವೇ ಪ್ರಮಾಣ." (ಎಂ. ಪ್ರಭಾಕರ ಜೋಶಿ, ಎಂ.ಎಂ. ಹೆಗಡೆ-



ಕುಮಾರಿಲಭಟ್ಟ).

ಲೋಕದಲ್ಲಿ ನಾವು ಪಡೆವ ಅನು ಭವಗಳು ಮತ್ತು ಆ ಅನುಭವಗಳಿಗೆ ಕಾರಣವಾಗುವ ಎದುರಿನ ವಸ್ತುಪ್ರಪಂಚದ ಸತ್ಯಾಸತ್ಯವನ್ನು ಅರಿಯಲು ಪ್ರಮಾಣಗಳನ್ನು ಸಾಧನಗಳೆಂದು ಪರಿಗಣಿಸಲಾಗಿದೆ. **ಪ್ರತ್ಯಕ್ಷ ಅನುಮಾನ ಮತ್ತು ಶಬ್ದ-ಈ ಮೂರನ್ನು ಪ್ರಧಾನ ಪ್ರಮಾಣಗಳೆಂದು** ಇವುಗಳ ಜೊತೆಗೆ ಉಪಮಾನ, ಅರ್ಥಾಪತ್ತಿ ಮತ್ತು ಅನುಪಲಬ್ಧವನ್ನು ಇತರ ಪ್ರಮಾಣಗಳೆಂದು ಗುರುತಿಸಲಾಗಿದೆ. ಇಂದ್ರಿಯಗೋಚರವಾದ ರೂಪ, ರಸ, ಗಂಧ ಮುಂತಾದವುಗಳಿಗೆ ಸಂಬಂಧಿಸಿದ್ದು ಅಂದರೆ ನೋಡಿದ್ದು, ಮುಟ್ಟಿದ್ದು, ಮೂಸಿದ್ದು, ಕೇಳಿಸಿಕೊಂಡದ್ದು, ರುಚಿ ನೋಡಿದ್ದು ಮುಂತಾಗಿ ಪಂಚೇಂದ್ರಿಯಗಳ ಮೂಲಕ ಪಡೆದ ಅನುಭವಗಳಿಗೆ ಕಾರಣವಾದದ್ದೆಲ್ಲ ಸತ್ಯವೆನ್ನುವುದು **ಪ್ರತ್ಯಕ್ಷ ಪ್ರಮಾಣ**. ತರ್ಕದ ಮೂಲಕ ಸಾಧಿತವಾಗುವುದನ್ನು ಅನುಮಾನ ಪ್ರಮಾಣವೆನ್ನುತ್ತಾರೆ. ಉದಾಹರಣೆಗೆ ಹೊಗೆಯಾಡುತ್ತಿರುವುದರಿಂದ ಬೆಂಕಿ ಇದೆ ಎಂದು ತೀರ್ಮಾನಿಸುವುದು. **'ಶಬ್ದ'ವೆಂದರೆ ವೇದಗಳೆನ್ನುವುದು** ಸ್ಥೂಲಾರ್ಥ. ಪ್ರಶ್ನಾತೀತತೆಯ ಹಕ್ಕನ್ನು ಸಾಧಿಸ ಬಯಸುವ ಎಲ್ಲ ಸ್ಥಾಪಿತ ಜ್ಞಾನವನ್ನೂ ಶಬ್ದದ ವ್ಯಾಪ್ತಿಗೆ ಒಳಪಡಿಸಬಹುದು. ಭಗವದ್ಗೀತೆಯಲ್ಲಿ ಶ್ರೀಕೃಷ್ಣನೇ ಹೇಳಿದ್ದಾನೆ, ವೇದದಲ್ಲಿ ಹೇಳಿದೆ, ಆದುದರಿಂದ ಅದೆಲ್ಲ ಸತ್ಯ. ಅಂದರೆ ಈ ಪುಸ್ತಕದಲ್ಲಿ ಹೇಳಿರುವುದರಿಂದ ಇದು ಸತ್ಯ. ಋಷಿಯೋ, ದೇವರೋ, ಅವತಾರಿಯೋ ಒಟ್ಟಿನಲ್ಲಿ ಪ್ರಶ್ನಿಸಬಾರದವರು ಹೇಳುವುದೆಲ್ಲ ಸತ್ಯವೆನ್ನುವುದೇ **'ಶಬ್ದಪ್ರಮಾಣ'**. ನಮ್ಮ ಸಮಾಜವನ್ನು ಮೌಢ್ಯದ ಕೂಪವನ್ನಾಗಿಸಿರುವುದು ಈ ಪ್ರಮಾಣವೇ. ಮೊದಲು ನೋಡಿದ ವಸ್ತುವಿಗೆ ಸದೃಶವಾದ ಬೇರೊಂದು ವಸ್ತುವನ್ನು ನೋಡಿದಾಗ ನೆನಪಾದ ವಸ್ತುವಿನ ಸಾದೃಶ್ಯ ಜ್ಞಾನವುಂಟಾಗುವುದು **ಉಪಮಾನ**. **ಅರ್ಥಾಪತ್ತಿಯು** ದೊರೆತ ಜ್ಞಾನಕ್ಕೆ ಅನುಭವವು ವಿರುದ್ಧವಾದಾಗ ಅದನ್ನು ಪರಿಹರಿಸಿಕೊಳ್ಳಲು ಮಾಡುವ ಊಹೆ. ಹಗಲು ಊಟಮಾಡದ ವ್ಯಕ್ತಿಯೊಬ್ಬ ದಪ್ಪಗಿದ್ದರೆ, ಅವನು ರಾತ್ರಿ ಚೆನ್ನಾಗಿ ತಿನ್ನುತ್ತಾನೆ ಎನ್ನುವ ತೀರ್ಮಾನ. **ಅನುಪಲಬ್ಧಿಯೆಂಬುದು** ಅಭಾವದ ಜ್ಞಾನ. ಅನುಪಸ್ಥಿತಿಯಿಂದ ಉಂಟಾಗುವ ಜ್ಞಾನ. ಮೇಜಿನ ಮೇಲೆ ಪೆನ್ನು ಕಾಣಿಸುತ್ತಿಲ್ಲ. ಯಾಕೆ ಕಾಣಿಸುತ್ತಿಲ್ಲವೆಂದರೆ ಅಲ್ಲಿ ಪೆನ್ನಿಲ್ಲ ಅದಕ್ಕೆ ಕಾಣಿಸುತ್ತಿಲ್ಲ. ಪ್ರತ್ಯಕ್ಷವೆಂದರೆ ಇದ್ದುದು ಕಾಣುವುದಾದರೆ ಅನುಪಲಬ್ಧವೆಂಬುದು ಇಲ್ಲದ್ದನ್ನು ತಿಳಿಯುವುದು.

ಪ್ರತಿಯೊಂದು ದರ್ಶನವೂ ತಾನು ನೀಡುವ ಲೋಕವಿವರಣೆಗೆ ಅನುಗುಣವಾಗಿ ತನಗೆ ಒಪ್ಪಿಗೆಯಾಗುವ ಪ್ರಮಾಣಗಳನ್ನು ಮಾನ್ಯ ಮಾಡುತ್ತದೆ. ಚಾರ್ವಾಕರು ಪ್ರತ್ಯಕ್ಷ ಪ್ರಮಾಣವನ್ನು ಮಾತ್ರ ಒಪ್ಪುತ್ತಾರೆ. ಅಂದರೆ ಇಂದ್ರಿಯಗಳ ಮೂಲಕ 'ಕಂಡದ್ದೆಲ್ಲ' ಸತ್ಯವೆನ್ನುವುದು ಅವರ ನಿಲುವು. ಸಪ್ರಮಾಣವಾದ ಜ್ಞಾನಕ್ಕೆ ಪ್ರತ್ಯಕ್ಷವೊಂದೇ ಸಾಧನ ಎಂಬುದು ಚಾರ್ವಾಕ ದರ್ಶನದ ನಿಲುವು. ಅನುಮಾನವೂ ಸೇರಿದಂತೆ ಉಳಿದ ಎಲ್ಲ ಪ್ರಮಾಣಗಳನ್ನೂ ಅವರು ನಿರಾಕರಿಸುತ್ತಾರೆ. ಸಾಂಖ್ಯರಿಗೆ ಪ್ರತ್ಯಕ್ಷ ಅನುಮಾನ ಮತ್ತು ಶಬ್ದ ಪ್ರಮಾಣಗಳು ಮಾನ್ಯ. ನ್ಯಾಯವು ಪ್ರತ್ಯಕ್ಷ ಅನುಮಾನ, ಶಬ್ದ ಮತ್ತು ಉಪಮಾನವನ್ನೂ ಮಾನ್ಯಮಾಡುತ್ತದೆ. ವಸ್ತು ಪ್ರಪಂಚದ ವಿವರಣೆಗೆ ವಿಜ್ಞಾನ ಮಾನ್ಯಮಾಡುವ ಪ್ರಮಾಣಗಳು ಎರಡು ಪ್ರತ್ಯಕ್ಷ ಮತ್ತು ಅನುಮಾನ ಅಥವಾ ತರ್ಕ.

> **ಸಾಮಾನ್ಯರ ಬದುಕನ್ನು ತಮ್ಮ ಅಂಕೆಗೆ ತೆಗೆದುಕೊಳ್ಳಲು ಹೇಗೆ ಪ್ರಮಾಣಗಳನ್ನು ಬಳಸುತ್ತಾರೆಯೋ ಹಾಗೆಯೇ, ತಮ್ಮ ದೋಷಪೂರ್ಣ ಲೋಕವಿವರಣೆಯನ್ನು ಸಮರ್ಥಿಸಿಕೊಳ್ಳಲು, ತಾವು ಮುಂದಿಡುವ ತಾತ್ವಿಕತೆಯ ದೋಷಗಳನ್ನು ಮುಚ್ಚಿಹಾಕಲು ಪ್ರಮಾಣಗಳನ್ನು ಮತ್ತು ತರ್ಕವನ್ನು ಬೌದ್ಧೇತರ ದರ್ಶನಗಳು ಬಳಸುತ್ತವೆ. ಪ್ರಮಾಣ ಒಂದು ಸಮರ್ಥನೆ, ತರ್ಕ ಒಂದು ಹತಾರು. ಇವೆರಡನ್ನೂ ನಿರ್ವಹಿಸುವುದು ಸಾಮಾನ್ಯರಿಗೆ ಕಷ್ಟಸಾಧ್ಯ. ಪ್ರಮಾಣಗಳು ಮತ್ತು ಅವುಗಳ ತಾರ್ಕಿಕ ನಿರ್ವಹಣೆ ಕೇವಲ ಬೌದ್ಧಿಕ ಕಸರತ್ತಲ್ಲ. ಅವು ನಮ್ಮ ಸಮಾಜದ ಬದುಕಿನ ಕ್ರಮವನ್ನೇ ನಿಯಂತ್ರಿಸುತ್ತಿರುವುದರಿಂದ ಹಠಮಾಡಿಯಾದರೂ ಸರಿ ಪ್ರಮಾಣಗಳ ನಿರ್ವಹಣೆ ಮತ್ತು ಅದಕ್ಕೆ ಬಳಕೆಯಾಗುತ್ತಿರುವ ಹರಿತವಾದ ತರ್ಕ ಇವುಗಳನ್ನು ದಕ್ಕಿಸಿಕೊಳ್ಳಲೇಬೇಕು. 'ತರ್ಕವೆಂಬುದು ಟಗರುಗಳ ಹೋರಾಟ' ವೆಂಬ ಅಲ್ಲಮಪ್ರಭುವಿನ ಮಾತು ಎರಡು ಬಲವಾದ ಟಗರುಗಳ ನಡುವಿನ ವ್ಯರ್ಥಹೋರಾಟವನ್ನು ಕುರಿತದ್ದೇ ಹೊರತು, ತರ್ಕವೆಂಬ ಬಲವಾದ ಎರಡು ಕೊಂಬುಳ್ಳ ಒಂದು ಟಗರು ಇಡೀ ಕುರಿಮಂದೆಯನ್ನೇ ನಿಯಂತ್ರಿಸುವ ಸಂಗತಿಯನ್ನು ನಿರಾಕರಿಸುವುದಿಲ್ಲ.**

ಪ್ರಮಾಣ ನಿರಾಕರಣೆ – ಬೌದ್ಧ ಮಾಧ್ಯಮಿಕರ ನಿಲುವು :

ಮಾಧ್ಯಮಿಕರ ಹೊರತಾಗಿ, ಇತರ ಬೌದ್ಧ ಚಿಂತನಾ ಪ್ರಸ್ಥಾನಗಳು ಪ್ರತ್ಯಕ್ಷ ಮತ್ತು ಅನುಮಾನವನ್ನು ಪ್ರಮಾಣಗಳನ್ನಾಗಿ ಸ್ವೀಕರಿಸಿದ್ದವೆಂದು ತೋರುತ್ತದೆ. ಇದನ್ನು ಗಮನಿಸಿದ ವಿದ್ವಾಂಸರು ಸಾಮಾನ್ಯವಾಗಿ ಬೌದ್ಧಧರ್ಮವು ಪ್ರತ್ಯಕ್ಷ ಮತ್ತು ಅನುಮಾನವನ್ನು ಪ್ರಮಾಣಗಳೆಂದು ಸ್ವೀಕರಿಸಿತ್ತೆಂದು–ಮಾಧ್ಯಮಿಕವಾದವನ್ನೂ ಸೇರಿಸಿದಂತೆ–ತೀರ್ಮಾನಿಸುತ್ತಾರೆ. ಆದರೆ ವಸ್ತುಸ್ಥಿತಿ ಬೇರೆಯೇ ಇದೆ.

ನಾಗಾರ್ಜುನ ತನ್ನ ವೈದಲ್ಯಪ್ರಕರಣ ಮತ್ತು ವಿಗ್ರಹ ವ್ಯಾವರ್ತಿನಿ ಕೃತಿಗಳಲ್ಲಿ ಪ್ರಮಾಣಗಳ ಬಗೆಗೆ ತನ್ನ ನಿಲುವನ್ನು ಪ್ರತಿಪಾದಿಸುತ್ತಾನೆ. ನಾಗಾರ್ಜುನನ ಎದುರಿಗೆ ಪೂರ್ವಪಕ್ಷವೊಂದಿದ್ದು ಬೌದ್ಧರ ಶೂನ್ಯತಾವಾದವನ್ನು ಪರೀಕ್ಷೆಗೆ ಒಡ್ಡುತ್ತಿದೆ. **"ಪ್ರಮಾಣಗಳೂ ಇಲ್ಲ, ಅವುಗಳಿಂದ ಗಮ್ಯವಾದದ್ದೂ ಇಲ್ಲ"** – ಇದು ನಾಗಾರ್ಜುನನ ನಿಲುವು. ಇದನ್ನು ಸಾಧಿಸಲು ತನ್ನ ಪ್ರತಿವಾದಿಗಳಾದ ವೈದಿಕರು ಬಳಸಿದ್ದ ತರ್ಕದ ಆಯುಧವನ್ನೇ ನಾಗಾರ್ಜುನ ಇನ್ನಷ್ಟು ಮಸೆದುಕೊಂಡು ಬಳಸಿದ್ದಾನೆ. ಅದು ಅತ್ಯಂತ ಸೂಕ್ಷ್ಮವಾದ ತರ್ಕದ ಸಮರ. ಆ ಕಠಿಣ ತರ್ಕದ ಸಹವಾಸವೇ ಬೇಡ ಎಂದು ನಾವು ತಟಸ್ಥವಾಗಿರಲಾಗದು. ಏಕೆಂದರೆ ಪ್ರತಿಪಕ್ಷವು ಈಗಲೂ ಅದನ್ನು ಪ್ರಯೋಗಿಸುತ್ತಿದೆ. ಹಾಗಾಗಿ ಆ ಕೌಶಲವನ್ನು ನಾವು ದಕ್ಕಿಸಿಕೊಳ್ಳಲೇಬೇಕು.

ನಾಗಾರ್ಜುನನ ಆ ತರ್ಕದ ಹಾದಿಯಲ್ಲಿ ನಾವೂ ಒಂದಷ್ಟು ದೂರವಾದರೂ ಹೋಗುವುದರಿಂದ ಎರಡು ಲಾಭಗಳಿವೆ. ಒಂದು ತರ್ಕವೂ ಕೂಡ ಸಾಕ್ಷರತೆಯಂತೆಯೇ ಒಂದು ಮಾಧ್ಯಮ, ಗಣಿತದಂತೆ. ಅದನ್ನು ನಾವು ಪಡೆದುಕೊಂಡರೆ ನಾವು ಆ ದಾರಿಯಲ್ಲಿ ನಡೆವ ಸಂದರ್ಭ ಬಂದಾಗ ಅಂಜಬೇಕಿಲ್ಲ. ಎರಡನೆಯದಾಗಿ ತಪ್ಪಾದ ಲೋಕಪಿವರಣೆಯನ್ನು ಸಕಾರಣವಾಗಿ ನಿರಾಕರಿಸಲು ಸಾಧ್ಯವಾಗುತ್ತದೆ. ನಾಗಾರ್ಜುನ ಪ್ರಮಾಣಗಳನ್ನು ನಿರಾಕರಿ ಸುತ್ತಾನೆ. ಅದಕ್ಕೆ ಕಠಿಣವಾದ ತರ್ಕವನ್ನು ಬಳಸಿದ್ದಾನೆ. ಅವನ 'ವೈದಲ್ಯ ಪ್ರಕರಣ' ಕೃತಿಯಿಂದ ಅದಕ್ಕೆ ಸಂಬಂಧಿಸಿದ, ಭಾಗವನ್ನು ಇಲ್ಲಿ ಅನುವಾದಿಸಿ ಕೊಡಲಾಗಿದೆ.

ನಾಗಾರ್ಜುನನ ನಿಲುವು:

- **ಪ್ರಮಾಣ ಮತ್ತು ಪ್ರಮೇಯಗಳನ್ನು ಕುರಿತಾದ ಗೊಂದಲಗಳು:**

- ಪ್ರಮಾಣ (ತಿಳಿಸಿಕೊಡುವ ಸಾಧನ ಅಥವಾ ಅಳತೆ) ಮತ್ತು ಪ್ರಮೇಯಗಳೆರಡನ್ನೂ (ತಿಳಿಯಬೇಕಾದ ವಸ್ತು) ಗೊಂದಲಕ್ಕೀಡುಮಾಡಲಾಗಿದೆ. ಹೇಗೆಂದರೆ, ಪ್ರಮೇಯ ಇದ್ದಾಗ ಮಾತ್ರ ಪ್ರಮಾಣಕ್ಕೆ ಪ್ರಮಾಣದ ಸ್ಥಾನ ದೊರಕುತ್ತದೆ. ಅಳೆಯಬೇಕಾದ ವಸ್ತು ಇದ್ದರೆ ಮಾತ್ರ ಅಳತೆಗೆ ಅಳತೆಯ ಸ್ಥಾನ ದೊರಕುತ್ತದೆ ಮತ್ತು ಅಳತೆ ಇದ್ದಾಗ ಮಾತ್ರ ವಸ್ತುವಿಗೆ ಅಳೆಸಿಕೊಳ್ಳಬೇಕಾದ ವಸ್ತುವಿನ ಸ್ಥಾನ ದೊರಕುತ್ತದೆ. ಹಾಗಾಗಿ ಪ್ರಮೇಯದಿಂದಾಗಿ ಪ್ರಮಾಣ ಸಿದ್ಧವಾಗುತ್ತದೆ ಮತ್ತು ಪ್ರಮಾಣದಿಂದಾಗಿ ಪ್ರಮೇಯ ಸಿದ್ಧವಾಗುತ್ತದೆ. ಪ್ರಮೇಯದಿಂದ ಪ್ರಮಾಣವು ಸಿದ್ಧವಾದುದರಿಂದ ಪ್ರಮಾಣವು ಪ್ರಮೇಯದ ಪ್ರಮೇಯವಾಗುತ್ತದೆ. ಅಲ್ಲದೆ ಪ್ರಮೇಯವು ಪ್ರಮಾಣದ ಪ್ರಮಾಣವಾಗುತ್ತದೆ. ಅದನ್ನು ಇದು, ಇದನ್ನು ಅದು ಅವಲಂಬಿಸಿ ಉಂಟಾಗುತ್ತವೆ. ಹಾಗಾಗಿ ಪ್ರಮಾಣವು ಪ್ರಮೇಯ ಮತ್ತು ಪ್ರಮಾಣ ಎರಡೂ ಆದಂತಾಗುತ್ತದೆ. ಹಾಗೆಯೇ ಪ್ರಮೇಯವು ಪ್ರಮಾಣ ಮತ್ತು ಪ್ರಮೇಯ ಎರಡೂ ಆದಂತಾಗುತ್ತದೆ. ಆದುದರಿಂದ ಎರಡೂ ಗೊಂದಲಕ್ಕೀಡಾಗುತ್ತವೆ.

- **ಪ್ರಮಾಣ ಮತ್ತು ಪ್ರಮೇಯಗಳು ಸ್ವತಂತ್ರವಾಗಿ ಉಂಟಾದುವುಗಳಲ್ಲ**

- ಪ್ರಮಾಣ ಮತ್ತು ಪ್ರಮೇಯಗಳನ್ನು ಸ್ವತ:ಸಿದ್ಧವೆಂದು ಹೇಳಲಾಗದು. ಪ್ರಮಾಣ ಮತ್ತು ಪ್ರಮೇಯಗಳು ಸ್ವತಂತ್ರಾಸ್ತಿತ್ವವುಳ್ಳವುಗಳೆಂದಾದರೆ, ಒಂದೊಂದೂ ಪ್ರಮಾಣ ಮತ್ತು ಪ್ರಮೇಯ ಎರಡೂ ಆಗಿಬಿಡುತ್ತವೆ. ಒಂದು ಮತ್ತೊಂದು ಉಂಟಾಗುವಂತೆ ಮಾಡುವುದರಿಂದ ಅವು ಪರಸ್ಪರಾವಲಂಬಿಗಳಾಗಿವೆ ಎಂದರ್ಥ., ಹಾಗಾದರೆ ಅವುಗಳಿಗೆ ಸ್ವತಂತ್ರ ಅಸ್ತಿತ್ವ ಇಲ್ಲವೆಂದಾಗುತ್ತದೆ.

- ಪ್ರಮಾಣ ಮತ್ತು ಪ್ರಮೇಯಗಳು ಪರಸ್ಪರಾವಲಂಬಿಗಳಾಗಿರುವುದರಿಂದ ಅವು ಅಸ್ತಿಯೂ ಅಲ್ಲ ನಾಸ್ತಿಯೂ ಅಲ್ಲ, ಉಭಯವೂ ಅಲ್ಲ. ಮೇಲಾಗಿ ಈಗಾಗಲೇ (ಸ್ವತಂತ್ರವಾಗಿ) ಅಸ್ತಿತ್ವವುಳ್ಳ ವಸ್ತುವು ತನ್ನ ಅಸ್ತಿತ್ವಕ್ಕಾಗಿ ಅಸ್ತಿತ್ವದಲ್ಲಿಲ್ಲದ ಅಥವಾ ಅಸ್ತಿ–ನಾಸ್ತಿ ಉಭಯವೂ

ಆಗಿರುವ ವಸ್ತುವನ್ನು ಅವಲಂಬಿಸಬೇಕು!)

'ವಸ್ತು'ವೊಂದರ ಅಸ್ತಿತ್ವವನ್ನು ಪರಶೀಲಿಸುವುದಾದರೆ ಮೂರು ಸಾಧ್ಯತೆಗಳಿವೆ. ಯಾವುವೆಂದರೆ: ಅಸ್ತಿತ್ವದಲ್ಲಿರುವ, ಅಸ್ತಿತ್ವದಲ್ಲಿಲ್ಲದಿರುವ ಮತ್ತು; ಉಭಯವೂ ಆಗಿರುವ ವಸ್ತುವನ್ನು ಪರಿಶೀಲಿಸಲು ಸಾಧ್ಯ. ಇವಿಷ್ಟು ಅಂತಹ ವಸ್ತುವೊಂದರ ಪೂರ್ಣ ಪ್ರಾಪಂಚಿಕ ಸಾಧ್ಯತೆ. ಇಷ್ಟರ ಹೊರತಾಗಿ ಮತ್ತೇನೂ ಸಾಧ್ಯವಿಲ್ಲ. ಈ ಸಾಧ್ಯತೆಗಳಲ್ಲಿ

ಮೊದಲನೆಯ ಸಾಧ್ಯತೆಯಾದ ಅಸ್ತಿತ್ವವುಳ್ಳ ವಸ್ತುವು 'ಈಗಾಗಲೇ ಇದೆ'. ಹಾಗಾಗಿ ಅದು ತನ್ನ ಇರುವಿಕೆಗೆ ಇನ್ನೊಂದನ್ನು ಅವಲಂಬಿಸುವ ಅಗತ್ಯವೇಬಾರದು.ಮಡಕೆ ಈಗಾಗಲೇ ಸ್ವತಂತ್ರವಾಗಿ ಇದೆ ಎಂದಾದರೆ ಮಣ್ಣು ಇತ್ಯಾದಿಗಳ ಹಂಗೇ ಅದಕ್ಕಿಲ್ಲ. ಇನ್ನು ಇಲ್ಲದಿರುವ ವಸ್ತು ಮತ್ತೊಂದನ್ನು ಅವಲಂಬಿಸುವ ಮಾತೇ ಇಲ್ಲ. ಇಲ್ಲದ ಮೊಲದ ಕೊಂಬು ತಾನು ಯಾರನ್ನಾದರೂ ಆಶ್ರಯಿಸಬೇಕಾದ ಅಗತ್ಯವೇ ಇಲ್ಲ. ಇನ್ನು ಇರುವ–ಇಲ್ಲದಿರುವ (ಉಭಯ) ವಸ್ತುವೂ ಮತ್ತೊಂದನ್ನು ಅವಲಂಬಿಸಲಾರದು. ಇಲ್ಲಿ ಮೇಲಿನ ಎರಡೂ ತೊಡಕುಗಳು ಮೇಳೈಸಿವೆ ಅಷ್ಟೆ.

ಇಲ್ಲೊಂದು ತರ್ಕದ ಸಾಮಾನ್ಯ ನಿಯಮವಿದೆ. ಅದೇನೆಂದರೆ (೧) ವಸ್ತುವೊಂದು 'ಈಗಾಗಲೇ ಇದೆ' ಎಂದಾದರೆ ಅದು ತನ್ನ ಅಸ್ತಿತ್ವಕ್ಕಾಗಿ ಮತ್ತೊಂದನ್ನು ಅವಲಂಬಿಸಬೇಕಾದ ಅಗತ್ಯವಿಲ್ಲ. (೨) ವಸ್ತುವೊಂದು ಅಸ್ತಿತ್ವದಲ್ಲಿ 'ಇಲ್ಲ' ಎಂದಾದರೆ ಆಗಲೂ ಅದು ಯಾವುದನ್ನೂ ಅವಲಂಬಿಸಬೇಕಾಗಿಲ್ಲ. (೩) ಇರುವ–ಇಲ್ಲದಿರುವ ವಸ್ತುವೆಂಬುದು ಅತಾರ್ಕಿಕ. ಹಾಗಾಗಿ ಅದೂ ಮತ್ತೊಂದನ್ನು ಅವಲಂಬಿಸುವ ಸಂದರ್ಭವೇ ಬರುವುದಿಲ್ಲ. ಈ ನಿಯಮ ಪ್ರಮಾಣ–ಪ್ರಮೇಯಗಳಿಗೂ ಅನ್ವಯವಾಗುತ್ತದೆ.

ಪ್ರತಿಪಕ್ಷದ ನಿಲುವು:

□ **ಪ್ರಮೇಯಗಳನ್ನು ಸಿದ್ಧಿಸಿಕೊಡಲು ಮಾತ್ರ ಪ್ರಮಾಣಗಳು ಇರುತ್ತವೆ.** ಈ ಅಂಶವನ್ನು ನಿರಾಕರಿಸಿದರೆ ಮಾತ್ರ, ಪ್ರಮಾಣಗಳ ಪ್ರಮಾಣಗಳನ್ನು ಹುಡುಕುವ ಅನಂತ ಹಿಂಪಯಣದ ತೊಡಕುಂಟಾಗುತ್ತದೆ. ಅಳೆಯುವ ಸಾಧನವೇ ಇಲ್ಲದಿದ್ದರೆ ಅಳತೆಗೊಳ್ಳುವ ವಸ್ತುವು ಹೇಗೆ ಅರಿವಿಗೆ ಬಾರದೋ ಹಾಗೆ ಪ್ರಮಾಣವಿಲ್ಲದೆ ಪ್ರಮೇಯವು ಸಿದ್ಧಗೊಳ್ಳದು. ಇದಕ್ಕೆ ನೀನು ಉತ್ತರಿಸಬೇಕು.

ನಾಗಾರ್ಜುನನ ನಿಲುವು:

ಇಲ್ಲೊಂದು ಅನಂತ ಹಿಂಪಯಣದ ಅಸಂಗತವಿರುವುದರಿಂದಾಗಿ ನಿನ್ನ ವಾದ ಮಾನ್ಯವಲ್ಲ. ಪ್ರಮಾಣವಿಲ್ಲದೆ ಪ್ರಮೇಯವು ಸಿದ್ಧಿಸದು ಎನ್ನುವುದಾದರೆ, ನನ್ನ ಪ್ರಶ್ನೆ ಇದು–ಪ್ರಮಾಣವನ್ನು ಸಿದ್ಧಿಸಿಕೊಡುವ ಪ್ರಮಾಣವೆಲ್ಲಿ? ಪ್ರಪಂಚದ ಎಲ್ಲ ವಸ್ತುಗಳೂ ಪ್ರಮಾಣಗಳಿಂದ ಸಿದ್ಧಿಸುತ್ತವೆ ಎಂದು ಹೇಳುವಿಯಾದರೆ, ಆ ಪ್ರಮಾಣಗಳನ್ನು ಸಿದ್ಧಿಸಿಕೊಡಲು ಈ ಪ್ರಪಂಚದಲ್ಲಿಲ್ಲದ ಬೇರೆ ಪ್ರಮಾಣಗಳನ್ನು ತರುವ ಅಸಂಗತವೇರ್ಪಡುತ್ತದೆ. ಏಕೆಂದರೆ ಈ ಪ್ರಪಂಚದ ಎಲ್ಲ ವಸ್ತುಗಳನ್ನು ಸಿದ್ಧಿಸಲು ಬಳಸಿರುವ ಪ್ರಮಾಣಗಳೂ ಇದೇ ಪ್ರಪಂಚದ ವಸ್ತುಗಳಾಗಿವೆ. ಪ್ರಮಾಣಗಳನ್ನು ಬೇರೆ ಪ್ರಮಾಣಗಳ ಮೂಲಕ ಸಿದ್ಧಪಡಿಸಲಾಗದೇ ಹೋದಲ್ಲಿ, ಎಲ್ಲ ಪ್ರಮೇಯಗಳೂ ಪ್ರಮಾಣಗಳಿಂದ ಸಿದ್ಧಗೊಳ್ಳುತ್ತವೆ ಎಂಬ ವಾದವೇ ಹತವಾಗುತ್ತದೆ.

ಪ್ರತಿಪಕ್ಷದ ನಿಲುವು:

ಪ್ರಮಾಣಗಳು ದೀಪದ ಪ್ರಕಾಶದಂತೆ ಸ್ವಯಂಸಿದ್ಧವಾದವು. ಹಾಗಾಗಿ ಪ್ರಮಾಣಗಳಿಗೆ ಮತ್ತೆ ಪ್ರಮಾಣಗಳನ್ನು ಹುಡುಕುವ ಎಂದೂ ಮುಗಿಯದ ಹಿಂಪಯಣ ಉಂಟಾಗದು. ದೀಪವು ಹೇಗೆ ಸ್ವಯಂಪ್ರಕಾಶಿ ಮತ್ತು ಅನ್ಯಪ್ರಕಾಶಿಯೋ ಹಾಗೆಯೇ ಪ್ರಮಾಣಗಳು ಕೂಡ ತಮ್ಮನ್ನೂ ಸಿದ್ಧಗೊಳಿಸಿಕೊಳ್ಳುತ್ತವೆ ಮತ್ತು ಪ್ರಮೇಯಗಳನ್ನೂ ಸಿದ್ಧಿಸಿಕೊಡುತ್ತವೆ.

ನಾಗಾರ್ಜುನನ ನಿಲುವು:

ಇಲ್ಲ. ಬೆಳಕು ಕತ್ತಲಿನ ಸಂಪರ್ಕದಲ್ಲಿಯಾಗಲೀ ಸಂಪರ್ಕವಿಲ್ಲದೆಯಾಗಲೀ ಅದನ್ನು ಬೆಳಗಿಸುವುದಿಲ್ಲ. ಬೆಳಕಿಗೆ ಕತ್ತಲಿನ ಸಂಪರ್ಕವೆಂದೂ ಬಾರದು. ಬೆಳಕು ಮತ್ತು ಕತ್ತಲು ಪ್ರತಿಷೇಧ ಅಸ್ತಿತ್ವವುಳ್ಳವುಗಳು. ಬೆಳಕಿರುವಲ್ಲಿ ಕತ್ತಲು ಇರದು. ಹಾಗಾಗಿ ಬೆಳಕು ಕತ್ತಲನ್ನು ನಾಶಮಾಡುವ ಅಥವಾ ಬೆಳಗಿಸುವ ಸಂದರ್ಭವೇ ಬಾರದು. ಸಂಪರ್ಕಕ್ಕೇ ಬಾರದ ಕತ್ತಿ ಹೇಗೆ ತುಂಡರಿಸಲಾರದೋ ಹಾಗೆಯೇ ಬೆಳಕೂ ಕೂಡಾ. (ನಾಗಾರ್ಜುನ ತನ್ನ ಮೂಲಮಧ್ಯಮಕಕಾರಿಕಾದಲ್ಲಿ ಕತ್ತಲನ್ನು ವಿವರಿಸುತ್ತಾ ಅದನ್ನು ಬೆಳಕಿಗೆ ಪ್ರತಿಯಾಗಿ ಭಾವಿಸುವುದಿಲ್ಲ. ಕತ್ತಲೆಂದರೆ 'ಏನೂ ಇಲ್ಲದ್ದು', ಆಕಾಶದಂತೆ. ಆದರೆ ಬೆಳಕು ಸದಾ ಚಲನೆಯಲ್ಲಿರುವ ಕ್ರಿಯಾ ಸಾಮರ್ಥ್ಯ. ಏನೂ ಅಲ್ಲದಿರುವುದು ಕ್ರಿಯಾ ಸಾಮರ್ಥ್ಯಕ್ಕೆ ಪ್ರತಿಯಲ್ಲ.)

ಪ್ರತಿಪಕ್ಷದ ನಿಲುವು:

ಗ್ರಹಗಳು ದೂರದಲ್ಲಿದ್ದೂ ಮನುಷ್ಯನ ಮೇಲೆ ಪ್ರಭಾವ ಬೀರುವಂತೆ ಬೆಳಕು ದೂರದಲ್ಲಿದ್ದೂ ಕತ್ತಲನ್ನು ಓಡಿಸಬಲ್ಲದು

ಪ್ರಮಾಣ ಪ್ರಮೇಯಗಳು ಮೂರು ಕಾಲಗಳಲ್ಲಿಯೂ ಸಿದ್ಧಗೊಳ್ಳುವುದಿಲ್ಲ. ಹೇಗೆಂದರೆ–ಪ್ರಮಾಣವು ಉಂಟು ಎನ್ನುವುದಾದರೆ ಅದರ ಅಸ್ತಿತ್ವದ ಸಾಧ್ಯತೆಗಳು ಇವು: ೧) ಪ್ರಮಾಣವು ಪ್ರಮೇಯಕ್ಕೆ ಮುನ್ನವೇ ಅಸ್ತಿತ್ವದಲ್ಲಿರಬೇಕು ೨) ಪ್ರಮಾಣವು ಪ್ರಮೇಯದ ನಂತರ ಅಸ್ತಿತ್ವದಲ್ಲಿರಬೇಕು ೩) ಮೂರನೆಯದಾಗಿ ಪ್ರಮಾಣ ಪ್ರಮೇಯಗಳು ಒಂದೇ ಸಮಯದಲ್ಲಿ ಸಿದ್ಧಗೊಳ್ಳಬೇಕು. ಇವುಗಳಲ್ಲಿ ಮೊದಲನೆಯದು: ಪ್ರಮೇಯಕ್ಕೆ ಮುನ್ನವೇ ಪ್ರಮಾಣ ಸಿದ್ಧಗೊಂಡಿದೆ ಎನ್ನುವುದಾದರೆ, ವಸ್ತುವೇ ಇಲ್ಲದೆ ಅದನ್ನು ತೋರಿಸಿಕೊಡುವ ಪ್ರಮಾಣಕ್ಕೆ ಧನ್ಯವಾದಗಳನ್ನು ಅರ್ಪಿಸಬೇಕು! ವಸ್ತುವಿಲ್ಲದೆಯೇ ಪ್ರಮಾಣವಾಗಬಲ್ಲ ಆ ಪ್ರಮಾಣ ಮತ್ತು ಅಂತಹ ಪ್ರಮಾಣದಿಂದ ಸಿದ್ಧವಾಗುವ ಇಲ್ಲದ ವಸ್ತು! ಇವುಗಳಿಗೂ ಕೃತಜ್ಞತೆಗಳು! ಶುದ್ಧ ಅತಾರ್ಕಿಕವಾದ ಈ ಸಾಧ್ಯತೆ ಎಂತೂ ಮಾನ್ಯವಲ್ಲ.

ನಾಗಾರ್ಜುನ:

ನೀನು ಕೊಡುತ್ತಿರುವ ಹೋಲಿಕೆ ಸರ್ವಥಾ ಸಾಧುವಲ್ಲ. ಗ್ರಹಗಳು ಪ್ರಭಾವಿಸುತ್ತವೆ ಎಂದು ಹೇಳುತ್ತಿರುವ ಸಂಗತಿಗಳಿಗೆ ದೇಹವಿದೆ. ಆದರೆ ಕತ್ತಲು ಹಾಗಲ್ಲ. ಅದಕ್ಕೆ ಅಸ್ತಿತ್ವವಿಲ್ಲ. ಸಂಪರ್ಕಕ್ಕೆ ಬಾರದೆಯೇ ಬೆಳಕು ಕತ್ತಲನ್ನು ಬೆಳಗಿಸಬಲ್ಲದು ಎನ್ನುವುದಾದರೆ ಇಲ್ಲಿನ ಬೆಳಕಿಗೆ ಬೇರೆ ಲೋಕದ ಕತ್ತಲನ್ನೂ, ಭೂಮಿಯಲ್ಲಿರುವ ಎಲ್ಲ ಗುಹೆಗಳ ಕತ್ತಲನ್ನೂ ಕಳೆಯಲು ಸಾಧ್ಯವಾಗಬೇಕು. ಆದರೆ ಹಾಗೆ ಆಗುವುದಿಲ್ಲ. ಕತ್ತಲು ಎನ್ನುವುದು 'ಏನೂ ಇಲ್ಲದ್ದು'. ಅದು ಇಲ್ಲದಿರುವುದರಿಂದ ಅದನ್ನು ಬೆಳಗಿಸುವುದಾಗಲೀ, ಓಡಿಸುವುದಾಗಲೀ ಸಾಧ್ಯವಿಲ್ಲ. ಆದುದರಿಂದ ಪ್ರತಿಪಕ್ಷವು ಕೊಡುತ್ತಿರುವ ದೃಷ್ಟಾಂತವು ಮಾನ್ಯವಲ್ಲ.

ಮತ್ತೂ ಮುಂದಕ್ಕೆ:

ಪ್ರಮಾಣ ಪ್ರಮೇಯಗಳು ಮೂರು ಕಾಲಗಳಲ್ಲಿಯೂ ಸಿದ್ಧಗೊಳ್ಳುವುದಿಲ್ಲ. ಹೇಗೆಂದರೆ–ಪ್ರಮಾಣವು ಉಂಟು ಎನ್ನುವುದಾದರೆ ಅದರ ಅಸ್ತಿತ್ವದ ಸಾಧ್ಯತೆಗಳು ಇವು: ೧) ಪ್ರಮಾಣವು ಪ್ರಮೇಯಕ್ಕೆ ಮುನ್ನವೇ ಅಸ್ತಿತ್ವದಲ್ಲಿರಬೇಕು ೨) ಪ್ರಮಾಣವು ಪ್ರಮೇಯದ ನಂತರ ಅಸ್ತಿತ್ವದಲ್ಲಿರಬೇಕು ೩) ಮೂರನೆಯದಾಗಿ ಪ್ರಮಾಣ ಪ್ರಮೇಯಗಳು ಒಂದೇ ಸಮಯದಲ್ಲಿ ಸಿದ್ಧಗೊಳ್ಳಬೇಕು.

ಇವುಗಳಲ್ಲಿ ಮೊದಲನೆಯದು: ಪ್ರಮೇಯಕ್ಕೆ ಮುನ್ನವೇ ಪ್ರಮಾಣ ಸಿದ್ಧಗೊಂಡಿದೆ ಎನ್ನುವುದಾದರೆ, ವಸ್ತುವೇ ಇಲ್ಲದೆ ಅದನ್ನು ತೋರಿಸಿಕೊಡುವ ಪ್ರಮಾಣಕ್ಕೆ ಧನ್ಯವಾದಗಳನ್ನು ಅರ್ಪಿಸಬೇಕು! (ಮೊಲವೇ ಇಲ್ಲದೆ ಅದನ್ನು ಕಾಣಿಸಿಕೊಡಬಲ್ಲ ಪ್ರಮಾಣಕ್ಕೆ ಕೃತಜ್ಞತೆಗಳು ಸಲ್ಲಲೇಬೇಕು!) ವಸ್ತುವಿಲ್ಲದೆಯೇ ಪ್ರಮಾಣವಾಗಬಲ್ಲ ಆ ಪ್ರಮಾಣ ಮತ್ತು ಅಂತಹ ಪ್ರಮಾಣದಿಂದ ಸಿದ್ಧವಾಗುವ ಇಲ್ಲದ ವಸ್ತು! ಇವುಗಳಿಗೂ ಕೃತಜ್ಞತೆಗಳು! ಶುದ್ಧ ಅತಾರ್ಕಿಕವಾದ ಈ ಸಾಧ್ಯತೆ ಎಂತೂ ಮಾನ್ಯವಲ್ಲ.

ಇವುಗಳಲ್ಲಿ ಎರಡನೆಯದು: ಪ್ರಮೇಯಾನಂತರ ಪ್ರಮಾಣವು ಸಿದ್ಧಿಸುತ್ತದೆ ಎಂದಾದರೆ ಈಗಾಗಲೇ ಪ್ರಮೇಯವು ಸಿದ್ಧಿಸಿರುವುದರಿಂದ ಪ್ರಮಾಣವಾದರೂ ಯಾಕೆ ಬೇಕು? ಅದನ್ನು ಪ್ರಮಾಣ ಎಂದಾದರೂ ಯಾಕೆ ಕರೆಯ ಬೇಕು? ಈಗಾಗಲೇ ಇರುವ ಮೊಲಕ್ಕೆ ಇಲ್ಲದ ಅದರ ಕೊಂಬುಗಳು ಪ್ರಮಾಣವೆ?

ಇನ್ನು ಕೊನೆಯದು: ಪ್ರಮಾಣ ಪ್ರಮೇಯಗಳೆರಡೂ ಜೊತೆಯಲ್ಲಿ ಸಿದ್ಧಿಸುತ್ತವೆ ಎಂದಾದರೆ ಕಾರಣ ಮತ್ತು ಪರಿಣಾಮಗಳು ಒಂದೇ ಎಂದಾಗುತ್ತದೆ. ಅದೂ ಅಸಂಭವ. ಅಪ್ಪ □ ಮಗ ಒಟ್ಟಿಗೇ ಹುಟ್ಟಲು ಸಾಧ್ಯವೇ?

ಪ್ರತಿಪಕ್ಷ:

ಪ್ರಮಾಣ ಪ್ರಮೇಯಗಳು ತ್ರಿಕಾಲಗಳಲ್ಲಿಯೂ ಸಿದ್ಧಿಸಿಲ್ಲ ಎನ್ನುವುದಾದರೆ ಅವುಗಳ ನಿರಾಕರಣೆಯೂ ತಾರ್ಕಿಕವಾಗಿ ಸಾಧ್ಯವಿಲ್ಲ. ಯಾವುದರ ನಿರಾಕರಣೆ ಸಾಧ್ಯವೋ ಅದು ಪರೀಕ್ಷಿಸಲ್ಪಟ್ಟು ನಿರಾಕರಣೆಗೊಂಡಿರುವುದರಿಂದ ಅದು ಇದೆಯೆಂದೇ ಅರ್ಥ. ಇಲ್ಲವಾದರೆ ನಿನ್ನ ನಿರಾಕರಣೆಯೂ ನಿರಾಕರಣೆಗೊಳ್ಳಬೇಕಾಗುತ್ತದೆ.

ನಾಗಾರ್ಜುನ:

ತ್ರಿಕಾಲಗಳಲ್ಲಿ ಪ್ರಮಾಣ ಪ್ರಮೇಯಗಳು ಸಿದ್ಧಿಸಿವೆಯೋ ಇಲ್ಲವೋ ಎಂಬ ಪರೀಕ್ಷೆ ನಡೆದದ್ದೇ ಪೂರ್ವಸ್ಮೃತಿಯಿಂದ. ಆದುದರಿಂದ ಪರೀಕ್ಷೆಯ ಫಲಿತಾಂಶದೊಂದಿಗೆ ನಮ್ಮ ವಾದ ಮುಕ್ತಾಯವಾಗಲೇಬೇಕು. ಪ್ರಮಾಣ ಪ್ರಮೇಯಗಳು ತ್ರಿಕಾಲಗಳಲ್ಲಿಯೂ ಸಿದ್ಧಿಸಿಲ್ಲ ಎಂಬನನ್ನ

ನಿರಾಕರಣೆಯೇ ಫಲಿತಾಂಶ. ಅದನ್ನು ಮೊದಲು ಒಪ್ಪಿಕೊಂಡು ನಿರಾಕರಣೆಯನ್ನು ನಿರಾಕರಿಸುವುದಾದರೆ, ಕೇವಲ ವಾದಕ್ಕೆ ವಾದ ಎನ್ನುವುದಾದರೆ ನನ್ನ ಪ್ರತಿಕ್ರಿಯೆಯನ್ನು ಮುಕ್ತಾಯಗೊಳಿಸುತ್ತೇನೆ.

ಹಾಗೂ,

ನಿರಾಕರಣೆಗೊಂಡುದು ಅಸ್ತಿತ್ವದಲ್ಲಿಲ್ಲದ್ದು ಎಂದಾಗ ಕೂಡ ನಿರಾಕರಣೆ ಸಾಧ್ಯವಾಗುತ್ತದೆ. ಯಾಕೆಂದರೆ ನಿರಾಕರಣೆಯು ಕೇವಲ ಪರಿಕಲ್ಪನೆ ಮಾತ್ರ. ಉದಾಹರಣೆಗೆ ನದಿಯನ್ನು ದಾಟಬೇಕಾದವನೊಬ್ಬ, ನದಿಯ ಆಳದ ಬಗೆಗೆ ಗೊತ್ತಿಲ್ಲದೆ ಭಯಪಡುವಾಗ, ಅದರ ಆಳವನ್ನು ಅರಿತವನು 'ನದಿಯು ಆಳವಿಲ್ಲ' ಎಂದು ತಿಳಿಸಿ ಅವನ ಭಯವನ್ನು ನಿವಾರಿಸಿದರೆ, ಇಲ್ಲದ್ದನ್ನು ನಿರಾಕರಿಸುತ್ತಿದ್ದರೂ ಆಳದ ನಿರಾಕರಣೆಯು ಮಾನ್ಯವಾಗುತ್ತದೆ.

ಇದೇ ಸಂಗತಿಯನ್ನು ನಾಗಾರ್ಜುನ ತನ್ನ ವಿಗ್ರಹ ವ್ಯಾವರ್ತಿನಿಯಲ್ಲಿ ಮತ್ತೊಂದು ದಿಕ್ಕಿನಿಂದ ವಿವರಿಸಿಕೊಡುತ್ತಾನೆ. ತರ್ಕದ ಈ ಮಾದರಿಗಳು ನಮ್ಮ ಚಿಂತನೆಯ ಕ್ರಮ ದಲ್ಲಿ ಹೆಚ್ಚು ಪ್ರಚಲಿತವಲ್ಲವಾದುದರಿಂದ ಈ ಭಾಗವನ್ನೂ ನಾವು ಪರಿಶಿಲಿಸಿದರೆ ತರ್ಕಮಾರ್ಗದ ಪ್ರಯಾಣದ ಆಯಾಸ ತುಸು ಕಡಿಮೆಯಾದೀತು. ವಿಗ್ರಹವ್ಯಾವರ್ತಿನಿಯ ಆ ಭಾಗವನ್ನು ಇಲ್ಲಿ ಉದ್ಧರಿಸಿದ್ದೇನೆ.

ಸರ್ವಶೂನ್ಯವಾದದಲ್ಲಿ ಪ್ರಮಾಣಗಳೂ ಶೂನ್ಯವೇ ಆಗಿರುವುದರಿಂದ ಗ್ರಹಿಕೆ ಎಂಬ ಪ್ರಕ್ರಿಯೆಯೇ ಉಂಟಾಗದು. ಇನ್ನು ನಿರಾಕರಣೆ ಹೇಗೆ ಸಾಧ್ಯ? ಎಂಬ ಪ್ರಶ್ನೆಗೆ ನಾಗಾರ್ಜುನ ತನ್ನ ಉತ್ತರದಲ್ಲಿ ಪ್ರಮಾಣಗಳನ್ನು ವಿಶ್ಲೇಷಣೆಗೆ ಎತ್ತಿಕೊಳ್ಳುತ್ತಾನೆ.

ಕಾರಿಕೆ ೩೦. ನಾನು ಪ್ರತ್ಯಕ್ಷ ಇತ್ಯಾದಿ ಸಾಧನಗಳಿಂದ ಏನನ್ನಾದರೂ ಗ್ರಹಿಸಿದ್ದರೆ ಆಗ ನಿರಾಕರಿಸುತ್ತಿದ್ದೆ ಅಥವಾ ಒಪ್ಪುತ್ತಿದ್ದೆ. ಆದರೆ ಅದು ಹಾಗಲ್ಲ.

ನಾಲ್ಕು ಪ್ರಮಾಣಗಳ ಮೂಲಕ ನಾನು ಏನನ್ನಾದರೂ ಗ್ರಹಿಸಿದ್ದರೆ ಆಗ ಒಪ್ಪುತ್ತಿದ್ದೆ ಇಲ್ಲಾ ನಿರಾಕರಿಸುತ್ತಿದ್ದೆ. ಆದರೆ ನಾನು ಯಾವ ಯಥಾರ್ಥವನ್ನೂ ಉಪಲಬ್ಧಗೊಳಿಸಿಕೊಂಡಿಲ್ಲ. ಹೀಗಾಗಿ ಪ್ರಮಾಣವೊಂದರ ಮೂಲಕ ನಾನು ಗ್ರಹಿಸಿ ಅದನ್ನು ನಿರಾಕರಿಸುತ್ತಿದ್ದೆ ಎಂದು ನೀನು ಹೇಳಿದರೆ ಅದಕ್ಕೆ ನನ್ನ ಉತ್ತರ : "ಪ್ರಮಾಣಗಳೂ ಇಲ್ಲ, ಅವುಗಳಿಂದ ಗಮ್ಯವಾದದ್ದೂ ಇಲ್ಲ"

೩೧. ಪ್ರಮಾಣಗಳಿಂದ ಈ ಪದಾರ್ಥಗಳು ನಿನಗೆ ಪ್ರಸಿದ್ಧವಾಗುತ್ತವೆ ಎಂದಾದರೆ, ಪ್ರಮಾಣಗಳು ಹೇಗೆ ಪ್ರಸಿದ್ಧಗೊಳ್ಳುತ್ತವೆ ಎಂಬುದನ್ನು ಹೇಳು?

ಪ್ರಮಾಣಗಳಿಂದ ಪ್ರಮೇಯಗಳು ಸಿದ್ಧವಾಗುತ್ತವೆ ಎಂದಾದರೆ ಮಾನದಂಡಗಳಿಂದ 'ಮೇಯ' (ಅಳತೆಗೊಳ್ಳುವ ಪದಾರ್ಥ) ಸಿದ್ಧವಾದಂತೆ ಇದು ಕೂಡಾ. ಪ್ರಮಾಣಗಳು ಪ್ರಮಾಣಗಳ ನೆರವಿಲ್ಲದೆ ಸಿದ್ಧವಾಗುತ್ತವೆ ಎಂದರೆ, ಪ್ರಮಾಣಗಳ ಮೂಲಕ ಸಂಗತಿಗಳು ಸಿದ್ಧವಾಗುತ್ತವೆ ಎಂಬ ನಿನ್ನ ಪ್ರತಿಜ್ಞೆ ಆಗ ಹತವಾಗುತ್ತದೆ.

೩೨. (ಅ-ಆ) ಒಂದು ಪಕ್ಷ, ಪ್ರಮಾಣಗಳ ಮೂಲಕ ಪ್ರಮಾಣಗಳು ಸಿದ್ಧವಾಗುತ್ತವೆ ಎಂದಾದರೆ ಆಗ ಅವು ಅನಂತವಾಗುತ್ತವೆ.

೩೨. (ಇ-ಈ) ಆಗ ಯಾವುದರ ಪ್ರಾರಂಭ, ಮಧ್ಯ, ಅಂತ್ಯ ಎಂಬುದು ಕೂಡಾ ಸಿದ್ಧವಾಗುವುದಿಲ್ಲ.

ಏಕೆಂದರೆ ಯಾವುದನ್ನೂ ಸಿದ್ಧಗೊಳಿಸಬೇಕು ಎಂದು ಹೊರಡುತ್ತೇವೆಯೋ ಅದರ ಪ್ರಮಾಣವನ್ನು ಸಿದ್ಧ

ಇದು ವಿಷಮೋಪನ್ಯಾಸ. ಅಗ್ನಿ ಸ್ವ-ಪ್ರಕಾಶಿ ಅಲ್ಲ, ಅದರ ಸ್ವ-ಗ್ರಹಿಕೆಯ ಪ್ರಮಾಣಗಳು ಸ್ವತಃಸಿದ್ಧ-ಮತ್ತು ಅನ್ಯವನ್ನೂ, ಪ್ರಸಿದ್ಧಗೊಳಿಸುತ್ತವೆ ಎಂಬುದು ಮಾನ್ಯವಲ್ಲ. ಕತ್ತಲಲ್ಲಿರುವ ಮಡಕೆಯ ಮೇಲೆ ಬೆಂಕಿಯ ಬೆಳಕು ಬೀಳುವ ತನಕ ಮಡಕೆ ಕಾಣಿಸುವುದಿಲ್ಲ. ಬೆಂಕಿಯ ಬೆಳಕು ಬೀಳುವುದರಿಂದ ಅದು ಪ್ರಕಾಶಿತವಾಗುತ್ತದೆ. ಆದರೆ, ಅಗ್ನಿ ಹೊತ್ತಿಕೊಳ್ಳುವುದಕ್ಕೆ ಮುಂಚೆ ಕತ್ತಲಲ್ಲಿದ್ದಾಗಲೂ ಪ್ರಕಾಶಿತವಾಗಿದ್ದರೆ, ಅದನ್ನು ಸ್ವ-ಪ್ರಕಾಶಿ ಎನ್ನಬಹುದಿತ್ತು. ಅದರೆ ಅದು ಹಾಗಿಲ್ಲ. ಹೀಗಾಗಿ ನಿನ್ನ ನಿಲುವು ಮಾನ್ಯವಲ್ಲ. ಒಂದು ಪಕ್ಷ-ಪ್ರಮಾಣಗಳು ಸ್ವತಃ ಸಿದ್ಧ ಎಂದರೆ ಪ್ರಮೇಯಗಳಿಲ್ಲದೆ ಸ್ವತಂತ್ರವಾಗಿ ಪ್ರಮಾಣಗಳು ಸಿದ್ಧಿಯಾಗುತ್ತವೆ.

ಮಾಡಬೇಕಾಗುತ್ತದೆ. ಪ್ರಮಾಣಗಳ ಪ್ರಮಾಣ-ಪ್ರಮಾಣಗಳ ಪ್ರಮಾಣ ಹೀಗೆ ಯಾವುದಕ್ಕೂ ಪ್ರಾರಂಭವೇ ಇರುವುದಿಲ್ಲ. ಪ್ರಾರಂಭವೇ ಇರದೆ ಮಧ್ಯ ಎಲ್ಲಿ? ಹೀಗಾಗಿ ಉಳಿದ ಪ್ರಮಾಣಗಳ ಮೂಲಕ ಪ್ರಮಾಣಗಳು ಸಿದ್ಧವಾಗುತ್ತವೆ ಎಂಬ ನಿಲುವು ಮಾನ್ಯವಲ್ಲ.

ಇದಕ್ಕೆ ವಿರೋಧಿಯ ಉತ್ತರ ಹೀಗೆ: ಪ್ರಮಾಣಗಳು ತಾವು ಸಿದ್ಧವಾಗುವುದರ ಜತೆಗೆ, ಉಳಿದವನ್ನೂ ಸಿದ್ಧಗೊಳಿಸುತ್ತವೆ. ಅದು ಹೇಗೆಂದರೆ :

"ಅಗ್ನಿಯು ಸ್ವ-ಪ್ರಕಾಶಿ ಹಾಗೂ ಅನ್ಯ-ಪ್ರಕಾಶಿ. ಹಾಗೆಯೇ ಪ್ರಮಾಣಗಳು ಸ್ವತಃ ಸಿದ್ಧ, ಅನ್ಯ ಪ್ರಸಿದ್ಧ ಸಾಧಕ"

೩೪. ಇದಕ್ಕೆ ನಾಗಾರ್ಜುನನ ಉತ್ತರ :

ಇದು ವಿಷಮೋಪನ್ಯಾಸ. ಅಗ್ನಿ ಸ್ವ-ಪ್ರಕಾಶಿ ಅಲ್ಲ, ಅದರ ಸ್ವ-ಗ್ರಹಿಕೆಯ ಪ್ರಮಾಣಗಳು ಸ್ವತಃಸಿದ್ಧ-ಮತ್ತು ಅನ್ಯವನ್ನೂ, ಪ್ರಸಿದ್ಧಗೊಳಿಸುತ್ತವೆ ಎಂಬುದು ಮಾನ್ಯವಲ್ಲ. ಕತ್ತಲಲ್ಲಿರುವ ಮಡಕೆಯ ಮೇಲೆ ಬೆಂಕಿಯ ಬೆಳಕು ಬೀಳುವ ತನಕ ಮಡಕೆ ಕಾಣಿಸುವುದಿಲ್ಲ. ಬೆಂಕಿಯ ಬೆಳಕು ಬೀಳುವುದರಿಂದ ಅದು ಪ್ರಕಾಶಿತವಾಗುತ್ತದೆ. ಆದರೆ, ಅಗ್ನಿ ಹೊತ್ತಿಕೊಳ್ಳುವುದಕ್ಕೆ ಮುಂಚೆ ಕತ್ತಲಲ್ಲಿದ್ದಾಗಲೂ ಪ್ರಕಾಶಿತವಾಗಿದ್ದರೆ, ಅದನ್ನು ಸ್ವ-ಪ್ರಕಾಶಿ ಎನ್ನಬಹುದಿತ್ತು. ಅದರೆ ಅದು ಹಾಗಿಲ್ಲ. ಹೀಗಾಗಿ ನಿನ್ನ ನಿಲುವು ಮಾನ್ಯವಲ್ಲ.

೪೦. ಒಂದು ಪಕ್ಷ-ಪ್ರಮಾಣಗಳು ಸ್ವತಃಸಿದ್ಧ ಎಂದರೆ ಪ್ರಮೇಯಗಳಿಲ್ಲದೆ ಸ್ವತಂತ್ರವಾಗಿ ಪ್ರಮಾಣಗಳು ಸಿದ್ಧಿಯಾಗುತ್ತವೆ.

ಅದಕ್ಕೆ ಪ್ರತಿವಾದಿ ಹೀಗೆ ವಾದಿಸಬಹುದು: ಇರಲಿ. ಪ್ರಮೇಯಗಳಿಲ್ಲದೆ ಪ್ರಮಾಣಗಳು ಸಿದ್ಧವಾಗುತ್ತವೆ ಎಂದಾದರೆ ಆಗುವ ಪ್ರಮಾದವಾದರೂ ಏನು?

೪೧. ಪ್ರಮಾಣಗಳು ಪ್ರಮೇಯಾರ್ಥಗಳಿಲ್ಲದೆಯೇ ಸಿದ್ಧಗೊಳ್ಳುತ್ತವೆ ಎಂದಾದರೆ, ಆ ಪ್ರಮಾಣಗಳು ಏನೂ ಅಲ್ಲ.

ಮೇಲಿನ ಸ್ಥಿತಿಯಲ್ಲಿ ಪ್ರಮಾಣಗಳು ಯಾವುದರವೂ ಅಲ್ಲ. ಹಾಗಾಗಿ ಇದೊಂದು ದೋಷ. ಇಲ್ಲಾ, ಈ ಪ್ರಮಾಣಗಳು ಯಾವುದರವೋ ಪ್ರಮಾಣ ಎಂದಾದರೆ ಪ್ರಮೇಯಾರ್ಥಗಳು ಬೇಕಿಲ್ಲದ ಪ್ರಮಾಣಗಳಾಗುವುದಿಲ್ಲ.

೪೨. (ವಿರೋಧಿ ಹೀಗೆ ಉತ್ತರಿಸಬಹುದು) ಒಂದು ಪಕ್ಷ ಪ್ರಮಾಣಗಳು ಪ್ರಮೇಯಾರ್ಥಗಳ ಸಂಬಂಧದಲ್ಲೇ ಸಿದ್ಧವಾಗುತ್ತವೆ ಎಂದಾದರೆ ಆಗಿನ ದೋಷವಾದರೂ ಏನು? ಆಗ ದೋಷವೆಂದರೆ-ಈಗಾಗಲೇ ಸಿದ್ಧವಾಗಿರುವುದೇ ಮತ್ತೆ ಸಿದ್ಧವಾಗುತ್ತದೆ. ಸಿದ್ಧವಾಗದೇ ಇರುವುದಕ್ಕೆ ಅನ್ಯದ ಅಗತ್ಯವಿಲ್ಲ.

ಪ್ರಮಾಣಗಳು ಪ್ರಮೇಯಾರ್ಥದ ಸಂಬಂಧದಲ್ಲಿಯೇ ಸಿದ್ಧವಾಗುತ್ತದೆ ಎಂದಾದರೆ ಈಗಾಗಲೇ ಸಿದ್ಧವಾಗಿರುವ ನಾಲ್ಕು ಪ್ರಮಾಣಗಳು ಮತ್ತೆ ಸಿದ್ಧವಾಗುತ್ತವೆ. ಏಕೆ? ಸಿದ್ಧವಾಗದೇ ಇರುವ ಸಂಗತಿಗೆ ಅನ್ಯದ ಅಗತ್ಯವಿಲ್ಲ. ಈಗಾಗಲೇ ಸಿದ್ಧವಾಗಿರುವುದು ಮತ್ತೆ ಸಿದ್ಧಗೊಳ್ಳುವುದು 'ಇಷ್ಟ'ದ್ದಲ್ಲ ಈಗಾಗಲೇ ಸಿದ್ಧವಾಗಿರುವುದನ್ನು ಮತ್ತೆ ಯಾರೂ ಮಾಡುವುದಿಲ್ಲ.

ಜೊತೆಗೆ : -

೪೩. ಪ್ರಮಾಣಗಳು ಪ್ರಮೇಯಗಳ ಸಂಬಂಧದಲ್ಲಿ ಸಿದ್ಧವಾಗುತ್ತವೆ ಎಂದಾದರೆ ಪ್ರಮಾಣಗಳಿಂದಾಗಿ ಪ್ರಮೇಯಗಳು ಸಿದ್ಧಗೊಳ್ಳುವುದಿಲ್ಲ ಎಂದಾಯಿತು.

-ಏಕೆ? ಸಾಧನಗಳು ಸಾಧ್ಯದಿಂದ ಸೃಷ್ಟಿಯಾಗುವುದಿಲ್ಲ. ಆದರೆ ಪ್ರಮಾಣಗಳೇ ಸಾಧನ, ಪ್ರಮೇಯಗಳೇ ಸಾಧ್ಯ ಎಂದು ಹೇಳಲಾಗಿದೆ.

೪೪. ಮತ್ತು ಪ್ರಮೇಯಗಳು ಪ್ರಮಾಣಗಳ ಸಂಬಂಧವಿಲ್ಲದೆಯೇ ಸಾಧ್ಯವಾಗುತ್ತವೆ ಎಂದಾದರೆ-ಪ್ರಮಾಣಗಳಿಂದಾಗಬೇಕಾದ್ದು ಏನು? ನಿನ್ನ ಉದ್ದೇಶ ಈಗಾಗಲೇ ಸಿದ್ಧಿಸಿಬಿಟ್ಟಿದೆ.

೪೫. ಜತೆಗೆ, ನೀನು ಪ್ರಮಾಣಗಳನ್ನು ಪ್ರಮೇಯಗಳ ಸಂಬಂಧದಲ್ಲೇ ಸಿದ್ಧಗೊಳಿಸಿದರೆ, ಆಗ ಪ್ರಮಾಣ ಮತ್ತು ಪ್ರಮೇಯಗಳು ಪರಸ್ಪರ ಬದಲಾದಂತೆ.

ಎಂದರೆ ಮೇಲಿನ ಪರಿಸ್ಥಿತಿಯಲ್ಲಿ ಪ್ರಮೇಯಗಳು ಪ್ರಮಾಣಗಳಾಗುತ್ತವೆ. ಏಕೆಂದರೆ ಅವು ಪ್ರಮಾಣಗಳನ್ನು ಸಿದ್ಧಗೊಳಿಸುತ್ತವೆ.

೪೬. ಪ್ರಮಾಣಗಳನ್ನು ಸಾಧ್ಯವಾಗಿಸುವುದರಿಂದ, ಪ್ರಮೇಯಗಳು ಸಿದ್ಧವಾಗುತ್ತವೆ ಮತ್ತು ಪ್ರಮೇಯಗಳನ್ನು ಸಾಧ್ಯವಾಗಿಸಿದರೆ ಪ್ರಮಾಣಗಳು ಸಿದ್ಧವಾಗುತ್ತವೆ ಎಂದು ನೀನು ಯೋಚಿಸಿದರೆ ಆಗ ಎರಡೂ ನಿನಗೆ ಸಿದ್ಧವಾಗುವುದಿಲ್ಲ. ಪ್ರಮೇಯಗಳಿಗೆ ಪ್ರಮಾಣಬೇಕು, ಪ್ರಮಾಣಗಳಿಗೆ ಪ್ರಮೇಯಬೇಕು ಎಂದಾದರೆ ಎರಡೂ ಸಿದ್ಧವಾಗುವುದಿಲ್ಲ. ಏಕೆ?

೪೭. ಪ್ರಮೇಯಗಳು ತಮ್ಮ ಪ್ರತಿಷ್ಠಾಪನೆಗೆ ಪ್ರಮಾಣಗಳನ್ನು ಆಧರಿಸಿವೆ ಎಂದಾದರೆ ಮತ್ತು ಆಪ್ರಮಾಣಗಳು ತಮ್ಮ ಪ್ರತಿಷ್ಠಾಪನೆಗೆ ಆಪ್ರಮೇಯಗಳನ್ನೇ ಆಧರಿಸಿವೆ ಎಂದಾದರೆ, ಪ್ರಮಾಣಗಳು ಪ್ರಮೇಯಗಳನ್ನು ಹೇಗಾದರೂ ಸಿದ್ಧಗೊಳಿಸಿಯಾವು?

ಮೇಲಿನಂತಾದರೆ ಪ್ರಮೇಯಗಳು ಸಿದ್ಧವಾಗದೆ ಪ್ರಮಾಣಗಳು ಸಿದ್ಧವಾಗುವುದಿಲ್ಲ. ಏಕೆಂದರೆ ಅವಕ್ಕೆ ಆಗ ಕಾರಣವೇ ಇಲ್ಲ. ಆಗ ತಾನೇ ಇನ್ನೂ ಸಿದ್ಧವಾಗದಿರುವ

(೪೫ನೇ ಪುಟಕ್ಕೆ)



ಧರೆ ಹತ್ತಿ ಉರಿದರೆ

- ೬ -

ಡಾ. ಟಿ.ಆರ್. ಚಂದ್ರಶೇಖರ್

ಮೇಲೆ ಕೆಳಗಾಗುವ ಲಿಂಗ ಸಂಬಂಧಗಳು

ಪ್ರಸ್ತಾವನೆ

ಲಿಂಗ ಎಂಬುದು ಜೀವಿಯ ಜೈವಿಕ ಗುರುತಿನ ಸಂಗತಿಯಾಗಿದೆ. ಆದರೆ ಲಿಂಗ ಸಂಬಂಧವೆಂಬುದು ಮಹಿಳೆಯರು ಮತ್ತು ಪುರುಷರ ನಡುವಿನ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಂಬಂಧಗಳನ್ನು ಒಳಗೊಂಡಿರುವ ಸಂಗತಿಯಾಗಿದೆ. ಇದು ಬಹಳ ಮುಖ್ಯವಾದ ಭಿನ್ನತೆಯಾಗಿದೆ. ಲಿಂಗ ಸಂಬಂಧಗಳನ್ನು ಸಾಮಾಜಿಕ–ಆರ್ಥಿಕ ನೆಲೆಗಳಲ್ಲಿ ಪರಿಭಾವಿಸಿಕೊಳ್ಳುವ ಅಗತ್ಯವನ್ನು ಇಂದು ಸ್ತ್ರೀ ವಾದಿಗಳು ಒತ್ತಾಯಿಸುತ್ತಿದ್ದಾರೆ. ಆದರೆ ಪುರುಷಶಾಹಿಯು ಲಿಂಗ ಸಂಬಂಧಗಳನ್ನು ಜೈವಿಕ ನೆಲೆಯಲ್ಲಿ ಪರಿಭಾವಿಸಿಕೊಳ್ಳುತ್ತಾ ಬಂದಿದೆ. ಸಂತಾನೋತ್ಪತ್ತಿಯನ್ನು, ಮನೆವಾರ್ತೆಯನ್ನು, ಸಂಗೋಪನೆಯನ್ನು ಜೈವಿಕವೆಂದು ಅವುಗಳನ್ನು ಮಹಿಳೆಯರೇ ನಿರ್ವಹಿಸಬೇಕೆಂದು ಒಂದು ರೀತಿಯ ನಿಯಮವನ್ನೇ ಮಾಡಲಾಗಿದೆ. ಅವು ಜೈವಿಕವಾಗಿ ಮಹಿಳೆಯರಿಗೆ ನಿಯತಿಯಾಗಿರುವ ಸಂಗತಿಯೆಂದು ಪ್ರತಿಪಾದಿಸಿಕೊಂಡು ಬರಲಾಗಿದೆ. ಇದಕ್ಕಿಂತ ಹೆಚ್ಚಾಗಿ ಲಿಂಗಸಂಬಂಧಗಳಲ್ಲಿ ಪುರುಷರು ಶ್ರೇಷ್ಠರೆಂದೂ ಮತ್ತು ಮಹಿಳೆಯರು ಕನಿಷ್ಠರೆಂದು ಶ್ರೇಣಿ ಕೃತ ವ್ಯವಸ್ಥೆಯನ್ನು ರೂಪಿಸಲಾಗಿದೆ. ಮಹಿಳೆಯರನ್ನು ಪ್ರಕೃತಿಗೆ, ಅಂದರೆ ಸಂತಾನೋತ್ಪತ್ತಿಗೆ, ಮನೆವಾರ್ತೆಗೆ, ಸಂಗೋಪನೆಗೆ ಸಂವಾದಿಯಾಗಿ ಮಾಡಲಾಗಿದೆ. ಈ ಕಾರಣದಿಂದಾಗಿಯೆ ಮಹಿಳೆಯರು ನಮ್ಮ ಸಂದರ್ಭದಲ್ಲಿ ಕೇವಲ ತಾಯಿಯಾಗಿ, ಹೆಂಡತಿಯಾಗಿ, ಗೃಹಿಣಿಯಾಗಿ ಮಾತ್ರ ಸಲ್ಲುತಾರೆ. ಅವಳನ್ನು ಒಬ್ಬ ವ್ಯಕ್ತಿಯಾಗಿ ಪರಿಭಾವಿಸಿಕೊಳ್ಳುವುದು ರೂಢಿಯಲ್ಲಿಲ್ಲ. ಇನ್ನೂ ಮುಂದೆ ಹೋಗಿ ಹೇಳ ಬೇಕೆಂದರೆ ಅವಳನ್ನು ವಸ್ತುವನ್ನಾಗಿ, ಒಡವೆಯಾಗಿ, ಸರಕ್ಕನ್ನಾಗಿ ನೋಡುವ ಕ್ರಮವು ರೂಢಿಯಲ್ಲಿದೆ. ಅವಳು ಒಂದು ವಸ್ತು, ಒಂದು ಸರಕು. ಅವಳು ವ್ಯಕ್ತಿಯಲ್ಲ. ಅವಳು ಒಬ್ಬ ವ್ಯಕ್ತಿಯೆನ್ನುವುದು ಅಲ್ಲಿ ಆನುಷಂಗಿಕವಾಗಿ ಬಿಟ್ಟಿದೆ. ಅವಳ ಬದುಕು ಮನೆಯೊಳಗಿನ ಜಗತ್ತಿಗೆ ಮಾತ್ರ ಸೀಮಿತಗೊಂಡಿದೆ. ಆದರೆ ಪುರುಷರ ಬದುಕು ಖಾಸಗಿ ಹಾಗೂ ಸಾರ್ವಜನಿಕಗಳೆರಡೂ ನೆಲೆಗಳನ್ನು ಒಳಗೊಂಡಿದೆ. ಖಾಸಗಿಂತಲೂ ಅವರ ಬದುಕು ಹೆಚ್ಚಾಗಿ ಸಾರ್ವಜನಿಕವಾದುದಾಗಿದೆ. ಇದರಿಂದಾಗಿ ರಾಜಕೀಯ ಅವಕಾಶವು ಅವರ ಮನಾಪಲಿಯಾಗಿದೆ. ಮಹಿಳೆಯರ ಬದುಕು ಸಂತಾನೋತ್ಪತ್ತಿಗೆ, ಸಂಗೋಪನೆಗೆ ಮೀಸಲಾಗಿದ್ದರೆ ಪುರುಷರ ಬದುಕು ಸಂಪಾದನೆಗೆ, ಉತ್ಪಾದನೆಗೆ ಮೀಸಲಾಗಿದೆ. ಮಹಿಳೆಯನ್ನು ಸಾಂಪ್ರದಾಯಿಕವಾಗಿ ಅನುಭೋಗಿಯೆಂದು ಮತ್ತು ಪುರುಷರನ್ನು ಉತ್ಪಾದಕರೆಂದು ಪರಿಗಣಿಸುತ್ತಿರುವುದು ಕಂಡು ಬರುತ್ತದೆ.

ದುಡಿಮೆಯೆಂಬುದು ನಮ್ಮ ಸಂದರ್ಭದಲ್ಲಿ ಪುರುಷರ ಗುತ್ತಿಗೆಯಾಗಿ ಬಿಟ್ಟಿದೆ. ಮಹಿಳೆಯರು ಕೇವಲ ಗೃಹಿಣಿಯರಾಗಿ ಮಾತ್ರ ಬದುಕು ನಡೆಸಬೇಕಾಗಿದೆ. ಅವರನ್ನು ದುಡಿಮೆಗಾರರನ್ನಾಗಿ ಪರಿಭಾವಿಸಿಕೊಳ್ಳುತ್ತಿಲ್ಲ. ನಮ್ಮ ಪರಂಪರೆಯಲ್ಲಿ ನಮಗೆ ಆದರ್ಶನಾರಿಯರಿಗೆ ಅಗತ್ಯವಾದ 'ಮಾದರಿ'ಗಳು ದೊರೆಯುತ್ತವೆ. ಆದರೆ ನಮ್ಮ ಪರಂಪರೆಯಲ್ಲಿ ಮಹಿಳೆಯರಿಗೆ ಆದರ್ಶವೆನ್ನಬಹುದಾದ 'ದುಡಿಮೆಗಾರ' ಹೆಣ್ಣಿನ ಮಾದರಿಯು ದೊರೆಯುವುದಿಲ್ಲ. ನಮ್ಮ ಪುರಾಣಗಳಲ್ಲಿ ಪತಿವ್ರತೆಯರನ್ನು, ತಾಯಂದಿರನ್ನು, ಗೃಹಿಣಿಯರನ್ನು ಹಾಡಿ ಹೊಗಳಲಾಗಿದೆ. ಅವರನ್ನು ಅನುಕರಿಸುವಂತೆ ಮಹಿಳೆಯರಿಗೆ ಉದಾಹರಣೆ ನೀಡಲಾಗುತ್ತದೆ ಮತ್ತು ಅಂತಹ ಉಪದೇಶ ನೀಡಲಾಗುತ್ತದೆ. ಅಲ್ಲಿ ದುಡಿಮೆ ಮಾಡುವ, ಬೆವರು ಹರಿಸುವ, ಕಣ್ಣೀರು ಸುರಿಸುವ ಮತ್ತು ರಕ್ತ ಚೆಲ್ಲುವ ಮಹಿಳೆಯರ ಮಾದರಿಗಳು ನಮಗೆ ದೊರೆಯುವುದಿಲ್ಲ.

ಇದು ಪುರುಷಶಾಹಿ ನೆಲೆಯಲ್ಲಿ ರೂಪುಗೊಂಡಿರುವ ಲಿಂಗ ಸಂಬಂಧವಾಗಿದೆ. ಅಲ್ಲಿ ಪುರುಷರು ಪ್ರಧಾನರಷ್ಟೇ ಅಲ್ಲ. ಅವರು ಸಂಸ್ಕೃತಿಯ ಪ್ರತಿನಿಧಿಗಳಾಗಿ ಶ್ರೇಷ್ಠ ಸ್ಥಾನಮಾನ ಪಡೆದುಬಿಟ್ಟಿದ್ದಾರೆ. ಮಹಿಳೆಯರು ಪ್ರಕೃತಿಗೆ ಸಂವಾದಿಯಾಗಿ ಕನಿಷ್ಠವಾದ ಸ್ಥಾನಮಾನ ಪಡೆದಿದ್ದಾರೆ. ಇಂತಹ ಲಿಂಗ ಸಂಬಂಧಗಳನ್ನು ಮೇಲೆ–ಕೆಳಗೆ ಮಾಡುವ ಪ್ರಯತ್ನಗಳು ಲಾಗಾಯ್ತಿನಿಂದಲೂ ನಡೆದುಕೊಂಡು ಬರುತ್ತಿವೆ. ಹನ್ನೆರಡನೆಯ ಶತಮಾನದಲ್ಲಿ ಕಂಡುಬರುವ ವಚನಕಾರರಲ್ಲಿ ಇಂತಹ ಪ್ರಯತ್ನಕ್ಕೆ ನಿದರ್ಶನಗಳು ದೊರೆಯುತ್ತವೆ. ಇದಕ್ಕೆ ನಿರ್ದಿಷ್ಟವಾಗಿ ಕದಿರ ರೆಮ್ಮವ್ವೆಯ ವಚನವೊಂದನ್ನು ನೋಡಬಹುದು.ಇದಕ್ಕೆ ಮತ್ತೊಬ್ಬ ವಚನಕಾರ್ತಿ ಗೊಗ್ಗವ್ವೆಯ ವಚನವನ್ನು ಪರಿಶೀಲಿಸಬಹುದು. ಹನ್ನೆರಡನೆಯ ಶತಮಾನದ ನಂತರ ಅಂತಹ ಪ್ರಯತ್ನದ ಉದಾಹರಣೆಗಳು ನಮ್ಮ ಕಾಲದಲ್ಲಿ ಮಾತ್ರ ನಮಗೆ ದೊರೆಯುತ್ತವೆ. ಇದಕ್ಕೆ ಕನ್ನಡದ ಖ್ಯಾತ ಕವಿ ಪಿ.ಲಂಕೇಶ ಅವರ 'ಅವ್ವ' ಕವನವನ್ನು ನೋಡಬಹುದು. ಪ್ರಸ್ತುತ ಪ್ರಬಂಧದಲ್ಲಿ ಕದಿರ ರೆಮ್ಮವ್ವೆಯ ಒಂದು ವಚನ ಮತ್ತು ಪಿ.ಲಂಕೇಶ್ ಅವರ 'ಅವ್ವ' ಕವನದ ಲಿಂಗ ಸಂಬಂಧಿ ಆಯಾಮಗಳನ್ನು ಪೃಥಕರಿಸಲು ಪ್ರಯತ್ನಿಸಲಾಗಿದೆ.

ಕದಿರ ರೆಮ್ಮವ್ವೆಯ ವಚನ

ಕದಿರ ರೆಮ್ಮವ್ವೆಯು ಅತ್ಯಂತ ಸ್ಪಷ್ಟ ರೂಪದಲ್ಲಿ ಲಿಂಗ ಸಂಬಂಧಗಳನ್ನು ಮೇಲೆ ಕೆಳಗೆ ಮಾಡಲು ನಡೆಸಿರುವ ಪ್ರಯತ್ನವು ಅವಳ ಒಂದು ವಚನದಲ್ಲಿ ಅಭಿವ್ಯಕ್ತಗೊಂಡಿದೆ. ಇವಳು ತನ್ನ ವಚನದಲ್ಲಿ ಲಿಂಗ ಸಂಬಂಧಗಳ ಜೈವಿಕ ನಿಯತಿಯನ್ನು ತಿರಸ್ಕರಿಸಿದ್ದಾಳೆ. ಸಾಂಪ್ರದಾಯಿಕವಾದ ಲಿಂಗ ಸಂಬಂಧಗಳನ್ನು ತಲೆಕೆಳಗೆ ಮಾಡುವುದು ಅವಳ ಪ್ರಣಾಳಿಕೆಯಾಗಿದೆ. ಅವಳ ವಚನ ಹೀಗಿದೆ–

ಎಲ್ಲರ ಗಂಡಂದಿರು ತೊಳಸಿಕ್ಕುವರು
ಎನ್ನ ಗಂಡಂಗೆ ತೊಳಸುವುದಿಲ್ಲ
ಎಲ್ಲರ ಗಂಡಂದಿರು ಬಸಿವರು
ಎನ್ನ ಗಂಡಂಗಡ ಬಸಿವುದಿಲ್ಲ
ಎಲ್ಲರ ಗಂಡಂದಿರಿಗೆ ಬೀಜವುಂಟು
ಎನ್ನ ಗಂಡಂಗೆ ಅಂಡದ ಬೀಜವಿಲ್ಲ
ಎಲ್ಲ ಗಂಡಂದಿರು ಮೇಲೆ
ಎನ್ನ ಗಂಡ ಕೆಳಗೆ
ನಾ ಮೇಲೆ
ರೆಮ್ಮೆಯೊಡೆಯ ಗುಮ್ಮೇಶ್ವರ (ಸ.ವ.ಸಂ–5 : 64).

ಲಿಂಗವೆಂಬುದು ಜೀವಿಯ ಜೈವಿಕ ಗುರುತಿನ ಸಂಗತಿಯಾಗಿದೆ. ಆದರೆ ಲಿಂಗ ಸಂಬಂಧವೆಂಬುದು ಮಹಿಳೆಯರು ಮತ್ತು ಪುರುಷರ ನಡುವಿನ ಸಾಮಾಜಿಕ-ಆರ್ಥಿಕ ಮತ್ತು ರಾಜಕೀಯ ಸಂಬಂಧಗಳನ್ನು ಒಳಗೊಂಡಿರುವ ಸಂಗತಿಯಾಗಿದೆ. ಇದು ಬಹಳ ಮುಖ್ಯವಾದ ಭಿನ್ನತೆಯಾಗಿದೆ. ಲಿಂಗ ಸಂಬಂಧಗಳನ್ನು ಸಾಮಾಜಿಕ-ಆರ್ಥಿಕದ ನೆಲೆಗಳಲ್ಲಿ ಪರಿಭಾವಿಸಿಕೊಳ್ಳುವ ಅಗತ್ಯವನ್ನು ಇಂದು ಸ್ತ್ರೀವಾದಿಗಳು ಒತ್ತಾಯಿಸುತ್ತಿದ್ದಾರೆ. ಆದರೆ ಪುರುಷಶಾಹಿಯು ಲಿಂಗ ಸಂಬಂಧಗಳನ್ನು ಜೈವಿಕ ನೆಲೆಯಲ್ಲಿ ಪರಿಭಾವಿಸಿಕೊಳ್ಳುತ್ತಾ ಬಂದಿದೆ. ಸಂತಾನೋತ್ಪತ್ತಿಯನ್ನು, ಮನೆವಾರ್ತೆಯನ್ನು, ಸಂಗೋಪನೆಯನ್ನು ಜೈವಿಕವೆಂದು ಅವುಗಳನ್ನು ಮಹಿಳೆಯರೇ ನಿರ್ವಹಿಸಬೇಕೆಂದು ಒಂದು ರೀತಿಯ ನಿಯಮವನ್ನೇ ಮಾಡಲಾಗಿದೆ. ಅವು ಜೈವಿಕವಾಗಿ ಮಹಿಳೆಯರಿಗೆ ನಿಯತಿ ಆಗಿರುವ ಸಂಗತಿಯೆಂದು ಪ್ರತಿಪಾದಿಸಿಕೊಂಡು ಬರಲಾಗಿದೆ. ಇದಕ್ಕಿಂತ ಹೆಚ್ಚಾಗಿ ಲಿಂಗ ಸಂಬಂಧಗಳಲ್ಲಿ ಪುರುಷರು ಶ್ರೇಷ್ಠರೆಂದೂ ಮತ್ತು ಮಹಿಳೆಯರು ಕನಿಷ್ಟರೆಂದು ಶ್ರೇಣಿ ಕೃತ ವ್ಯವಸ್ಥೆಯನ್ನು ರೂಪಿಸಲಾಗಿದೆ.

ಲಿಂಗ ಸಂಬಂಧಗಳು ಪ್ರಧಾನವಾಗಿ ಜೈವಿಕ ನಿಯತಿಯ ನೆಲೆ ಹೊಂದಿರುತ್ತವೆಯೆಂದು ಪರಿಭಾವಿಸಿಕೊಳ್ಳಲಾಗಿದೆ. ಆದರೆ ಕದಿರ ರೆಮ್ಮವ್ವೆಯು ಇದಕ್ಕೆ ವಿರುದ್ಧವಾಗಿ ಮಹಿಳೆಯರಿಗೆ ಜೈವಿಕ ನಿಯತಿ ಆಧಾರದ ಮೇಲೆ ನಿಯೋಜಿಸಿರುವ ಸಂತಾನೋತ್ಪತ್ತಿ ಜವಾಬುದಾರಿಯನ್ನು ಅವಳು ಕಿತ್ತೊಗೆಯುವ ಪರಿಯು ಕ್ರಾಂತಿಕಾರಕವಾಗಿದೆ. ಅವಳು ತನ್ನ ವಚನದಲ್ಲಿ 'ಬೀಜ'ದ ಬಗ್ಗೆ ಮಾತನಾಡುತ್ತಾಳೆ. ಅದನ್ನು ಹೆಚ್ಚು ಸ್ಪಷ್ಟಪಡಿಸುವ ಮತ್ತು ನಿರ್ದಿಷ್ಟಪಡಿಸುವ ಸಲುವಾಗಿ ಅವಳು ಬೀಜ ಪದಕ್ಕೆ ವಿಶೇಷಣವೊಂದನ್ನು ಹಚ್ಚಿ ತನ್ನ ಗಂಡನಿಗೆ 'ಅಂಡದ ಬೀಜ'ವಿಲ್ಲವೆನ್ನುತ್ತಾಳೆ. ಅವಳ ಅಂತಿಮ ಗುರಿಯು ಲಿಂಗ ಸಂಬಂಧಗಳನ್ನು ಕೆಳಗೆ ಮೇಲೆ ಮಾಡುವುದಾಗಿದೆ. ಸಮಾಜದಲ್ಲಿ ರೂಢಿಯಲ್ಲಿರುವ ಲಿಂಗ ಸಂಬಂಧಗಳನ್ನು ತಿರುವುಮುರುವು ಮಾಡಿ ಮಹಿಳೆಗೆ ಉನ್ನತ ಸ್ಥಾನ ದೊರೆಯುವಂತೆ ಮಾಡಲು ಅವಳು ಪ್ರಯತ್ನಿಸುತ್ತಿದ್ದಾಳೆ. ಸಮಾಜದಲ್ಲಿ ರೂಢಿಯಲ್ಲಿರುವ ಕ್ರಮವೆಂದರೆ 'ಗಂಡ ಮೇಲೆ'. ಅಂದರೆ ಅಲ್ಲಿ ಪುರುಷರು ಪ್ರಧಾನರಾಗಿದ್ದಾರೆ. ಆದರೆ ಕದಿರ ರೆಮ್ಮವ್ವೆಯು ಒತ್ತಾಯಿಸುತ್ತಿರುವುದು ಮಹಿಳೆಯನ್ನು ಪ್ರಧಾನರನ್ನಾಗಿ ಮಾಡುವ ಪ್ರಣಾಳಿಕೆಯಾಗಿದೆ. ಅವಳು ನಿರೀಕ್ಷಿಸುತ್ತಿರುವುದು 'ಗಂಡ ಕೆಳಗೆ ಮತ್ತು ಅವಳು ಮೇಲೆ'. ಇದು ಆಕೆಯು ಲಿಂಗ ಸಂಬಂಧಗಳನ್ನು ಮೇಲೆ ಕೆಳಗೆ ಮಾಡುವ ಪರಿಯಾಗಿದೆ. ಸಂತಾನೋತ್ಪತ್ತಿಯೆಂಬುದು ಮಹಿಳೆಯರಿಗೆ ಮಾತ್ರ ಸಂಬಂಧಿಸಿದ್ದಾಗಬಾರದು ಮತ್ತು ಅದಿಲ್ಲದೆಯೂ ಮಹಿಳೆಯರು ತಮ್ಮ ಬದುಕನ್ನು ಸಾರ್ಥಕ ಮಾಡಿಕೊಳ್ಳಬಹುದು. ಮಹಿಳೆ ಕೇವಲ ಮಕ್ಕಳನ್ನು ಹಡೆಯುವ ಯಂತ್ರವಲ್ಲ. ಅದನ್ನು ಬಿಟ್ಟು ಅವಳಿಗೆ ಆಸೆ-ಆಕಾಂಕ್ಷೆಗಳು ಇರಬಹುದು. ಅದನ್ನು ಬಿಟ್ಟು ಆಕೆಗೆ ಬದುಕು ಇರಬಹುದು. ಈ ವಚನದಲ್ಲಿ ಬರುವ 'ತೊಳಸಿಕ್ಕುವುದಿಲ್ಲ', 'ಬಸಿವುದಿಲ್ಲ', 'ಬೀಜ' ಮತ್ತು 'ಅಂಡದ ಬೀಜ' ನುಡಿಗಳು ಮಹಿಳೆಯರ ಸಂತಾನೋತ್ಪತ್ತಿ ಜವಾಬುದಾರಿಯನ್ನು ಸೂಚಿಸುತ್ತಿವೆ. ಆದರೆ ರೆಮ್ಮವ್ವೆಯು ಅಂತಹ ಜವಾಬುದಾರಿಯನ್ನು ತಿರಸ್ಕರಿಸುತ್ತಿದ್ದಾಳೆ. ನಮಗೆ ನಮ್ಮ ಪರಂಪರೆಯಲ್ಲಿ ಹೀಗೆ ಲಿಂಗ ಸಂಬಂಧಗಳನ್ನು ರಿವರ್ಸ್ ಮಾಡಲು ನಡೆಸಿದ ಪ್ರಯತ್ನದ ಬಗ್ಗೆ ಬೇರೆ ನಿದರ್ಶನಗಳು ದೊರೆಯುವುದಿಲ್ಲ.

'ಎಲ್ಲರ ಗಂಡಂದಿರು ಮೇಲೆ,
ಎನ್ನ ಗಂಡ ಕೆಳಗೆ,
ನಾ ಮೇಲೆ'

ಎನ್ನುವುದನ್ನು ನಾವು ಸಮಾಜದಲ್ಲಿ ನೆಲೆಗೊಂಡಿರುವ ಲಿಂಗ ಸಂಬಂಧಗಳ ವಿಸ್ತೃತವಾದ ಸಾಮಾಜಿಕ ಮತ್ತು ಆರ್ಥಿಕ ನೆಲೆಗಳಲ್ಲಿ ಪರಿಭಾವಿಸಿಕೊಳ್ಳಬೇಕಾಗಿದೆ. ಲಿಂಗ ಸಂಬಂಧಿ ಶ್ರಮ ವಿಭಜನೆಯನ್ನು ಇಲ್ಲಿ ತಿರಸ್ಕರಿಸಲಾಗಿದೆ. ಅದಕ್ಕೆ ಇಲ್ಲಿ ಯಾವುದೆ ಅರ್ಥವಿಲ್ಲವಾಗಿದೆ. ಮಹಿಳೆಯರು ಇಲ್ಲಿ 'ಕೆಳಗಿದ್ದರೆ', ಅಂದರೆ ಕನಿಷ್ಠವಾಗಿದ್ದರೆ ಅದಕ್ಕೆ ಕದಿರ ರೆಮ್ಮವ್ವೆಯ ಪ್ರಕಾರ ಕಾರಣ ಅವಳಿಗೆ ಸಂತಾನೋತ್ಪತ್ತಿ ಜವಾಬುದಾರಿಯನ್ನು ತಳಕು ಹಾಕಿರುವುದಾಗಿದೆ

ಹೆಣ್ಣನ್ನು ಸಾಮಾನ್ಯವಾಗಿ ವಸ್ತುವನ್ನಾಗಿ ನೋಡುವ ಕ್ರಮವು ಸಮಾಜದಲ್ಲಿ ನೆಲೆಯೂರಿಬಿಟ್ಟಿದೆ. ಲಾಗಾಯ್ತಿನಿಂದಲೂ ಇದು ನಡೆದುಕೊಂಡು ಬಂದಿದೆ. ಆದರೆ ಇಂತಹ ದೃಷ್ಟಿಕೊನವನ್ನು ತಿರಸ್ಕರಿಸುವ ಪ್ರಯತ್ನಗಳು ಚರಿತ್ರೆಯಲ್ಲಿ ನಡೆದುಕೊಂಡೇ ಬರುತ್ತಿರುವುದು ಅಷ್ಟೇ ಸ್ಪಷ್ಟವಾಗಿದೆ.

ದುಡಿಮೆಯೆಂಬುದು ನಮ್ಮ ಸಂದರ್ಭದಲ್ಲಿ ಪುರುಷರ ಗುತ್ತಿಗೆಯಾಗಿ ಬಿಟ್ಟಿದೆ. ಮಹಿಳೆಯರು ಕೇವಲ ಗೃಹಿಣಿಯರಾಗಿ ಮಾತ್ರ ಬದುಕು ನಡೆಸಬೇಕಾಗಿದೆ. ಅವರನ್ನು ದುಡಿಮೆಗಾರರನ್ನಾಗಿ ಪರಿಭಾವಿಸಿಕೊಳ್ಳುತ್ತಿಲ್ಲ. ನಮ್ಮ ಪರಂಪರೆಯಲ್ಲಿ ನಮಗೆ ಆದರ್ಶನಾರಿಯರಿಗೆ ಅಗತ್ಯವಾದ 'ಮಾದರಿ'ಗಳು ದೊರೆಯುತ್ತವೆ. ಆದರೆ ನಮ್ಮ ಪರಂಪರೆಯಲ್ಲಿ ಮಹಿಳೆಯರಿಗೆ ಆದರ್ಶವೆನ್ನಬಹುದಾದ 'ದುಡಿಮೆಗಾರ' ಹೆಣ್ಣಿನ ಮಾದರಿಯು ದೊರೆಯುವುದಿಲ್ಲ. ನಮ್ಮ ಪುರಾಣಗಳಲ್ಲಿ ಪತಿವ್ರತೆಯರನ್ನು, ತಾಯಂದಿರನ್ನು, ಗೃಹಿಣಿಯರನ್ನು ಹಾಡಿ ಹೊಗಳಲಾಗಿದೆ. ಅವರನ್ನು ಅನುಕರಿಸುವಂತೆ ಮಹಿಳೆಯರಿಗೆ ಉದಾಹರಣೆ ನೀಡಲಾಗುತ್ತದೆ ಮತ್ತು ಅಂತಹ ಉಪದೇಶ ನೀಡಲಾಗುತ್ತದೆ. ಅಲ್ಲಿ ದುಡಿಮೆ ಮಾಡುವ, ಬೆವರು ಹರಿಸುವ, ಕಣ್ಣೀರು ಸುರಿಸುವ ಮತ್ತು ರಕ್ತ ಚೆಲ್ಲುವ ಮಹಿಳೆಯರ ಮಾದರಿಗಳು ನಮಗೆ ದೊರೆಯುವುದಿಲ್ಲ.

ಹನ್ನೆರಡನೆಯ ಶತಮಾನದ ಒಬ್ಬ ವಚನಕಾರ್ತಿ ಗೊಗ್ಗವ್ವೆ ತನ್ನ

ವಚನವೊಂದರಲ್ಲಿ ಇದನ್ನು ಹೀಗೆ ಗುರುತಿಸಿದ್ದಾಳೆ.
ಗಂಡು ಮೋಹಿಸಿ ಹೆಣ್ಣ ಹಿಡಿದಡೆ
ಅದು ಒಬ್ಬರ ಒಡವೆ ಎಂದು ಅರಿಯಬೇಕು.
ಹೆಣ್ಣು ಮೋಹಿಸಿ ಗಂಡ ಹಿಡಿದಡೆ
ಉತ್ತರವಾವುದೆಂದರಿಯಬೇಕು
ಈ ಎರಡರ ಉಭಯವ ಕಳೆದು ಸುಖಿ ತಾನಾಗ ಬಲ್ಲಡೆ
ನಾಸ್ತಿನಾಥನು ಪರಿಪೂರ್ಣನೆಂಬೆ.

(ಸ.ವ.ಸಂ: ೫:೨೨೬)

ಇಲ್ಲಿ ಸಮಾಜದಲ್ಲಿರುವ ಹೆಣ್ಣನ್ನು ಒಡವೆಯಂತೆ ನೋಡುವ ಕ್ರಮವನ್ನು ಗೊಗ್ಗವ್ವೆ ತಿರಸ್ಕರಿಸುತ್ತಿದ್ದಾಳೆ. (ಪ್ರಾಸಂಗಿಕವಾಗಿ ವಚನಕಾರರೇ ಪ್ರಚುರ ಪಡಿಸಿರುವ 'ಹೆಣ್ಣು, ಹೊನ್ನು ಮತ್ತು ಮಣ್ಣು' ಪರಿಕಲ್ಪನೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುಧು. ಹೊನ್ನು ಮತ್ತು ಮಣ್ಣುಗಳಂತೆ ಹೆಣ್ಣು ಕೂಡ ಒಂದು ಸರಕು. ಅದರ ಮೇಲೆ ಮಾಲಿಕತ್ವವನ್ನು ಸ್ಥಾಪಿಸಬಹುದು). ಅದರೆ ಗೊಗ್ಗವ್ವೆಯ ಪ್ರಕಾರ ಯಾರು ಯಾರಿಗೂ ಒಡವೆಯಲ್ಲ. ಉಭಯ ನೆಲೆಯಲ್ಲೂ ಅದು ತೊಲಗಬೇಕೆಂಬುದು ಅವಳ ಮೀಮಾಂಸೆಯಾಗಿದೆ. ಹೆಣ್ಣು ಗಂಡಿಗೆ ಒಡವೆಯಲ್ಲ ಮತ್ತು ಗಂಡು ಹೆಣ್ಣಿಗೆ ಒಡೆವೆಯಲ್ಲ. ಉಭಯ ನೆಲೆಯಲ್ಲಿ ಇಂತಹ ತಾರತಮ್ಯವಾದಿ ದೃಷ್ಟಿಕೋನವನ್ನು ಕಳೆದುಕೊಳ್ಳಧಿದ್ದರೆ ಅವಳನ್ನು ನಾಸ್ತಿನಾಥ ಒಪ್ಪುವುದಿಲ್ಲ. ಇದು ಸಮಾನತೆಯ ಪ್ರಣಾಳಿಕೆಯಾಗಿದೆ. ತಾರತಮ್ಯರಹಿತ ಬದುಕಿನ ಮೀಮಾಂಸೆಯಾಗಿದೆ.

ಈ ಬಗೆಯ ದೃಷ್ಟಿಕೋನವು ಆಧುನಿಕ ಕವಿಗಳಲ್ಲೂ ಅನುರಣನಗೊಳ್ಳುತ್ತಿರುವುದು ಕುತೂಹಲಕಾರಿಯಾಗಿದೆ.

ವರಕವಿ ದ.ರಾ.ಬೇಂದ್ರೆ ಅವರ ಪ್ರಸಿದ್ಧ ಕವನವಾದ 'ಚಿಗರಿಗಂಗಳ ಚೆಲುವಿ'ಯ ಕೊನೆ ಸಾಲು ಹೀಗಿದೆ.

'ಒಡವ್ಯಲ್ಲೊ' ಮಗನೆ ಉಸಿರಿದ್ದೊಡಲಂತಾಳೋ, ಚಿಗಲ[]–'

ಹೆಣ್ಣನ್ನು ಇಲ್ಲಿ ಕವಿ 'ಒಡವೆ'ಯಾಗಿ ನೋಡುವುದಕ್ಕೆ ಪ್ರತಿಯಾಗಿ ಒಡಲಾಗಿ ಪರಿಭಾವಿಸಿಕೊಳ್ಳುವ ಕ್ರಮವನ್ನು ಕುರಿತಂತೆ ಮಾತನಾಡುತ್ತಿದ್ದಾನೆ. ಆದರೆ ವಾಸ್ತವವಾಗಿ ಮಹಿಳೆಯರನ್ನು ಒಡವೆಯನ್ನಾಗಿ ಸರಕನ್ನಾಗಿ ಪರಿಭಾವಿಸಿ ಕೊಳ್ಳುತ್ತಿರುವುದು ವ್ಯಾಪಕವಾಗಿದೆ. ಈ ಬಗೆಯ ವಸ್ತುಸ್ಥಿತಿಗೆ ಭಿನ್ನವಾದ ನೆಲೆಯಲ್ಲಿ ಮಹಿಳೆಯರನ್ನು ಪರಿಭಾವಿಸಿಕೊಳ್ಳುವ ಪರಿಯನ್ನು ಕವಿ ಬೇಂದ್ರೆ ಒತ್ತಾಯಿಸುತ್ತಿದ್ದಾರೆ. ಭೂಮಿ ತಾಯಿಯ ಮೇಲೆ ನಡೆಯುತ್ತಿರುವ ಎಲ್ಲ ಬಗೆಯ ಆಕ್ರಮಣಗಳ ಮತ್ತು ಹಿಂಸೆಯ ಬಗ್ಗೆ ಇಲ್ಲಿ ಕವಿಯು ಮಾತನಾಡುತ್ತಿದ್ದಾನೆ. ಹೆಣ್ಣನ್ನು ಒಡವೆಯಾಗಿ ನೋಡುವ ಕ್ರಮವು ವ್ಯಾಪಕವಾಗಿರುವುದನ್ನು ಇದು ದೃಢಪಡಿಸುತ್ತದೆ. ಈಗಾಗಲೆ ತಿಳಿಸಿರುವಂತೆ ಇಂತಹ ದೃಷ್ಟಿಕೋನದ ವಿರುದ್ಧ ಭಿನ್ನಾಭಿಪ್ರಾಯವೂ ಮಂಡಿತವಾಗುತ್ತಾ ಬಂದಿರುವುದು ಮಹತ್ವವಾದುದಾಗಿದೆ. ಈ ನೆಲೆಯಲ್ಲಿ ಪಿ.ಲಂಕೇಶ್ ಅವರ 'ಅವ್ವ' ಕವನವು ನಮ್ಮೆಲ್ಲರ ಕಣ್ಣು ತೆರೆಸುವಂತಿದೆ. ಮಹಿಳಾ ಅಧ್ಯಯನದಲ್ಲಿ ನಿರತರಾದವರಿಗೆಲ್ಲ ಇದನ್ನು ಕಡ್ಡಾಯವಾದ ಪಠ್ಯವಾಗಿ ನಿಯಮಿಸಬಹುದಾಗಿದೆ.

ಕವಿ ಪಿ.ಲಂಕೇಶ್ ತನ್ನ 'ಅವ್ವ' ಕವನದಲ್ಲಿ ಎಲ್ಲೂ ಲಿಂಗ ಸಂಬಂಧ ಕುರಿತಂತೆ ಘೋಷಣೆ ರೂಪದ ಮಾತುಗಳನ್ನು ಹೇಳುವುದಿಲ್ಲ. ಅದೊಂದು ಶುದ್ಧ ಕವನವಾಗುವಂತೆ ಅವರು ನೋಡಿಕೊಂಡಿದ್ದಾರೆ. ಲಿಂಗ ಸಂಬಂಧಗಳ ಅತ್ಯಂತ ಸೂಕ್ಷ್ಮ ನೆಲೆಗಳನ್ನು ಹುಡುಕುವುದರಲ್ಲಿ ಮತ್ತು ಗುರುತಿಸುವುದರಲ್ಲಿ ಕವನವು ಯಶಸ್ವಿಯಾಗಿದೆ. ಈ ಕವನವು ಸ್ಥೂಲವಾಗಿ ಹೇಳುತ್ತಿರುವುದಕ್ಕೂ ಮತ್ತು ಕವನವು ಸಂಕೇತಗಳ ಮೂಲಕ ಸೂಕ್ಷ್ಮವಾಗಿ ರವಾನಿಸುತ್ತಿರುವ ಅರ್ಥ ಪ್ರಪಂಚಕ್ಕೂ ಬಹಳ ವ್ಯತ್ಯಾಸವಿದೆ. ಈ ಕವನದ ಮುಖ್ಯ ನೆಲೆಯೆಂದರೆ ಅದು ಸಾಂಪ್ರದಾಯಿಕವಾಗಿ ಮಹಿಳೆಯನ್ನು ಸಂತಾನೊತ್ಪತ್ತಿ ಚೌಕಟ್ಟಿನಲ್ಲಿ ಪರಿಭಾವಿಸಿಕೊಂಡಿರುವ ಕ್ರಮಕ್ಕೆ ಪ್ರತಿಯಾಗಿ ಅವಳನ್ನು ದುಡಿಮೆಗಾರಳಾಗಿ ಪರಿಭಾವಿಸಿಕೊಂಡಿರುವುದಾಗಿದೆ.

ಇಡೀ ಕವನದಲ್ಲಿ ಎಲ್ಲಿಯೂ ಸಂತಾನೋತ್ಪತ್ತಿ ಬಗ್ಗೆಯಾಗಲಿ ಅಥವಾ ಸಂಗೋಪನೆ ಬಗೆಯಾಗಲಿ ಸೂಚನೆಯಿಲ್ಲ. ಸಾಂಪ್ರದಾಯಿಕವಾಗಿ ಮಹಿಳೆಯನ್ನು ಪರಿಭಾವಿಸಿಕೊಂಡು ಬರುತ್ತಿರುವ ಕ್ರಮಕ್ಕಿಂತ ಭಿನ್ನವಾಗಿ ಇಲ್ಲಿ ಕವಿ ಮಹಿಳೆಯನ್ನು ಪರಿಭಾವಿಸಿಕೊಂಡಿದ್ದಾನೆ. ಇಲ್ಲಿ ಮಹಿಳೆಯ ದುಡಿಮೆಯ ವಿರಾಟ್ ಸ್ವರೂಪವನ್ನು ಅನಾವರಣ ಮಾಡಲಾಗಿದೆ. ಇಲ್ಲಿ ಅವ್ವ ಕಾಸಿಗಾಗಿ ಪಡುವ ಬವಣೆಯನ್ನು ದಾಖಲಿಸಲಾಗಿದೆ. (ಕವನದಲ್ಲಿ ಎರಡು ಬಾರಿ ಕಾಸಿನ ಬಗ್ಗೆ ಮಾತನಾಡಲಾಗಿದೆ). ಇಲ್ಲಿನ ಕಾಸಿನ ಬಗೆಗಿನ ಉಲ್ಲೇಖ ಬಹಳ ಕುತೂಹಲಕಾರಿಯಾಗಿದೆ. ಏಕೆಂದರೆ ನಮ್ಮ ಸಮಾಜದ ಸಂದರ್ಭದಲ್ಲಿ ಹಣದ ಮತ್ತು ವ್ಯವಹಾರದ ಸಂಗತಿಗಳನ್ನು ಮಹಿಳೆಯರ ಜಗತ್ತಿನಿಂದ

[illegible]ವಾಗಿದೆ. [illegible] ಮನೆಗೆ ಮತ್ತು [illegible] ಸೀಮಿತಗೊಳಿಸಲಾಗಿದೆ. ಆದರೆ ಇಲ್ಲಿ ಅವ್ವ ಸಂಪೂರ್ಣವಾಗಿ ಮನೆಯ ಹೊರಗಿನ ಜಗತ್ತಿನಲ್ಲಿ ದುಡಿಯುತ್ತಿದ್ದಾಳೆ. ಮನೆವಾರ್ತೆಯ ಸಂಗತಿ ಬಗ್ಗೆ ರವಷ್ಟೂ ಇಲ್ಲಿ ಮಾಹಿತಿಯಿಲ್ಲ. ಇಲ್ಲಿ ಅವ್ವ ಅಡುಗೆ ಮಾಡುತ್ತಿಲ್ಲ, ಬಟ್ಟೆ ತೊಳೆಯುತ್ತಿಲ್ಲ, ಮಕ್ಕಳನ್ನು ಆಡಿಸುತ್ತಿಲ್ಲ ಮತ್ತು ಮನೆಯೊಳಗೆ ಕುಳಿತುಕೊಂಡಿಲ್ಲ. ಮಕ್ಕಳ ಸಂಗೋಪನೆಗೆ ಪ್ರತಿಯಾಗಿ ಇಲ್ಲಿ ಅವ್ವ ಮಕ್ಕಳನ್ನು 'ಕರಡಿ'ಯಂತೆ ಸಾಕುತ್ತಿದ್ದಾಳೆ. ಈ ಸಾಕುವುದಕ್ಕೂ ಮತ್ತು ಸಂಗೋಪನೆಗೂ ಬಹಳ ವ್ಯತ್ಯಾಸವಿದೆ. ಇಲ್ಲಿ ಅವ್ವ ಕುಟುಂಬಕ್ಕೆ, ಮಕ್ಕಳಿಗೆ, ಗಂಡನಿಗೆ ಸಂವಾದಿಯಾಗಿ ಬದುಕುತ್ತಿಲ್ಲ. ಅವಳದು ತನ್ನದೇ ಸ್ವಂತ ಬದುಕಾಗಿದೆ. ಅದು ಮತ್ತಾರದೋ ಬದುಕಿನ ಬಾಲಂಗೋಚಿಯಾಗಿಲ್ಲ. ಈ ಅವ್ವನಿಗೆ ಸೀತೆ, ಸಾವಿತ್ರಿಯರು ಅದರ್ಶವಲ್ಲ. ಅವಳಿಗೆ 'ಭಗವದ್ಗೀತೆ' ಬೇಡ. ಏಕೆಂದರೆ ಈ ಅವ್ವ ಬದುಕಿದ್ದು 'ಕಾಳು ಕಡ್ಡಿಗೆ, ದುಡಿತಕ್ಕೆ, ಮಕ್ಕಳಿಗೆ, ಮೇಲೊಂದು ಸೂರು, ಅನ್ನ ರೊಟ್ಟಿ, ಹಚಡಕ್ಕೆ'. ಅವಳಿಗೆ ಅವಳ ದುಡಿಮೆಯ ಫಲ ಇಲ್ಲಿಯೆ ದೊರೆಯಬೇಕು. ದುಡಿಮೆಯ ಪಲಕ್ಕಾಗಿ ಅವಳು ದೇವರನ್ನು ಪೂಜಿಸುವುದಿಲ್ಲ. ಹರಿಕತೆ-ಪುರಾಣಗಳನ್ನು ಆಲಿಸುವುದಿಲ್ಲ. ಪಾರಾಯಣ ಮಾಡಿತ್ತಿಲ್ಲ. ಅವಳ ಬದುಕು ಕವನದಲ್ಲಿ ಆರಂಭಗೊಳ್ಳುವುದು ದುಡಿಮೆಯಲ್ಲಿ ಮತ್ತು ಅದು ಕೊನೆಗೊಳ್ಳುವುದು ಕೂಡ ದುಡಿಮೆಯಲ್ಲಿ. ಕವನದ ಆರಂಭದ ಪದ್ಯದ ಕೊನೆಯ ಸಾಲು ಹೀಗಿದೆ.

'ಹೊತ್ತ ಬುಟ್ಟಿಯ ಇಟ್ಟು ನರಳಿ ಎವೆ ಮುಚ್ಚಿದಳು ತೆರೆಯದಂತೆ'

ಇಲ್ಲಿ ಹೊತ್ತ ಬುಟ್ಟಿಯೆಂಬುದು ದುಡಿಮೆಯನ್ನು ಸಂಕೇತಿಸುತ್ತದೆ. ದುಡಿಯುತ್ತಲೇ ಅವಳು ಕಣ್ಣು ಮುಚ್ಚುತ್ತಾಳೆ. ಕವನವನ್ನು ಹೀಗೆ ಆರಂಭಿಸುವ ಕವಿ ಅದನ್ನು

'ಮಣ್ಣಲ್ಲಿ ಬದುಕಿ
ಮನೆಯಿಂದ ಹೊಲಕ್ಕೆ ಹೋದಂತೆ
ತಣ್ಣಗೆ ಮಾತಾಡುತ್ತಲೇ ಹೊರಟು ಹೋದದಕ್ಕೆ'

ಎಂದು ಕೊನೆಗೊಳಿಸುತ್ತಾನೆ. ಈ ಸಾಲಿನಲ್ಲಿ ಮಣ್ಣಲ್ಲಿ ಬದುಕಿ ಮತ್ತು ಹೊಲಕ್ಕೆ ಹೋದಂತೆ ಎಂಬ ನುಡಿಗಳು ಮತ್ತೆ ಅವ್ವನ ದುಡಿಮೆಯನ್ನು ಸೂಚಿಸುತ್ತಿವೆ. ಇಲ್ಲಿ ಅವ್ವನ ಇಡೀ ಬದುಕು ದುಡಿಮೆಯಿಂದ ಕೂಡಿದೆ. ದುಡಿಮೆಗೂ ಅವ್ವನ ಬದುಕಿಗೂ ನಡುವೆ ಇಲ್ಲಿ ಯಾವುದೇ ವ್ಯತ್ಯಾಸಗಳಿಲ್ಲ.

ಕರ್ನಾಟಕದ ಕೆಲವು ಭಾಗಗಳಲ್ಲಿ ಕೂಲಿಗೋಗುವುದು, ದುಡಿಮೆಯವುದು ಎಂಬುದಕ್ಕೆ 'ಬದುಕಿಗೋಗುವುದು', 'ಬದುಕು ಮಾಡುವುದು' ಎಂಬ ಪರ್ಯಾಯ ನುಡಿಗಳನ್ನು ಬಳಸುವುದು ರೂಢಿಯಲ್ಲಿದೆ. ಇಲ್ಲಿ ದುಡಿಮೆಗೂ ಮತ್ತು ಬದುಕಿಗೂ ಯಾವ ಭಿನ್ನತೆಯೂ ಇಲ್ಲ. ಅವ್ವ ಮತ್ತು ದುಡಿಮೆ ಇಲ್ಲಿ ಅಭಿನ್ನ.

ಈ ಕವನದ ಮತ್ತೊಂದು ಮಹತ್ತರವಾದ ಸಂಗತಿಯೆಂದರೆ ಇಲ್ಲಿ ಅವ್ವ ದುಡಿಯುತ್ತಿರುವುದು ಮತ್ತು ಗುದ್ದಾಡುತ್ತಿರುವುದು ಸಾಂಪ್ರದಾಯಿಕವಾಗಿ ಪರಿಭಾವಿಸಿಕೊಂಡಿರುವಂತೆ ಕೇವಲ ಮಕ್ಕಳಿಗೆ, ಗಂಡನಿಗೆ ಮತ್ತು ಕುಟುಂಬಕ್ಕೆ ಮಾತ್ರವಲ್ಲ. ನಿಜ, ಅದಕ್ಕಾಗಿ ಅವಳು ಕಷ್ಟಪಡುತ್ತಿದ್ದಾಳೆ.

'ಎಲ್ಲಕ್ಕೆ ಮನೆತನದ ಉದ್ದಾರ ಸೂತ್ರ'

ಇದು ನಿಜವಾದರೂ ಅದೇ ಎಲ್ಲವೂ ಅಲ್ಲ. ಆದರೆ ಅದಕ್ಕಿಂತ ಮುಖ್ಯವಾಗಿ ಅವಳು ದುಡಿಯುತ್ತಿರುವುದು, ಮಕ್ಕಳು ಮತ್ತು ಗಂಡನನ್ನು ಸಾಕುತ್ತಿರುವುದು ಸಾಮಾಜಿಕವಾದ ಒಂದು ಮನ್ನಣೆಗಾಗಿ ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ. ಅವಳು ಇಲ್ಲಿ ದುಡಿಯುವುದು, ರೇಗಾಡುವುದು, ಗುದ್ದಾಡುವುದು

'ಸರೀಕರ ಮುಂದೆ ತಲೆಎತ್ತಿ ನಡೆಯಲಿಕ್ಕೆ'.

ಇದು ಮೂಲತಃ ಪುರುಷಶಾಹಿಯು ಗುತ್ತಿಗೆ ಹಿಡಿದಿರುವ ಮೌಲ್ಯವಾಗಿದೆ-ಅವಕಾಶವಾಗಿದೆ. ಸಾರ್ವಜನಿಕವಾದ ಮನ್ನಣೆಯೆಂಬುದು ಪುರುಷರಿಗೆ ಸಂಬಂಧಿಸಿದೆ ಎಂದು ಪ್ರತಿಪಾದಿಸಿಕೊಂಡು ಬರಲಾಗಿದೆ. ಇಲ್ಲಿ ಅವ್ವ ಅಂತಹ ಒಂದು ಮೌಲ್ಯಕ್ಕಾಗಿ-ಅವಕಾಶಕ್ಕಾಗಿ ಹೋರಾಟ ಮಾಡುತ್ತಿದ್ದಾಳೆ. ಮಹಿಳೆಯನ್ನು ಇಲ್ಲಿ ಕೇವಲ ತಾಯಿಯಾಗಿ ಅಥವಾ ಹೆಂಡತಿಯಾಗಿ ಮಾತ್ರ ನೋಡುವುದು ಸಾಧ್ಯವಿಲ್ಲ. ಅದಕ್ಕಿಂತ ಮುಖ್ಯವಾಗಿ ಇಲ್ಲಿ ಆಕೆ ಮನೆಯೊಡತಿಯಾಗಿ ಮನೆಯ-ಕುಟುಂಬದ ಏಳಿಗೆಗಾಗಿ ಅವಳು ದುಡಿಯುತ್ತಿದ್ದಾಳೆ. ಅದು ಅವಳ ಆಯ್ಕೆಯಾಗಿದೆ.ಅವಳಿಗೆ ಅದು ಅನಿವಾರ್ಯವಾಗಿಲ್ಲ.

ಸಾಂಪ್ರದಾಯಿಕವಾಗಿ ನಂಬಿಕೊಂಡು ಬಂದಿರುವಂತೆ ಅವಳು ಇಲ್ಲಿ ತ್ಯಾಗಮಯಿಯಲ್ಲ. ತ್ಯಾಗಮಯಿ ಯಾಗಿಲ್ಲವೆಂದ ಮಾತ್ರಕ್ಕೆ ಆವಳು ಕಡು ಸ್ವಾರ್ಥಿಯೇನಲ್ಲ. ಇಡೀ ಕವನದಲ್ಲಿ ನಮಗೆ ಕಾಮಧೇನು-ಪುಣ್ಯ ಕೋಟಿಗಳು ದೊರೆಯುವುದಿಲ್ಲ. ಇಲ್ಲಿ ಬರುವ ಪ್ರಾಣಿಗಳೆಂದರೆ ಕರಡಿ, ನಾಯಿ, ಕೋತಿ ಮತ್ತು ಎಮ್ಮೆ. ನಮ್ಮ ಸಮಾಜದ ಸಂದರ್ಭದಲ್ಲಿ ಎಮ್ಮೆಯು ಮಹಿಳೆಯರ ದುಡಿಮೆಯ ಸಂಕೇತವಾಗಿದೆ. ಕವಿಯು ಇಲ್ಲಿ ಅವ್ವನನ್ನು ಪುಣ್ಯ ಕೋಟಿಯನ್ನಾಗಿ ಮಾಡಿಲ್ಲ. ಇಂದು ನಮ್ಮ ಸಂದರ್ಭದಲ್ಲಿ ಗೋವು ಪ್ರಧಾನವಾಗಿ ಎಮ್ಮೆಯು ಮೂಲೆ ಗುಂಪಾಗಿ ಬಿಟ್ಟಿದೆ. ನಮ್ಮ ಸಮಾಜದಲ್ಲಿ ಎಮ್ಮೆಯು ದುಡಿಮೆಗಾರ ಮಹಿಳೆಯರ ಬದುಕಿನ ಅವಿಭಾಜ್ಯ ಅಂಗವಾಗಿದೆ. ಅದಕ್ಕೆ ನಮ್ಮಲ್ಲಿ ಯಾವುದೆ ಧಾರ್ಮಿಕ ಸ್ಥಾನಮಾನವಿಲ್ಲ. ಅದರ ಬಗ್ಗೆ ಧರ್ಮವನ್ನು ಇಂದು ಗುತ್ತಿಗೆ ಹಿಡಿದಿರುವ ಮಂದಿ ಮಾತನಾಡುವುದಿಲ್ಲ.

ಸಾಂಪ್ರದಾಯಿಕವಾಗಿ ನಂಬಿಕೊಂಡು ಬಂದಿರುವಂತೆ ಅವಳು ಇಲ್ಲಿ ತ್ಯಾಗಮಯಿಯಲ್ಲ. ತ್ಯಾಗಮಯಿಯಾಗಿಲ್ಲವೆಂದ ಮಾತ್ರಕ್ಕೆ ಆವಳು ಕಡು ಸ್ವಾರ್ಥಿಯೇನಲ್ಲ. ಇಡೀ ಕವನದಲ್ಲಿ ನಮಗೆ ಕಾಮಧೇನು-ಪುಣ್ಯಕೋಟಿಗಳು ದೊರೆಯುವುದಿಲ್ಲ. ಇಲ್ಲಿ ಬರುವ ಪ್ರಾಣಿಗಳೆಂದರೆ ಕರಡಿ, ನಾಯಿ, ಕೋತಿ ಮತ್ತು ಎಮ್ಮೆ. ನಮ್ಮ ಸಮಾಜದ ಸಂದರ್ಭದಲ್ಲಿ ಎಮ್ಮೆಯು ಮಹಿಳೆಯರ ದುಡಿಮೆಯ ಸಂಕೇತವಾಗಿದೆ. ಕವಿಯು ಇಲ್ಲಿ ಅವ್ವನನ್ನು ಪುಣ್ಯಕೋಟಿಯನ್ನಾಗಿ ಮಾಡಿಲ್ಲ. ಇಂದು ನಮ್ಮ ಸಂದರ್ಭದಲ್ಲಿ ಗೋವು ಪ್ರಧಾನವಾಗಿ ಎಮ್ಮೆಯು ಮೂಲೆ ಗುಂಪಾಗಿಬಿಟ್ಟಿದೆ. ನಮ್ಮ ಸಮಾಜದಲ್ಲಿ ಎಮ್ಮೆಯು ದುಡಿಮೆಗಾರ ಮಹಿಳೆಯರ ಬದುಕಿನ ಅವಿಭಾಜ್ಯ ಅಂಗವಾಗಿದೆ. ಅದಕ್ಕೆ ನಮ್ಮಲ್ಲಿ ಯಾವುದೆ ಧಾರ್ಮಿಕ ಸ್ಥಾನಮಾನವಿಲ್ಲ. ಅದರ ಬಗ್ಗೆ ಧರ್ಮವನ್ನು ಇಂದು ಗುತ್ತಿಗೆ ಹಿಡಿದಿರುವ ಮಂದಿ ಮಾತನಾಡುವುದಿಲ್ಲ. ಏಕೆಂದರೆ ಅವರ ವೇದ ಪುರಾಣಗಳಲ್ಲಿ ಎಮ್ಮೆಯು ಪವಿತ್ರವಾದ ಪ್ರಾಣಿಯಲ್ಲ. ಅಲ್ಲಿ ಅಪ್ಪಿತಪ್ಪಿಯು ಎಮ್ಮೆ ಬರುವುದಿಲ್ಲ. ಯಜ್ಞಯಾಗಗಳಲ್ಲಿ ಎಮ್ಮೆಗೆ ಅವಕಾಶವಿಲ್ಲ. ಗೋವಿನ ಬಗ್ಗೆ ಇಂದು ಧಾರ್ಮಿಕ ಧುರೀಣರು ಯಾಕೆ ಮಾತನಾಡುತ್ತಿದ್ದಾರೆಂದರೆ ಅದು ಅವರು ನಂಬಿಕೊಂಡು ಬಂದಿರುವ 'ಶುದ್ಧತೆ'ಯ 'ಪಾವಿತ್ರತೆ'ಯ ಪ್ರತಿರೂಪವಾಗಿದೆ. ಎಮ್ಮೆಯು ಅವರಿಗೆ ಅಶುದ್ಧವಾದುದು ಮತ್ತು ಅಪವಿತ್ರವಾದುದು. ಆದರೆ ಇಂದು ನಮ್ಮ ಸಮಾಜದ ಬಹುಪಾಲು ದುಡಿಮೆಗಾರ ಮಹಿಳೆಯರ ಸಂದರ್ಭದಲ್ಲಿ ಎಮ್ಮೆಯು ಅವರ ಬದುಕಿನ ಅವಿಭಾಜ್ಯ ಭಾಗವಾಗಿದೆ ಮತ್ತು ದುಡಿಮೆಯ ಮೂಲವಾಗಿದೆ. ಕರ್ನಾಟಕದಲ್ಲಿ ಇಂದು ಸರಿಸುಮಾರು ೩೫ ರಿಂದ ೪೦ ಲಕ್ಷದಷ್ಟು ಮಹಿಳಾ ದಿನಗೂಲಿ ದುಡಿಮೆಗಾರರು ದುಡಿಯುತ್ತಿದ್ದಾರೆ. ಈ ದುಡಿಮೆಗಾರ ಮಹಿಳೆಯರು ಎಮ್ಮೆಯನ್ನು ಪೂಜಿಸಲಿಕ್ಕಿಲ್ಲ. ಆದರೆ ಅದು ಅವರಿಗೆ ಬದುಕಿನ ಮೂಲವಾಗಿದೆ. ಕವನದಲ್ಲಿ ಅವ್ವನಿಗೆ ಹೇಗೆ ದೇವರನ್ನು ಪೂಜಿಸುವುದು ಸಾಧ್ಯವಿಲ್ಲವೋ ಅದೇ ರೀತಿಯಲ್ಲಿ ಇಲ್ಲಿ ಎಮ್ಮೆಯನ್ನು ಮಹಿಳೆಯರು ಪೂಜಿಸುವ ಅಗತ್ಯವಿಲ್ಲ. ಏಕೆಂದರೆ ಅದು ಅವರ ಜೀವನವಾಗಿದೆ.

ಫಲವಂತಿಕೆ ಬಗ್ಗೆ ಮಾತನಾಡುವಾಗ ಸಾಮಾನ್ಯವಾಗಿ ಆಕಳನ್ನು, ಕಾಮಧೇನುವನ್ನು ಉದಾಹರಣೆಯಾಗಿ ನೀಡುವುದು ಕಂಡು ಬರುತ್ತದೆ. ಆದರೆ ಇದಕ್ಕೆ ಎಮ್ಮೆಯನ್ನು ಉದಾಹರಣೆಯಾಗಿ ನೀಡುವುದಿಲ್ಲ. ಶ್ರೇಷ್ಠ-ಕನಿಷ್ಠವೆನ್ನುವ ಸಂಗತಿಗಳು ನಮ್ಮ ಸಮಾಜದಲ್ಲಿ ಅನೇಕ ಬಗೆಯ ತಾರತಮ್ಯಗಳನ್ನು ಸೃಷ್ಟಿ ಮಾಡಿಬಿಟ್ಟಿವೆ. ಈಗಾಗಲೆ ತಿಳಿಸಿರುವಂತೆ ಮಹಿಳೆಯರನ್ನು ಸಾಮಾನ್ಯವಾಗಿ ಫಲವಂತಿಕೆಗೆ ಸಂಕೇತವಾಗಿ ಬಳಸುವುದು ಕಂಡು ಬರುತ್ತದೆ. ಅವಳನ್ನು ಪ್ರಕೃತಿಗೆ ಸಂವಾದಿಯಾಗಿ ಬಳಸುವುದು ರೂಡಿಯಲ್ಲಿದೆ. ಈ ಕವನದಲ್ಲೂ ಫಲವಂತಿಕೆ ಬಗ್ಗೆ ಮಾತನಾಡಲಾಗಿದೆ. ಈ ಕವನದ ಮೊದಲ ಸಾಲೇ ಇದಕ್ಕೆ ನಿದರ್ಶನವಾಗಿದೆ

'ನನ್ನವ್ವ ಫಲವತ್ತಾದ ಕಪ್ಪು ನೆಲ'

ಆದರೆ ಈ ಅವ್ವನ ಫಲವಂತಿಕೆಯ ಪರಿಯೇ ಬೇರೆ. ಈ ನೆಲದಲ್ಲಿ ಹಸಿರು ಪತ್ರ, ಹೂವು, ಹಣ್ಣು ಎಲ್ಲವೂ ಅರಳುತ್ತವೆ. ಅಂತಹ ಕಸುವು ಅವ್ವನಿಗಿದೆ ಮತ್ತು ಈ ನೆಲಕ್ಕಿದೆ (ಸುಟ್ಟಷ್ಟು ಕಸುವು). ಆದರೆ ಇಲ್ಲಿ ಅವೆಲ್ಲವು ಅವ್ವನ ದುಡಿಮೆಯ ಫಲವಾಗಿವೆ. ಅವ್ವ ಪಲ್ಲ ಜೋಳದ ಚೀಲವನ್ನು ಹೊರುತ್ತಾಳೆ. ಅವಳು ಹೆಂಟೆಗೊಂದು ಮೊಗೆ ನೀರುಣಿಸುತ್ತಾಳೆ. ಹೊಲವನ್ನು ಕೈಯಲ್ಲಿ ಉಳುತ್ತಾಳೆ. ಗದ್ದೆಯನ್ನು ನೋಡಿಕೊಳ್ಳುತ್ತಾಳೆ. ಅವಳ ಶ್ರಮದ ಪರಿಣಾಮವಾಗಿ ಅವಳಿಗೆ ಫಲ ದೊರೆಯುತ್ತಿದೆ. ಅದಕ್ಕಾಗಿ ಅವಳು ಪಡಿಪಾಟಲು ಪಡುತ್ತಿದ್ದಾಳೆ. ಇಲ್ಲಿ ಕವಿಯು ಫಲವಂತಿಕೆಯನ್ನು ವೈಭವೀಕರಿಸುತ್ತಿಲ್ಲ. ಫಲವಂತಿಕೆಯು ಇಲ್ಲಿ ದುಡಿಮೆಯ ಅಂತರ್ಗತ ಭಾಗವಾಗಿದೆ. ಅವ್ವ ಇಲ್ಲಿ 'ಕ್ಷೇತ್ರ'ವಾಗಿ ಕಂಡು ಬರುವುದಿಲ್ಲ. ಅವಳು ಬೀಜವೂ ಅಲ್ಲ ನಿಜ. ಇಲ್ಲಿ ಕವಿಯು ದುಡಿಮೆಯನ್ನು, ಅದರ ಫಲವನ್ನು ಹಾಡುತ್ತಿ

ದ್ದಾನೆ. ದುಡಿಮೆಗೆ ಸಂವಾದಿಯಾಗ್ಗಿ ಇಲ್ಲಿ ಅವ್ವ ನಿಲ್ಲುತ್ತಾಳೆ. ನಮ್ಮ ಸಮಾಜದ ಸಂದರ್ಭದಲ್ಲಿ ಮಹಿಳೆಯನ್ನು ಪರಿಭಾವಿಸಿಕೊಳ್ಳುತ್ತಿರುವುದಕ್ಕಿಂತ ಭಿನ್ನವಾಗಿ ಇಲ್ಲಿ ಪರಿಭಾವಿಸಿಕೊಳ್ಳಲಾಗಿದೆ. ಇಲ್ಲಿ ಅವ್ವ ಮೃದು-ಕೋಮಲೆಯಲ್ಲ. ಅವಳು ಪಲ್ಲ ಜೋಳವ ಹೊರುವ ಸಬಲೆಯಾಗಿದ್ದಾಳೆ. ತಪ್ಪಿಸಿಕೊಂಡ ಮುದಿ ಎಮ್ಮೆಗಾಗಿ ಊರೂರು ಅಲೆದಾಡುತ್ತಾಳೆ. ಗಂಡನನ್ನು ಸಾಕುತ್ತಾಳೆ. ಈ ಅವ್ವ ಬದುಕಿದ್ದು 'ದುಡಿತಕ್ಕೆ'. ಈ ಅವ್ವ ವ್ರತ-ಉಪವಾಸ ಮಾಡುವುದಿಲ್ಲ. ದುಡಿಮೆಗೆ ವ್ರತಾಚರಣೆಗಳು ವಿರುದ್ಧವಾದ ಸಂಗತಿಗಳಾಗಿವೆ. (ಪ್ರಾಸಂಗಿಕವಾಗಿ ಇಲ್ಲಿ ಅಮರ್ತ್ಯಸೇನ್ 'ಉಪವಾಸ' ಮತ್ತು 'ಹಸಿವು'ಗಳ ನಡುವೆ ಭಿನ್ನತೆಯನ್ನು ಗುರುತಿಸುವ ಕ್ರಮವನ್ನು ಕುರಿತಂತೆ ಹೇಳಬೇಕೆನಿಸುತ್ತಿದೆ. ಅವನ ಪ್ರಕಾರ ಉಪವಾಸವು ಆ ವ್ರತಾಚರಣೆ ಮಾಡುವವರ ಆಯ್ಕೆಯಾಗಿದೆ. ಆದರೆ ಹಸಿವೆಂಬುದು ಅದನ್ನು ಅನುಭವಿಸುತ್ತಿರುವವರಿಗೆ ಅನಿವಾರ್ಯವಾದ ಸಂಗತಿಯಾಗಿದೆ. ಬದುಕಿನಲ್ಲಿ ಆಯ್ಕೆಯೆಂಬುದು ಅಭಿವೃದ್ಧಿಯ ಸೂಚಿಯಾದರೆ ಅನಿವಾರ್ಯವೆಂಬುದು ದುಸ್ಥಿತಿಯ ಸೂಚಿಯಾಗಿದೆ. ಆದ್ದರಿಂದ ಉಪವಾಸ ಬೇರೆ ಮತ್ತು ಹಸಿವು ಬೇರೆ. ಉಪವಾಸದವು ಪಾವಿತ್ರತೆಯ ಸಂಕೇತವಾದರೆ ಹಸಿವು ದುಸ್ಥಿತಿಯ ಸಂಕೇತವಾಗಿದೆ. ಈ ಕಾರಣಕ್ಕೆ ಬಸವಣ್ಣ ತನ್ನ ಪ್ರಸಿದ್ಧ ವಚನದಲ್ಲಿ (ಜಲವೊಂದೆ ಶೌಚಾಚಮನಕ್ಕೆ) 'ಶೌಚ' ಮತ್ತು 'ಆಚಮನ'ಗಳನ್ನು ತುಲನೆ ಮಾಡಿ ಆಚಮನಕ್ಕಿಂತ ನೀರು ಶೌಚಕ್ಕೆ ಮುಖ್ಯವೆಂಬುದನ್ನು ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿದ್ದಾನೆ. ಇಲ್ಲಿ ಆಚಮನವೆಂಬುದು ಪವಿತ್ರವಾದುದು. ಆದರೆ ಶೌಚವೆನ್ನುವುದು ಜನರ ದೈನಂದಿನ ಅಗತ್ಯವಾಗಿದೆ. ಆಚಮನವು ಕೆಲವರ ಅಗತ್ಯವಾಗಿದ್ದರೆ ಶೌಚವು ಹಲವರ ಅಗತ್ಯವಾಗಿದೆ. ಕುತೂಹಲಕ್ಕಾಗಿ ಇಲ್ಲಿ ಆಕಳು-ಆಚಮನ ಮತ್ತು ಎಮ್ಮೆ-ಶೌಚಗಳನ್ನು ಎದಿರುಬದಿರಿಗಿಟ್ಟು ನೋಡಬೇಕೆನಿಸುತ್ತದೆ).

ಸಾಮಾನ್ಯ ಸಂದರ್ಭದಲ್ಲಿ ನಮ್ಮ ಸಮಾಜದಲ್ಲಿ ಮಹಿಳೆಯರಿಗೆ ಹಣಕಾಸಿನ ವ್ಯವಹಾರವನ್ನು ನೋಡಿಕೊಳ್ಳುವ ಜವಾಬುದಾರಿಯನ್ನು ನೀಡುವುದಿಲ್ಲ. ಅದಕ್ಕೆ ಅವಳು ತಕ್ಕವಳಲ್ಲವೆಂದು ತಿಳಿಯಲಾಗಿದೆ. ಮಹಿಳೆಯರಿಗೆ ಹಣಕಾಸಿನ ವ್ಯವಹಾರವು ತಿಳಿಯುವುದಿಲ್ಲವೆಂದು ಅವಳಿಂದ ವ್ಯವಹಾರದ ಎಲ್ಲ ಚಟುವಟಿಕೆಗಳನ್ನು ಕಸಿದುಕೊಳ್ಳಲಾಗಿದೆ. ಆದರೆ ಇಲ್ಲಿ ಅವ್ವ ಕಾಸನ್ನು ಸಂಪಾದಿಸಲು ಶ್ರಮಿಸುತ್ತಾಳೆ. ಕಾಸನ್ನು ಗಂಟಿಕ್ಕುತ್ತಾಳೆ. ಸಾಂಪ್ರದಾಯಿಕವಾಗಿ ಮಹಿಳೆಗೆ ಸಂಬಂಧಿಸಿದಂತೆ ನಂಬಿಕೊಂಡು ಬಂದಿರುವ ಎಲ್ಲ ಸಂಗತಿಗಳನ್ನು ಇಲ್ಲಿ ತಿರಸ್ಕರಿಸಲಾಗಿದೆ. ಇದಕ್ಕೆ ಪ್ರತಿಯಾಗಿ ಇಲ್ಲಿ ಮಹಿಳೆಯನ್ನು ಸರ್ವತಂತ್ರ ಸ್ವತಂತ್ರ ವ್ಯಕ್ತಿಯಾಗಿ, ದುಡಿಮೆಗಾರಳಾಗಿ, ಮನೆಯ ಜವಾಬುದಾರಿಯನ್ನು ನಿರ್ವಹಿಸುವ ನಾಯಕಳಾಗಿ ಪರಿಭಾವಿಸಿಕೊಳ್ಳಲಾಗಿದೆ.

ಒಟ್ಟಾರೆ ಇಲ್ಲಿ ಲಿಂಗ ಸಂಬಂಧಗಳನ್ನು ಮೇಲೆ-ಕೆಳಗೆ ಮಾಡುವ ಪ್ರಯತ್ನವಿದೆ. ಈ ಪ್ರಯತ್ನವು ಇಲ್ಲಿ ಘೋಷಣೆಯಾಗಿ ಕಂಡು ಬರುವುದಿಲ್ಲ ಅಥವಾ ಅದು ಇಲ್ಲಿ ಮುದ್ದೆ ಮುದ್ದೆಯಾಗಿ ಮಂಡಿತವಾಗಿಲ್ಲ. ಅದಕ್ಕೆ ಪ್ರತಿಯಾಗಿ ಅದು ಸಾವಯವ ಸಮಗ್ರೀಕರಣವಾಗಿ ಕವನದಲ್ಲಿ ಅಂತರ್ಗತಗೊಂಡಿದೆ. ದುಡಿಮೆಯನ್ನು ಅಂತರ್ಗತ ಮಾಡಿಕೊಂಡೆ ಈ ಕವನವನ್ನು ಕವಿ ಇಲ್ಲಿ ಕಟ್ಟಿದ್ದಾನೆ. ಈ ದೃಷ್ಟಿಯಿಂದ ಕವನವು ಅರ್ಥಪೂರ್ಣವಾದುದಾಗಿದೆ.

(ಈ ಲೇಖಕನನ್ನು trckuh@yahoo.com ನಲ್ಲಿ ಸಂಪರ್ಕಿಸಬಹುದು) □

ಪ್ರಮಾಣ ನಿರಾಕರಣೆ

(೪೧ನೇ ಪುಟದಿಂದ)

ಪ್ರಮಾಣಗಳು ಪ್ರಮೇಯಾರ್ಥಗಳನ್ನೂ ಹೇಗೆ ಸಿದ್ಧಿಸಿಕೊಟ್ಟಾವು?

೪೮. ಹಾಗೆಯೇ, ಪ್ರಮಾಣಗಳು ತಮ್ಮ ಪ್ರತಿಷ್ಠಾಪನೆಗೆ ಪ್ರಮೇಯಗಳನ್ನು ಆಧರಿಸಿದರೆ, ಆ ಪ್ರಮೇಯಗಳೇ ಪ್ರಮಾಣಗಳಿಂದ ಸಿದ್ಧವಾಗಬೇಕು ಎಂದಾದರೆ, ಪ್ರಮೇಯಗಳು ಪ್ರಮಾಣಗಳನ್ನು ಹೇಗೆ ತಾನೆ ಮಾಡಿಯಾವು?

೪೯. ತಂದೆಯಿಂದ ಮಗ ಹುಟ್ಟುತ್ತಾನೆ (ಉತ್ಪಾದ್ಯ) ಎಂದಾದರೆ, ಆ ತಂದೆ ಆ ಮಗನಿಂದಲೇ ಹುಟ್ಟಬೇಕು ಎಂದರೆ, ಆಗ ಯಾರು ಯಾರನ್ನು ಹುಟ್ಟಿಸುತ್ತಾರೆ ಎನ್ನುವುದನ್ನು ನನಗೆ ನೀನೇ ಹೇಳು?

ಪ್ರಮೇಯಗಳು ಪ್ರಮಾಣಗಳಿಂದ ಸಿದ್ಧವಾಗಬೇಕು ; ಪ್ರಮಾಣಗಳು ಆ ಪ್ರಮೇಯಗಳಿಂದಲೇ ಸಿದ್ಧ ಎಂಬ ಮಾತು ಮೇಲಿನಂತಹ ಒಂದು ವೈಷಮ್ಯವಷ್ಟೇ.

೫೦. ನೀನು ಹೇಳು — ಈಗ ಯಾರು ತಂದೆ? ಯಾರು ಮಗ? ಇಬ್ಬರೂ ಪಿತೃ-ಪುತ್ರ ಲಕ್ಷಣಧಾರಿಗಳು. ಹೀಗಾಗಿ ನನಗೊಂದು ಸಂದೇಹ ಇದೆ. ಈ ಹಿಂದೆ ಹೇಳಿದ ಇಬ್ಬರಲ್ಲಿ ಯಾರು ಅಪ್ಪ, ಮಗ ಯಾರು? ಹಾಗೆಯೇ ನಿನ್ನ ಪ್ರಮಾಣ-ಪ್ರಮೇಯಗಳಲ್ಲಿ ಯಾವುದು ಪ್ರಮಾಣ ಯಾವುದು ಪ್ರಮೇಯ?

೫೧. ಈ ಪ್ರಮಾಣಗಳು ಸ್ವತ ಸಿದ್ಧವೂ ಅಲ್ಲ ; ಪರಸ್ಪರತಾ ಸಿದ್ಧವೂ ಅಲ್ಲ ; ಅವು ಪರ ಪ್ರಮಾಣಗಳಿಂದ ಸಿದ್ಧವೂ ಅಲ್ಲ. ಅವು ಆಕಸ್ಮಾತ್ ಆಗಿಯೂ ಸಿದ್ಧವಾಗುವುದಿಲ್ಲ.

ಪ್ರತ್ಯಕ್ಷ ಎನ್ನುವುದು ತನ್ನಿಂದಲೇ ಸಿದ್ಧವಾಗುವುದಿಲ್ಲ. ಹಾಗೆಯೇ ಅನುಮಾನ ತನ್ನ ಅನುಮಾನದಿಂದಲೇ ಸಿದ್ಧವಾಗುವುದಿಲ್ಲ. ಹಾಗೆಯೇ ಉಪಮಾನ-ಆಗಮನಗಳು ಸ್ವತಃ ಸಿದ್ಧವಲ್ಲ ಅಥವಾ ಅವು ಪರಸ್ಪರ ಸಿದ್ಧವಲ್ಲ. ಅಂದರೆ ಪ್ರತ್ಯಕ್ಷ ಎನ್ನವುದು ಅನುಮಾನದಿಂದ, ಇಲ್ಲ ಉಪಮಾನದಿಂದ, ಹಾಗೆಯೇ ಅವು ಪರಪ್ರಮಾಣದಿಂದ ಸಿದ್ಧವಲ್ಲ. ಅಕಸ್ಮಾತ್ ಆಗಿಯೂ ಸಿದ್ಧವಾಗಿಲ್ಲ*. ಬೌದ್ಧೇತರ ದರ್ಶನಗಳು ಪ್ರಮಾಣ ಮತ್ತು ಪ್ರಮೇಯಗಳನ್ನು ಕುರಿತಾದ ಗೊಂದಲಗಳನ್ನು ಸಾಮಾನ್ಯರು ಬಿಡಿಸದ ಹಾಗಿ ಗೋಜಲಾಗಿಸಿದ್ದಾರೆ. ಅದರ ಮಾದರಿಯೊಂದನ್ನು ಮುಂದಿಟ್ಟುಕೊಂದು ನಾಗಾರ್ಜುನ ಉತ್ತರಿಸಿದ್ದಾನೆ.

(* ಇಲ್ಲಿ ಬಳಸಿರುವ ವಿಗ್ರಹ ವ್ಯಾವರ್ತಿನಿಯ ಉದ್ಧೃತ ಭಾಗವನ್ನು ಡಾ.ಡಿ.ಆರ್.ನಾಗರಾಜ್‌ರವರ ಅನುವಾದದಿಂದ ತೆಗೆದುಕೊಳ್ಳಲಾಗಿದೆ.) ತುಂಬಾ ಸುದೀರ್ಘವಾದ ತರ್ಕದ ಈ ದಾರಿಯನ್ನು ನಾಗಾರ್ಜುನ ತನಗಾಗಿ ಸವೆಸಿಲ್ಲ. ಮಿಥ್ಯಾಮಾರ್ಗ(ಮಿಥ್ಯಾದೃಷ್ಟಿ)ವನ್ನು ಸೃಷ್ಟಿಸಿದ ಮತ್ತು ಅದನ್ನು ಸ್ವೀಕರಿಸಿದ ಸಾಮಾನ್ಯರಿಗಾಗಿ ಈ ಕೊಂಕಣ ಪ್ರವಾಸದ ಪ್ರಯಾಸಕ್ಕೆ ತೊಡಗುತ್ತಾನೆ. ಮಿಥ್ಯಾಮಾರ್ಗಗಳು ಹೇಗೆ ನಿರ್ಜೀವ ತುದಿಗೆ ಒಯ್ದು ನಿಲ್ಲಿಸುತ್ತವೆ ಎಂಬುದನ್ನು ಪ್ರತಿವಾದಿಗಳಿಗೆ ಪ್ರಿಯವಾದ ತರ್ಕದ ಮಾರ್ಗವನ್ನೇ ಆಧರಿಸಿ ತೋರಿಸುತ್ತಾನೆ. ನಾಗಾರ್ಜುನನ ಚಿಂತನೆಯ ವಿಧಾನ ಅವನ ಮೂಲ ಮಾಧ್ಯಮಕ ಕಾರಿಕಾದಲ್ಲಿ ವಿಸ್ತಾರವಾಗಿ ಪ್ರಸ್ತಾಪಿತವಾಗಿದೆ. ಅದನ್ನೂ ಆಧರಿಸಿ ಈ ಪ್ರಕರಣವನ್ನು ಪರೀಕ್ಷೆಗೆ ಒಡ್ಡಬಹುದು.

ಈ ಪ್ರಕರಣ ಜ್ಞೇಯ ಮತ್ತು ಜ್ಞಾನ ಇವುಗಳ ನಡುವಿನ ಸಂಬಂಧವನ್ನು ಕುರಿತಾದದ್ದು. ಇದನ್ನು ನಾಗಾರ್ಜುನ 'ಕಾರಿಕಾ'ದ ಒಂಬತ್ತನೆಯ ಅಧ್ಯಾಯ-ಪೂರ್ವಪರೀಕ್ಷೆಯಲ್ಲಿ ವಿಶ್ಲೇಷಿಸುತ್ತಾನೆ. 'ಅನುಮಾನ'ವನ್ನು ಪ್ರಮಾಣವನ್ನಾಗಿಸಿಕೊಂಡು ತಾರ್ಕಿಕ ಊಹಾ ವಿಧಾನವನ್ನನುಸರಿಸಿ ಅಸ್ತಿತ್ವವಾದವನ್ನು ಮುಂದಿಡುವ ಪ್ರಯತ್ನವನ್ನು ನಾಗಾರ್ಜುನ ಈ ಪ್ರಕರಣದಲ್ಲಿ ಹತ ಮಾಡುತ್ತಾನೆ. ಗ್ರಹಿಕೆ ಎಂಬ ಕ್ರಿಯೆ ಇರುವುದಾದರೆ ಗ್ರಹಿಸುವವನಿರುತ್ತಾನೆ. ಗ್ರಹಿಸುವವನಿರುತ್ತಾನೆಂದಾದರೆ ಅವನಿಗಿಂತ ಮುನ್ನ ಗ್ರಾಹ್ಯವೂ ಇರಬೇಕಾಗುತ್ತದೆ-ಇದು ಪೂರ್ವ ಪಕ್ಷದ ನಿಲುವು. ಇಲ್ಲಿಯ ತಕ್ಷಣದ ಸಮಸ್ಯೆಯೆಂದರೆ ಗ್ರಹಿಕೆಗೆ ಮುನ್ನ ಗ್ರಾಹ್ಯ ಇತ್ತೆನ್ನುವುದು ಕೇವಲ ಊಹೆಯಷ್ಟೆ. ಅದು ಮೊದಲೇ ಇತ್ತು ಎಂದಾದರೆ ಗ್ರಹಿಕೆಗೆ ಮುನ್ನವೇ ಅದು ವೇದ್ಯವಾದದ್ದು ಹೇಗೆ? ಹಾಗಾಗಿ ಗ್ರಾಹ್ಯದ ಪೂರ್ವಾಸ್ತಿತ್ವವನ್ನು ಮುಂದಿಡಲು ಯಾವ ಮಾರ್ಗವೂ ಇಲ್ಲವೆಂಬುದು ನಿಶ್ಚಿತ. ಹಾಗೆ ಇರುವುದಾದರೆ ತನ್ನನ್ನು ತಾನು ತೋರಿಸಿಕೊಳ್ಳುವ 'ಲಕ್ಷಣ'ದಿಂದಲೇ ದೂರವಿದ್ದು ಇರಲು ಸಾಧ್ಯವಿಲ್ಲ. ಹಾಗೆ ಕಾಣಿಸಿಕೊಳ್ಳದೆ ಇರುವುದಾದರೆ ಅದು 'ಗ್ರಾಹ್ಯ'ವಲ್ಲ. ಪ್ರಮಾಣವನ್ನು ವಂಚಿಸಿ ಅದು (ಪ್ರಮೇಯ) ಇರಬಲ್ಲುದಾದರೆ ಪ್ರಮಾಣದ ಅಗತ್ಯವೇ ಇಲ್ಲ. ಆಗ ಅವು ಪ್ರಮಾಣಗಳೂ ಅಲ್ಲ. ಇದು ಪ್ರಮಾಣ ಪೂರ್ವದಲ್ಲಿ ಪ್ರಮೇಯಗಳಿರುತ್ತವೆ ಎಂಬ ನಿಲುವಿನ ನಿರಾಕರಣೆ. ಪ್ರಮೇಯ ಮತ್ತು ಪ್ರಮಾಣಗಳು ಪರಸ್ಪರ ಸಮಾನಾಂತರವಾಗಿ ಉಂಟಾಗುತ್ತವೆ ಎಂಬುದು ಎರಡನೆಯ ಹಂತದ ಪ್ರತಿಪಕ್ಷವಾದ. ಈ ನಿಲುವಿನ ಉದ್ದೇಶ ಪರಸ್ಪರ ಸಂಬಂಧದಲ್ಲಿ ಉಂಟಾದ ಪ್ರಮೇಯ-ಪ್ರಮಾಣಗಳಿಗೆ ಸ್ವತಂತ್ರಾಸ್ತಿತ್ವವುಂಟು ಎಂದು ಸಾಧಿಸುವುದು. ಅಂದರೆ ಇವುಗಳ ನಡುವೆ ಐಡೆಂಟಿಟಿ ಸ್ಥಾಪಿತವಾಗಿ ಬಿಡುತ್ತದೆ. ಅವೆರಡೂ ಒಂದೇ ಎಂದಾಗುತ್ತದೆ. ಅಥವಾ ಯಾವುದರಿಂದ ಯಾವುದು ಬೇಕಾದರೂ ಉಂಟಾಗಬಹುದು ಎಂದಾಗುತ್ತದೆ. ಅಳೆಯಲ್ಪಡುವ ವಸ್ತು ಅಳತೆಯನ್ನು ಸೃಷ್ಟಿಸಿದಂತೆ ಅಥವಾ ಅಳತೆಯೇ ಅಳೆಯಲ್ಪಡುವ ವಸ್ತುವನ್ನು ಸೃಷ್ಟಿಸಿದಂತೆ ಆಗುತ್ತದೆ. ಇದೂ ಅಸಂಭವ. ಇನ್ನು ಪ್ರಮಾಣಾನಂತರವೂ ಪ್ರಮೇಯಗಳಿರುತ್ತವೆ ಎಂಬ ವಾದಕ್ಕೆ ಮೊದಲಿನ ಉತ್ತರಸಿದ್ಧವೇ ಇದೆ. ಪ್ರಮಾಣಗಳಿಲ್ಲದೆಯೂ ಪ್ರಮೇಯಗಳಿರುವುದಾದರೆ ಪ್ರಮಾಣಗಳೇಕೆ ಬೇಕು?

ಸಾರಾಂಶವೆಂದರೆ, ಜ್ಞೇಯ ಸಾಧನಗಳಾದ ಪ್ರಮಾಣಗಳೂ ಸ್ವತಂತ್ರಾಸ್ತಿತ್ವವುಳ್ಳವುಗಳಲ್ಲ. ಹಾಗಾಗಿ ಪ್ರಮಾಣಗಳೂ ನಿಃಸ್ವಭಾವಿಗಳು ಮತ್ತು ಪ್ರತೀತ್ಯ ಸಮುತ್ಪನ್ನಗಳು. ಆದುದರಿಂದ ಪ್ರಮಾಣಗಳೂ ಶೂನ್ಯ ಪ್ರಮೇಯಗಳೂ ಶೂನ್ಯ ಅಲ್ಲಮನ ನುಡಿಯಲ್ಲಿಯಾದರೆ

ನಾನೆಂಬುದು ಪ್ರಮಾಣ ನೀನೆಂಬುದು ಪ್ರಮಾಣ
ಸ್ವಯವೆಂಬುದು ಪ್ರಮಾಣ ಪರವೆಂಬುದು ಪ್ರಮಾಣ
ಪ್ರಮಾಣವೆಂಬುದು ಪ್ರಮಾಣ, ಗುಹೇಶ್ವರನೆಂಬುದು ಅಪ್ರಮಾಣ. □

ವಿಶ್ವಮಾನವ ಒಬಾಮ

ದಲಿತ್ ಡೈರಿ

ಚಂದ್ರಭಾನ್ ಪ್ರಸಾದ್



೧೯೯೦ರ ನಂತರ ಕಪ್ಪು ಜನರು ಅಮೆರಿಕಾದಲ್ಲಿ ಅದ್ಭುತವಾದ ಸಾಧನೆಗಳನ್ನು ಮಾಡಿದ್ದಾರೆ. ಅಮೆರಿಕಾದ ವರ್ಜೀನಿಯಾ ರಾಜ್ಯದ ಗವರ್ನರ್ ಸ್ಥಾನಕ್ಕೆ ಆಯ್ಕೆಯಾಗುವ ಮೂಲಕ ಡೌಗ್ಲಾಸ್ ವಿಲ್ಡರ್ ಮೊಟ್ಟ ಮೊದಲ ಕಪ್ಪು ವರ್ಣದ ಗವರ್ನರ್ ಎಂಬ ಶ್ರೇಯಕ್ಕೆ ಪಾತ್ರರಾದರು. ೧೯೯೦ರಲ್ಲಿ ಬರಾಕ್ ಒಬಾಮ ವಿಶ್ವವಿಖ್ಯಾತ ಕಾನೂನು ನಿಯತಕಾಲಿಕೆ 'ಹಾರ್ವರ್ಡ್ ಲಾ ರಿವ್ಯೂ'ನ ಅಧ್ಯಕ್ಷರಾದರು. ೧೯೯೦ರಲ್ಲಿ ಅಮೆರಿಕಾದ ಕಪ್ಪು ಮಹಿಳೆ ಕ್ಯಾರೋಲ್ ಗಿಸ್ಟ್ "ಮಿಸ್ ಯುಎಸ್ಎ" ಕಿರೀಟ ಧರಿಸಿದಳು. ೧೯೯೧ ರಲ್ಲಿ ಪ್ರತಿಷ್ಠಿತ ಆಸ್ಕರ್ ಪ್ರಶಸ್ತಿಯ ಕಣದಲ್ಲಿ ಅತ್ಯುತ್ತಮ ನಿರ್ದೇಶಕ ವಿಭಾಗದಲ್ಲಿ ಅಂತಿಮ ಸ್ಪರ್ಧೆಗೆ ಆಯ್ಕೆಯಾದ ಮೊಟ್ಟ ಮೊದಲ ಕಪ್ಪು ನಿರ್ದೇಶಕ ಎಂಬ ಹೆಗ್ಗಳಿಕೆಗೆ ಜಾನ್ ಸಿಂಗಲ್ಟನ್ ಪಾತ್ರರಾದರು. ೧೯೯೦ರಲ್ಲಿ ಶಾರನ್ ಪ್ರಾಟ್‌ಕೆಲ್ಲಿ ವಾಷಿಂಗ್ಟನ್‌ನ ಮೇಯರ್ ಸ್ಥಾನಕ್ಕೆ ಆಯ್ಕೆಯಾದ ಮೊಟ್ಟ ಮೊದಲ ಕಪ್ಪು ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಕನ್ನಡಕ್ಕೆ:
ಸತ್ಯಪ್ರಕಾಶ್ ಎಂ.ಆರ್

ವಿಶ್ವದ ಸಾಮಾನ್ಯ ಜನರ ದೃಷ್ಟಿಯಲ್ಲಿ ಬರಾಕ್ ಒಬಾಮ ಈಗ ಇಡೀ ಜಗತ್ತಿಗೇ ಅಧ್ಯಕ್ಷ. ಇಂಡೋನೇಷ್ಯಾದಲ್ಲಿ ವಿದ್ಯಾಭ್ಯಾಸ ಆರಂಭಿಸುವ ಒಬಾಮನ ತಂದೆ ಮೂಲತಃ ಕೀನ್ಯಾದವರು. ಒಬಾಮ ಎರಡು ವರ್ಷದವನಿದ್ದಾಗ ಆತನ ಪೋಷಕರು ವಿಚ್ಛೇಧನ ಪಡೆಯುತ್ತಾರೆ. ನಂತರ ಮೂಲತಃ ಬಿಳಿಯ ವರ್ಣದ ಆತನ ತಾಯಿ ಇಂಡೋನೇಷ್ಯಾದ ನಾಗರಿಕನೊಂದಿಗೆ ವಿವಾಹವಾಗುತ್ತಾಳೆ. ಹತ್ತು ವರ್ಷದ ಹರೆಯದಲ್ಲಿ ತನ್ನ ಜನ್ಮಸ್ಥಳವಾದ ಅಮೆರಿಕ ದೇಶಕ್ಕೆ ಮರಳುವ ಒಬಾಮ ನಂತರ ಅಲ್ಲಿಯೇ ಉಳಿಯುತ್ತಾರೆ. ಈ ಹಿನ್ನೆಲೆಯಲ್ಲಿ ನೋಡುವುದಾದರೆ ಒಬಾಮ ಆಫ್ರಿಕಾ, ಅಮೆರಿಕಾ ಮತ್ತು ಏಷ್ಯಾ ಈ ಮೂರು ಖಂಡಗಳಿಗೂ ಸಂಬಂಧಪಟ್ಟಿದ್ದಾರೆ. ಜಾಗತೀಕರಣದ ಶಕೆಯಲ್ಲಿ ಯಶಸ್ಸು ಸಾಧಿಸಿದ ಒಬಾಮ ನಿಜವಾದ ಅರ್ಥದಲ್ಲಿ ವಿಶ್ವಮಾನವನೇ ಸರಿ.

ಓರ್ವ ಕಪ್ಪು ವರ್ಣದವನನ್ನು ಅಮೆರಿಕಾದ ಅಧ್ಯಕ್ಷ ಸ್ಥಾನಕ್ಕೆ ಚುನಾಯಿಸಿದ ಅಮೆರಿಕಾದ ಜನರ ಚಿಂತನೆಗೆ ಪ್ರಶಂಸೆ ವ್ಯಕ್ತಪಡಿಸುವ ಜೊತೆಗೆ, ಒಬಾಮ ಈ ಸ್ಥಾನಕ್ಕೆ ಬರಲು ಕಾರಣವಾದ ವಿದ್ಯಮಾನವನ್ನು ನಾವು ಅರ್ಥೈಸಿಕೊಳ್ಳುವ ಪ್ರಯತ್ನ ಮಾಡಬೇಕಿದೆ.

ತೀರ ಇತ್ತೀಚಿನವರೆಗೆ ಅಮೆರಿಕಾದ ಬಿಳಿಯ ಸಮಾಜ ಕಪ್ಪು ಜನರ ವಿರುದ್ಧ ವರ್ಣ ತಾರತಮ್ಯವನ್ನು ಮಾಡುತ್ತಿತ್ತು. ೧೯೬೭ರ ಜೂನ್ ೧೨ರಂದು ಅಮೆರಿಕಾದ ಉಚ್ಚ ನ್ಯಾಯಾಲಯ ಅಂತರ ವರ್ಣ ಮದುವೆಗೆ ಕಡಿವಾಣ ಹಾಕುವ ಕಾಯ್ದೆಯನ್ನು ವರ್ಜೀನಿಯಾ ರಾಜ್ಯದಲ್ಲಿ ಜಾರಿಗೊಳಿಸಿತ್ತು. ನಂತರ ೧೫ ರಾಜ್ಯಗಳು ಇದೇ ರೀತಿಯ ಕಾಯ್ದೆಗಳನ್ನು ಜಾರಿಗೊಳಿಸಿದವು. ಅಂದರೆ, ಓಬಾಮ ಆರು ವರ್ಷದ ಹುಡುಗನಾಗಿದ್ದಾಗ ಅಮೆರಿಕಾದ ೧೬ ರಾಜ್ಯಗಳಲ್ಲಿ ಕಪ್ಪು ಜನರು ಬಿಳಿಯರನ್ನು ಮದುವೆಯಾಗುವಂತಿರಲಿಲ್ಲ.

೧೯೬೫ರಲ್ಲಿ ಅಮೆರಿಕಾ "ರಾಷ್ಟ್ರೀಯ ಮತದಾನದ ಹಕ್ಕುಗಳ ಕಾಯ್ದೆ"ಯನ್ನು ಜಾರಿಗೊಳಿಸಿತು. ಈ ಕಾಯ್ದೆ ಅಸ್ತಿತ್ವಕ್ಕೆ ಬರುವ ಮುನ್ನ ಅಮೆರಿಕಾದ ಕಪ್ಪು ಜನರು ಮತದಾನದ ಹಕ್ಕುಗಳಿಗಾಗಿ ಸಾಕಷ್ಟು ತೊಡಕುಗಳನ್ನು ಅನುಭವಿಸಿದರು. ೧೯೫೫ರ ಹೊತ್ತಿಗೆ ಅಮೆರಿಕಾದ ಬಹಳಷ್ಟು ರಾಜ್ಯಗಳ ಸಾರ್ವಜನಿಕ ಸಾರಿಗೆಯ ವಾಹನಗಳಲ್ಲಿ ಎರಡೂ ವರ್ಣದ ಜನರಿಗೆ ಪ್ರತ್ಯೇಕ ಆಸನಗಳಿದ್ದವು. ೧೯೫೪ರಲ್ಲಿ ಅನೇಕ ರಾಜ್ಯಗಳಲ್ಲಿ ಕಪ್ಪು ಜನರ ಮಕ್ಕಳು ಸಮಾನ ಶಾಲೆಗಳಲ್ಲಿ ವ್ಯಾಸಂಗ ಮಾಡುವುದನ್ನು ಶಾಸನಾತ್ಮಕವಾಗಿ ನಿಷೇಧಿತಸಲಾಗಿತ್ತು.

ಎರಡನೆಯ ವಿಶ್ವಯುದ್ಧದ ನಂತರ ಅಮೆರಿಕಾ ಜಗತ್ತಿನ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮಿತು. ಆದರೆ ಅಮಾನವೀಯವಾದ ವರ್ಣಾಧಾರಿತ ತಾರತಮ್ಯ ಮಾತ್ರ ಹಾಗೆಯೇ ಉಳಿದುಕೊಂಡಿತು. ಅಮೆರಿಕಾದ ಸಮಾಜದ ಆಂತರಿಕ ಹುಳುಕುಗಳು ಹೊರಜಗತ್ತಿಗೆ ಗೊತ್ತಿರಲಿಲ್ಲ. ೧೯೯೦ರ ಪೂರ್ವದಲ್ಲಿ ಬಹಳಷ್ಟು ರಾಷ್ಟ್ರಗಳು ಇತರ ರಾಷ್ಟ್ರಗಳ ಆಂತರಿಕ ವ್ಯವಹಾರಗಳಲ್ಲಿ ತಲೆ ಹಾಕುತ್ತಿರಲಿಲ್ಲ.

ಆದರೆ ಜಾಗತೀಕರಣದ ನಂತರ ಅಂದರೆ ೧೯೯೦ರ ನಂತರ ವಿಶ್ವದಾದ್ಯಂತ ಹೊಸ ಬೆಳವಣಿಗೆಗಳು ಘಟಿಸಿದವು. ಅಮೆರಿಕಾದಲ್ಲಿ ಕೇವಲ ಅರ್ಧ ಶತಮಾನದಿಂದೀಚೆಗೆ ಕೋಟ್ಯಾಧಿಪತಿಗಳ ಸಂಖ್ಯೆ ಒಮ್ಮಿಂದೊಮ್ಮೆ ಹೆಚ್ಚಾದವು. ೨೦೦೧ರಲ್ಲಿ ರಾಬರ್ಟ್ ಎಲ್. ಜಾನ್ಸನ್ ಅಮೆರಿಕಾದ ಮೊಟ್ಟ ಮೊದಲ ಕಪ್ಪು ವರ್ಣದ ಕೋಟ್ಯಾಧಿಪತಿಯಾಗಿ ಉದಯಿಸಿದ. ಸುಮಾರು ೧.೧ ದಶಕೋಟಿ ಡಾಲರ್‌ಗಳಷ್ಟು ಹಣಗಳಿಸಿದ ಓಪ್ರಾ ವಿನ್‌ಫ್ರೇ ೨೦೦೪ ರಲ್ಲಿ ಕೋಟ್ಯಾಧಿಪತಿಗಳ ಸಾಲಿಗೆ ಸೇರಿದರು.

೧೯೯೦ರ ನಂತರ ಕಪ್ಪು ಜನರು ಅಮೆರಿಕಾದಲ್ಲಿ ಅದ್ಭುತವಾದ ಸಾಧನೆಗಳನ್ನು ಮಾಡಿದ್ದಾರೆ. ಅಮೆರಿಕಾದ ವರ್ಜೀನಿಯಾ ರಾಜ್ಯದ ಗವರ್ನರ್ ಸ್ಥಾನಕ್ಕೆ ಆಯ್ಕೆಯಾಗುವ ಮೂಲಕ ಡೌಗ್ಲಾಸ್ ವಿಲ್ಡರ್ ಮೊಟ್ಟ ಮೊದಲ ಕಪ್ಪು ವರ್ಣದ ಗವರ್ನರ್ ಎಂಬ ಶ್ರೇಯಕ್ಕೆ ಪಾತ್ರರಾದರು. ೧೯೯೦ರಲ್ಲಿ ಬರಾಕ್ ಒಬಾಮ ವಿಶ್ವವಿಖ್ಯಾತ ಕಾನೂನು ನಿಯತಕಾಲಿಕೆ 'ಹಾರ್ವರ್ಡ್ ಲಾ ರಿವ್ಯೂ'ನ ಅಧ್ಯಕ್ಷರಾದರು. ೧೯೯೦ರಲ್ಲಿ ಅಮೆರಿಕಾದ ಕಪ್ಪು ಮಹಿಳೆ ಕ್ಯಾರೋಲ್ ಗಿಸ್ಟ್ "ಮಿಸ್ ಯುಎಸ್ಎ" ಕಿರೀಟ ಧರಿಸಿದಳು. ನಂತರ ಕಪ್ಪು ವರ್ಣದ ಜನರ ಇನ್ನೆರಡು ಗಮನಾರ್ಹ ಸಾಧನೆಗಳು ಬೆಳಕಿಗೆ ಬಂದವು. ೧೯೯೧ರಲ್ಲಿ ಪ್ರತಿಷ್ಠಿತ ಆಸ್ಕರ್ ಪ್ರಶಸ್ತಿಯ ಕಣದಲ್ಲಿ ಅತ್ಯುತ್ತಮ ನಿರ್ದೇಶಕ ವಿಭಾಗದಲ್ಲಿ ಅಂತಿಮ ಸ್ಪರ್ಧೆಗೆ ಆಯ್ಕೆಯಾದ ಮೊಟ್ಟ ಮೊದಲ ಕಪ್ಪು ನಿರ್ದೇಶಕ ಎಂಬ ಹೆಗ್ಗಳಿಕೆಗೆ ಜಾನ್ ಸಿಂಗಲ್ಟನ್ ಪಾತ್ರರಾದರು. ೧೯೯೦ರಲ್ಲಿ ಶಾರನ್ ಪ್ರಾಟ್‌ಕೆಲ್ಲಿ ವಾಷಿಂಗ್ಟನ್‌ನ ಮೇಯರ್ ಸ್ಥಾನಕ್ಕೆ ಆಯ್ಕೆಯಾದ ಮೊಟ್ಟ ಮೊದಲ ಕಪ್ಪು ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಕ್ಯಾರಲ್ ಮೋಸ್ಲಿ ಬ್ರಾನ್ ೧೯೯೨ರಲ್ಲಿ ಸೆನೆಟ್‌ಗೆ ಆಯ್ಕೆಯಾದ ಮೊಟ್ಟ ಮೊದಲ ಕಪ್ಪು ಮಹಿಳೆಯೆಂಬ ಸಾಧನೆಗೆ ಪಾತ್ರರಾದರು. ೧೯೯೩ರಲ್ಲಿ ಟೋನಿ ಮಾರಿಸನ್ ನೊಬೆಲ್ ಪ್ರಶಸ್ತಿ ಪಡೆದ ಮೊದಲ ಕಪ್ಪು ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

೧೯೯೦ರ ನಂತರ ಅಮೆರಿಕಾದ ಕಪ್ಪು ಜನರು ರೋಮಾಂಚನಕಾರಿ ಸಾಧನೆಗಳನ್ನು ಮಾಡುತ್ತಾ ಬಂದಿದ್ದಾರೆ. ಕಾಲಿನ್ ಪೊವೆಲ್, ಕಂಡೋಲೀಸಾ ರೈಸ್, ಟೈಗರ್ ವುಡ್ಸ್, ವಿಲಿಯಮ್ಸ್ ಸಹೋದರಿಯರು ವಿಶ್ವವಿಖ್ಯಾತರಾಗಿ ಹೊರಹೊಮ್ಮಿದರು. ನಾಲ್ಕು ದಶಕಗಳ ಹಿಂದೆ ಕನಿಷ್ಟ ೧೬ ಅಮೆರಿಕಾದ ರಾಜ್ಯಗಳು ಅಂತರ ವರ್ಣ ಮದುವೆಗೆ ನಿರ್ಬಂಧ ಹೇರಿತ್ತು. ಆದರೆ, ಈಗ ಸುಮಾರು ಅರ್ಧ ಮಿಲಿಯನ್ ಅಮೆರಿಕನ್ ದಂಪತಿಗಳು ಎರಡೂ ವರ್ಣಗಳಲ್ಲಿ ಬೆರೆತು ಹೋಗಿದ್ದಾರೆ. ಈ ದಂಪತಿಗಳಲ್ಲಿ ಶೇ. ೭೫ರಷ್ಟು ಮಂದಿ ಪುರುಷರು ಕಪ್ಪು ವರ್ಣದವರಾಗಿದ್ದಾರೆ. ಸಾವಿರಾರು ಮಂದಿ ಬಿಳಿಯ ಮಹಿಳೆಯರು ಕಪ್ಪು ಪುರುಷರನ್ನು ತಮ್ಮ ಪತಿಯರನ್ನಾಗಿ ಆಯ್ಕೆ ಮಾಡಿಕೊಳ್ಳಲು ತಯಾರಿದ್ದಾರೆಂದರೆ ಲಕ್ಷಾಂತರ ಮಂದಿ ಓರ್ವ ಕಪ್ಪು ವರ್ಣದ ವ್ಯಕ್ತಿಯನ್ನು ರಾಷ್ಟಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದುದರಲ್ಲಿ ಆಶ್ಚರ್ಯವೇನಿಲ್ಲ.

೧೯೯೦ಕ್ಕೂ ಮುಂಚೆ ತೀವ್ರವಾಗಿ ಹಿಂದುಳಿದಿದ್ದ ಅಮೆರಿಕಾದ ಕಪ್ಪು ಜನರು ೧೯೯೦ರ ನಂತರ ಅಭೂತಪೂರ್ವ ಪ್ರಗತಿ ಸಾದಿಸಲು ಹೇಗೆ ಸಾಧ್ಯವಾಯಿತು ಎಂಬ ಪ್ರಶ್ನೆಯನ್ನು ನಾವು ಕೇಳಬೇಕಾಗಿದೆ. ಇದರ ಉತ್ತರ ಕೂಡ ಅಷ್ಟೇನೂ ಸಂಕೀರ್ಣವಾದುದಲ್ಲ. ೧೯೯೦ರ ಪೂರ್ವದಲ್ಲಿ ಜಗತ್ತು ಸ್ಥಳೀಯ ಕೇಂದ್ರಿತವಾಗಿತ್ತು. ಸಾಂಪ್ರದಾಯಿಕವಾಗಿ ಪ್ರಬಲವಾಗಿದ್ದ ಸಾಮಾಜಿಕ ವರ್ಗಗಳು ಸಹಜವಾಗಿ ಅಧಿಕಾರ ಸ್ಥಾನದಲ್ಲಿದ್ದವು. ಬಿಳಿಯರು ಕಪ್ಪು ಜನರಿಗೆ ಮುಕ್ತ ಅವಕಾಶ ನೀಡಿರಲಿಲ್ಲ. ಪ್ರತಿಭೆಯಿದ್ದರೂ ಕೂಡ ಕಪ್ಪು ಜನರು ಮಂಚೂಣಿಗೆ ಬರಲು ಸಾಧ್ಯವಾಗಿರಲಿಲ್ಲ.

ಆದರೆ ಜಾಗತೀಕರಣ ಸ್ಥಳೀಯರ ಪ್ರಾಬಲ್ಯವನ್ನು ಅಳಿಸಿ ಹಾಕುತ್ತಾ ಬಂತು. ದೊಡ್ಡ ಬಂಡವಾಳಶಾಹಿಗಳ ನಿಯಂತ್ರಣ ಸಡಿಲವಾಗುತ್ತಾ ಬಂತು. ಸಣ್ಣ ಉದ್ದಿಮೆಗಳಿಗೆ "ಔಟ್ ಸೋರ್ಸಿಂಗ್"ನ ವೇಗ ದೊರಕಿತು. ಉದ್ಯಮದಲ್ಲಿ ಯಾವುದೇ ರೀತಿಯ ಅನುಭವ ಇಲ್ಲದ ಹೊಸ ಸಾಮಾಜಿಕ ವರ್ಗಗಳು ಅವಕಾಶ ಪಡೆದವು. ಅತಿ ವೇಗವಾಗಿ ಶ್ರೀಮಂತ ಕಪ್ಪು ಮಧ್ಯಮವರ್ಗ ಅಸ್ತಿತ್ವಕ್ಕೆ ಬಂತು. ವರ್ಣ ತಾರತಮ್ಯ ಇತಿಹಾಸದ ಪುಟ ಸೇರುವ ಮೂಲಕ ಅರ್ಥ ವ್ಯವಸ್ಥೆ, ಶಿಕ್ಷಣ, ವೃತ್ತಿ ಕ್ಷೇತ್ರದಲ್ಲಿ ಕಪ್ಪು ಜನರ ಪ್ರಭಾವ ಹೆಚ್ಚಾಗತೊಡಗಿತು. ಒಬಾಮ ಅವರ ಗೆಲುವಿಗೆ ಇಂತಹ ಸಾಂಸ್ಕೃತಿಕ ಬುನಾದಿ ದೊರಕಿದೆ.

ಈ ಹಿನ್ನೆಲೆಯನ್ನು ಗಮನಿಸಿದರೆ, ಭಾರತದಲ್ಲಿ ಜಾತಿವಾದಿಗಳು ಜಾಗತೀಕರಣವನ್ನು ವಿರೋಧಿಸುವುದರಲ್ಲಿ ಯಾವುದೇ ಆಶ್ಚರ್ಯವಿಲ್ಲ. ಭಾರತದಲ್ಲಿ ಸಾಂಪ್ರದಾಯಿಕವಾಗಿ ಪ್ರಬಲವಾಗಿರುವ ವರ್ಗಗಳು ಜಾಗತೀಕರಣದ ಹೊಡೆತಕ್ಕೆ ಸಿಲುಕಿ ಈಗಾಗಲೇ ನಲುಗುತ್ತಿರುವುದರಿಂದ ಮುಂದೊಂದು ದಿನ ಈ ನೆಲದಲ್ಲಿ ದಲಿತ ಒಬಾಮ ಹುಟ್ಟಿ ಬರುವ ಸಾಧ್ಯತೆಯನ್ನು ನಾವು ತಳ್ಳಿಹಾಕುವಂತಿಲ್ಲ.

ದೇಶ, ಖಂಡ, ವರ್ಣ, ಈ ಎಲ್ಲ ಎಲ್ಲೆಗಳನ್ನು ಮೀರಿದ ಹೊಸ ಶತಮಾನದ ಆಶಾವಾದದ ರೂಪಕ ಬರಾಕ್ ಒಬಾಮ. ಒಬಾಮ ಅಮೆರಿಕಾ ರಾಷ್ಟ್ರದ ನಿಯೋಜಿತ ಅಧ್ಯಕ್ಷ ಮಾತ್ರವಲ್ಲ, ಇಡೀ ವಿಶ್ವದ ಅಗ್ರಗಣ್ಯ ನಾಯಕ. ಅಮೆರಿಕಾದ ಅಧ್ಯಕ್ಷರ ವಿಶ್ವದ ನಾಯಕರು ಎಂಬುದು ಸಾಮಾನ್ಯ ಜ್ಞಾನದ ವಿಚಾರ. ಹೀಗಾಗಿ ಜಗತ್ತಿನ ಎಲ್ಲ ರಾಷ್ಟ್ರಗಳು ಅಮೆರಿಕಾದ ವಿಶ್ವಾಸಕ್ಕೆ ಪಾತ್ರರಾಗಲು ಬಯಸುತ್ತವೆ. ಆದರೆ ಒಬಾಮ ಅವರದು ಮಾತ್ರ ವಿಭಿನ್ನವಾದ ವ್ಯಕ್ತಿತ್ವ. ಸಿನಿಕತನದ ವಿರುದ್ಧ ಆಶಾವಾದದ ಗೆಲುವಿನ ಸಂಕೇತ ಒಬಾಮ. ಒಬಾಮರ ಗೆಲುವಿನ ಕಾರಣಗಳನ್ನು ನಾವು ವಿಶ್ಲೇಷಿಸುತ್ತಾ, ಚರ್ಚಿಸುತ್ತಾ ಹೋಗಬಹುದು.

ಈ ಹಿಂದಿನ ಅಮೆರಿಕಾದ ಅಧ್ಯಕ್ಷರು ಒಬಾಮರಂತೆ ಸಿಹಿ ಸಂಚಲನ ಯಾಕೆ ಉಂಟು ಮಾಡಲಿಲ್ಲ ಎಂಬ ಬಹುಮುಖ್ಯ ಪ್ರಶ್ನೆಯನ್ನು ಕೂಡ ನಾವು ನಿಕಷಕ್ಕೆ ಒಡ್ಡಬೇಕಿದೆ. ಭಾರತ ಕೂಡ ಒಬಾಮರಂತಹ ನಾಯಕರನ್ನು ಸೃಷ್ಟಿಸಲು ಸಾಧ್ಯವಿಲ್ಲವೇ ಎಂದು ಭಾರತೀಯ ಮಧ್ಯಮ ವರ್ಗ ಪ್ರಶ್ನಿಸುತ್ತಿದೆ. ಭಾರತದ ನೆಲದಿಂದ ಒಬಾಮರಂತಹ ನಾಯಕರು ದಲಿತ ಅಥವಾ ಆದಿವಾಸಿ ಸಮುದಾಯಗಳಿಂದಲೇ ಬರಬೇಕಿದೆ. ಅಮೆರಿಕಾದ ಒಬಾಮ ಕಪ್ಪು ಜನರನ್ನು ಪ್ರತಿನಿಧಿಸಿದ ಹಾಗೆ ಭಾರತೀಯ ಒಬಾಮ ಇಲ್ಲಿನ ದಲಿತ ವರ್ಗದವರನ್ನು ಪ್ರತಿನಿಧಿಸಬೇಕಿದೆ.

ಭಾರತೀಯ ಮಾಧ್ಯಮಗಳಲ್ಲಿ ಈ ಕುರಿತು ಸ್ವಲ್ಪ ಕಾಲ ಚರ್ಚೆಗಳು ನಡೆದು ಕೆಲವು ಉತ್ತರಗಳನ್ನು ಕೂಡ ಕಂಡುಕೊಳ್ಳಲಾಯಿತು. ಭಾರತಕ್ಕೆ ಕೂಡ ಒಬಾಮರಂತಹ ನಾಯಕತ್ವದ ಅವಶ್ಯಕತೆಯಿದೆ. ಈ ನಾಯಕತ್ವ ದಲಿತ ವರ್ಗಗಳಿಂದಲೇ ಬರಬೇಕಿದೆ ಎಂದು ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳು ಸಮ್ಮತಿ ಸೂಚಿಸುತ್ತವೆ; ಆದರೆ ದಲಿತರು "ಅಸ್ಮಿತೆ"ಯ ರಾಜಕಾರಣದಿಂದ ದೂರ ಉಳಿಯಬೇಕೆಂದು ತಾಕೀತು ಕೂಡ ಮಾಡುತ್ತವೆ. ದಲಿತರು ತಮ್ಮ ಜಾತಿಯನ್ನು ಜನರ ಸಂಘಟನೆಗೆ ಮತ್ತು ರಾಜಕಾರಣಕ್ಕೆ ಬಳಸಬಾರದು ಎಂಬುದು ಇದರರ್ಥ. ಅಂದರೆ ಒಬಾಮರಂತಹ ಸ್ಫೂರ್ತಿದಾಯಕ ನಾಯಕತ್ವ ಸೃಷ್ಟಿಸಬೇಕಾದರೆ "ದಲಿತ ವರ್ಗಗಳು" ಒಬಾಮ ಸಾಗಿದ ಹಾದಿಯಲ್ಲಿಯೇ ಸಾಗಬೇಕು ಎಂಬ ಸಲಹೆ ಇದರಲ್ಲಡಗಿದೆ. ದಲಿತ ನಾಯಕರು ಕೇವಲ ದಲಿತರ ನಾಯಕರಲ್ಲ, ಇಡೀ ಭಾರತದ ನಾಯಕರಾಗಿ ಮಾತನಾಡಬೇಕಿದೆ.

ಜಾಗತೀಕರಣ ಸ್ಥಳೀಯರ ಪ್ರಾಬಲ್ಯವನ್ನು ಅಳಿಸಿ ಹಾಕುತ್ತಾ ಬಂತು. ದೊಡ್ಡ ಬಂಡವಾಳಶಾಹಿಗಳ ನಿಯಂತ್ರಣ ಸಡಿಲವಾಗುತ್ತಾ ಬಂತು. ಸಣ್ಣ ಉದ್ದಿಮೆಗಳಿಗೆ "ಔಟ್ ಸೋರ್ಸಿಂಗ್"ನ ವೇಗ ದೊರಕಿತು. ಉದ್ಯಮದಲ್ಲಿ ಯಾವುದೇ ರೀತಿಯ ಅನುಭವ ಇಲ್ಲದ ಹೊಸ ಸಾಮಾಜಿಕ ವರ್ಗಗಳು ಅವಕಾಶ ಪಡೆದವು. ಅತಿ ವೇಗವಾಗಿ ಶ್ರೀಮಂತ ಕಪ್ಪು ಮಧ್ಯಮವರ್ಗ ಅಸ್ತಿತ್ವಕ್ಕೆ ಬಂತು. ವರ್ಣ ತಾರತಮ್ಯ ಇತಿಹಾಸದ ಪುಟ ಸೇರುವ ಮೂಲಕ ಅರ್ಥ ವ್ಯವಸ್ಥೆ, ಶಿಕ್ಷಣ, ವೃತ್ತಿ ಕ್ಷೇತ್ರದಲ್ಲಿ ಕಪ್ಪು ಜನರ ಪ್ರಭಾವ ಹೆಚ್ಚಾಗತೊಡಗಿತು. ಒಬಾಮ ಅವರ ಗೆಲುವಿಗೆ ಇಂತಹ ಸಾಂಸ್ಕೃತಿಕ ಬುನಾದಿ ದೊರಕಿದೆ. ಮುಂದೊಂದು ದಿನ ಈ ನೆಲದಲ್ಲಿ ದಲಿತ ಒಬಾಮ ಹುಟ್ಟಿ ಬರುವ ಸಾಧ್ಯತೆಯನ್ನು ನಾವು ತಳ್ಳಿಹಾಕುವಂತಿಲ್ಲ.

ಈ ವಾದಕ್ಕೆ ನನ್ನ ಸಹಮತವಿದೆ. ಬಹುತೇಕ ದಲಿತ ನಾಯಕರು ಮೀಸಲು ಕ್ಷೇತ್ರಗಳಿಂದ ಚುನಾಯಿತರಾಗಿ ಬರುವುದರಿಂದ ಇವರೆಲ್ಲರೂ ದಲಿತ ವೋಟ್ ಬ್ಯಾಂಕ್‌ನಿಂದಲೇ ಗುರುತಿಸಲ್ಪಡುತ್ತಾರೆ. ಹೀಗಾಗಿ ಈ ನಾಯಕರ ದಲಿತ ನೆಲೆಗಳನ್ನು ಹುಡುಕಬೇಕಾದ ಅವಶ್ಯಕತೆಯೇನಿಲ್ಲ.

ದಲಿತ ನಾಯಕರೂ ಕೂಡ ವಿಶ್ವಮಟ್ಟದ ನಾಯಕರಂತೆ (ಬರಾಕ್ ಒಬಾಮರಂತೆ) ಮಾತನಾಡುವುದನ್ನು ಕಲಿಯಬೇಕಿದೆ. ಒಬಾಮ ಕಪ್ಪು ಜನರ ಚಿಂತನೆಯನ್ನೇ ಬದಲಾಯಿಸಿದ ಹಾಗೆ ದಲಿತ ನಾಯಕರು ಕೂಡ ದಲಿತರ ಚಿಂತನಾಕ್ರಮವನ್ನು ಬದಲಾಯಿಸಬೇಕಿದೆ. ಭಾರತದ ಪ್ರತಿಯೊಬ್ಬ ದಲಿತನ ಮನೆಯಲ್ಲಿಯೂ ಒಬಾಮರಂತಹ ನಾಯಕರು ಸೃಷ್ಟಿಯಾಗುವ ಸಾಧ್ಯತೆಯಿದ್ದರೂ, ಇಲ್ಲಿನ ದಲಿತ ನಾಯಕರು ಒಬಾಮರಂತಹ ಪ್ರೇರಣಾತ್ಮಕ ನಾಯಕತ್ವಕ್ಕೆ ಯಾವುದೇ ರೀತಿಯಲ್ಲಿಯೂ ಸರಿಸಾಟಿಯಲ್ಲ ಎಂಬುದಂತೂ ವೇದ್ಯ.

ಜೊತೆಗೆ ಭಾರತದ ಜಾತಿ ಆಧಾರಿತ ಸಮಾಜ ಹಲವಾರು ಸಮಸ್ಯೆಗಳಿಗೆ ಶೀಘ್ರವಾಗಿ ಪರಿಹಾರ ಹುಡುಕಿಕೊಳ್ಳಬೇಕಿದೆ. ಭಾರತ ಕೂಡ ಒಬಾಮರಂತಹ ನಾಯಕನನ್ನು ಹೊಂದಿದ್ದರೆ ಏನಾಗುತ್ತಿತ್ತು? ಅಂಬೇಡ್ಕರ್ ಕೂಡ ಒಬಾಮ ವ್ಯಾಸಂಗ ಮಾಡಿದ ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿಯೇ ಶಿಕ್ಷಣ ಪಡೆದರು. ಎಲ್ಲ ರೀತಿಯ ಶೈಕ್ಷಣಿಕ ಅರ್ಹತೆ ಹೊಂದಿದ ಅಂಬೇಡ್ಕರ್ ಅವರನ್ನು ಸಂವಿಧಾನ ರಚನೆಗೆ ನಿಯೋಜಿಸಿದಾಗ ತಮ್ಮ ಕರ್ತವ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ಇದಾದ ನಂತರ ಎರಡು ಬಾರಿ ಚುನಾವಣೆಗೆ ಸ್ಪರ್ಧಿಸಿ ಸೋತರು. ಸಂವಿಧಾನದ ಕರ್ತೃವಿಗೆ ಭಾರತೀಯ ಸಮಾಜ ನೀಡಿದ ಕೊಡುಗೆಯಿದು.

ಹೀಗಾಗಿ, ದಲಿತರು ಕೂಡ ಒಬಾಮ ಸಾಗಿದ ದಾರಿಯಲ್ಲಿಯೇ ಸಾಗುವುದಾದರೆ ಜಾತಿಯಾಧಾರಿತ ಹಿಂದೂ ಸಮಾಜಕ್ಕೆ ಅಮೆರಿಕಾದಂತೆ ಬೆಂಬಲ ನೀಡುವ ಧೈರ್ಯವಿದೆಯೇ?

ಒಬಾಮಾ ಅಧ್ಯಕ್ಷರಾಗಿ ಚುನಾಯಿತರಾದ ಐತಿಹಾಸಿಕ ದಿನ ಭಾರತೀಯ ಮಾಧ್ಯಮಗಳು ಒಬಾಮಾ ಮ್ಯಾಜಿಕ್ ಬಗ್ಗೆ ಮಂಥನ ನಡೆಸಿದವು. ಆದರೆ, ಓರ್ವ ದಲಿತ ಚಿಂತಕರನ್ನು ಹೊರತುಪಡಿಸಿದರೆ ಇನ್ನಾವ ದಲಿತ ಪ್ರತಿನಿಧಿಗಳೂ ಟಿ.ವಿ ಸ್ಟುಡಿಯೋಗಳಲ್ಲಿ ತಮ್ಮ ವಿಚಾರಗಳನ್ನು ಮಂಡಿಸಲು ಅವಕಾಶ ಸಿಗಲಿಲ್ಲ. ಒಂದೆರಡು ಅಪವಾದಗಳನ್ನು ಬಿಟ್ಟರೆ ಯಾವುದೇ ದಲಿತ ಚಿಂತಕರ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟಗೊಳ್ಳಲಿಲ್ಲ. ಮಾಧ್ಯಮದ ಅಭಿಪ್ರಾಯ ವೇದಿಕೆಗಳಲ್ಲಿ ದಲಿತ ಚಿಂತಕರ ಸಾಂಪ್ರದಾಯಿಕತೆಯನ್ನು ಪ್ರತಿಬಿಂಬಿಸುತ್ತದೆ. ದಲಿತರನ್ನು ಹೀಗೆ ಹೊರಗಿಟ್ಟಿರುವುದು ಮಾಧ್ಯಮಗಳು ಮಾತ್ರವಲ್ಲ. ಉದ್ಯಮಗಳೂ ಕೂಡ ದಲಿತರನ್ನು ವಾಣಿಜ್ಯ-ವ್ಯವಹಾರಗಳಿಂದ ಹೊರಗಿಟ್ಟಿವೆ. ಕಲೆ, ಸಂಸ್ಕೃತಿ, ಚಲನಚಿತ್ರ ಮತ್ತು ಸಂಗೀತ ಹೀಗೆ ಎಲ್ಲ ಕ್ಷೇತ್ರಗಳಲ್ಲಿಯೂ ದಲಿತರನ್ನು ಹೊರಗಿಡಲಾಗಿದೆ.

ಒಂದು ವೇಳೆ ದಲಿತರು ಬದಲಾದರೂ ಒಟ್ಟಾರೆ ಸಮಾಜ ಹಳೆಯ ಸಂಪ್ರದಾಯಕ್ಕೆ ಜೋತು ಬಿದ್ದಿದ್ದರೆ ಅದರಿಂದಾಗುವ ಪ್ರಯೋಜನವಾದರೂ ಏನು? ಅಮೆರಿಕಾದ ಅಧ್ಯಕ್ಷೀಯ ಚುನಾವಣೆಯನ್ನು ಹತ್ತಿರದಿಂದ ಗಮನಿಸಿದಾಗ ನನಗನ್ನಿಸಿದ್ದೇನೆಂದರೆ, ಆರಂಭದಲ್ಲಿ ಬಿಳಿಯರ ಎಲೀಟ್ ವರ್ಗ ಮತ್ತು ಕಪ್ಪು ವರ್ಣದ ಜನ ಒಬಾಮಾ ಅವರ ಬೆಂಬಲಕ್ಕೆ ನಿಂತರು. ನಂತರ ಉಳಿದವರೂ ಕೂಡ ಬೆಂಬಲ ವ್ಯಕ್ತಪಡಿಸಿದರು. ಆದರೆ, ಭಾರತದಲ್ಲಿ ಎಲೀಟ್‌ಗಳ ಹಿಡಿತದಲ್ಲಿರುವ ಸಾರ್ವಜನಿಕ ಸಂಸ್ಥೆಗಳಲ್ಲಿ ಇರುವಷ್ಟು ತಾರತಮ್ಯ ಸರ್ಕಾರಿ ಒಡೆತನದ ಸಂಸ್ಥೆಗಳಲ್ಲಿ ಕೂಡ ಕಂಡು ಬರುವುದಿಲ್ಲ. ಪರಿಸ್ಥಿತಿ ಹೀಗಿರುವಾಗ ದಲಿತ ವರ್ಗಗಳು ಸ್ವಪ್ರಯತ್ನದಿಂದ ಒಬಾಮಾರಂತಹ ನಾಯಕತ್ವ ಸೃಷ್ಟಿಸಲು ಶಕ್ತವಾದರೂ ರಾಷ್ಟ್ರಮಟ್ಟದಲ್ಲಿ ಒಬಾಮಾ ಹುಟ್ಟಿ ಬರಲು ಸಾಧ್ಯವೇ?

ಈ ಹಿಂದೆ ಹೇಳಿದಂತೆ ಬರಾಕ್ ಒಬಾಮಾ ಆಶಾವಾದದ ರೂಪಕವಾಗಿ ಹೊರಹೊಮ್ಮಿದ್ದಾರೆ. ಕಪ್ಪು ಮತ್ತು ಬಿಳಿಯ ವರ್ಣಗಳ ಜನರು ಬದಲಾವಣೆಯ ಹಾದಿ ತುಳಿದದ್ದರಿಂದ ಒಬಾಮಾರಂತಹ ನಾಯಕ ಗೆಲುವು ಸಾಧಿಸಲು ಸಾಧ್ಯವಾಯಿತು. ಭಾರತದಲ್ಲಿ ಕೂಡ ಇಂತಹ ಬದಲಾವಣೆಯಾಗಬೇಕಾದ ಅವಶ್ಯಕತೆಯಿದೆ. ಇಲ್ಲಿನ ಜಾತಿ ಆಧಾರಿತ ಸಮಾಜ ಅತಿ ವೇಗವಾಗಿ ಬದಲಾಗಬೇಕಿದೆ.

ಆದರೆ ದುರದೃಷ್ಟವಶಾತ್, ಅಮೆರಿಕಾದಲ್ಲಿ ಇಪ್ಪತ್ತನೆಯ ಶತಮಾನದ ಮಧ್ಯಭಾಗದಲ್ಲಿದ್ದ ಪರಿಸ್ಥಿತಿ ಇಂದು ಭಾರತದಲ್ಲಿದೆ. ಆಗ ಒಂದು ಹಾಲಿವುಡ್ ಚಿತ್ರದಲ್ಲಿ ಕರಿಯ ವ್ಯಕ್ತಿಯ ಪಾತ್ರವೇನಾದರೂ ಇದ್ದರೆ, ಬಿಳಿಯ ಬಣ್ಣದ ನಟನೇ ಮುಖಕ್ಕೆ ಕಪ್ಪು ಬಣ್ಣ ಬಳಿದುಕೊಂಡು ನಟಿಸುತ್ತಿದ್ದ. ಆದರೆ ಈಗ ಆ ಪಾತ್ರವನ್ನು ಓರ್ವ ಕಪ್ಪು ವರ್ಣದ ನಟನೇ ಅಭಿನಯಿಸುತ್ತಾನೆ. ಆದರೆ, ಭಾರತದಲ್ಲಿ ಈಗಲೂ

[illegible] ಹಕ್ಕುಗಳನ್ನು [illegible] ವರ್ಗದ [illegible] ಅಥ [illegible] ಪರಿಸ್ಥಿತಿ ಹೀಗಿರುವಾಗ ಭಾರತೀಯ [illegible] ಹುಟ್ಟುವುದು ಸಾಧ್ಯವೇ?

ಒಬಾಮಾ ಅವರ ಅಭೂತಪೂರ್ವ ಯಶಸ್ಸಿನ ಹಿಂದಿನ ರಹಸ್ಯದ ಬಗ್ಗೆ ಯೋಚನೆ ಮಾಡುವುದನ್ನು ಬಿಡಿ. ೧೯೬೯ರಲ್ಲಿ ಚಂದ್ರನ ಮೇಲೆ ಮೊಟ್ಟ ಮೊದಲ ಬಾರಿಗೆ ಪಾದವಿಟ್ಟವರು ಯುರೋಪಿಯನ್ನರಲ್ಲ, ಅಮೆರಿಕನ್ನರು ಯಾಕೆ? ಸುಮಾರು ೫೧೬ ವರ್ಷಗಳ ಹಿಂದೆ ೧೪೯೨ರಲ್ಲಿ ಕ್ರಿಸ್ಟೋಫರ್ ಕೊಲಂಬಸ್ ಅಮೆರಿಕಾ ದೇಶವನ್ನು ಅನ್ವೇಷಿಸಿದ ನಂತರ ೧೬೦೭ರಲ್ಲಿ ಅಂದರೆ ಸುಮಾರು ೪೦೧ ವರ್ಷಗಳ ಹಿಂದೆ ಯುರೋಪಿಯನ್ನರು ಆಧುನಿಕ ಅಮೆರಿಕಾದಲ್ಲಿ ಜೇಮ್ಸ್‌ಟೌನ್ ಎಂಬ ನಗರವನ್ನು ಸ್ಥಾಪಿಸುತ್ತಾರೆ. ೧೬೦೦ರಲ್ಲಿ ಸ್ಥಾಪಿಸಲಾದ ಈಸ್ಟ್ ಇಂಡಿಯಾ ಕಂಪನಿ ಆಧುನಿಕ ಅಮೆರಿಕಾಗಿಂತ ಹಳೆಯದು.

೧೭೮೩ರ ಸೆಪ್ಟಂಬರ್ ೩ರಂದು ಪ್ಯಾರಿಸ್ ಒಪ್ಪಂದ ಏರ್ಪಟ್ಟಿತು. ಆ ಒಪ್ಪಂದ ಏರ್ಪಡುವವರೆಗೂ ಅಮೆರಿಕಾ ಬ್ರಿಟಿಷ್ ವಸಾಹತು ಪ್ರದೇಶವಾಗಿತ್ತು. ೧೭೮೩ರವರೆಗೆ ಅಮೆರಿಕಾ ಒಂದು ರಾಷ್ಟ್ರವಾಗಿಯೇ ಗುರುತಿಸಿಕೊಂಡಿರಲಿಲ್ಲ. ಸ್ವಾತಂತ್ರ್ಯವಿಲ್ಲದೇ ಅಲ್ಲಿಯ ಜನರು ಬದುಕುತ್ತಿದ್ದರು. ಕೇವಲ ೨೨೫ ವರ್ಷಗಳ ಹಿಂದೆ ಜಾರ್ಜ್ ವಾಷಿಂಗ್‌ಟನ್ ನೇತೃತ್ವದಲ್ಲಿ ಅಮೆರಿಕಾ ಒಂದು ರಾಷ್ಟ್ರವಾಗಿ ರೂಪು ತಳೆಯಿತು. ೧೭೮೯ರಲ್ಲಿ ಜಾರ್ಜ್ ವಾಷಿಂಗ್‌ಟನ್ ಈ ಆಧುನಿಕ ರಾಷ್ಟ್ರದ ಮೊದಲ ಅಧ್ಯಕ್ಷನಾಗಿ ಆಯ್ಕೆಯಾದ. ೧೧೪ ವರ್ಷಗಳ ನಂತರ ೧೯೦೩ರಲ್ಲಿ ಅದೇ ರಾಷ್ಟ್ರದ ರೈಟ್ ಸಹೋದರರು ಮೊದಲ ವಿಮಾನವನ್ನು ರೂಪಿಸಿ ಅದನ್ನು ಯಶಸ್ವಿಯಾಗಿ ಹಾರಿಸಿದರು. ಯುರೋಪ್ ಅಥವಾ ಇಂಗ್ಲೆಂಡ್‌ನಲ್ಲಿ ಈ ಬಗೆಯ ವಿಮಾನ ತಂತ್ರಜ್ಞಾನ ಏಕೆ ಅಭಿವೃದ್ಧಿಗೊಳ್ಳಲಿಲ್ಲ? ೨೭೦ ನೊಬೆಲ್ ಪುರಸ್ಕಾರಗಳನ್ನು ಪಡೆದ ಅಗ್ರಗಣ್ಯ ಸ್ಥಾನದ ಹೆಗ್ಗಳಿಕೆಯೊಂದಿಗೆ ಅಮೆರಿಕ ಬೀಗುತ್ತಿದ್ದರೆ ೧೦೧ ನೊಬೆಲ್ ಪುರಸ್ಕಾರಗಳನ್ನಷ್ಟೇ ತನ್ನದಾಗಿಸಿಕೊಂಡು ಎರಡನೇ ಸ್ಥಾನಕ್ಕಷ್ಟೇ ತೃಪ್ತಿಪಟ್ಟುಕೊಳ್ಳಬೇಕಾದ ಸ್ಥಿತಿ ಇಂಗ್ಲೆಂಡ್‌ಗೆ ಏಕೆ ಎದುರಾಯಿತು? ಯಾಕೆ ಅಮೆರಿಕಾದಲ್ಲಿಯೇ ಕಂಪ್ಯೂಟರ್‌ಗಳು ಆವಿಷ್ಕಾರವಾದವು ಎಂಬ ಪ್ರಶ್ನೆಗಳು ಮುಖ್ಯವೆನಿಸುತ್ತವೆ.

ಒಬಾಮಾ ಅವರ ಅಭೂತಪೂರ್ವ ಯಶಸ್ಸಿನ ಹಿಂದಿನ ರಹಸ್ಯದ ಬಗ್ಗೆ ಯೋಚನೆ ಮಾಡುವುದನ್ನು ಬಿಡಿ. ೧೯೬೯ರಲ್ಲಿ ಚಂದ್ರನ ಮೇಲೆ ಮೊಟ್ಟ ಮೊದಲ ಬಾರಿಗೆ ಪಾದವಿಟ್ಟವರು ಯುರೋಪಿಯನ್ನರಲ್ಲ, ಅಮೆರಿಕನ್ನರು ಯಾಕೆ? ಸುಮಾರು ೫೧೬ ವರ್ಷಗಳ ಹಿಂದೆ ೧೪೯೨ರಲ್ಲಿ ಕ್ರಿಸ್ಟೋಫರ್ ಕೊಲಂಬಸ್ ಅಮೆರಿಕಾ ದೇಶವನ್ನು ಅನ್ವೇಷಿಸಿದ ನಂತರ ೧೬೦೭ರಲ್ಲಿ ಅಂದರೆ ಸುಮಾರು ೪೦೧ ವರ್ಷಗಳ ಹಿಂದೆ ಯುರೋಪಿಯನ್ನರು ಆಧುನಿಕ ಅಮೆರಿಕಾದಲ್ಲಿ ಜೇಮ್ಸ್‌ಟೌನ್ ಎಂಬ ನಗರವನ್ನು ಸ್ಥಾಪಿಸುತ್ತಾರೆ. ೧೬೦೦ರಲ್ಲಿ ಸ್ಥಾಪಿಸಲಾದ ಈಸ್ಟ್ ಇಂಡಿಯಾ ಕಂಪನಿ ಆಧುನಿಕ ಅಮೆರಿಕಾಗಿಂತ ಹಳೆಯದು. ೧೭೮೩ರ ಸೆಪ್ಟಂಬರ್ ೩ರಂದು ಪ್ಯಾರಿಸ್ ಒಪ್ಪಂದ ಏರ್ಪಟ್ಟಿತು. ಆ ಒಪ್ಪಂದ ಏರ್ಪಡುವವರೆಗೂ ಅಮೆರಿಕಾ ಬ್ರಿಟಿಷ್ ವಸಾಹತು ಪ್ರದೇಶವಾಗಿತ್ತು.

೨೦ನೆಯ ಶತಮಾನವು ವೈಜ್ಞಾನಿಕ ಯಶೋಗಾಥೆಗಳ ಯುಗವಾಗಿ ಗುರುತಿಸಲ್ಪಟ್ಟಿದೆ. ವಿಜ್ಞಾನ ವಿಕ್ರಮಗಳಲ್ಲಿ ಅಮೆರಿಕದ ಪ್ರಾಬಲ್ಯದ ಬಗ್ಗೆ ಭಿನ್ನಾಭಿಪ್ರಾಯಗಳಿರಬಹುದು. ಆದರೆ, ಅದರಂತೆ ಪ್ರಾಬಲ್ಯ ಸಾಧಿಸುವುದಕ್ಕೆ ಯುರೋಪ್‌ಗೆ ಯಾಕೆ ಸಾಧ್ಯವಾಗಲಿಲ್ಲ ಎಂಬುದು ಕೂಡ ಯಕ್ಷಪ್ರಶ್ನೆಯಾಗಿಯೇ ಉಳಿದಿದೆ. ಇದಕ್ಕೆ ಹಲವಾರು ಕಾರಣಗಳು ಇರಬಹುದು. ಆದರೆ, ಅವುಗಳೊಂದಿಗೆ ಸುಪ್ತವಾದ ಸುಳ್ಳುಗಳೂ ಇವೆ. ನೂತನ ನಾಗರಿಕತೆಯ ತೊಟ್ಟಿಲಾಗಿ ಇಂಗ್ಲೆಂಡ್‌ನೊಂದಿಗೆ ಗುರುತಿಸಿಕೊಂಡ ಆಧುನಿಕ ಅಮೆರಿಕಾ ಆರಂಭದಲ್ಲಿ ಯುರೋಪಿನ ವಲಸಿಗರನ್ನೇ ಒಳಗೊಂಡಿತ್ತು. ೧೯ನೇ ಶತಮಾನದ ಶಿಷ್ಟ ಯುರೋಪಿಯನ್ನರು ಅಮೆರಿಕಾವನ್ನು ಸಾಂಸ್ಕೃತಿಕ ಕೀಳರಿಮೆಗಳ ನಾಡಾಗಿ ಕಂಡಿದ್ದರು. ೧೮ನೇ ಶತಮಾನದ ಫ್ರಾನ್ಸ್‌ನ ಎನ್‌ಸೈಕ್ಲೋಪೀಡಿಯಾ "ಒಬ್ಬ ಉತ್ತಮ ಕವಿ, ಸಮರ್ಥ ಗಣಿತ ಶಾಸ್ತ್ರಜ್ಞ, ಯಾವುದಾದರೂ ಕಲೆ ಅಥವಾ ವಿಜ್ಞಾನದಲ್ಲಿ ನಿಷ್ಣಾತನೆನಿಸಿಕೊಂಡ ಒಬ್ಬ ಮಹಾನ್ ವಿದ್ವಾಂಸನು ಅಮೆರಿಕಾದಲ್ಲಿ ಇನ್ನೂ ಹುಟ್ಟಿಲ್ಲ" ಎಂದು ಹೇಳಿದೆ. ಮನುಷ್ಯರನ್ನು ಮತ್ತು ಪ್ರಾಣಿಗಳನ್ನು ದುರ್ಬಲಗೊಳಿಸುವಂಥ ವಾತಾವರಣ ಅಮೆರಿಕ ದಲ್ಲಿದೆ ಎಂದು ಮತ್ತೊಂದು ಉಲ್ಲೇಖ ಸ್ಪಷ್ಟಪಡಿ ಸುತ್ತದೆ.

"ಮತ್ತೆ ಮತ್ತೆ ಉನ್ನತಿಗೆ, ಶುದ್ಧೀಕರಣಕ್ಕೆ ಹಂಬಲಿಸುವ ಅಮೆರಿಕನ್ನರು ಆ ದೇಶದ ಸಾಂಸ್ಕೃತಿಕ ಹಿನ್ನಡೆಯ ದ್ಯೋತಕವಾಗುತ್ತಾರೆ" ಎಂದು ೧೯ನೇ ಶತಮಾನದ ಖ್ಯಾತ ಲೇಖಕರೊಬ್ಬರು ಅಭಿಪ್ರಾಯ ಪಟ್ಟಿದ್ದಾರೆ. ೧೮ ಮತ್ತು ೧೯ನೇ ಶತಮಾನದ ಯುರೋಪಿಯನ್ ಚಿಂತಕರು ಅಮೆರಿಕಾವನ್ನು 'ಹಿಂದುಳಿದ ಸಮಾಜ' ಎಂದು ಕರೆದಿದ್ದಾರೆ. ಅದು ಹಿಂದುಳಿದ ಸಮಾಜವೇ. ಅಮೆರಿಕಾದ ಅನ್ವೇಷಣೆಯ ನಂತರ ಅಲ್ಲಿಗೆ ವಲಸೆ ಬಂದ ಹಲವರು ಯುರೋಪಿನ ದಲಿತರಾಗಿದ್ದರು. ಅರ್ಥಶಾಸ್ತ್ರ ಅವರನ್ನು ಗುತ್ತಿಗೆ ಕಾರ್ಮಿಕರು ಎನ್ನುತ್ತದೆ. ಹಸಿವಿನಿಂದ ಬಳಲುವವರು ಎಂದು ಗುರುತಿಸುತ್ತದೆ. ಧಾರ್ಮಿಕ ವಿಚಾರಣೆಗಳ ಬಲದಲ್ಲಿ ನಲುಗಿದಂಥವರು ಎಂದು ಚಿತ್ರಿಸುತ್ತದೆ. ಗುಲಾಮಗಿರಿಯ ಕರಿನೆರಳಲ್ಲಿ ಬದುಕು ಕಟ್ಟಿಕೊಂಡ ವ್ಯಾಪಾರಿಗಳು ಎಂದು ಹೆಸರಿಸುತ್ತದೆ. ಇಂಗ್ಲೆಂಡ್‌ನ ಕಣ್ಣಿನಲ್ಲಂತೂ ಅಮೆರಿಕಾ ಕೀಳಾಗಿ ಪರಿಗಣಿಸಲ್ಪಟ್ಟಿದೆ. ಬ್ರಿಟನ್ನಿನಲ್ಲಿ ಬಂಧೀಖಾನೆಗಳಿಲ್ಲದ ಕಾರಣಕ್ಕಾಗಿ ಅಲ್ಲಿಯ ೫೦,೦೦೦ ಖೈದಿಗಳನ್ನು ಅಮೆರಿಕಾದ ನೆಲದಲ್ಲಿ ಬಿಡಲಾಗಿತ್ತು. ಖೈದಿಗಳಿರುವುದಕ್ಕೆ ಮೀಸಲಾದ ಆ ನೆಲವು ಇಂಗ್ಲೆಂಡ್ ಕಣ್ಣಲ್ಲಿ ತುಚ್ಛವೆನಿಸಿತು.

ಗುತ್ತಿಗೆ ಕಾರ್ಮಿಕರಿಂದ ತುಂಬಿದ ಕೀಳುವ ರ್ಗದ ಜನರು ಅಮೆರಿಕಾದಲ್ಲಿ ನೆಲೆಸಿದ್ದಾರೆ ಎಂಬ ಯುರೋಪಿಯನ್ನರ ಗ್ರಹಿಕೆಯ ಬಗ್ಗೆ ಅಮೆರಿಕನ್ನರಿಗೆ ಅರಿವಿತ್ತು. ಅದಕ್ಕಾಗಿಯೇ ಅಮೆರಿಕನ್ನರು ಯುರೋಪಿಯನ್ನರಿಗಿಂತಲೂ ಆಳವಾದ ಆಲೋಚನೆಯಲ್ಲಿ ತೊಡಗಿದ್ದರು. ಯುರೋಪ್ ತನ್ನನ್ನು ಆತ್ಮವಿಶ್ವಾಸದ ಬಲದಿಂದ ಶ್ರೇಷ್ಠ ಶಕ್ತಿಯಾಗಿ ಗುರುತಿಸಿಕೊಂಡಿತ್ತು. ಯುರೋಪಿಯನ್ನರು ನಿಶ್ಚಲರಾಗಿದ್ದಾಗ, ಅಮೆರಿಕ ನ್ನರು ದೊಡ್ಡ ದೊಡ್ಡ ಆಲೋಚನೆಗಳೊಂದಿಗೆ ಕಾರ್ಯೋನ್ಮುಖರಾಗುತ್ತಿದ್ದರು. ಆ ಮೂಲಕ ಉನ್ನತವಾದದ್ದನ್ನು ಸಾಧಿಸುತ್ತಿದ್ದರು. ಎರಡು ಶತಮಾನಗಳ ಅವಧಿಯಲ್ಲಿ ತಾವು ಎಲ್ಲ ಕೀಳರಿಮೆಯ ದ್ವಂದ್ವಗಳನ್ನು ಮೀರಿ ಮುನ್ನಡೆವ ಶಕ್ತಿಯುಳ್ಳವರು, ಜಗತ್ತನ್ನು ಆಳಲು ಶಕ್ತರು ಎಂಬುದನ್ನು ಅಮೆರಿಕನ್ನರು ಸಾಬೀತುಪಡಿಸಿದ್ದರು. ಹೀಗೆ ಅಮೆರಿಕಾ, ಯುರೋಪ್ ಮತ್ತು ವಿಶ್ವದ ಇತರೆ ಭಾಗಗಳನ್ನು ಹಿಂದಿಕ್ಕಿತು.

ಇದೇ ಬಗೆಯ ಸರ್ವಶಕ್ತತೆಯ ತರ್ಕವನ್ನು ಬರಾಕ್ ಒಬಾಮಾಗೆ ಅನ್ವಯಿಸಿ ನಾವು ಚರ್ಚಿಸಬಹುದು. ಬಿಳಿಯರ ಜಗತ್ತು ಕಪ್ಪು ಜನರನ್ನು ನೋಡುವ ಬಗೆಯ ಬಗ್ಗೆ ಸ್ವತಃ ಕಪ್ಪು ವರ್ಣದ ವ್ಯಕ್ತಿಯಾಗಿ ಒಬಾಮಾ ಅವರಿಗೆ ಚೆನ್ನಾಗಿಯೇ ತಿಳಿದಿದೆ. ಬಿಳಿಯರ ದೃಷ್ಟಿಯಲ್ಲಿ ಕಪ್ಪು ಜನರು ಯಾವಾಗಲೂ ಕೀಳರಿಮೆಯ ವ್ಯಕ್ತಿತ್ವದವರಾಗಿಯೇ ಇರುತ್ತಾರೆ ಎಂಬುದೂ ಅವರಿಗೆ ಗೊತ್ತು. ಈ ಬಗೆಯ ದೃಷ್ಟಿಕೋನಗಳ ನಡುವೆಯೇ ಕಪ್ಪುಜನರು ಅಮೆರಿಕದ ಕಲೆ, ಸಾಹಿತ್ಯ, ವಿಜ್ಞಾನ, ಕ್ರೀಡೆ, ಸಂಗೀತ, ಚಲನಚಿತ್ರ, ಸಾಹಸ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ತಮ್ಮದೇ ಆದ ಹೆಗ್ಗುರುತು ಮೆರೆದಿದ್ದಾರೆ. 'ಒಬಾಮಾ' ಆ ನೆಲದ ಪ್ರತಿಯೊಂದು ಕಡೆಗೂ ಹುಟ್ಟುವ ನಿರೀಕ್ಷೆಯಲ್ಲಿದ್ದಾನೆ. ಬದಲಾವಣೆಯ ಹಸಿವಿನಲ್ಲಿರುವ ಅಮೆರಿಕದಲ್ಲಿ ಈ ಬಗೆಯ ನಿರೀಕ್ಷೆಗಳನ್ನು ಗುರುತಿಸಬಹುದು. ಆರ್ಥಿಕತೆ ಜಾಗತಿಕ ಸ್ವರೂಪ ಪಡೆದುಕೊಂಡಾಗಲೂ ಅಮೆರಿಕದ ಹಣಕಾಸು ಸಂಸ್ಥೆಗಳು ೧೯೩೦ರ ಮುಂಚಿನ ಸ್ವರೂಪದಲ್ಲಿಯೇ ಉಳಿದವು. ಒಬಾಮಾ ಹೆಸರಿನ ಕಪ್ಪು ವ್ಯಕ್ತಿಯೊಬ್ಬ ಅಮೆರಿಕ ನಿರೀಕ್ಷಿಸುತ್ತಿರುವ 'ಬದಲಾವಣೆ'ಯ ಘೋಷಣೆಯೊಂದಿಗೆ ಮುನ್ನಡೆದ. ಹಾಗೆ ಮುನ್ನಡೆಯುವುದನ್ನು ನೋಡುತ್ತಾ ಅಲ್ಲಿಯ ಬಿಳಿಯ ಅಮೆರಿಕನ್ನರು ಸುಮ್ಮನೆ ಕುಳಿತುಕೊಳ್ಳಲಿಲ್ಲ. 'ಬದಲಾವಣೆ'ಯ ಕಾರಣಕ್ಕಾಗಿ ಅವರೂ ಆತನನ್ನು ಹಿಂಬಾಲಿಸಿದರು.

ಭಾರತವೂ ಕೂಡಾ ಅಂಥ ಬದಲಾವಣೆಗೆ ಹಂಬಲಿಸುವಂಥ ಸ್ಥಿತಿಯಲ್ಲಿದೆ. ಜಾತಿ ಬೇರುಗಳೊಂದಿಗಿನ ಭಾರತದ ಹಿಂದೂ ಸಮಾಜ ಏನನ್ನೂ ಸಾಬೀತುಪಡಿಸುವ ಅನಿವಾರ್ಯತೆಯಲ್ಲಿಲ್ಲ. ಆದರೆ, ದಲಿತರು ತಮ್ಮ ಅಸ್ತಿತ್ವವನ್ನು ಸಾಬೀತುಪಡಿಸಲೇಬೇಕಾದ ಅನಿವಾರ್ಯತೆಯಲ್ಲಿದ್ದಾರೆ. ದಲಿತರು, ಆದಿವಾಸಿಗಳು ಮುಂಚೂಣಿಗೆ ಬಂದು ಭಾರತವನ್ನು ಮುನ್ನಡೆಸುವ ಹೊಣೆ ನಿಭಾಯಿಸುವ ಕಾಲ ಸನ್ನಿಹಿತವಾಗಿದೆ. ಅದು ಒಬಾಮಾ ತರ್ಕ.

ವಿಶ್ವದ ಇತರೆ ರಾಷ್ಟ್ರಗಳ ದೃಷ್ಟಿಯಲ್ಲಿ 'ಒಬಾಮಾ ವಿಜಯ'ದ ಅರ್ಥವೇನು? ಅಂಥದ್ದೊಂದು ಪ್ರಶ್ನೆಯನ್ನು ಮುಂದಿಟ್ಟ ಅಮೆರಿಕಾದ ಖ್ಯಾತ ದಿನಪತ್ರಿಕೆಯೊಂದು ವಿಶ್ವದ ಜನರ ಪ್ರತಿಕ್ರಿಯೆಗಳನ್ನು ಆಹ್ವಾನಿಸಿತ್ತು. ನನ್ನಿಂದಲೂ ಪ್ರತಿಕ್ರಿಯೆಗಳನ್ನು ನಿರೀಕ್ಷಿಸಿತ್ತು. "ಇದೊಂದು ಅಮೆರಿಕಾದ ಎರಡನೆಯ ಕ್ರಾಂತಿ" ಎಂದು ನಾನು ಪ್ರತಿಕ್ರಿಯಿಸಿದ್ದೆ. ಮರುದಿನ

ಆ ಪತ್ರಿಕೆ ನನ್ನ ಆ ಪ್ರತಿಕ್ರಿಯೆಯನ್ನು ಪ್ರಕಟವಾಗಿತ್ತು. ಮೊದಲ ಅಮೆರಿಕಾ ಕ್ರಾಂತಿ ವಿಶ್ವದ ಇತರೆ ರಾಷ್ಟ್ರಗಳ ಪಾಲಿಗೆ ಮುಖ್ಯ ಎಂದು ಏಕೆ ಪರಿಗಣಿಸಲ್ಪಡಬೇಕಿತ್ತು? ಒಬಾಮಾ ವಿಜಯವನ್ನು ಕ್ರಾಂತಿ ಎಂದು ಗುರುತಿಸುವುದು ಹೇಗೆ? ಅಷ್ಟೇ ಅಲ್ಲದೇ, ಅದು ಎರಡನೇ ಅಮೆರಿಕಾ ಕ್ರಾಂತಿ ಹೇಗಾಗುತ್ತದೆ? ಎಂಬ ಪ್ರಶ್ನೆಗಳು ನನ್ನ ಹಿತೈಷಿಗಳಿಂದ ಎದು ರಾಗಿದ್ದವು.

ಬಹಳ ಜನರಿಗೆ ಗೊತ್ತಿರುವ ಹಾಗೆ ಅಮೆರಿಕಾದ ಸ್ವಾತಂತ್ರ್ಯ ಹೋರಾಟ 'ಅಮೆರಿಕಾ ಕ್ರಾಂತಿ' ಎಂದೇ ಗುರುತಿ ಸಲ್ಪಡುತ್ತದೆ. ಅಮೆರಿಕಾವು ಹಿಂದೆ ಬ್ರಿಟಿಷ್ ವಸಾಹತು ಪ್ರದೇ ಶವಾಗಿ ಬೆಳೆಯಿತು. ೧೭೭೫ರಿಂದ ೧೭೮೩ರ ಅವಧಿಯಲ್ಲಿ ಅಮೆರಿಕನ್ನರು ಬ್ರಿಟಿಷರೊಂದಿಗೆ ಸಂಘರ್ಷಕ್ಕಿಳಿದು ಸ್ವಾತಂತ್ರ್ಯ ಪಡೆದುಕೊಂಡರು. ಬ್ರಿಟಿಷ್ ಪ್ರಭುತ್ವವು ೧೭೭೬ರ ಜುಲೈ ೪ ರಂದು ಅಮೆರಿಕಾದ ೧೩ ರಾಜ್ಯಗಳನ್ನು ಬ್ರಿಟಿಷ್ ವಸಾ ಹತುಗಳನ್ನಾಗಿ ಘೋಷಿಸಿದ ನಂತರ ಸಂಘರ್ಷದ ಶಕೆ ಆರಂಭವಾಯಿತು. ಈ ಹೋರಾಟದಲ್ಲಿ ಅಮೆರಿಕಾ ಜಯಗಳಿಸಿತು. ಐತಿಹಾಸಿಕ ಪ್ಯಾರಿಸ್ ಒಪ್ಪಂದದ ನಂತರ ಅದು ಸ್ವತಂತ್ರ ರಾಷ್ಟ್ರವಾಗಿ ರೂಪುಗೊಂಡಿತು. ಇದೇ ಸಂದರ್ಭದಲ್ಲಿ ಬ್ರಿಟನ್ ಈ ರಾಷ್ಟ್ರವನ್ನು ಅಮೆರಿಕಾ ಎಂದು ಗುರುತಿಸಿತು.

ಈ ಇತಿಹಾಸವನ್ನು ತಿಳಿದ ಮೇಲೆ ಮನದಲ್ಲಿ ಒಂದು ಪ್ರಶ್ನೆ ಮೂಡುತ್ತದೆ; "ಅಮೆರಿಕಾದ ಸ್ವಾತಂತ್ರ್ಯ ಹೋರಾಟ' ಎಂದು ಗುರುತಾಗುವ ಬದಲು ಅಮೆರಿಕಾ ಕ್ರಾಂತಿ ಎಂದು ಏಕೆ ಕರೆಯಲ್ಪಟ್ಟಿತು? ಈ ಕುರಿತು ಆಲೋಚಿಸುವುದರೊಂದಿಗೆ ನಮ್ಮನ್ನು ನಾವು ಕೇಳಿಕೊಳ್ಳಬೇಕಾದ ಹಲವು ಪ್ರಶ್ನೆಗಳು ಇವೆ. ಅಮೆರಿಕಾ ಸ್ವಾತಂತ್ರ್ಯ ಘೋಷಣೆಯೊಂದಿಗೇ ಈ ಪ್ರಶ್ನೆಗಳ ಸರಮಾಲೆ ಆರಂಭವಾಗುತ್ತದೆ. ಅಮೆರಿಕಾದ ಸ್ವಾತಂತ್ರ್ಯ ಘೋಷಣೆಯ ವಕ್ತಾರ ಥಾಮಸ್ ಜೆಫರ್ಸನ್ ಡಾ. ಅಂಬೇಡ್ಕರ್ ಮೆಚ್ಚುಗೆಗೆ ಪಾತ್ರರಾದ ವ್ಯಕ್ತಿ. ಅಮೆರಿಕಾದ ಸ್ವಾತಂತ್ರ್ಯ ಘೋಷಣೆ ಕೇವಲ ಅಮೆರಿಕಾವನ್ನು ಬ್ರಿಟಿಷ್ ಹಿಡಿತದಿಂದ ಮುಕ್ತಗೊಳಿಸುವುದಕ್ಕಷ್ಟೇ ಸೀಮಿತವಾಗಿರಲಿಲ್ಲ. ಅದು ಇಡೀ ಮನುಕುಲವನ್ನು ಜಾಗತಿಕ ನೆಲೆಯಲ್ಲಿ ಕ್ಷಿಪ್ರ ಬದಲಾವಣೆಗೆ ಒಳಪಡಿಸುವಲ್ಲಿ ಮಹತ್ವದ ಪ್ರೇರಣಾ ಶಕ್ತಿಯಾಗಿ ಗಮನ ಸೆಳೆಯಿತು. ಸ್ವಾತಂತ್ರ್ಯದ ಉದ್ಘೋಷವು ಮುಖ್ಯವಾಗಿ ಸಮಾನತೆಯ ಆಶಯವನ್ನು ಧ್ವನಿಸಿತು. ಎಲ್ಲಾ ಮನುಷ್ಯರೂ ಸಮಾನರು ಎಂಬುದನ್ನು ನಮಗೆ ನಾವೇ ದೃಢಪಡಿಸಿಕೊಳ್ಳಲು ಪೂರಕವಾಗುವ ಸತ್ಯಗಳನ್ನು ಅದು ಒಳಗೊಂಡಿತ್ತು. ಪ್ರಶ್ನಾತೀತ ಹಕ್ಕುಗಳೊಂದಿಗೆ ಈ ಸತ್ಯಗಳು ಸೃಷ್ಟಿಸಲ್ಪಟ್ಟಿವೆ. ಅವುಗಳೆಂದರೆ, ಜೀವನಪ್ರೀತಿ, ಸ್ವಾತಂತ್ರ್ಯ ಮತ್ತು ಸಂತಸದೆಡೆಗಿನ ನಿರಂತರ ತುಡಿತ.

ಅಮೆರಿಕಾ ಕ್ರಾಂತಿ ತ್ವರಿತಗತಿಯ ಪ್ರಭಾವಬೀರಿತು. ಒಂದು ದೃಷ್ಟಿಯಿಂದ ನಿಗೂಢವೆನಿಸಿದರೂ, ಈ ಕ್ರಾಂತಿಯು ೧೭೮೯ರ ಫ್ರಾನ್ಸ್ ಕ್ರಾಂತಿಗೆ ಮುನ್ನುಡಿಯಾದದ್ದಂತೂ ಸತ್ಯ. ಅಮೆರಿಕನ್ನರು ಬ್ರಿಟನ್‌ನಿಂದ ಸ್ವಾತಂತ್ರ್ಯ ಬಯಸಿದ್ದರು. ಅದಕ್ಕಾಗಿಯೇ ಹೋರಾಟದ ಅಖಾಡಕ್ಕಿಳಿದಿದ್ದರು. ಫ್ರಾನ್ಸ್ ಬ್ರಿಟನ್‌ನೊಂದಿಗೆ ದೀರ್ಘಕಾಲದ ವೈಷಮ್ಯವನ್ನು ಹೊಂದಿತ್ತು. ಈ ಕಾರಣಕ್ಕಾಗಿಯೇ ಅದರ ವಿರುದ್ಧ ಹಗೆ ಸಾಧಿಸಲು ತವಕಿಸುತ್ತಿತ್ತು. ಇದಕ್ಕಾಗಿಯೇ ಫ್ರಾನ್ಸ್ ಸರ್ಕಾರ ಅಮೆರಿಕಾ ಕ್ರಾಂತಿಯಲ್ಲಿ ತೊಡಗಿಸಿಕೊಂಡವರಿಗೆ ಹಣ, ಯುದ್ಧ ಸಾಮಗ್ರಿ ಮತ್ತು ಯೋಧ ಪಡೆಯನ್ನು ಕಳುಹಿಸಿಕೊಡುವುದರ ಮೂಲಕ ನೆರವಾಗಿತ್ತು. ಅಮೆರಿಕಾ ಸ್ವಾತಂತ್ರ್ಯ ಪಡೆದುಕೊಂಡ ದಿನ ಫ್ರಾನ್ಸ್ ಹೆಮ್ಮೆಯೊಂದಿಗೆ ಬೀಗಿತ್ತು.

ಆನಂತರದ ಘಟನೆಗಳೆಲ್ಲವೂ ಸಾಕಷ್ಟು ಕುತೂಹಲ ಕೆರಳಿಸಿದವು. ಆಗ ಫ್ರಾನ್ಸ್‌ನ ಜನತೆಯಲ್ಲಿ ಪ್ರಜಾಪ್ರಭುತ್ವದ ಹಂಬಲ ಚಿಗುರೊಡೆದಿತ್ತು. ಆದರೆ, ಅವರಿಗೆ ಆ ಹಂಬಲ ಈಡೇರಿಸಿಕೊಳ್ಳುವ ದಾರಿಗಳು ಗೊತ್ತಿರಲಿಲ್ಲ. ಫ್ರಾನ್ಸ್ ಯೋಧರು ಅಮೆರಿಕಾ ಕ್ರಾಂತಿಯಲ್ಲಿ ಭಾಗಿಯಾಗಿ ಹಿಂದುರಿಗಿದಾಗ ಅವರೊಂದಿಗೆ ಪ್ರಜಾಪ್ರಭುತ್ವ, ಸಮಾನತೆ ಮತ್ತು ಕ್ರಾಂತಿಯ ಕನಸುಗಳೂ ವಲಸೆ ಬಂದಿದ್ದವು. ಅವರು ಅಮೆರಿಕಾ ಸ್ವಾತಂತ್ರ್ಯ ಉದ್ಘೋಷದ ಬೆಂಬಲಿಗರಾಗಿ ರೂಪುಗೊಂಡಿದ್ದರು. ಅಮೆರಿಕಾ ಕ್ರಾಂತಿಯು ಫ್ರಾನ್ಸ್ ಜನರ ಕನಸು, ಕಲ್ಪನೆಗಳಿಗೆ ಹೊಸ ಚೈತನ್ಯ ಒದಗಿಸಿತು. ಬ್ರಿಟನ್ನಿನಿಂದ ಅಮೆರಿಕಾವನ್ನು ಮುಕ್ತವಾಗಿಸಲು ನೆರವಾಗುವುದರ ಮೂಲಕ ಫ್ರಾನ್ಸ್ ತನ್ನೊಳಗೆ ಮಹಾಕ್ರಾಂತಿ ನಡೆಸುವ ಹಸಿವನ್ನು ತೀವ್ರಗೊಳಿಸಿಕೊಂಡಿತು. ಇದು ಮಹತ್ವದ ಐತಿಹಾಸಿಕ ಘಟ್ಟ.

ನಮ್ಮ ಶಿಕ್ಷಣ ವ್ಯವಸ್ಥೆ ನೀಡುವ ಜ್ಞಾನದ ಗುಣಮಟ್ಟ ಗಮನಿಸಿದರೆ ನನಗೆ ಆಶ್ಚರ್ಯವಾಗುತ್ತದೆ. ನಾನು ರಾಜ್ಯಶಾಸ್ತ್ರದ ವಿದ್ಯಾರ್ಥಿ. ಆಧುನಿಕ ಪರಿಕಲ್ಪನೆಗಳಾದ ಸಮಾನತೆ, ಸಮಾನ ಬದುಕು ಮತ್ತು ಸ್ವಾತಂತ್ರ್ಯ ಫ್ರಾನ್ಸ್ ಕ್ರಾಂತಿಯ ಕೊಡುಗೆಗಳು ಎಂಬ ಪಾಠವನ್ನು ಕೇಳಿಸಿಕೊಂಡಿದ್ದೇನೆ. "ಇವೆಲ್ಲವೂ ಅಮೆರಿಕಾ ಕ್ರಾಂತಿಯ ಕೊಡುಗೆಗಳು. ಮುಖ್ಯವಾಗಿ ಫ್ರಾನ್ಸ್ ಕ್ರಾಂತಿಯು ಅಮೆರಿಕಾ ಕ್ರಾಂತಿಯ ಕೂಸು" ಎಂಬುದನ್ನು ಕೇಂದ್ರೀಕರಿಸಿಕೊಂಡ ಯಾವ ಪಾಠವೂ ತರಗತಿಗಳಲ್ಲಿ ಯಾಕೆ ಹೇಳಲ್ಪಡಲಿಲ್ಲ ಎಂಬುದೇ ನನಗೆ ಸೋಜಿಗದ ಸಂಗತಿ ಎನ್ನಿಸುತ್ತಿದೆ.

ಭಾರತವು ಸಮಾನತೆ, ಸಮಾನ ಬದುಕು ಮತ್ತು ಸ್ವಾತಂತ್ರ್ಯದ ಪರಿಕಲ್ಪನೆಗಳನ್ನು ಯುರೋಪಿನಿಂದಲೇ ಎರವಲು ಪಡೆದಿದೆ ಎಂಬ ಸತ್ಯ ನಮಗೆಲ್ಲರಿಗೂ ಗೊತ್ತು. ಆಧುನಿಕತೆಯೆಡೆಗಿನ ನಡೆಗೆ ಪ್ರೇರಣೆಯಾದದ್ದು ಅಮೆರಿಕಾ ಕ್ರಾಂತಿ ಎಂದು ಯುರೋಪ್ ಯಾವತ್ತೂ ಒಪ್ಪಿಕೊಳ್ಳಲಿಲ್ಲ. ಅಮೆರಿಕಾ ಕ್ರಾಂತಿ ಮತ್ತು ಫ್ರಾನ್ಸ್ ಮಹಾಕ್ರಾಂತಿಯ ನಡುವಿನ ಸಂಬಂಧ ಮತ್ತು ವ್ಯತ್ಯಾಸಗಳನ್ನು ಗುರುತಿಸಲಾಗದಷ್ಟು ಭಾರತೀಯಯರ ಚಿಂತನೆ ದಿವಾಳಿಯಾಗಿದೆಯೇ? ಅಥವಾ ಭಾರತೀಯ ಚಿಂತನೆಯು ಅಮೆರಿಕಾ ವಿರೋಧಿ ನಿಲುವಿನೊಂದಿಗೆ ಜಡ್ಡುಗಟ್ಟಿಹೋಗಿದೆಯೇ?

ಈ ಆಕ್ಷೇಪ ನನ್ನ ಮನುಷ್ಯಸಹಜ ಸ್ವಭಾವದ ಕಾರಣದಿಂದ ವ್ಯಕ್ತವಾಗುತ್ತಿಲ್ಲ. ಅದಕ್ಕೂ ಕಾರಣವಿದೆ. 'ಸತ್ಯ' ತಿಳಿದುಕೊಳ್ಳುವ ಯಾವ ಬಗೆಯ ಅನಿವಾರ್ಯತೆಯನ್ನು ಕಾಡಿಸಿಕೊಳ್ಳದೇ 'ತಿಂದುಂಡು ಮಲಗಿ ಕೊಬ್ಬುವ' ಜಾಯಮಾನಕ್ಕೆ ಭಾರತೀಯ ಚಿಂತನೆ ತನ್ನನ್ನು ತಾನು ಒಗ್ಗಿಸಿಕೊಂಡಿರಬಹುದು. ಅಮೆರಿಕನ್ನರು ಕ್ಷಿಪ್ರಗತಿಯ ಬೆಳವಣಿಗೆಯ ಹಾದಿಯಲ್ಲಿದ್ದಾಗ, ನಿದ್ರೆಯಲ್ಲಿದ್ದ ೧೯ನೇ ಶತಮಾನದ ಯುರೋಪಿನಂತೆಯೇ ಭಾರತೀಯ ಚಿಂತನೆಯು ತನ್ನ ಮಬ್ಬಿನಿಂದ ಹೊರಬಂದಿಲ್ಲ ಎಂದು ನನಗೀಗ ಅನ್ನಿಸುತ್ತಿದೆ.

ಸಮಾನತೆಯ ಘೋಷಣೆ ಯುರೋಪ್‌ನಿಂದ ಬರುವ ಬದಲು ಅಮೆರಿಕಾದಿಂದಲೇ ಯಾಕೆ ಬಂತು ಎಂಬುದನ್ನು ಈಗ ಆಲೋಚಿಸಬಹುದು. ಯಾಕೆಂದರೆ, ಯುರೋಪ್ ಒಂದು ಸಾಮ್ರಾಜ್ಯವಾಗಿತ್ತು. ಸಮಾನತೆಯ ಯೋಚನೆ ತಂದುಕೊಳ್ಳುವ ದರ್ದು ಯುರೋಪ್‌ಗೆ ಇರಲೇ ಇಲ್ಲ. ಅಮೆರಿಕನ್ನರು ಸಮಾನತೆಯ ಕನಸು ಆಹ್ವಾನಿಸಿಕೊಳ್ಳಲು ಬಲವಾದ ಕಾರಣಗಳಿದ್ದವು. ಬ್ರಿಟನ್ ವಸಾಹತುಗಳೊಳಗೆ ನಲುಗಿದ ಅನುಭವಗಳು ಅಂಥದ್ದೊಂದು ಕನಸು ಚಿಗುರೊಡೆಯಲು ಕಾರಣವಾಗಿದ್ದವು. ಭಾರತದಲ್ಲಿ ಕೂಡ ಸ್ವಾತಂತ್ರ್ಯದ ಬಗ್ಗೆ ಗಾಂಧೀಜಿ ಮಾತನಾಡಿದ್ದರು. ಡಾ. ಅಂಬೇಡ್ಕರರು ಸಮಾನತೆಯ ಕನಸನ್ನು ಬಿತ್ತಿದ್ದರು.

ಇದೀಗ ಒಬಾಮಾ ವಿಜಯದ ವಿಷಯಕ್ಕೆ ಬರೋಣ. ನಾನು ಅಮೆರಿಕಾದ ಆ ಖ್ಯಾತ ದಿನಪತ್ರಿಕೆಗೆ ನನ್ನ ಸ್ಪಷ್ಟ ಪ್ರತಿಕ್ರಿಯೆಯನ್ನು ನೀಡಿದ್ದೆ. "ಒಬಾಮಾ ವಿಜಯವು ವಿಶ್ವದ ನಿರ್ಲಕ್ಷಿತ ವರ್ಗಗಳು ಮತ್ತು ಜನಸಮುದಾಯಗಳ ಘನತೆಯನ್ನು ಹೆಚ್ಚಿಸುತ್ತದೆ. ಭಾರತೀಯ ಜಾತಿ ವ್ಯವಸ್ಥೆಯ ಮೇಲೆ 'ನೈತಿಕ ಒತ್ತಡ' ಹೇರುವ ಮೂಲಕ ದಲಿತರ ಸಂಘಟನೆಗೆ ಕಾರಣವಾಗುತ್ತದೆ. ಇದು ಇನ್ನೊಂದು ಮಹಾಕ್ರಾಂತಿಯಲ್ಲದೆ ಮತ್ತಿನ್ನೇನು?" □

ಭಾರತವು ಸಮಾನತೆ, ಸಮಾನ ಬದುಕು ಮತ್ತು ಸ್ವಾತಂತ್ರ್ಯದ ಪರಿಕಲ್ಪನೆಗಳನ್ನು ಯುರೋಪಿನಿಂದಲೇ ಎರವಲು ಪಡೆದಿದೆ ಎಂಬ ಸತ್ಯ ನಮಗೆಲ್ಲರಿಗೂ ಗೊತ್ತು. ಆಧುನಿಕತೆಯೆಡೆಗಿನ ನಡೆಗೆ ಪ್ರೇರಣೆಯಾದದ್ದು ಅಮೆರಿಕಾ ಕ್ರಾಂತಿ ಎಂದು ಯುರೋಪ್ ಯಾವತ್ತೂ ಒಪ್ಪಿಕೊಳ್ಳಲಿಲ್ಲ. ಅಮೆರಿಕಾ ಕ್ರಾಂತಿ ಮತ್ತು ಫ್ರಾನ್ಸ್ ಮಹಾಕ್ರಾಂತಿಯ ನಡುವಿನ ಸಂಬಂಧ ಮತ್ತು ವ್ಯತ್ಯಾಸಗಳನ್ನು ಗುರುತಿಸಲಾಗದಷ್ಟು ಭಾರತೀಯಯರ ಚಿಂತನೆ ದಿವಾಳಿಯಾಗಿದೆಯೇ? ಅಥವಾ ಭಾರತೀಯ ಚಿಂತನೆಯು ಅಮೆರಿಕಾ ವಿರೋಧಿ ನಿಲುವಿನೊಂದಿಗೆ ಜಡ್ಡುಗಟ್ಟಿ ಹೋಗಿದೆಯೇ? ಈ ಆಕ್ಷೇಪ ನನ್ನ ಮನುಷ್ಯಸಹಜ ಸ್ವಭಾವದ ಕಾರಣದಿಂದ ವ್ಯಕ್ತವಾಗುತ್ತಿಲ್ಲ. ಅದಕ್ಕೂ ಕಾರಣವಿದೆ.

ಅಮೆರಿಕದ ಎರಡನೆಯ ಕ್ರಾಂತಿ

ಬುದ್ಧಾಯಣ

೩೦

ಈ ದೇಹ ಮತ್ತು ಮನಸ್ಸು ಎಂದರೆ ಏನು? ಅದನ್ನು ಅರಿಯುವ ಬಗೆ ಹೇಗೆ? ವೃದ್ಧಿಸುವ ಬಗೆ ಹೇಗೆ? ಅದರ ಮೇಲೆ ಸಂಯಮ ಮತ್ತು ಹಿಡಿತವನ್ನು ಸಾಧಿಸುವುದು ಹೇಗೆ? ಆ ಮೂಲಕ ಸತ್ಯಾನ್ವೇಷಣೆಗೆ ತೊಡಗುವುದು ಹೇಗೆ? ಇಲ್ಲಿನ ಸೋಲನ್ನು ಗೆದಿಯುವ ಬಗೆ ಹೇಗೆ? ತನ್ನ ಗುರಿಯನ್ನು ತಲುಪುವುದು ಹೇಗೆ? ತಾನು ಗೆದ್ದು ಸಂಕೋಲೆಗಳಿಂದ ಬಿಡುಗಡೆ ಪಡೆಯುವುದು ಹೇಗೆ? ತನ್ನ ಈ ಅಂಧಕಾರಕ್ಕೆ ಬೆಳಕು ನೀಡುವ ಮಹಾ ಗುರುವು ಯಾರಾದರೂ ಇರುವರೇ? ಎಂಬ ಬಗ್ಗೆ ಆತ ಜಿಜ್ಞಾಸೆಗೊಂಡಾಗ ಆತನಿಗೆ ಗೋಚರಿಸಿದ್ದು ತನ್ನ ಸಂಶಯಕ್ಕೆ ಬುದ್ಧ ಮಾತ್ರ ಸರಿಯಾಗಿ ಉತ್ತರಿಸಬಲ್ಲನೆಂದು ಕಂಡುಕೊಂಡು ಬುದ್ಧನತ್ತ ಪಯಣಿಸಿದ.

ಸಿ.ಎಚ್. ರಾಜಶೇಖರ್

ದೇಹ ಮನಸ್ಸಿನ ಸಮನ್ವಯ ಸಿದ್ಧಿಯೇ ಬುದ್ಧ

ದೇಹ ಮತ್ತು ಮನಸ್ಸಿನ ಬಗ್ಗೆ ಬುದ್ಧನಷ್ಟು ಪರಿಪೂರ್ಣವಾಗಿ ಅರಿತ ಮತ್ತೊಬ್ಬ ಮತಸಂಸ್ಥಾಪಕನಾಗಲಿ, ತತ್ವಶಾಸ್ತ್ರಜ್ಞನಾಗಲಿ ಅಥವಾ ಆಧುನಿಕ ಮನೋ ವಿಜ್ಞಾನಿಯಾಗಲಿ ಈ ಜಗತ್ತಿನಲ್ಲಿ ಇಲ್ಲ ಎಂಬುದು ಜ್ಞಾನಿಗಳ ಅಭಿಮತ. ಆದರೆ ಈ ವಾದದಲ್ಲಿ ಯಾವುದೇ ಉತ್ಪ್ರೇಕ್ಷೆ ಇಲ್ಲ ಎಂಬುದೇ ಬುದ್ಧನ ಹಿರಿಮೆ. ಸಾಮಾನ್ಯವಾಗಿ ಪ್ರತಿ ಮನುಷ್ಯ ತನ್ನನ್ನು ತಾನು ಗುರುತಿಸಿಕೊಳ್ಳುವುದು ದೇಹದ ಮೂಲಕ. ಆದರೆ ದೇಹಕ್ಕೆ ಚಾಲನೆ ನೀಡುವುದು ಮನಸ್ಸೇ ಆಗಿದೆ. ಮನಸ್ಸಿಲ್ಲದ ದೇಹವು ಜಡವೇ ಸರಿ. ಹಾಗಾಗಿ ದೇಹ ಮತ್ತು ಮನಸ್ಸು ಒಂದೇ ನಾಣ್ಯದ ಎರಡು ಮುಖಗಳು.

ಕೆಲವರು 'ದೇಹಕ್ಕೆ' ಅತಿಯಾದ ಒತ್ತುಕೊಟ್ಟು ಮನಸ್ಸನ್ನ ಕಡೆಗಣಿಸುವರು. ಈ ಬಗೆಯ ಅಸಮತೋಲನದಿಂದ ಏನನ್ನು ಸಾಧಿಸುವಲ್ಲಿ ವಿಫಲರಾಗುತ್ತೇವೆ. ಬದಲಿಗೆ ದುಃಖ ದುಮ್ಮಾನ ಮತ್ತು ಸೋಲಿಗೆ ಶರಣಾಗುತ್ತೇವೆ. ಇದಕ್ಕೆ ಕಾರಣವೇನು? ಇದು ಬದುಕಿನ ಮೂಲ ಮತ್ತು ಪ್ರಥಮ ಆದ್ಯತೆಯ ಪ್ರಶ್ನೆ. ಸ್ವತಃ ಪ್ರಚಂಡ ತರ್ಕವಾದಿ, ಮಹಾಪಂಡಿತ ಹಾಗೂ ಅಲೆಮಾರಿ ಸಂನ್ಯಾಸಿ ಆದ 'ಸಚ್ಚರ' ಎಂಬುವನಿಗೆ ಈ ಬಗ್ಗೆ ಸ್ಪಷ್ಟನೆ ಇರಲಿಲ್ಲ. ಆತನನ್ನು ಬಹು ವರ್ಷಗಳಿಂದ ನಿರಂತರವಾಗಿ ಕಾಡಿದ ಪ್ರಶ್ನೆ ಎಂದರೆ: ಈ ದೇಹ ಮತ್ತು ಮನಸ್ಸು ಎಂದರೆ ಏನು? ಅದನ್ನು ಅರಿಯುವ ಬಗೆ ಹೇಗೆ? ವೃದ್ಧಿಸುವ ಬಗೆ ಹೇಗೆ? ಅದರ ಮೇಲೆ ಸಂಯಮ ಮತ್ತು ಹಿಡಿತವನ್ನು ಸಾಧಿಸುವುದು ಹೇಗೆ? ಆ ಮೂಲಕ ಸತ್ಯಾನ್ವೇಷಣೆಗೆ ತೊಡಗುವುದು ಹೇಗೆ? ಇಲ್ಲಿನ ಸೋಲನ್ನು ಗೆದಿಯುವ ಬಗೆ ಹೇಗೆ? ತನ್ನ ಗುರಿಯನ್ನು ತಲುಪುವುದು ಹೇಗೆ? ತಾನು ಗೆದ್ದು ಸಂಕೋಲೆಗಳಿಂದ ಬಿಡುಗಡೆ ಪಡೆಯುವುದು ಹೇಗೆ? ತನ್ನ ಈ ಅಂಧಕಾರಕ್ಕೆ ಬೆಳಕು ನೀಡುವ ಮಹಾಗುರುವು ಯಾರಾದರೂ ಇರುವರೇ? ಎಂಬ ಬಗ್ಗೆ ಆತ ಜಿಜ್ಞಾಸೆಗೊಂಡಾಗ ಆತನಿಗೆ ಗೋಚರಿಸಿದ್ದು ತನ್ನ ಸಂಶಯಕ್ಕೆ ಬುದ್ಧ ಮಾತ್ರ ಸರಿಯಾಗಿ ಉತ್ತರಿಸಬಲ್ಲನೆಂದು ಕಂಡುಕೊಂಡು ಬುದ್ಧನತ್ತ ಪಯಣಿಸಿದ.

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ವೈಶಾಲಿಯ ಮಹಾವನದ ಗೋಪುರಾಕಾರದ ಛಾವಣಿಯುಳ್ಳ ಮನೆಯಲ್ಲಿ ಆನಂದ ಮತ್ತು ತನ್ನ ಇತರೆ ಭಿಕ್ಷುಗಳೊಂದಿಗೆ ತಂಗಿದ್ದರು. ಒಂದು ದಿನ ಬೆಳಗಿನ ಸಮಯದಲ್ಲಿ ಬುದ್ಧರು ಕಾಷಾಯ ವಸ್ತ್ರ ಧರಿಸಿ ಮೇಲು ಹೊದಿಕೆಯನ್ನು ಹೆಗಲ ಮೇಲೆ ಹಾಕಿಕೊಂಡು ಕೈಯಲ್ಲಿ ಭಿಕ್ಷಾಪಾತ್ರೆ ಹಿಡಿದುಕೊಂಡು ಎಂದಿನ ಭಿಕ್ಷೆಗಾಗಿ ಹೊರಡಲು ಸಜ್ಜಾಗಿ ನಿಂತಿದ್ದರು. ಅಂತಹ ಸಮಯದಲ್ಲಿ ಕಾಲು ನಡಿಗೆಯಲ್ಲಿ ಸಚ್ಚರನು ಬುದ್ಧರ ಬಳಿ ಬಂದು ಗಾಢ ಶ್ರದ್ಧೆಯಿಂದ ವಂದಿಸಿ ತಗ್ಗಿನ ಪೀಠದಲ್ಲಿ ಕುಳಿತರು. ತಾನು ಬಂದ ಉದ್ದೇಶವನ್ನು ಮತ್ತು ತನ್ನ ಸಂದೇಹವನ್ನು ಬುದ್ಧರಿಗೆ ವಿವರಿಸುತ್ತಾ:

ಪೂಜ್ಯ ಗೌತಮರೇ, ಕೆಲವು ಶಮಣರು ಮತ್ತು ಬ್ರಾಹ್ಮಣರು ತಮ್ಮ ಪ್ರಾಪಂಚಿಕ ಶಾಂತಿಗಾಗಿ ಹಾಗೂ ಪಾರಮಾರ್ಥಿಕ ಸಿದ್ಧಿ ಸಾಧನೆಗಾಗಿ ನಿರಂತರ ಶ್ರಮಿಸುತ್ತಿರುತ್ತಾರೆ. ಕಾಡು ಮೇಡುಗಳನ್ನು ಅಲೆಯುತ್ತಾರೆ. ಊರಿಂದ ಊರಿಗೆ ಗುರುವಿನಿಂದ ಗುರುವಿಗೆ ಶರಣಾಗುತ್ತಾರೆ. ತಮ್ಮ ಗುರಿ ತಲುಪುವ ಸಲುವಾಗಿ ದೇಹ ದಂಡಿಸುವ ಅಭ್ಯಾಸದಲ್ಲಿ ತೊಡಗುತ್ತಾರೆ. ಆದರೆ ಮನಸ್ಸಿನ ವೃದ್ಧಿಯತ್ತ ವಿಫಲರಾಗುತ್ತಾರೆ. ಅದರ ಪ್ರತಿಫಲವಾಗಿ ಅವರು ಶಾರೀರಿಕವಾದ ದುಃಖದ ಅನುಭವವನ್ನು ಸಹಜವಾಗಿ ಸ್ವೀಕರಿಸುತ್ತಾರೆ. ಮತ್ತು ಸ್ಪಂದಿಸುತ್ತಾರೆ. ಇದು ಸಹಜವೆಂಬುದು ಅವರ ಅಭಿಪ್ರಾಯ. ಆದರೆ ಅದೇ ವೇಳೆ ಅವರು ಮನಸ್ಸಿನ ಕ್ಷೋಭೆಗೆ ತುತ್ತಾಗುತ್ತಾರೆ. ಪೂಜ್ಯರೇ, ಇದು ಹೀಗೆ ಏಕೆ?'

'ಸಚ್ಚರರೇ, ಅವರು ದೇಹಕ್ಕೆ ಒತ್ತು ಕೊಟ್ಟದ್ದರಿಂದ ದೇಹವೇ ಮುಖ್ಯವೆಂದು ಬಗೆದಿದ್ದರಿಂದ. ಅದೇ ಸಮಯದಲ್ಲಿ ತನ್ನ ಮನಸ್ಸಿನ ಮಹತ್ವವನ್ನು ಅರಿಯದೆ ಇರುವುದರಿಂದ, ಮತ್ತು ಮನಸ್ಸಿನ ಮೇಲೆ ಅಭ್ಯಾಸ ವೃದ್ಧಿ ಇಲ್ಲದೆ ಇರುವುದರಿಂದ !'

'ಪೂಜ್ಯ ಗೌತಮರೇ, ಅದೇ ರೀತಿ ಮತ್ತೆ ಕೆಲವು ಶಮಣರು ಮತ್ತು ಬ್ರಾಹ್ಮಣರು ಶರೀರವನ್ನು ಕಡೆಗಣಿಸಿ ಮನಸ್ಸಿನ ವೃದ್ಧಿಗೆ ಅತಿಯಾದ ಒತ್ತು ಕೊಡುತ್ತಾರೆ. ಆದರೆ ಅವರೂ ಕೂಡ ದೈಹಿಕ ಮತ್ತು ಮಾನಸಿಕ ದುಃಖ ಹಾಗೂ ಕ್ಷೋಭೆಗೆ ತುತ್ತಾಗುತ್ತಾರೆ.

'ಸಚ್ಚರರೇ, ಯಾರು ಕುಶಲವನ್ನು, ಮಂಗಳವನ್ನು ಮತ್ತು ಬಹುಜನರ ಹಿತ ಹಾಗೂ ಸುಖವನ್ನು ಬಯಸುತ್ತಾನೋ, ಆತ ಸತ್ಯ ಶೋಧಕನಾಗುತ್ತಾನೆ. ಹಾಗೆಯೇ ತನ್ನೆಲ್ಲ ಕಲ್ಮಷಗಳನ್ನು ತೊಡೆದು ಹಾಕಲು ಸಂಕಲ್ಪ ಹೊಂದುತ್ತಾನೆ. ಸಂಕೋಲೆಗಳಿಂದ ಬಿಡುಗಡೆಯೇ ಅವನ ಗುರಿ ಮತ್ತು ಗೆಲುವಾಗಿರುತ್ತದೆ. ಅಂಥವನು ಯಾವುದೇ ಒಮ್ಮುಖ ದೃಷ್ಟಿ, ಆಚಾರ, ವಿಚಾರ ಹಾಗೂ ಸಂಪ್ರದಾಯಕ್ಕೆ ವಿಮುಖನಾಗುತ್ತಾನೆ. ಸರ್ವತೋಮುಖ ಏಳಿಗೆ, ಸಮನ್ವಯ ಮತ್ತು ಪೂರ್ಣದೃಷ್ಟಿಯತ್ತ ಮುಖ ಮಾಡುತ್ತಾನೆ. ಶಾರೀರಿಕ ಮತ್ತು ಮಾನಸಿಕ ಅರಿವು, ವೃದ್ಧಿ, ಆಚರಣೆ ಹಾಗೂ ನಿರಂತರ ಅಭ್ಯಾಸ ಒಂದಕ್ಕೊಂದು ಪೂರಕ ಅದೇ ಸಾಧನೆಯ ಮೆಟ್ಟಿಲು ಎಂಬುದನ್ನು ಅರಿತು ಮುನ್ನಡೆಯುತ್ತಾನೆ. ಆ ಎರಡರ ಮೇಲೂ ಸಂಯಮ ಮತ್ತು ಹಿಡಿತವನ್ನು ಸಾಧಿಸಿದವನಾಗುತ್ತಾನೆ.

ಪೂಜ್ಯರೇ, ಇದು ಹೀಗೆ ಏಕೆ?'

'ಸಚ್ಚರರೇ, ಶರೀರದ ಬಗ್ಗೆ ಶಿಕ್ಷಣ ಇಲ್ಲದ ಸಲುವಾಗಿ ಶರೀರದ ಬಗ್ಗೆ ಅರಿವು ಮತ್ತು ತರಬೇತು ಇಲ್ಲದ ಕಾರಣಕ್ಕಾಗಿ. ಒಟ್ಟಾರೆಯಾಗಿ ಅಭ್ಯಾಸ ವೃದ್ಧಿ ಇಲ್ಲದ ಶರೀರದ ಕಾರಣವಾಗಿ!'

'ಗೌತಮರೇ, ಮತ್ತೆ ಕೆಲವು ಶಮಣ ಮತ್ತು ಬ್ರಾಹ್ಮಣರು ಆಧ್ಯಾತ್ಮಕದ ಹೆಸರಿನಲ್ಲಿ ತಮ್ಮದೇ ಆದ ರೂಢಿ, ಸಂಪ್ರದಾಯ, ನಿಯಮ ಹಾಗೂ ವ್ರತಗಳನ್ನು ವಿಧಿಸಿಕೊಂಡಿರುತ್ತಾರೆ. ಆ ಸಲುವಾಗಿ ಕೆಲವರು ದಿಗಂಬರರಾಗುವುದೇ ಆಚಾರವೆನ್ನುತ್ತಾರೆ. ಇನ್ನೂ ಕೆಲವರು ತಮ್ಮ ಹಸ್ತಗಳನ್ನು ತಾವು ನೆಕ್ಕುವುದೇ ನಿಯಮ ಎನ್ನುತ್ತಾರೆ. ಇನ್ನೂ ಹಲವರು ಭಿಕ್ಷೆಗೆ ಗೃಹಸ್ಥರು ಕರೆದಾಗ ಬಾರದೆ, ನಿಲ್ಲದೆ, ತಂದು ನೀಡಿದನ್ನೂ ಒಪ್ಪಿಸಿಕೊಳ್ಳದೆ, ವಿಶೇಷತೆಯನ್ನು ಬಯಸುವವರಾಗಿ ಮಡಿಕೆಯಿಂದ, ಲೋಹದ ಪಾತ್ರೆಯಿಂದ, ಬಾಗಿಲಿನ ಒಳಗೆ ನಿಂತು ಅಥವಾ ಹೊರಗೆ ನಿಂತು, ಒನಕೆಯ ಬಳಿ ನಿಂತು ನೀಡಿದ ಭಿಕ್ಷೆಯನ್ನು ನಿರಾಕರಿಸುತ್ತಾರೆ. ಇಬ್ಬರು ಊಟ ಮಾಡುವಾಗ, ಗರ್ಭಿಣಿಯಿಂದ, ಹಾಲು ಉಣಿಸುವವಳಿಂದ, ಪುರುಷರ ಸಂಗ ಮಾಡುವವಳಿಂದ ಭಿಕ್ಷೆಯನ್ನು ನಿರಾಕರಿಸುತ್ತಾರೆ. ಹಾಗೆಯೇ, ನಾಯಿ, ಸೊಳ್ಳೆ, ಹುಳು ಹುಪ್ಪಟ್ಟೆ, ಅನ್ನ ಚೆಲ್ಲಿದ ಕಡೆಯಿಂದ ಭಿಕ್ಷೆಯನ್ನು ನಿರಾಕರಿಸುತ್ತಾರೆ. ಮೀನು, ಮಾಂಸ, ಹೆಂಡ, ಮಾದಕ ವಸ್ತುಗಳು, ಅನ್ನದ ಗಂಜಿಯನ್ನು ಸ್ವೀಕರಿಸುವುದಿಲ್ಲ.'

'ಗೌತಮರೇ, ಅದೇ ರೀತಿ ಕೆಲವರು ಒಂದು ಮನೆ, ಎರಡುಮನೆ, ಏಳುಮನೆ ಮತ್ತು ಒಂದು ತುತ್ತು, ಎರಡು ತುತ್ತು, ಏಳು ತುತ್ತು ತಿನ್ನುವವರು ಇದ್ದಾರೆ. ಮತ್ತು ಉಗ್ರ ವ್ರತದವರು ದಿನ ಒಂದು ಹೊತ್ತು, ಎರಡು ದಿನಕ್ಕೆ ಒಂದು ಹೊತ್ತು, ಏಳು ದಿನಕ್ಕೆ ಒಂದು ಹೊತ್ತು ತಿನ್ನುವವರಿದ್ದಾರೆ. ಹಾಗೆಯೇ ಹದಿನೈದು ದಿನಕ್ಕೆ ಒಂದು ಹೊತ್ತು ಆಹಾರ ಪಾನೀಯಗಳನ್ನು ಸೇವಿಸುವವರಿದ್ದಾರೆ. ಪೂಜ್ಯರೇ, ಇದು ಹೀಗೆ ಏಕೆ?'

'ಸಚ್ಚರರೇ, ತಾವು ವಿವರಿಸಿದ್ದು ಒಂದು ಮುಖ ಮಾತ್ರ. ಅವರುಗಳು ಅಷ್ಟರಿಂದಲೇ ನಿರಂತರ ಬದುಕಿ ಉಳಿಯುವುದಿಲ್ಲ. ಆ ಕಾರಣಕ್ಕಾಗಿಯೇ ಅವುಗಳನ್ನು ವ್ರತ ಎಂದು ಕರೆಯುತ್ತಾರೆ. ಅದಕ್ಕೆ ನಿರ್ಧಿಷ್ಟ ಕಾಲ ಮಿತಿಯನ್ನು ತಾವೇ ಸೂಚಿಸಿಕೊಂಡಿರುತ್ತಾರೆ. ಆ ಬಳಿಕ ಅವರುಗಳು ಪರಿಪುಷ್ಟವಾದ, ಮೆದುವಾದ, ಸವಿರುಚಿಯಾದ ಆಹಾರವನ್ನು ಮಿತಿ ಮೀರಿ ಸೇವಿಸುತ್ತಾರೆ. ಹಾಗೆಯೇ ಶಕ್ತಿವರ್ಧಕವಾದ ಅಪಾರ ರಸಾದಿಗಳನ್ನು ಕುಡಿಯುತ್ತಾರೆ. ಅವರುಗಳು ಮತ್ತೆ ತಮ್ಮ ಗಮನವನ್ನು ದೇಹದ ಕಡೆ ಕೇಂದ್ರಿಕರಿಸಿ ದೇಹವನ್ನು ದಪ್ಪವಾಗಿಯೂ ಬಲಾಢ್ಯವಾಗಿರುವಂತೆಯೂ ಮತ್ತು ಕಾಂತಿ ಹಾಗೂ ಕಳೆಯಿಂದ ಕೂಡಿರುವಂತೆ ಪೋಷಿಸಿಕೊಳ್ಳುತ್ತಾರೆ.'

'ಸಚ್ಚರರೇ, ಇದು ಏನನ್ನು ಹೇಳುತ್ತದೆ? ಮೊದಲಿಗೆ ಯಾವುದು ಆಚಾರವಲ್ಲ ಎಂದು ಹೇಳಿರುತ್ತಾರೋ, ಅದನ್ನೇ ಆ ನಂತರದ ದಿನಗಳಲ್ಲಿ ಮತ್ತೆ ಹೊಂದುತ್ತಾರೆ. ಇದು ವ್ರತವಾಗಲಿ, ಆಚಾರವಾಗಲಿ ಹೇಗೆ ಆದೀತು? ಇದು ಆಷಾಢಭೂತಿತನ, ಅಜ್ಞಾನ ಮತ್ತು ಅಸಮರ್ಪಕತೆ ಅಲ್ಲವೆ? ಇದರಿಂದ ದೇಹವನ್ನಾಗಲಿ, ಮನಸ್ಸನ್ನಾಗಲಿ ಅರಿತಂತೆ ಆಗುತ್ತದೆಯೇ? ಅವುಗಳ ಮೇಲಿನ ಅಭ್ಯಾಸವನ್ನು ವೃದ್ಧಿ ಮಾಡಿಕೊಂಡಾಗುತ್ತದೆಯೆ?'

'ಪೂಜ್ಯ ಗೌತಮರೇ, ಹಾಗಾದರೆ ಮಾನಸಿಕ ಅಭ್ಯಾಸವೃದ್ಧಿ ಎಂದರೆ ಏನು? ಅದನ್ನು ಹೇಗೆ ಅರಿಯುವುದು? ಹೇಗೆ ಸಾಧಿಸುವುದು?'

'ಸಚ್ಚರರೇ, ತಾವಿನ್ನೂ ಶಾರೀರಿಕ ಅಭಿವೃದ್ಧಿಯನ್ನು ಹೇಗೆ ಅಭ್ಯಾಸಿಸಬೇಕು ಎಂಬುದೇ ತಿಳಿಯದೆ ಇರುವಾಗ ಮಾನಸಿಕ ವೃದ್ಧಿಯ ಬಗ್ಗೆ ತವಕ ಪಡುವುದು ಸರಿಯಲ್ಲ. ನಾನು ಮೊದಲಿಗೆ ಒಬ್ಬ ಶಾರೀರಿಕ ಮತ್ತು ಮಾನಸಿಕ ಶಿಕ್ಷಣವನ್ನೂ, ಅಭ್ಯಾಸವನ್ನೂ, ಅವುಗಳ ಅಭಿವೃದ್ಧಿಯನ್ನೂ ಹೇಗೆ 'ಹೊಂದಿದವನಾಗುತ್ತಾನೆ' ಎಂಬುದನ್ನು ತಿಳಿಸುತ್ತೇನೆ. ಅದೇ ರೀತಿ ಹೇಗೆ ಒಬ್ಬ ಶಾರೀರಿಕ ಮತ್ತು ಮಾನಸಿಕ ಶಿಕ್ಷಣವನ್ನು 'ಹೊಂದಿದವನಾಗಿರುತ್ತಾನೆ' ಎಂಬುದನ್ನು ತಿಳಿಸುತ್ತೇನೆ. ಶ್ರದ್ಧೆಯಿಂದ ಕೇಳಿ ಮನನ ಮಾಡಿಕೋ'

'ಪೂಜ್ಯರೇ, ಹಾಗಾದರೆ ಶಾರೀರಿಕ ಶಿಕ್ಷಣ ಮತ್ತು ತರಬೇತು ಇಲ್ಲದವನ ಪಾಡೇನು?'

'ಸಚ್ಚರರೇ, ಅಜ್ಞಾನಿಯಾದ ಒಬ್ಬ ಸಾಮಾನ್ಯ ಮನುಷ್ಯನಲ್ಲಿ ಸುಖದ ಅನುಭವಕ್ಕೆ ಹೆಚ್ಚು ಆಕರ್ಷಿತನಾಗಿ ಅದರಲ್ಲಿ ವ್ಯಾಮೋಹಗೊಳ್ಳುತ್ತಾನೆ. ಅದನ್ನೇ ಭಾರಿ ಭಾರಿಯು ಪಡೆಯುತ್ತಲೇ ಇರುತ್ತಾನೆ. ಆಕಸ್ಮಿಕವಾಗಿ ಒಮ್ಮೆ ಆತ ಸುಖದಿಂದ ವಂಚಿತನಾಗಿ ದುಃಖದ ಅನುಭವಕ್ಕೆ ತುತ್ತಾಗುತ್ತಾನೆ. ಆಗ ಅವನು ದುಃಖ, ವ್ಯಸನ, ಶೋಕ ಮತ್ತು ವ್ಯಾಕುಲತೆಗೆ ತುತ್ತಾಗುತ್ತಾನೆ. ದಾರಿಕಾಣದೆ ಎದೆ ಬಡಿದುಕೊಂಡು ಅಳುತ್ತಾನೆ.'

'ಪೂಜ್ಯರೇ, ಇದು ಹೀಗೆ ಏಕೆ?'

'ಸಚ್ಚರರೇ, ಆ ಬಗ್ಗೆ ಶಿಕ್ಷಣ ಇಲ್ಲದಿರುವುದು. ತರಬೇತು ಇಲ್ಲದಿರುವುದು. ಸತತ ಅಭ್ಯಾಸ ಇಲ್ಲದೆ ಇರುವುದು. ಇದರಿಂದ ಶಾರೀರಿಕ ಮತ್ತು ಮಾನಸಿಕ ಅಭ್ಯಾಸವು ವೃದ್ಧಿಯಾಗಲು ಸಾಧ್ಯವೆ?'

ಪೂಜ್ಯ ಗೌತಮರೇ, ಹಾಗಾದರೆ ಈ ಶರೀರ ಮತ್ತು ಮನಸ್ಸನ್ನು ಅರಿಯುವ ಹಾಗೂ ಜಯಿಸುವ ಬಗೆ ಹೇಗೆ?'

'ಸಚ್ಚರರೇ, ಯಾರು ಕುಶಲವನ್ನು, ಮಂಗಳವನ್ನು ಮತ್ತು ಬಹುಜನರ ಹಿತ ಹಾಗೂ ಸುಖವನ್ನು ಬಯಸುತ್ತಾನೋ, ಆತ ಸತ್ಯ ಶೋಧಕನಾಗುತ್ತಾನೆ. ಹಾಗೆಯೇ ತನ್ನೆಲ್ಲ ಕಲ್ಮಷಗಳನ್ನು ತೊಡೆದು ಹಾಕಲು ಸಂಕಲ್ಪ ಹೊಂದುತ್ತಾನೆ. ಸಂಕೋಲೆಗಳಿಂದ ಬಿಡುಗಡೆಯೇ ಅವನ ಗುರಿ ಮತ್ತು ಗೆಲುವಾಗಿರುತ್ತದೆ. ಅಂಥವನು ಯಾವುದೇ ಒಮ್ಮುಖ ದೃಷ್ಟಿ, ಆಚಾರ, ವಿಚಾರ ಹಾಗೂ ಸಂಪ್ರದಾಯಕ್ಕೆ ವಿಮುಖನಾಗುತ್ತಾನೆ. ಸರ್ವತೋಮುಖ ಏಳಿಗೆ, ಸಮನ್ವಯ ಮತ್ತು ಪೂರ್ಣದೃಷ್ಟಿಯತ್ತ ಮುಖ ಮಾಡುತ್ತಾನೆ. ಶಾರೀರಿಕ ಮತ್ತು ಮಾನಸಿಕ ಅರಿವು, ವೃದ್ಧಿ, ಆಚರಣೆ ಹಾಗೂ ನಿರಂತರ ಅಭ್ಯಾಸ ಒಂದಕ್ಕೊಂದು ಪೂರಕ ಅದೇ ಸಾಧನೆಯ ಮೆಟ್ಟಿಲು ಎಂಬುದನ್ನು ಅರಿತು ಮುನ್ನಡೆಯುತ್ತಾನೆ. ಆ ಎರಡರ ಮೇಲೂ ಸಂಯಮ ಮತ್ತು ಹಿಡಿತವನ್ನು ಸಾಧಿಸಿದವನಾಗುತ್ತಾನೆ. ಆ ಮೂಲಕ ತನ್ನಲ್ಲಿ ಉಂಟಾಗುವ ಸುಖದ ಅನುಭವ ಮತ್ತು ದುಃಖದ ಅನುಭವವನ್ನು ಹಾಗೂ ಅದರ ಮೂಲವನ್ನು ಸರಿಯಾಗಿ ಅರಿತವನಾಗುತ್ತಾನೆ. ತನ್ನಲ್ಲಿ ಉಂಟಾದ ಸುಖ ಮತ್ತು ದುಃಖದ ಅನುಭವ ಸಾಮಾನ್ಯವಾಗಿ ಹಾಗೆಯೇ ಉಳಿದು ಬಿಡುವ, ನೆಲೆನಿಲ್ಲುವ, ಮತ್ತೆ ಮತ್ತೆ ಅಪೇಕ್ಷಿಸುವ ಅಥವಾ ತ್ಯಜಿಸುವ ಮನೋ ಸ್ಥಿತಿಯನ್ನು ಸಾಧಿಸಿಕೊಂಡವನಾಗಿರುತ್ತಾನೆ. ಬಳಿಕ ಈ ಎಲ್ಲೆಯನ್ನೂ ಮೀರಿ ಸಮಾಧಿಯ ನೆಲೆಗಳನ್ನು ಕಂಡುಕೊಳ್ಳುತ್ತಾನೆ.'

'ಸಚ್ಚರನೇ, ಇವನೇ ಜ್ಞಾನಿ. ಇವನೇ ದೇಹ ಮತ್ತು ಮನಸ್ಸನ್ನು ಕಂಡವನು. ದರ್ಶಿಸಿದವನು, ಅರಿತವನು. ಅಂತಹ ಸಾಧಕನಲ್ಲಿ ಸುಖವು ಹುಟ್ಟುತ್ತದೆ. ಹಾಗೆಯೇ ದುಃಖದ ಅನುಭವ ಕೂಡ ಹುಟ್ಟುತ್ತದೆ. ಅದರ ಸ್ಪರ್ಶದಿಂದಾಗಿ ವ್ಯಾಮೋಹಕ್ಕೆ ಸಿಲುಕುವುದಿಲ್ಲ. ಚಿಂತೆ, ವ್ಯಸನ, ವ್ಯಾಕುಲಕ್ಕೆ ಅಂಟಿಕೊಳ್ಳುವುದಿಲ್ಲ. ಶೋಕದಿಂದ ಎದೆ ಬಡಿದುಕೊಂಡು ಅಳುವುದಿಲ್ಲ.'

'ಸಚ್ಚರನೇ, ಈತನೇ ದೇಹ ಮತ್ತು ಮನಸ್ಸನ್ನು ಕಂಡವನು. ದರ್ಶಿಸಿದವನು. ಅರಿತವನು. ತನ್ನ ಗುರಿ ತಲುಪಿದವನು. ಇಂಥವನು ಮಾತ್ರ ತನ್ನ ಸಾಧನೆಯ ಉತ್ತುಂಗ ಶಿಖರವನ್ನು ತಲುಪಬಲ್ಲ. ತನ್ನ ಬದುಕಿಗೂ ಇತರೆ ಬಹುಜನರ ಹಿತ ಹಿತ ಮತ್ತು ಸುಖಕ್ಕೂ ಬೆಳಕಾಗಬಲ್ಲವನು...!' ಎಂದ ಬುದ್ಧನು ತನ್ನ ಕಥೆಯನ್ನು ಹೀಗೆ ಮುಗಿಸಿದ. ಬಳಿಕ ಎದುರು ಕುಳಿತ ಸಚ್ಚರನು ಅಪಾರ ಆನಂದ ಮತ್ತು ಆಶ್ಚರ್ಯದಿಂದ:

'ಅದ್ಭುತ..... ಆಶ್ಚರ್ಯ..... ಪರಮಾಶ್ಚರ್ಯ..... ಪೂಜ್ಯ ಗೌತಮರೇ, ನಿಮ್ಮಿಂದಾಗಿ ನನ್ನ ಅಜ್ಞಾನ ತೊಲಗಿತು! ಅಂಧಕಾರ ನೀಗಿತು. ಹೊಸ ಬೆಳಕು ಮೂಡಿತು. ನನ್ನ ಕಣ್ಣೆದುರು ಹೊಸ ಮಾರ್ಗಗಳೇ ತೆರೆದು ನಿಂತವು!! ಇನ್ನು ನನಗೆ ಸೋಲಿಲ್ಲ. ಗೆಲುವೇ ಎಲ್ಲಾ........!!' ಎನ್ನುತ್ತಾ ವಂದಿಸಿ ಮುನ್ನಡೆದ.

ಪಾಳಿ ಮೂಲ: ಮಹಾ ಸಚ್ಚಕಸುತ್ತಂ.
ಮಜ್ಝಿಮ ನಿಕಾಯ, ಸಂಪುಟ–೩

'SAMVADA' Kannada Monthly, Jan 2009 RNI-KAR KAN/2002/9246 CPMG/KA/BGW-706/2009-11
Office of Posting: RAJAJINAGAR HO, Date of Posting: 27-28 of Every Month

ತತ್ಕಾಲ್ ಪೋಡಿ ಯೋಜನೆ

ಕರ್ನಾಟಕವು ರೈತರಿಗಾಗಿ 'ಭೂಮಿ ಯೋಜನೆ' ರೂಪಿಸಿ ದೇಶದಲ್ಲೇ ಭೂದಾಖಲೆಗಳನ್ನು ಗಣಕೀಕರಿಸಿದ ಮೊಟ್ಟ ಮೊದಲ ರಾಜ್ಯ ವಿಶ್ವಸಂಸ್ಥೆಯಿಂದಲೇ ಈ ವಿನೂತನ ಯೋಜನೆಯು ಮೆಚ್ಚುಗೆಗೆ ಪಾತ್ರವಾದುದು ಹೆಮ್ಮೆಯ ಸಂಗತಿ. ರಾಜ್ಯ ಸರ್ಕಾರವು ಈಗ ತನ್ನ ರೈತರಿಗಾಗಿ ಮತ್ತೊಂದು ನೂತನ ಯೋಜನೆಯನ್ನು ಜಾರಿಗೊಳಿಸುತ್ತಿದೆ ಅದುವೇ "ತತ್ಕಾಲ್ ಪೋಡಿ" ಯೋಜನೆ.

ಈ ಯೋಜನೆಯಿಂದ ರೈತರು ತಮ್ಮ ಜಮೀನಿನ ಅಳತೆ ಮತ್ತು ನಕ್ಷೆಯನ್ನು ಪಡೆಯುವರು. ದೋಷರಹಿತ ಮತ್ತು ಯಾರಿಂದಲೂ ತಿದ್ದುಪಡಿಗೆ ಅವಕಾಶವಾಗದ ಈ ದಾಖಲೆಯೊಂದಿಗೆ ರೈತರು ತಮ್ಮ ಜಮೀನಿನ ಬಗ್ಗೆ ಸಂಪೂರ್ಣ ಮಾಹಿತಿ ಹೊಂದಿದಂತಾಗುವುದು. ಅಲ್ಲದೆ ಅವರು ಇನ್ನು ಮುಂದೆ ಮ್ಯುಟೇಷನ್ ಪೋಡಿಗಾಗಿ ಕಾಯಬೇಕಿಲ್ಲ. ಸರ್ಕಾರವು ತತ್ಕಾಲ್ ಪೋಡಿ ಯೋಜನೆ ಹಮ್ಮಿಕೊಂಡಿರುವುದರಿಂದ ಇದರ ಲಾಭ ಪಡೆಯುವವರು, ರೂ: 500/- ಪಾವತಿಸಿದಲ್ಲಿ ಒಂದು ತಿಂಗಳಲ್ಲಿ (ಸಮಸ್ಯೆ ರಹಿತ ದಾಖಲೆಗಳಿಗೆ ಅನ್ವಯ) ಅಳತೆ ಮಾಡಿ ಮ್ಯುಟೇಶನ್ ಪೋಡಿ ದುರಸ್ತಿ ಕಾರ್ಯ ಪೂರೈಸಿ ಹೊಸ ಹಕ್ಕು ದಾಖಲೆ ಒದಗಿಸಲಾಗುವುದು.

ಈ ಕಾರ್ಯಕ್ಕೆ ರಾಷ್ಟ್ರದಲ್ಲಿಯೇ ಮೊದಲ ಬಾರಿಗೆ ಜಾರಿಗೆ ತಂದಿರುವ ಪರವಾನಗಿ ಭೂಮಾಪಕರನ್ನು ಬಳಸಲಾಗುವುದು. ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಮೂಲಕ ಕರ್ನಾಟಕವು ಪೋಡಿ ರಹಿತ ರಾಜ್ಯವನ್ನಾಗಿಸುವ ದಿಸೆಯಲ್ಲಿ ಪ್ರಮುಖ ಹೆಜ್ಜೆಯಿಟ್ಟಿದೆ.

ರೈತರು ಈ ಯೋಜನೆಯ ಲಾಭ ಪಡೆಯಲು ವಿನಂತಿ.

ಹೆಚ್ಚಿನ ಮಾಹಿತಿಗಾಗಿ ರೈತರು ತಮಗೆ ಸಂಬಂಧಿಸಿದ ಈ ಕೆಳಕಂಡ ಯಾವುದಾದರೊಂದು ಕಛೇರಿಯನ್ನು ಸಂಪರ್ಕಿಸಬುಹುದು.

* ತಾಲ್ಲೂಕು ಕಛೇರಿ
* ಜಿಲ್ಲಾಧಿಕಾರಿಗಳ ಕಛೇರಿ,
* ಆಯುಕ್ತರು, ಭೂಮಾಪನ ಇಲಾಖೆ, ಬೆಂಗಳೂರು.

ಕರ್ನಾಟಕ ವಾರ್ತೆ
Karnataka Information